ಕಸ್ತೂರಿ

○ ಸೆಪ್ಟಂಬರ್ 198

○ ರೂ. 3-00





ನೆಲಕ್ಕೆ ಬಿದ್ದ ನಕ್ಷತ್ರ



ನಿಮ್ಮ ವಿಶ್ವಸನೀಯ ಫೆರೆಕ್ಸ್
ಈಗ ರುಚಿಯಲ್ಲಿ ಸರ್ವೋತ್ತಮ!
ನಿಮ್ಮ ಮಗುವಿಗೆ ನಾಲ್ಕು ತಿಂಗಳಾದಾಗ.
ರುಚಿಕರವಾದ ಹೊಸ ಫೆರೆಕ್ಸ್ ಕೊಡಲು ಪ್ರಾರಂಭಿಸಿರಿ.
ಒಂದು ಚಿಕ್ಕ ಚಮಚ ಫೆರೆಕ್ಸ್‌ನ್ನು. 3-4 ಚಿಕ್ಕ ಚಮಚ ಬೆಚ್ಚಗಿನ ನೀರಿನಲ್ಲಿ ಬೆರೆಸಿ ಕೊಡಲು ಪ್ರಾರಂಭಿಸಿರಿ.
ಫೆರೆಕ್ಸ್ ಈಗ ಮೊದಲಿಗಿಂತ ಅಧಿಕ ರುಚಿಕರ ಹಾಗೂ ಅಧಿಕ ಪೋಷಕ-ಸತ್ವಭರಿತವಾಗಿದೆ.
Delicious
Farex®
CEREAL WITH MILK
9 months
Give Farex Cereal with Milk with dal, kanji, suji or puddings.
12 months onwards
• ಅಧಿಕ ಕೆನೆ
• ಅಧಿಕ ಪೋಷಣೆ
ಫೆರೆಕ್ಸ್®-
ಳೆಯಲು ರುಚಿಕರ ಸಾಧನ.
5/173 KAN

ಕಸ್ತೂರಿ



ಕನ್ನಡ ಡೈಜೆಸ್ಟ್

ವ್ಯವಸ್ಥಾಪಕ ಸಂಪಾದಕ:
ಕೆ. ಶಾಮರಾವ್

ಸಂಪಾದಕ:
ಆರ್.ಎ. ಉಪಾಧ್ಯ

ಬೆಳಕಿಂಡಿ

★ ಹೆಂಗಸರು ಆನೆಗಳಂತಿರುತ್ತಾರೆ. ಅವುಗಳನ್ನು ನೋಡುವುದೇನೋ ಸಂತೋಷ. ಆದರೆ ಅವುಗಳಲ್ಲೊಂದು ಸಾಕುವುದು ಮಾತ್ರ ನನ್ನಿಂದಾಗದು.
-ಎಲ್ ರೋಜರ್ಸ್

★ ಮಾತು ಬೆಳ್ಳಿಯಾದರೆ ಮೌನ ಬಂಗಾರವಂತೆ. ಹಾಗಾದರೆ ಸದಾ ಮೌನಿಯಾದ ಮೂಕ ಚಿನ್ನದ ಬೊಂಬೆಯಲ್ಲದೆ ಮತ್ತೇನು?
-ಸಂಸ್ಕೃತದಿಂದ

★ ದಾಳೆಂಬ ನಾಣ್ಯಕ್ಕೆ ಬೆಲೆ ಬರುವುದು ಅದರ ಮೇಲಿರುವ ಸಾವೆಂಬ ಮುದ್ರೆಯಿಂದಲೇ.
-ದಾರ್ಶನಿಕ

★ ಯಾವನು ಅಳಲಾರನೋ ಅವನು ಸ್ನೇಹ ಮಮತೆಗಳನ್ನು ತೋರಲಾರನು. ಏಕೆಂದರೆ ಅಳು ಮತ್ತು ಪ್ರೇಮಗಳ ಮೂಲ ಒಂದೇ.
-ಪ್ರೇಮಚಂದ

★ ನಿಮಗೆ ಶತ್ರುಗಳಿಲ್ಲೆಂದು ಸಂತೋಷಪಡಬೇಡಿ. ಹಾಗಿದ್ದರೆ ನಿಮಗೆ ಮಿತ್ರರ ಅಭಾವವೂ ಇರಲೇಬೇಕು.
-ಎಲ್ಬರ್ಟ್ ಹುಬರ್ಡ್

ಚಂದಾ ದರಗಳು

ಬಿಡಿ ಸಂಚಿಕೆ	...	3=00
1 ವರ್ಷಕ್ಕೆ	ಅಂಚೆ ಸೇರಿ	34=00
2 ವರ್ಷಕ್ಕೆ	...	65=00
3 ವರ್ಷಕ್ಕೆ	...	100=00

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ 1 ನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳ 5 ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರ ವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಮುಖಪುಟ:
ತಾರಾಸಂಭ್ರಮ

ವರ್ಣ ಚಿತ್ರ:
ನಾಗೇಂದ್ರ, ಕೆ.ಜಿ.

ಕಸ್ತೂರಿ ಕಾರ್ಯಾಲಯ
ಕೊಪ್ಪೀಕರ ರಸ್ತೆ
ಹುಬ್ಬಳ್ಳಿ-580020

ಸಹಚಿಂತನ

ತಪ್ಪು ಗ್ರಹಿಕೆ

ಗೋ.ಪ್ರ.ಜೋಶಿಯವರ 'ಪಂಢರಪುರದ ವಿಠಲ ಒಂದು ಜಿಜ್ಞಾಸೆ' ಎಂಬ (ಆಗಸ್ಟ್ 89) ಲೇಖನದಲ್ಲಿ ಪುಟ 89ರಲ್ಲಿ-ಕವಿಕುಲ ತಿಲಕರಾದ ಶ್ರೀಶ್ರೀ ವಾದಿರಾಜ ಗುರುಸಾರ್ವಭೌಮರ 'ತೀರ್ಥಪ್ರಬಂಧ'ದಿಂದ ಆಯ್ದ ಶ್ಲೋಕವನ್ನು ತಪ್ಪು ತಪ್ಪಾಗಿಯೇ ಪ್ರಕಟಿಸಿದ್ದಲ್ಲದೇ, 'ರುಕ್ಮಿಣೀಶ ವಿಜಯ'ದಂಥ ಮಹಾಕಾವ್ಯವನ್ನು ರಚಿಸಿರುವ ಶ್ರೀ ವಾದಿರಾಜರಿಗೆ ಛಂದಸ್ ಶಾಸ್ತ್ರ ಹಾಗೂ ಭಾಷಾ ಜ್ಞಾನ ಇಲ್ಲವೆನ್ನುವಂತೆ ಬರೆಯಲಾಗಿದೆ. ವಾಸ್ತವಿಕವಾಗಿ ಇದು ತಪ್ಪು. ಆ ಶ್ರೀ ವಾದಿರಾಜ ಶ್ರೀಗಳವರ ಕವಿತೆ ಛಂದೋಬದ್ಧವಾಗಿಯೇ ಇದೆ. ಅದನ್ನು ಈ ಕೆಳಗೆ ಯಥಾವತ್ತಾಗಿ ಕೊಡಲಾಗಿದೆ.

''ತೀರೇ ಸತ್ ಸರಿತಸ್ತಿರಸ್ಕೃತ ಧನಾಸಕ್ತಿರ್ವಿರಕ್ತಿಪ್ರಿಯ:
ಪಾದಾಂಭೋಜಮಿದಂ ಮದಂಕಸಹಿತ: ಸಂಚಿಂತಮಾಂತರ್ಹೃದಿ:
ಪಶ್ಚಾತ್ತೇ ಕಟಿಮಾತ್ರ ಏವ ಭವಿತಾ ಸಂಸಾರ ವಾರ್ಧಿರ್ನ ಚೇತ್
ಶಿಕ್ಷಾಮೀತಿ ಹಿ ಲಕ್ಷಮತ್ಯನುದಿನಂ ಸ್ವಾವಸ್ಥಯಾ ವಿಟ್ಠಲ:''

ಇದು ವಾದಿರಾಜರ 'ತೀರ್ಥಪ್ರಬಂಧ'ದ ಉತ್ತರ ಪ್ರಬಂಧದ ಆರನೇ ಶ್ಲೋಕ. ಯಾವ ಪುಸ್ತಕವನ್ನಾದರೂ ನೋಡಬಹುದು. ಈ ಮೇಲೆ ಹೇಳಿದಂತೆಯೇ ಇರುತ್ತದೆ. ಲೇಖಕರಿಗೆ ಈ ಮೇಲಿನ ಶ್ಲೋಕದ ಅರ್ಥ, ಛಂದಸ್ಸು ಭಾಷಾಜ್ಞಾನ ಇರುವುದೆಂದು ಅವುಗಳನ್ನು ಇಲ್ಲಿ ವಿವರಿಸುತ್ತಿಲ್ಲ.

ಬೆಂಗಳೂರು — ರವೀ ಬದರೀನಾಥ

ಆರಂಕುಸಮಿಟ್ಟೊಡಂ

'ಆರಂಕುಸಮಿಟ್ಟೊಡಂ'ನ ಬಗೆಗೆ ಪ್ರ. ವೆಂ. ಜೋಶಿಯವರು ಮತ್ತು ಡಾ. ಹಂಪನಾರವರು ಆಳವಾದ ಅಧ್ಯಯನದ ಫಲವಾದ ಚಿಂತನಾಂಶವನ್ನು ಬರೆದಿದ್ದಾರೆ. ನನಗೆ ಅನ್ನಿಸುವುದು ಹೀಗೆ - ಆರಂ=ಹಲಸಿನ ಮರವು ಕುಸಮಿಟ್ಟೊಡಂ=ಕುಸಮಿಸಿದರೂ=(ಹೂ ಬಿಟ್ಟರೂ) ನೆನವುದೆನ್ನ ಮನಂ ಬನವಾಸಿ ದೇಶಮಂ = ನನ್ನ ಮನವು ಬನವಾಸಿ ದೇಶವನ್ನು ನೆನೆಯುತ್ತದೆ.

ಈ ಅರ್ಥವು ಪ್ರಾಜ್ಞರಿಗೆ ಒಪ್ಪಿಗೆಯಾದೀತೆ? ಜೋಶಿಯವರು ಹೇಳಿದಂತೆ ''ಹೂ ಬಿಟ್ಟ ಹಲಸಿನ ಮರವನ್ನು ಕಂಡಾಗ'' ಎಂಬ ಅರ್ಥ ಇಡೀ ಪದ್ಯದ ಆಶಯಕ್ಕೆ ಬಹಳ ಸುಂದರವಾಗಿ ಹೊಂದಿಕೊಳ್ಳುತ್ತದೆ.

ಬೆಂಗಳೂರು — ಮಾಧುರ್ಯ

(ಇದರ ಬಗೆಗಿನ ವಾದವನ್ನು ಇಲ್ಲಿಗೇ ಮುಕ್ತಾಯಗೊಳಿಸಲಾಗಿದೆ. -ಸಂ.)

ಅಪೇಕ್ಷೆ

ನಮಗೆ ಆಗಸ್ಟ್ 1989ರ ಸಂಚಿಕೆ ಸಂತೃಪ್ತಿ ತಂದಿದೆ. ಉತ್ತಮ ಲೇಖನಗಳಿಂದ ಕೂಡಿದ ಈ ಸಂಚಿಕೆ ಸಂಗ್ರಹಯೋಗ್ಯವಿದ್ದು, ಹಳೆಯ ಕಸ್ತೂರಿಗಳ ನೆನಪು ತರುತ್ತದೆ.

ಸನಾತನ ಸಂಪ್ರದಾಯಗಳಲ್ಲಿ ಇರುವ ವೈಜ್ಞಾನಿಕ ದೃಷ್ಟಿಯನ್ನು ಸರಳ ರೀತಿಯಲ್ಲಿ ತಿಳಿಸುವ ಲೇಖನಗಳನ್ನು ಪ್ರಕಟಿಸಿ ಇಂದಿನ ಯುವ ಜನಾಂಗಕ್ಕೆ ಧಾರ್ಮಿಕ ಮನೋಭಾವನೆ ಬೆಳೆಸುವಲ್ಲಿ 'ಕಸ್ತೂರಿ' ತನ್ನ ಪಾತ್ರ ವಹಿಸಲಿ ಎಂಬ ನಮ್ಮ ಅಪೇಕ್ಷೆ ಈಡೇರಲಿ.

ಹಾನಗಲ್ — ಡಾ.ವ್ಹಿ.ಎಂ.ಕುಲಕರ್ಣಿ

ಪರಗಣಿಯೋ ಪರಗಣೆಯೋ?

'ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯ' ಎಂಬ ಮಾತು ನೂರಕ್ಕೆ ನೂರರಷ್ಟು ಸತ್ಯ. "Vocabulary is the wealth of language" ಎಂಬ ಆಂಗ್ಲ ನಾಣ್ಣುಡಿಯಂತೆ ಒಂದು ಭಾಷೆ ಶ್ರೀಮಂತಗೊಳ್ಳಬೇಕಾದರೆ ಶಬ್ದ ಭಾಂಡಾರದಿಂದ ಮಾತ್ರ ಸಾಧ್ಯ ಎನ್ನುವುದನ್ನು ಆಗಸ್ಟ ತಿಂಗಳ ಸಂಚಿಕೆಯಲ್ಲಿಯ 'ಪರಗಣಿ' ಶಬ್ದದ ಅರ್ಥದಿಂದ ತಿಳಿದುಕೊಳ್ಳಬಹುದು. ಪರಗಣಿ ಶಬ್ದದ ಅರ್ಥ-

ನಾಡಿನ ಒಂದು ವಿಭಾಗ, ಹಲವು ಗ್ರಾಮಗಳ ಒಂದು ಸಮೂಹ, ಆಡಳಿತ ವಿಭಾಗ ಇತ್ಯಾದಿ ಯಾಗಿ ಹೇಳಿ ಉದಾಹರಣೆ ಸಹಿತ (ಪರಗಣೆ ಗೊಬ್ಬ ಅಧಿಕಾರಿ ಇದ್ದಾನೆ.) ಪಾವೆಂ ವಿವರಿಸುತ್ತಾರೆ. ಜೊತೆಗೆ ಆ ಪದದ ಮೂಲ ರೂಪವನ್ನು (ಪರ್ಗನ:) ಕೊಟ್ಟಿದ್ದಾರೆ. ಇಂಥ ಶಬ್ದಾರ್ಥಗಳು ಬಹುಶಃ ಈಗಿರುವ ಅರ್ಥ ಕೋಶಗಳನ್ನೂ ಬದಿಗಿಡುತ್ತವೆ.

ಆದರೆ 'ಪರಗಣೆ' ಎಂದ ಶಬ್ದ 'ಪರಗಣೆ' ಎಂದಾಗಿದ್ದರೆ ಸಮಂಜಸವಾಗುತ್ತಿತ್ತೇನೋ? ಯಾಕೆಂದರೆ ಹಿಂದಿನ ಆಡಳಿತಕ್ಕೆ ಸಂಬಂಧಪಟ್ಟಂತೆ 'ಪರಗಣೆ' ಅಥವಾ 'ಪರಗಣಾ' ಎಂಬುದಾಗಿ ಪದಪ್ರಯೋಗ ಬರುತ್ತದೆ. ಉದಾ: ಕೊಕಟನೂರ ಪರಗಣೆ, ಗಲಗಲಿ ಪರಗಣೆ ಮತ್ತು "ಸೈನ್ಯದಲ್ಲಿ ಅತ್ಯುತ್ತಮ ಸೇವೆಯನ್ನು ಸಲ್ಲಿಸಿದ್ದಕ್ಕಾಗಿ-ದೇಶಮುಖಿ, ಸರದೇಸಾಯಿ ಮತ್ತು ಪರಗಣಾ ಸೇವೆಯ ಇನಾಮ ಆಗಿ ತೊರಗಲ್ಲ ಸೀಮೆಯ ಮಾಮಲೆಯೆಂಬ ಅಧಿಕಾರ ವಿಟಗೌಡನಿಗೆ ದೊರೆಯಿತು" ಎನ್ನುವ ಮಾತು-'ಸಿರಸಂಗಿ ಸಂಸ್ಥಾನ : ಒಂದು ಅಧ್ಯಯನ' ಎಂಬ ಗ್ರಂಥದಲ್ಲಿ ಬರುತ್ತದೆ. ಹೀಗಾಗಿ ಪರಗಣೆ ಅಥವಾ ಪರಗಣಾ ಎಂಬುದು ಸಮಂಜಸವೆನಿಸುತ್ತದೆ.

ಇಂಥ ಹೊಸ ಶಬ್ದಾರ್ಥಗಳನ್ನು ಕಸ್ತೂರಿ ಪತ್ರಿಕೆ ಓದುಗರಿಗೆ ನೀಡಲಿ. ಜೊತೆಗೆ ಜನರಿಂದ ಮರೆಯಾಗುತ್ತಿರುವ ಕೆಲವು ಪ್ರಾಂತಕ್ಕೆ ಸಂಬಂಧಪಟ್ಟಂತಹ ಪದಗಳ ಅರ್ಥ ಮೂಡಿ ಬರಲಿ ಎಂದು ಆಶಿಸುತ್ತೇನೆ.

ಬಿಜಾಪುರ ದಿನ್ನಿಮನಿ ಎಂ.ಜಿ.

ಅನಿಸಿಕೆ

'ಪ್ರಾಣಿಗಳಿಗೆ ವಿಚಾರ ಶಕ್ತಿ ಇದೆಯೆ?' ಲೇಖನದಲ್ಲಿರುವ ವಿವರಣೆಗೂ, ತ್ರಾಸು ತೆಗೆದುಕೊಂಡು ಅಚ್ಚಿಸಿರುವ ಚಿತ್ರಗಳಿಗೂ ಹೆಚ್ಚು ಸಂಬಂಧ ನನಗೆ ಕಾಣಲಿಲ್ಲ. ಚಿತ್ರಗಳನ್ನು ಹಾಕದಿದ್ದರೇ ಚೆನ್ನಾಗಿರುತ್ತಿತ್ತೇನೋ.

'ಧರ್ಮ ಛತ್ರ' ಹಾಗೂ 'ಕನಸಿನ ಗೋರಿ' ಕಥೆಗಳು ಚೆನ್ನಾಗಿವೆ. ಮೂಲದಿಂದ ಆದ ತರ್ಜುಮೆ ಮೆಚ್ಚುವಂತಹದು.

ವಿಜ್ಞಾನ ವಿದ್ಯಾರ್ಥಿಗೆ, ಪಾದರಸದ ಬಗ್ಗೆ ಬರೆದಿರುವ ತಕುನಾರವರ 'ಬೆಳ್ಳಿ ನೀರಿನ ವಿಸ್ಮಯ ಲೋಕ' ಒಳ್ಳೆಯ ಲೇಖನ.

ಮೈಸೂರು ರತ್ನಾರಾವ್

ಕೊಪ್ಪಳ ದುರ್ಗ

'ಕಸ್ತೂರಿ'ಯ ಆಗಸ್ಟ 1989ರ ಸಂಚಿಕೆಯಲ್ಲಿ ಪ್ರಕಟವಾದ ಡಾ. ಆಶ್ರಿತ ರಾಮಾಚಾರ್ಯ ಅವರ ಲೇಖನ 'ಕೊಪ್ಪಳ ದುರ್ಗದ ಕತೆ' ತುಂಬಾ ಸುಂದರವಾಗಿತ್ತು. ನಾವು ಕೊಪ್ಪಳದ ಹತ್ತಿರದಲ್ಲಿಯೇ ಇದ್ದುಕೊಂಡು, ಅಲ್ಲಿಯ ದುರ್ಗ(ಕೋಟೆ)ದ ಮೇಲೆ ಸಾಕಷ್ಟು ಸಲ ಹತ್ತಿ-ಇಳಿದಿದ್ದೇವೆ. ಆದರೆ ಈ ಲೇಖನವನ್ನೋದುವ ಮೊದಲು ಆ ದುರ್ಗದ ಇತಿಹಾಸದ ಬಗ್ಗೆ ವಿಚಾರಿಸಿಯೇ ಇರಲಿಲ್ಲ.

ಕುಕನೂರು ಹೊಳೆಬಸಯ್ಯಾ ವಸ್ತ್ರದ

ಸರಿಯೆ

ಈ ತಿಂಗಳ 'ಕಸ್ತೂರಿ' ಮಾಸಪತ್ರಿಕೆಯ ಪುಟ 88ರಲ್ಲಿ 'ಪಂಢರಪುರದ ವಿಠಲ ಒಂದು ಜಿಜ್ಞಾಸೆ' ಎಂಬ ಲೇಖನದಲ್ಲಿ ಅಫಜಲ್ ಖಾನನ ಅಂಜಿಕೆಯಿಂದಾಗಿ ಕ್ರಿ.ಶ. 1965ರಲ್ಲಿ ಮಾದಾಜಿ ನಿಂಬಾಳ್ಕರರು ಮಾಢೆಯಲ್ಲಿ ವಿಠಲ ದೇವಾಲಯ ನಿರ್ಮಿಸಿದರೆಂದಿದೆ. 1965 (ಕ್ರಿಶ)ದಲ್ಲಿ ಅಫಜಲಖಾನ್ ಜೀವಿಸಿದ್ದನೇ? ಪುಟ 90ರಲ್ಲಿ 5ನೇ ಪ್ಯಾರಾದಲ್ಲಿ ಶಕ 1436 ಅಂದರೆ ಕ್ರಿ.ಶಕ 1514 ಎಂದಿದೆ. ಶಕವರ್ಷ 1436 ಕ್ರಿ.ಶಕ 1514 ಎಂದಾದರೆ ನಂತರದ 6ನೇ ಪ್ಯಾರಾದಲ್ಲಿ ಶಕವರ್ಷ 1436 ಕ್ರಿ.ಶಕ 1554 ಎಂದಿದೆ. ಇವು ಯಾವ ಶಕಗಳೆಂದು ಅರ್ಥವಾಗುವುದಿಲ್ಲ.

ಇತ್ತೀಚೆಗೆ "ಕಸ್ತೂರಿ" ಮಾಸಪತ್ರಿಕೆ ಹಿಂದಿನ ಸಮಯೋಚಿತ ಬೌದ್ಧಿಕ ಲೇಖನಗಳನ್ನು ಪ್ರಕಟಿಸುತ್ತಿರುವದು ಸ್ತುತ್ಯಾರ್ಹವಾಗಿದೆ.

ಕಟಪಾಡಿ ಕೆ.ವಾಮನ ಕಿಣಿ

ಸರಿಯಾದ ಉಚ್ಚಾರ

'ಕಸ್ತೂರಿ'ಯ ಆಗಸ್ಟ 89 ಸಂಚಿಕೆಯಲ್ಲಿ ಪ್ರಕಟವಾದ ಫಲಶ್ರುತಿ ಲೇಖನದಲ್ಲಿ ಬರುವ 'ಆಯ್-ನಿ-ಅಕಬರಿ'ಯ ಸರಿಯಾದ ಉಚ್ಚಾರ 'ಆಇನ್-ಎ-ಅಕಬರಿ'. 'ಆ ಇನ್' ಪದವು 'ಆಇನಾ'ದಿಂದ ಬಂದಿದೆ. 'ಆಇನಾ' ಎಂದರೆ ಕನ್ನಡಿ.

ಬೀದರ ಕೆ. ಮೊಇಸೂದ್ದಿನ್

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ವರ್ಷ : ೩೪ ಕಸ್ತೂರಿ ಸಂಚಿಕೆ : ೧

ಸೆಪ್ಟೆಂಬರ್ ೧೯೮೯

ಅಹಿಂಸೆಗೆ ಜಯ
ಹಿಂಸೆಗೆ ಸೋಲು

ಒಮ್ಮೆ ಅಹಿಂಸಾವಾದಿ ಭಗವಾನ್ ಬುದ್ಧ ಭಿಕ್ಷು ಸಮೂಹದ ಜೊತೆಗೆ ಭಿಕ್ಷೆಗಾಗಿ ಹೊರಟಿದ್ದ. ಶಾಂತಿದೂತರಾಗಿ ಕಾಲು ನಡಿಗೆಯಲ್ಲಿ ಬರುತ್ತಿದ್ದ ಈ ಭಿಕ್ಷುಗಳ ಮೇಲೆ ಯಾರೋ ಕೆಲವು ಜನ ಕಿಡಿಗೇಡಿಗಳು ಸೆರೆ ಕುಡಿದು ಹುಚ್ಚೆದ್ದ ಆನೆಯನ್ನು ಬಿಟ್ಟರು.

ಆ ಮದಗಜ ಭಯಂಕರವಾಗಿ ಘೀಳಿಡುತ್ತ ಭಿಕ್ಷುಗಳ ಕಡೆಗೆ ನುಗ್ಗಿ ಬರತೊಡಗಿತು. ಹೆದರಿಹೋದ ಭಿಕ್ಷುಗಳು ಮುಂದೆ ಹೋಗಬಾರದೆಂದು ಬುದ್ಧನನ್ನು ತಡೆದು ಪ್ರಾರ್ಥಿಸತೊಡಗಿದರು.

ಆಗ ಶಾಂತಮೂರ್ತಿಯಾದ ಬುದ್ಧ, ''ಅಯ್ಯಾ ಭಿಕ್ಷುಗಳೇ, ಅಹಿಂಸೆಯ ಬಲವನ್ನು ನೀವು ಅರಿಯಿರಿ. ಆ ಹಿಂಸೆ ಮತ್ತು ಪ್ರೇಮ ಎರಡೂ ಒಂದೇ ಅರ್ಥವನ್ನು ಕೊಡುವ ಪದಗಳು. ಅಹಿಂಸೆಯು ಪ್ರೇಮದಿಂದಲೇ ಪೂರ್ತಿಯಾಗುವುದು. ಈಗ ನಾವು ನಮ್ಮನ್ನೇ ಆ ಆನೆಗೆ ಅರ್ಪಿಸಿಕೊಂಡರೆ ಅದು ನಮ್ಮನ್ನೇನೂ ಮಾಡಲಾರದು. ತನ್ನನ್ನು ಪ್ರೀತಿಸುವವರನ್ನು ದ್ವೇಷಿಸುವ ಬುದ್ಧಿ ಯಾವ ಪ್ರಾಣಿಗೂ ಇರುವುದಿಲ್ಲ,'' ಎಂದು ಹೇಳುತ್ತ ಬುದ್ಧ ಹುಚ್ಚೆದ್ದು ಬರುತ್ತಿದ್ದ ಆನೆಗೆ ಎದುರಾಗಿ ನಿಂತ.

ಹುಚ್ಚೆದ್ದು ಬರುತ್ತಿದ್ದ ಆ ಆನೆಗೂ ಭಗವಂತನ ಪ್ರೇಮದರಿವಾಯಿತೇನೋ. ಜನತೆಗೆ ಶಾಂತಿಯನ್ನು ಭೋದಿಸುವ ಆ ಕರುಣಾಮೂರ್ತಿಯೆದುರು ಆನೆಯ ರೋಷವೆಲ್ಲಾ ಕರಗಿ ಹೋಯಿತು. ಒಡನೆಯೇ ಅದು ತನ್ನ ಸೊಂಡಿಲನ್ನು ಕೆಳಗಿಳಿಸಿ, ಮಂಡೆಯೂರಿ ಬುದ್ಧದೇವನಿಗೆ ನಮಸ್ಕರಿಸಿತು. ಅಹಿಂಸೆಯ ಎದುರು ಹಿಂಸೆಗೆ ಸೋಲಾಯಿತೆಂದು ನೆರೆದ ಜನ ಆನಂದಪರವಶರಾದರು.

ಮಂಗಳಗೌರಿ

ಮಾಯಾ ನಗರಿಯಲ್ಲಿ ಮೂರು ದಿನ

ಆರ್. ಎಸ್. ಜಮಖಂಡಿ

ಕಲಬುರ್ಗಿಯಿಂದ ವಿಶೇಷ ಕಾರ್ಯ ನಿಮಿತ್ತ ಹುಬ್ಬಳ್ಳಿಗೆ ಬಂದ ನನಗೆ ಒಮ್ಮೆಲೆ ಮೂಕವಿಸ್ಮಿತನಾಗುವಂಥ ಸಮಾಚಾರವೊಂದು ಕಾದಿತ್ತು. ವಿದೇಶಪ್ರವಾಸ - ಅದೂ ಪ್ರಧಾನ ಮಂತ್ರಿಗಳೊಟ್ಟಿಗೆ! ಕನ್ನಡ ಪತ್ರಿಕೆಗಳ ಪೈಕಿ ಏಕಮಾತ್ರ ವರದಿಗಾರನಾಗಿ!

ಯಾರಿಗಾದರೂ ಸಂತೋಷವಾಗಬೇಕಾದ್ದೇ. ಆದರೆ ಧಾವಂತಪಡಬೇಕಾದ ಪ್ರಸಂಗ. ಅಂದೇ - ಜುಲೈ ನಾಲ್ಕು- ಹುಬ್ಬಳ್ಳಿಯಿಂದ (ತೊಟ್ಟ ಬಟ್ಟೆಯ ಮೇಲೆ ಅನ್ನಿ) ಬೆಂಗಳೂರಿಗೆ ಧಾವಿಸಿದೆ. ಜುಲೈ ಆರರಂದು ನಾನು ಅಲ್ಲಿಂದ ದಿಲ್ಲಿಗೆ ಹೋಗಲೇಬೇಕು. ಅಷ್ಟರಲ್ಲೇ ಪಾಸ್‌ಪೋರ್ಟ್ ಪಡೆದು, ಮುಂದಿನ ಪ್ರವಾಸಕ್ಕಾಗಿ ಬಟ್ಟೆಬರೆ ಸರಂಜಾಮುಗಳನ್ನು ಸಜ್ಜುಗೊಳಿಸಿಕೊಂಡು ದಿಲ್ಲಿಯನ್ನು ಸೇರಿ ವೀಸಾ-ವಿದೇಶೀ ವಿನಿಮಯ ಪಡೆಯುವಿಕೆಗಳ ವಿಧಾನಗಳನ್ನು ಪೂರ್ತಿಗೊಳಿಸಿಕೊಂಡೆ.

ಒಂದು ವಾರಕಾಲ ದಿಲ್ಲಿಯ ವಾಸ. ಚಲನಚಿತ್ರ, ಟಿ.ವಿ.ಗಳಲ್ಲಿ ಅಷ್ಟಿಷ್ಟು ನೋಡಿ, ಪತ್ರಿಕೆಗಳಲ್ಲಿ ಓದಿ ಗೊತ್ತಿದ್ದ ಸುಂದರ ನಗರ ಪ್ಯಾರಿಸ್ ಬಗ್ಗೆ ಕನಸು ಕಾಣುತ್ತ, ಅದೇ ಹೊತ್ತಿಗೆ ಆ ಅಪರಿಚಿತ ದೇಶದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂದು ಯೋಚಿಸುತ್ತ, ಅಲ್ಲಿಯ ಆಹಾರ ವಿಹಾರವೆಂಥದೋ ಏನೋ ಎಂದು ಭಯ ಸಂಶಯ ಪಡುತ್ತಲಿದ್ದ ಹಾಗೆಯೇ ಪ್ಯಾರಿಸ್ಸಿಗೆ ಹಾರುವ ದಿನ ಬಂದುಬಿಟ್ಟಿತು.

ಫ್ರೆಂಚ್ ಮಹಾಕ್ರಾಂತಿಯ ದ್ವಿಶತಮಾನೋತ್ಸವ ಸಮಾರಂಭಕ್ಕೆ ಹೊರಟ ಪ್ರಧಾನಿಗಳ ಜತೆಗಿನ ವರದಿಗಾರರ ಕೂಟದಲ್ಲಿ ಒಬ್ಬನಾಗಿ, ಆ ಸಮಾರಂಭವನ್ನು ಪ್ರತ್ಯಕ್ಷ ವರದಿ ಮಾಡುವ ಹೆಮ್ಮೆ ಹೊತ್ತು, ತದನಂತರ ಮಾಸ್ಕೋ-ಇಸ್ಲಾಮಾಬಾದಗಳನ್ನೂ ಸಂದರ್ಶಿಸಿ ಬರುವ ಅಯಾಚಿತ ಅವಕಾಶವನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳುವ ಕುರಿತು ಯೋಚಿಸುತ್ತಿದ್ದಂತೆಯೇ ನಮ್ಮ ವಿಮಾನ ಭಾರತದ ಸೀಮೋಲ್ಲಂಘನ ಮಾಡಿತ್ತು.

ದಿಲ್ಲಿ-ಪ್ಯಾರಿಸ್ ನಡುವಿನ ಪ್ರಯಾಣದ ಅವಧಿ ಎಂಟೂ ಕಾಲು ಗಂಟೆ. ಆರ್ಲಿ ವಿಮಾನ ನಿಲ್ದಾಣದಲ್ಲಿಳಿದಾಗ ನಮ್ಮ ವಾಚುಗಳಲ್ಲಿ (ಭಾರತೀಯ ಕಾಲಮಾನ) ರಾತ್ರಿ 9.15 ಗಂಟೆ. ಆದರೆ ಫ್ರೆಂಚ್ ಕಾಲಮಾನದ ಪ್ರಕಾರ ಆಗಿನ್ನೂ ಸಂಜೆ 5.45. ಸೂರ್ಯಾಸ್ತಕ್ಕೆ ಇನ್ನೂ ಸಮಯವಿತ್ತು. ಆಹಾ! ಮುಚ್ಚಂಜೆಯ ಪ್ಯಾರಿಸ್ ಸೌಂದರ್ಯವನ್ನು ಸವಿಯುವ ಸದವಕಾಶ. ಅದರಲ್ಲಿ ಮಹಾಕ್ರಾಂತಿಯ ವಿಶೇಷ ಸಮಾರಂಭದ ರಂಗಿನಿಂದ ಕಂಗೊಳಿಸುವ ಪ್ಯಾರಿಸ್!

ಪ್ಯಾರಿಸ್ಸಿನಲ್ಲಿ ವಿಪರೀತ ಚಳಿ ಇರಬಹುದೆಂದು ಕೊಂಡು ಕೋಟು-ರಗ್ಗುಗಳನ್ನು ಜತೆಗೊಯ್ದಿದ್ದ ನನಗೆ ಅವುಗಳನ್ನು ಬ್ಯಾಗಿನಿಂದ ಹೊರತೆಗೆಯುವ ಅವಶ್ಯಕತೆಯೇ ಉಂಟಾಗಲಿಲ್ಲ. ಮೈಮೇಲೆ ಕನಿಷ್ಟ ಬಟ್ಟೆಗಳನ್ನು ತೊಟ್ಟು ಓಡಾಡಬೇಕೆನಿಸುವಷ್ಟು ಸೆಕೆ ಆಗ ಪ್ಯಾರಿಸ್ಸಿನಲ್ಲಿ. ನಮ್ಮೊಂದಿಗಿದ್ದ ದಿಲ್ಲಿಯ ಪತ್ರಕರ್ತರು ''ಸೆಕೆಯ ಮಟ್ಟಿಗೆ ಹೇಳುವುದಾದರೆ ದಿಲ್ಲಿಗೂ-ಪ್ಯಾರಿಸ್ಸಿಗೂ ಯಾವುದೇ ಅಂತರವಿಲ್ಲ'' ಎಂದು ಆಡಿಕೊಂಡರು.

ವಿಶೇಷ ಆಹ್ವಾನಿತರೊಂದಿಗೆ ಬಂದು

ದಕ್ಕೋ ಏನೋ ಆರ್ಲಿ ಏರ್‌ಪೋರ್ಟಿನಲ್ಲಿ ನಮ್ಮ ಸಾಮಾನು ಸರಂಜಾಮುಗಳ ತಪಾಸಣೆಯಾಗಲಿಲ್ಲ. ನಮಗಾಗಿ ಕಾದಿದ್ದ ಬಸ್ಸಿನಲ್ಲಿ ಕುಳಿತು ಇಪ್ಪತ್ತು ಕಿಲೋಮೀಟರ್ ದೂರದ 'ಹೋಟೆಲ್ ಪುಲ್‌ಮನ್'ಗೆ ಬಂದಾಗ ಸಂಜೆಯ ಆರೂಕಾಲು ಗಂಟೆ. ಈ ಹೋಟೆಲ್ ಇರುವುದು ಪ್ಯಾರಿಸ್ಸಿನ ಸೇಂಟ್ ಜ್ಯಾಕ್ ಎಂಬಲ್ಲಿ. (ಹೋಟೆಲಿನವರೆಗೆ ಬರುವಾಗ ಬಸ್ಸಿನ ಗಾಜುಗಳ ಮೂಲಕ ನಮ್ಮ ದೃಷ್ಟಿಗೆ ಬಿದ್ದದ್ದಷ್ಟೇ ಅಂದು ನಮಗಾದ ಪ್ಯಾರಿಸ್ ದರ್ಶನ.) ಮೂರು ದಿನಗಳ ಊಟ-ತಿಂಡಿಯ ವೆಚ್ಚವನ್ನು ಡಾಲರ್ ರೂಪದಲ್ಲಿ ಮುಂಗಡವಾಗಿ ಕೊಟ್ಟು ನಮ್ಮ ಕೋಣೆಯನ್ನು ಸೇರಿಕೊಂಡೆವು.

ಸುದ್ದಿ ಕೇಂದ್ರಕ್ಕೆ ಭೇಟಿಕೊಟ್ಟು ವಾಪಸ್ ಬಂದಾಗ ರಾತ್ರಿಯೂಟಕ್ಕೆ ತಾಪತ್ರಯ ಪಡಬೇಕಾಯಿತು ಸಸ್ಯಾಹಾರಿಗಳಾದ ನಾವು. ಮೊದಲು ತಿಳಿದಿದ್ದಂತೆ, ಅನ್ನ ತರಕಾರಿ ಅಲ್ಲಿ ಸಿಗದ್ದರಿಂದ ಹೊರಗೆ ಚೀನಿ ರೆಸ್ಟೂರಾಗಳಲ್ಲಿ ಅನ್ನ ಸಿಕ್ಕೀತೆಂಬ ಆಸೆಯಿಂದಾಗಿ ಸುತ್ತಾಡಿದ್ದರಿಂದ ಸುಸ್ತಾಗಿ ಹೋದ ನಮಗೆ ಪ್ಯಾರಿಸ್ ಸುಂದರವಾಗಿ ಕಾಣಲಿಲ್ಲ. ಮತ್ತೆ ನಮ್ಮ ವಾಸಸ್ಥಾನಕ್ಕೆ ಬಂದು ಕಾಫಿ ಮತ್ತು ಕೆಲ ಹಸಿ ತರಕಾರಿಯ ತುಂಡುಗಳು, ಬೆಣ್ಣೆ ಸವರಿದ ಒಣಗಿದ ಬ್ರೆಡ್ ಸೇವಿಸಿ ಮಲಗಬೇಕಾಯಿತು. ಮೂರು ದಿನಗಳೂ ನಮಗಿದೇ ಅವಸ್ಥೆ. ಒಂದು ದಿನದ ಒಂದು ಹೊತ್ತು ಮಾತ್ರ ಸೇಬು, ಬಾಳೆಹಣ್ಣು ತಿನ್ನಬೇಕಾಯಿತು.

ಮರುದಿನ ಐಫೆಲ್ ಟಾವರ್ ನೋಡಿದಾಗ ಅನ್ನದ ಸಮಸ್ಯೆಯೇ ಮರೆತು ಹೋಯಿತು ನಮಗೆ. ಹಸಿವೆಯಷ್ಟೇ ಏಕೆ, ಎಲ್ಲವನ್ನೂ ಮರೆಸಿ ತನ್ನನ್ನೇ ನೋಡುತ್ತ ನಿಲ್ಲುವಂತೆ ಮೆರೆಯುವ ಪ್ಯಾರಿಸ್ ನಗರದ ಈ ಪ್ರತಿಷ್ಠೆಯನ್ನು ಕಂಡಾಗ ಏನೋ ಕೃತಾರ್ಥಭಾವ. ಈ

ಚಾನ್ಸ್

ಪತ್ರಕರ್ತರ ತಂಡದಲ್ಲಿ ನನಗೆ ಪರಿಚಯವಾದವರು ಮರಾಠಿಯ 'ಪುಢಾರಿ' ಪತ್ರಿಕೆಯ ಸಂಪಾದಕ ಪ್ರತಾಪಸಿಂಗ ಜಾಧವ. ನಮ್ಮಿಬ್ಬರಿಗೂ ಪರಸ್ಪರ ಆಸರೆ ಸಿಕ್ಕಂತಾಗಿತ್ತು ಈ ಪರಿಚಯ. ದಿನವೊಂದರಲ್ಲೇ ನಾವು ಆತ್ಮೀಯರಾಗಿಬಿಟ್ಟೆವು.

ಜಾಧವ ಪೈಲವಾನರಂತೆ ಕಂಡರೂ ಅವರಿಗೆ ಕೊಲೆಟಿಸ್ ರೋಗದ ಬಾಧೆ ಎಂಬುದು ಗೊತ್ತಾಯಿತು. ಪಥ್ಯದ ಆಹಾರ ಅವರಿಗೆ ಅನಿವಾರ್ಯ.

ನಮ್ಮ ವಿಶೇಷ ವಿಮಾನ ಇನ್ನೇನು ಪ್ಯಾರಿಸ್ಸಿಗೆ ಹಾರುವ ಸಮಯ ಸನ್ನಿಹಿತ ಎಂದಾಗ ಜಾಧವ ಅವರಿಗೆ ಜ್ವರ ಕಾಣಿಸಿಕೊಂಡಿತು. ''ನಾನು ಪ್ಯಾರಿಸ್ಸಿಗೆ ಬರಲಾರೆನೇನೋ'' ಎಂದು ಅವರು ಹೇಳಿದಾಗಲಂತೂ ನನಗೆ ಒಂಟಿತನ ಕಾಡಲಾರಂಭಿಸಿತು. ಆದರೂ ನಾವೆಲ್ಲ ಅವರಿಗೆ ''ಏನೂ ಆಗುವುದಿಲ್ಲ. ನಾವಿರುತ್ತೇವಲ್ಲ ಜತೆಯಲ್ಲಿ. ಬನ್ನಿ'' ಎಂದು ಧೈರ್ಯ ಹೇಳಿದೆವು. ''ಇಲ್ಲ, ನನಗೆ ಆ್ಯಸಿಡಿಟಿ ಹೆಚ್ಚಾಗುತ್ತಿದೆ. ಪ್ರವಾಸ ಬೇಡವೇ ಬೇಡ'' ಎಂದು ಜಾಧವರ ಹಟ.

ಕೊನೆಗೆ ಪ್ರಧಾನಿಗಳ ಪರಿವಾರದ ಡಾ.ಮೆಹತಾರನ್ನು ಕರೆತರಬೇಕಾಯಿತು. ಡಾ.ಮೆಹತಾ ಕೆಲವು ಮಾತ್ರೆಗಳನ್ನು ಜಾಧವರಿಗೆ ಕೊಟ್ಟು ಸರಿಹೋಗುತ್ತದೆ. ಕಾಳಜೀ ಮಾಡಬೇಡಿರಿ. ಪ್ರವಾಸದಲ್ಲೇನೂ ತೊಂದರೆಯಾಗುವುದಿಲ್ಲ'' ಎಂದರು.

ನಮ್ಮೊಂದಿಗಿದ್ದ ಕನ್ನಡಿಗ, ಫಿಲ್ಮ್ ಡಿವಿಜನ್ನಿನ ಕ್ಯಾಮರಾಮನ್ ಹಳದಣಕರ ಅವರು ಹಾಸ್ಯ ಮಾಡಿ, ''ಜಾಧವಜಿ, ನೀವು ಜಡ್ಡು ಬೀಳುವುದಾದರೆ ಪ್ಯಾರಿಸ್ಸಿನಲ್ಲಿ ಜಡ್ಡು ಬೀಳಿ. ಇಂಥ ಚಾನ್ಸ್ ಮತ್ತಾರಿಗೆ ಸಿಕ್ಕೀತು?'' ಎಂದಾಗ ಉಕ್ಕಿನ ನಗೆಯಲ್ಲಿ ಜಾಧವರ ನಗೆಯೂ ಸೇರಿತ್ತು.

ವಿಮಾನಯಾನದುದ್ದಕ್ಕೂ ಜಾಧವರಿಗೆ ಆ 'ಚಾನ್ಸ್'ನ ನೆನಪು ಅವರ ವ್ಯಾಧಿಯನ್ನು ಮರೆಸಿತಂತೆ.

ಗೋಪುರದ ತುತ್ತತುದಿ ಏರುವಾಗಿನ ಉತ್ಸಾಹವಂತೂ ಹೇಳತೀರದ್ದು. ಐರೋಪ್ಯ ದೇಶಗಳಲ್ಲೇ ಅತಿ ಎತ್ತರದ, ಜಗತ್ತಿನ ಅಚ್ಚರಿಗಳಲ್ಲೊಂದಾದ ಈ ಬೃಹತ್ ಉಕ್ಕಿನ ಗೋಪುರದ ಸಾವಿರಾರು ಜನ ಸದಾ ಸರತಿಯಲ್ಲಿರುವ ಸಾಲಲ್ಲಿ ನಿಂತು, ಪ್ರವೇಶ ಶುಲ್ಕವನ್ನಿತ್ತು, ಮೇಲೇರಿ ಕೆಳಗಿಳಿಯಲು ಕನಿಷ್ಟ ಒಂದು ತಾಸು ಬೇಕು.

ಈ ಗೋಪುರದಲ್ಲಿ ಪ್ರಯಾಣಿಕರಿಗಾಗಿ ಎರಡು ಅಂತಸ್ತುಗಳನ್ನು ಮಾಡಲಾಗಿದೆ. ಅಡಿಪಾಯದ ನಾಲ್ಕೂ ಸ್ತಂಭಗಳಿಂದಲೂ ಮೇಲೇರಲು ಲಿಫ್ಟ್‌ಗಳಿವೆ. ಎರಡನೆ ಅಂತಸ್ತಿಗೆ ಹೋಗಬಯಸುವವರು ಲಿಫ್ಟ್ ಬದಲಿಸಬೇಕು. 984 ಅಡಿ ಎತ್ತರದ ಈ ಗೋಪುರವನ್ನು ನೂರು ವರ್ಷಗಳ ಹಿಂದೆ (1889) ಪ್ಯಾರಿಸ್ ಪ್ರದರ್ಶನಕ್ಕಾಗಿ ಕಟ್ಟಲಾಗಿತ್ತಂತೆ. ಈ ಗೋಪುರದ ಸ್ಥಾಪನೆಯ ಶತಮಾನೋತ್ಸವದಲ್ಲಿ ಭಾಗವಹಿಸಿದ ಹೆಮ್ಮೆಯೊಂದಿಗೆ ಆ ಎತ್ತರದಿಂದ ಪ್ಯಾರಿಸ್ ನಗರದ ವಿಹಂಗಮ ದರ್ಶನ ಮಾಡಿದೆ.

* * *

ಮೂರು ದಿನಗಳೂ ಇಡೀ ಪ್ಯಾರಿಸ್ ಹಬ್ಬದ ಸಂಭ್ರಮದಿಂದ ನಲಿಯುತ್ತಿತ್ತು. ಸಂಜೆಯಾದರೆ ಸಾಕು ಬೀದಿಗಳಲ್ಲಿ ಪ್ಯಾರಿಸ್ಸಿಗರ ಹಾಡು, ಕುಣಿತಗಳು, ನಗೆ, ಕೇಕೆ, ನಲಿವುಗಳು.

ಇನ್ನೂರು ವರ್ಷಗಳ ಹಿಂದೆ 14 ಜುಲೈ 1789ರಂದು ಫ್ರೆಂಚ್ ಬಡಜನತೆ ಅಸಮಾನತೆ, ಶೋಷಣೆ, ಅರಸರ ಕ್ರೂರ ದಬ್ಬಾಳಿಕೆಗಳ ವಿರುದ್ಧ ಬಂಡೆದ್ದು ನಿರಪರಾಧಿಗಳನ್ನು ಬಂಧಿಸಿಟ್ಟಿದ್ದ ಬ್ಯಾಸ್ಟಿಲ್ ಪ್ರಿಜನ್ ಬಾಗಿಲನ್ನು ಮುರಿದು ಒಳನುಗ್ಗಿ ಮುಕ್ತತೆ ದೇಶದಲ್ಲಿ ಕಾಣಿಸಿಕೊಳ್ಳಲು ಕಾರಣರಾದರು.

"ಎಲ್ಲ ಮಾನವರೂ ಸ್ವತಂತ್ರರು ಮತ್ತು ಹಕ್ಕುಗಳಲ್ಲಿ ಸರಿಸಮಾನರು" ಎಂಬ ಘೋಷಣೆಯೊಂದಿಗೆ ಫ್ರಾನ್ಸಿನ ಅಧ್ಯಕ್ಷ ಮಿತೆರಾ ಸಮಾರಂಭವನ್ನು ಉದ್ಘಾಟಿಸಿದರು.

ಎರಡು ಶತಮಾನಗಳ ಹಿಂದೆ ಫ್ರೆಂಚ್ ಬಡಜನ ಅಲ್ಲಿಯ ಉಳ್ಳವರ ವಿರುದ್ಧ ಬಂಡೆದ್ದ ನೆಲದಲ್ಲಿಯೇ ಇಂದು ಸಿರಿವಂತ ರಾಷ್ಟ್ರಗಳ ಪ್ರತಿನಿಧಿಗಳು ಸಮಾರಂಭದಲ್ಲಿ ಪಾಲ್ಗೊಳ್ಳುವ ನೆಪದಲ್ಲಿ ತಮ್ಮ ಸಿರಿವಂತಿಕೆಯನ್ನು ಬಡರಾಷ್ಟ್ರಗಳಿಗೆ ಹಾಸಿಯಾಗುವ ರೀತಿಯಲ್ಲಿ ಹೇಗೆ ಹೆಚ್ಚಿಸಿಕೊಳ್ಳಬೇಕೆಂದು ಚರ್ಚಿಸಲು ಸೇರಿದ್ದೊಂದು ವಿಪರ್ಯಾಸವೆನಿಸಿತು. ಸಮಾಜವಾದಿ ಎನಿಸಿಕೊಂಡಿರುವ ಈಗಿನ ಅಧ್ಯಕ್ಷರ ವರ್ತನೆ, ಬಡ ಮತ್ತು ಶ್ರೀಮಂತ ರಾಷ್ಟ್ರಗಳನ್ನು ಫ್ರಾನ್ಸದ ಅತ್ಯಂತ ದೊಡ್ಡ ಹಬ್ಬದ ದಿನ ಪ್ರತ್ಯೇಕಿಸುವ ಕ್ರಮಗಳು ತೀವ್ರ ಟೀಕೆಗೊಳಪಟ್ಟು ಅವರು ಕೂಡಲೇ ಬದಲಿ ಕ್ರಮ ಕೈಗೊಂಡು ಸುಧಾರಿಸಿಕೊಳ್ಳಬೇಕಾಯಿತು. ಸಿರಿವಂತ ರಾಷ್ಟ್ರಗಳ ಧುರೀಣರಾದ ಅಮೆರಿಕಾಧ್ಯಕ್ಷ ಜಾರ್ಜ್ ಬುಶ್ ಮತ್ತು ಬ್ರಿಟನ್ನಿನ ಪ್ರಧಾನಿ ಮಾರ್ಗರೆಟ್ ಥ್ಯಾಚರ್ ಅವರಿಂದ ಬಡರಾಷ್ಟ್ರಗಳ ಸಮಸ್ಯೆ ಕುರಿತು ಅಷ್ಟೇನೂ ಸೂಕ್ತ ಪ್ರತಿಕ್ರಿಯೆ ಬಾರದಿರುವುದನ್ನು ಫ್ರೆಂಚ್ ಪತ್ರಿಕೆಗಳು ವರದಿ ಮಾಡಿದ್ದು ಗಮನಾರ್ಹವೆನಿಸಿತು.

ಉತ್ಸವದ ಸ್ಮರಣಾರ್ಥ ಕಟ್ಟಿಸಲಾದ ಎರಡೂವರೆ ಶತಕೋಟಿ ಫ್ರಾಂಕ್ಸ್ ಬೆಲೆಬಾಳುವ ಭವ್ಯ 'ಒಪೆರಾ ಹೌಸ್' ಗಾಜು ಲೋಹಗಳ ಒಂದು ಹಡಗಿನಂತೆ ಕಂಡಿತು. ಕೆನಡಾದ ಶಿಲ್ಪಿ ಕಾರ್ಲೊಸ್ ಓಚ್ ಅವರು ಯೋಚಿಸಿದ ಈ ಕಟ್ಟಡ ಪೂರ್ಣಗೊಳ್ಳಲು ಎಂಟು ವರ್ಷಗಳು ಬೇಕಾಯಿತಂತೆ. 2700 ಆಸನಗಳಿರುವ ಈ


ಸಮಾರಂಭದ ಸವಿನೆನಪಿಗಾಗಿ ಭಾರತದ ದಿವಂಗತ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರ ಮುದ್ರೆಯುಳ್ಳ ಬೆಳ್ಳಿ ನಾಣ್ಯವನ್ನು ಫ್ರಾನ್ಸ್ ಅಧ್ಯಕ್ಷ ಫ್ರಾಂಕೊಯಿ ಮಿತೆರಾ ಪ್ರಧಾನಿ ರಾಜೀವರಿಗೆ ಸಮರ್ಪಿಸಿದರು. ಈ ನಾಣ್ಯವನ್ನು ಮತ್ತು ಸಂಗ್ರಹಾಲಯದಲ್ಲಿರಿಸಲಾಗುವುದು. ಇಂದಿರಾ ಪ್ರಿಯದರ್ಶಿನಿಗೆ ಫ್ರೆಂಚ್ ಜನ ತೋರಿದ ಅತ್ಯಂತ ಆತ್ಮೀಯ ಗೌರವದ ಪ್ರತೀಕ ಈ ನಾಣ್ಯ.

ಕಟ್ಟಡದಲ್ಲಿ ಮುಖ್ಯ ವೇದಿಕೆಯಲ್ಲದೆ ಒಂಭತ್ತು ತಿರುಗುವ ರಂಗಮಂಚಗಳಿವೆ. ಗ್ರೀನ್ ರೂಂಗಳು ಅತ್ಯಾಧುನಿಕವಾಗಿದ್ದು ಬೆಳಕಿನ ವ್ಯವಸ್ಥೆಯೂ ಧ್ವನಿತಂತ್ರಗಳೂ ತೀರ ಸುಧಾರಿತವಾದವು. ನಾಟಕ ಸಂಗೀತಗಳಿಗಾಗಿ ಮಾತ್ರ ಈ ಭವನ ಮೀಸಲು.

ಜುಲೈ 14ರ ಸಂಜೆಯ ಕಾರ್ಯಕ್ರಮಗಳು ಅವಿಸ್ಮರಣೀಯ. ಆ ಥಳಕು ಬೆಳಕಿನ, ಕುಣಿದು ಕುಪ್ಪಳಿಸುವ ವಿವಿಧ ವಾದ್ಯ ಮೇಳಗಳ ಹಿನ್ನೆಲೆಯ ಚಿತ್ರ ವಿಚಿತ್ರ ಕಾರ್ಯಕ್ರಮಗಳನ್ನು ವೀಕ್ಷಿಸಲು ಎರಡು ಕಣ್ಣುಗಳು ಸಾಲಲಿಲ್ಲ. ಬಹುತೇಕ ಎಲ್ಲ ರಾಷ್ಟ್ರಗಳಿಂದಲೂ ಸಾಂಸ್ಕೃತಿಕ ತಂಡಗಳು ಭಾಗವಹಿಸಿದ್ದವು. ಭಾರತದ ಪರವಾಗಿ ನೃತ್ಯಪಟುಗಳ ಗುಂಪು ಮತ್ತು ಮೂರು ಅಲಂಕೃತ ಆನೆಗಳು ಪಾಲ್ಗೊಂಡಿದ್ದವು. ಇವೆಲ್ಲ ಕಾರ್ಯಕ್ರಮಗಳು ವಿಜಯದ ಕಮಾನು(ಆರ್ಕ್ ಡಿ ಟ್ರೈಂಫ್)ವಿನಿಂದ ಕ್ರಾಂತಿಯ ಸಂದರ್ಭದಲ್ಲಿ ಸಾವಿರಾರು ನಿರಪರಾಧಿಗಳ ರುಂಡಗಳನ್ನು ಚೆಂಡಾಡಿದ ಸ್ಥಳ ಗಿಲೊಟೆನ್ ಇದ್ದ ಸ್ಥಳವಾದ ಕಾಂಕರ್ಡ್‌ನಲ್ಲಿ ಮಧ್ಯರಾತ್ರಿಯವರೆಗೂ ಮುಂದುವರೆದವು.

ಅಂದು ಬೆಳಿಗ್ಗೆ ನಡೆದ ಸಶಸ್ತ್ರ ಪಡೆಗಳ ಪರೇಡನ್ನು ವಿಶೇಷ ಆಮಂತ್ರಿತ ವಿದೇಶಿ ಪ್ರತಿ





ನಿಧಿಗಳು ವೀಕ್ಷಿಸಿದರು. ನನಗಂತೂ ಅದು ದಿಲ್ಲಿಯಲ್ಲಿ ನಡೆಯುವ ಗಣರಾಜ್ಯೋತ್ಸವದ ಪರೇಡನ್ನು ನೆನಪಿಗೆ ತಂದಿತು. ಇದೇ ಸಂದರ್ಭದಲ್ಲಿ ಅತಿಥಿ ರಾಷ್ಟ್ರಗಳ ಧುರೀಣರ ರಕ್ಷಣೆಯ ಹೊಣೆ ಹೊತ್ತವರು ಸುಮಾರು ಇಪ್ಪತ್ತು ಸಾವಿರ ಪೋಲಿಸರು, ಅಧಿಕಾರಿಗಳು. ಅವರೆಲ್ಲ ಹಗಲಿರುಳು 'ಕಣ್ಣಲ್ಲಿ ಎಣ್ಣೆ ಹಾಕಿಕೊಂಡು' ಕಾದಿರುತ್ತಿದ್ದರು. ಹಾಗೆಯೇ ಎಲ್‌ಸಿ ಪ್ಯಾಲೇಸ್ ಮೇಲ್ಗಡೆ ಆಕಾಶದಲ್ಲಿ ಸ್ತಬ್ಧ ಬಿಳಿ ತಿಮಿಂಗಿಲಿನಂತೆ ತೇಲುತ್ತಿದ್ದ 'ಹಡಗು' ಕೆಳಗೆ ನಡೆಯಬಹುದಾದ 'ಅನುಚಿತ' ಚಟುವಟಿಕೆಗಳನ್ನು ಸೂಕ್ಷ್ಮವಾಗಿ ನೋಡುತ್ತಿತ್ತು.

ಪೋಲೀಸರ ಕಿರಿಕಿರಿ, ಭದ್ರಕಾವಲಿನಿಂದಾಗಿ ಸಿಡಿಮಿಡಿಗೊಂಡಿದ್ದರೂ ಪ್ಯಾರಿಸ್ಸಿಗರು ಅತಿಥಿ ಗೌರವ, ಸಭಾಗೌರವಗಳಿಂದಾಗಿ ಸಹಿಸಿಕೊಂಡಿದ್ದು ಸ್ಪಷ್ಟವಾಗಿ ತೋರಿತು. ಒಪೆರಾ ಹೌಸಿನಲ್ಲಿ ಪ್ರವೇಶ ಸಾರ್ವಜನಿಕರಿಗೆ ನಿರ್ಬಂಧಿಸಲ್ಪಟ್ಟಿತ್ತಾದ್ದರಿಂದ ಅವರೆಲ್ಲ ಮನೆಗಳಲ್ಲಿಯೇ ಕುಳಿತು ಟಿ.ವಿ.ಗಳಲ್ಲಿ ಅದರ 'ದೂರದರ್ಶನ' ಪಡೆದು ಸಮಾಧಾನಗೊಳ್ಳಬೇಕಾಯಿತು. ಅಷ್ಟೇ ಅಲ್ಲ ಪ್ಯಾರಿಸ್ಸಿನ ಸಾವಿರು ಕುಟುಂಬಗಳ ಜನ ಅಂದಿನ ಗದ್ದಲದಿಂದ ದೂರಾಗಿ ಹಳ್ಳಿಗಾಡಿನತ್ತ ತೆರಳಿ ರಜಾದಿನಗಳನ್ನು ಕಳೆದರಂತೆ.

* * *

ಪ್ಯಾರಿಸ್ಸಿನ ಜನ ವಿಲಾಸ ಪ್ರಿಯರು, ರಸಿಕರು, ಜತೆಗೆ ಶಿಸ್ತುಗಾರರು, ಪ್ರಾಮಾಣಿಕರು, ಶ್ರಮಜೀವಿಗಳು. ಶ್ರಮವೇ ಸಂತಸದ ಮೂಲ, ಸುಖಜೀವನದ ಆಧಾರ ಎಂಬುದಕ್ಕೆ ಅವರೊಂದು ಉದಾಹರಣೆಯಾಗಬಲ್ಲರು.

ಇಲ್ಲಿಯ ಮಹಿಳೆಯರು ಎಲ್ಲಾ ರಂಗಗಳಲ್ಲೂ ಮುಂದುವರಿದವರು. ಭಾರತದಲ್ಲಿ ಮಹಿಳಾ ಸ್ವಾತಂತ್ರ್ಯದ ಕುರಿತು ದೊಡ್ಡ ಭಾಷಣ ಬಿಗಿಯುವವರು ಇಲ್ಲಿ ಬಂದು ನೋಡಬೇಕು. ಟ್ಯಾಕ್ಸಿ ಚಾಲಕರಾಗಿ, ಶಿಕ್ಷಕಿಯರಾಗಿ, ಮಾರಾಟ ಪ್ರತಿನಿಧಿಗಳಾಗಿ, ಹೋಟೆಲ್‌ಗಳಲ್ಲಿ ಸ್ವಾಗತಕಾರಿಣಿಯಾಗಿ ಬದುಕಿನ ಎಲ್ಲ ಹಂತಗಳಲ್ಲೂ ದುಡಿಯುವ ಇಲ್ಲಿಯ ಮಹಿಳೆ ತನ್ನ ಕುಟುಂಬವನ್ನು ಸುಖಿಯಾಗಿಡಲು ನೆರವಾಗುತ್ತಾಳೆ.

ಎಲ್ಲರೂ ಮಾಂಸಾಹಾರಿಗಳೆ. ಗೋಮಾಂಸ, ಆಡಿನಮಾಂಸ ಇಲ್ಲದ ಊಟವೇ ಇಲ್ಲ. ನೀರಿಗೆ ಬದಲಾಗಿ ಬೀರ್ ಮತ್ತಿತರ ಪಾನೀಯಗಳನ್ನು ಊಟದೊಂದಿಗೆ ಕುಡಿಯುತ್ತಾರೆ. ಯಾಕೆಂದರೆ ನೀರು ಇಲ್ಲಿ ದುಬಾರಿ ವಸ್ತು. ಅವರು ಕುಡಿಯುವುದು ನಮ್ಮ ಹಾಗೆ ಸಾದಾ ನೀರಲ್ಲ, ಮಿನರಲ್ ವಾಟರ್. ಇಂಥ ಒಂದು ಬಾಟಲಿಗೆ ಹತ್ತು ರೂಪಾಯಿ (ನಾಲ್ಕು ಫ್ರಾಂಕ್) ಬೆಲೆ. ಸಸ್ಯಾಹಾರಿಗಳಿಗಂತೂ ಇಲ್ಲಿ ಜೀವನ ದುರ್ಭರ.

ನನಗೆ ಹಿಡಿಸಿದ ಮತ್ತೊಂದು ಅಂಶ ಪ್ಯಾರಿಸ್ಸಿನ ರಸ್ತೆಗಳು. ಅಗಲವಾದ ಈ ರಸ್ತೆಗಳು ಕನ್ನಡಿಯಷ್ಟು ಸ್ವಚ್ಛ. ಏಕಮುಖ ಸಂಚಾರ, ಭೂಗತ ಹಾಗೂ ಅಂತಸ್ತಿನ ರಸ್ತೆಗಳಿರುವುದರಿಂದಾಗಿ ಟ್ರಾಫಿಕ್ ಸಿಗ್ನಲ್‌ಗಳು, ವಾಹನಾಪಘಾತಗಳು ತೀರ ಕಡಿಮೆ. ತಗ್ಗು-ದಿನ್ನೆಗಳಿಲ್ಲ. ಹೀಗಾಗಿ ರಸ್ತೆ ಪ್ರಯಾಣವಾಗಲಿ, ರೈಲು ಪ್ರವಾಸವಾಗಲಿ ಸುಖ ರೂಪದ್ದು. ಧಡಿಕೆ - ಚಡಪಡಿಕೆಗಳಿಗೆ ಅವಕಾಶವೇ ಇಲ್ಲ. ರಸ್ತೆಯ ಇಕ್ಕೆಲಗಳಲ್ಲೂ ಒಂದೇ ಜಾತಿಯ ಮರಗಳನ್ನು ನೋಡುವುದೇ ಒಂದು ಆನಂದ.

ಪರಿಸರ ಸಮತೋಲನದ ರಕ್ಷಣೆಗೆ ಇಲ್ಲಿಯ ಜನ ಹಾಗೂ ಸರಕಾರ ನೀಡಿದ ಪ್ರಾಶಸ್ತ್ಯ ಮತ್ತು ಮಾಡಿದ ಪ್ರಯತ್ನಗಳು ಪ್ರಶಂಸನೀಯ. ರಸ್ತೆ, ಮನೆ, ಸಾರ್ವಜನಿಕ ಸ್ಥಳಗಳು ಎಲ್ಲಿ ನೋಡಿದರೂ ನೈರ್ಮಲ್ಯ ಎದ್ದುಕಾಣುವಂಥದು. ಪ್ಯಾರಿಸ್ಸಿನ ಫುಟ್‌ಪಾತ್‌ಗಳು ನಮ್ಮಲ್ಲಿಯ ಹಾಗೆ ಕಿರಿ (ಕಿರಿ) ವ್ಯಾಪಾರಿಗಳಿಂದ ಗಜಬಿಜಿಗೊಂಡಿದ್ದರೂ ಎಲ್ಲೂ ಹೊಲಸು ಕಾಣುವುದಿಲ್ಲ. ಯಾಕೆಂದರೆ ನಮ್ಮಲ್ಲಿಯ ಹಾಗೆ ಅಲ್ಲಿಯ ಜನ ಜಗಿದ ಎಲೆಯಡಿಕೆಯನ್ನಾಗಲಿ, ಕಫವನ್ನಾಗಲಿ, ಸಿಂಬಳವನ್ನಾಗಲಿ ರಸ್ತೆಯ ಮೇಲೆ ಎಸೆಯುವುದಿಲ್ಲ. ಸಿಗರೇಟು ಸೇದಿ ಅದರ ತುಂಡುಗಳನ್ನು ರಸ್ತೆಗಳ ಮೇಲೆ ಬಿಸುಡುವುದಿಲ್ಲ.

ಹಣ್ಣುಹಂಪಲುಗಳ ಸಿಪ್ಪೆ, ತಿಂಡಿಗಳ ಖಾಲಿ ಪೊಟ್ಟಣಗಳನ್ನು ರಸ್ತೆಗಳಲ್ಲಿ ಗುಡ್ಡೆ ಹಾಕುವುದಿಲ್ಲ. ಸ್ವಚ್ಛತೆ ಅವರ ಜನ್ಮಜಾತ ಗುಣ. ಸಾರ್ವಜನಿಕ ಸ್ಥಳಗಳಲ್ಲಿ ಜನ ಮಲಮೂತ್ರ ವಿಸರ್ಜಿಸುವುದು ಭಾರತದಲ್ಲಿ ಮಾತ್ರವೇನೊ. ಪ್ಯಾರಿಸ್ಸಿನಲ್ಲಿ ಮೂತ್ರಾಲಯಗಳಿವೆ. ದುರ್ನಾತ ರಹಿತವಾದ, ಫಳಫಳ ಹೊಳೆಯುವಂಥವು. ಆದರೆ ಅಲ್ಲಿ ಫಕ್ಕನೇ ಹೋಗಿ ಮೂತ್ರ ವಿಸರ್ಜಿಸಿ ಬರುವಂತಿಲ್ಲ. ಭಾರತೀಯ ಕರೆನ್ಸಿಯ ಐದು ರೂಪಾಯಿ(ಎರಡು ಫ್ರಾಂಕ್‌ಗಳು)ಗಳನ್ನು ತೆತ್ತಬೇಕು. ಕಾಲುದಾರಿಗಳ ಪಕ್ಕದಲ್ಲಿರುವ ಪ್ಲಾಸ್ಟಿಕ್ ಆವರಣದ ಬಾಗಿಲು ಮುಚ್ಚಿದ ದೊಡ್ಡ ಡಬ್ಬಿಗಳಿರುತ್ತವೆ. ಆ ಬಾಗಿಲು ತೆರೆಸಲು ನೀವು ಒಂದೊಂದು ಫ್ರಾಂಕಿನ ಎರಡು ನಾಣ್ಯಗಳನ್ನು ಪಕ್ಕದಲ್ಲಿರುವ ತೂತಿನಲ್ಲಿ ಹಾಕಬೇಕು. ಒಳಹೊಕ್ಕು ತೆರೆದ ಬಾಗಿಲು ಮುಚ್ಚಿ ನಿಮ್ಮ ಕೆಲಸ ಮುಗಿಸಿ ಹೊರಬರುವಷ್ಟರಲ್ಲಿ ಎಲ್ಲ ಹೊಲಸು ತೊಳೆದುಕೊಂಡು ಹೋಗಿಬಿಟ್ಟಿರುತ್ತದೆ. ನಗರ ನೈರ್ಮಲ್ಯ ಕಾಪಾಡುವಿಕೆಗೆ ಅವರು ಕಂಡುಕೊಂಡ ಉಪಾಯಕ್ಕೆ ತಲೆದೂಗಲೇಬೇಕು. ಜನ ರಸ್ತೆಬದಿಯ ಪಬ್‌ಗಳಲ್ಲಿ ಕುಡಿಯುತ್ತಾರಾದರೂ ಅಸಭ್ಯವಾಗಿ ವರ್ತಿಸುವುದಿಲ್ಲ. ಗಂಡು-ಹೆಣ್ಣುಗಳು ಜೋಡಿಯಾಗಿ, ಒಟ್ಟಾಗಿ ನಡೆದಾಡಿ ನಲಿದಾಡುತ್ತಾರಾದರೂ ಎಲ್ಲೂ ಅಶ್ಲೀಲವಾಗಿ ನಡೆದುಕೊಳ್ಳುವುದಿಲ್ಲ.

ಸರಕಾರಿ ಬಸ್ಸುಗಳಾಗಲಿ, ಆಟೋರಿಕ್ಷಾಗಳಾಗಲಿ, ದ್ವಿಚಕ್ರವಾಹನಗಳಾಗಲಿ ಅಲ್ಲಿ ನನ್ನ ಕಣ್ಣಿಗೆ ಬೀಳಲಿಲ್ಲ. ಜನ ಹೆಚ್ಚಾಗಿ ಕಾರು ಟ್ಯಾಕ್ಸಿಗಳನ್ನೇ ಬಳಸುತ್ತಾರೆ. ಮಧ್ಯಮ ತರಗತಿಯ ಜನ ಲೋಕಲ್ ಟ್ರೇನ್ (ಮೆಟ್ರೊ) ಗಳಲ್ಲಿ ಓಡಾಡುತ್ತಾರೆ. ಪ್ಯಾರಿಸ್ ತುಂಬ ಇಂಥ ಭೂಗತ ರೈಲುಗಳಿದ್ದು ಅವೇ ನಿತ್ಯ ಕೆಲಸಕ್ಕಾಗಿ ದೂರ ಪ್ರಯಾಣಿಸುವವರ ಜೀವನಾಡಿ.

ಫ್ರೆಂಚ ಜನ ಭಾಷಾಭಿಮಾನಿಗಳು. ಮಾತೃಭಾಷೆಯನ್ನುಳಿದು ಬೇರೆ ಭಾಷೆಯಲ್ಲಿ ಮಾತನಾಡುವುದೇ ಇಲ್ಲ. ನಮ್ಮ ಕೋಣೆಯನ್ನು ಸ್ವಚ್ಛ ಮಾಡಲು ಬಂದ ಸೇವಕಿಗೆ "ನಿನಗೆ ಇಂಗ್ಲೀಷ್ ಬರುತ್ತದೆಯೆ?" ಎಂದು ಇಂಗ್ಲೀಷಿನಲ್ಲಿ ಕೇಳಿದೆ. ಆಕೆ ಭುಜ ಹಾರಿಸಿ "ಓಹ್, ನೋ" ಎಂದು ನಕ್ಕು "ಫ್ರೆಂಚ್ ಮಾತಾಡಿರಲ್ಲ" ಎಂದು ಫ್ರೆಂಚಿನಲ್ಲೇ ನನಗೆ ಹೇಳಿದಳು. ಅಲ್ಲೆಲ್ಲ ಅಂಗಡಿ-ಆಫೀಸು, ಸರಕಾರಿ-ಕಚೇರಿ, ರೈಲು ನಿಲ್ದಾಣಗಳ ಫಲಕಗಳು ಫ್ರೆಂಚ್ ಭಾಷೆಯಲ್ಲಿ ದೊಡ್ಡ ಅಕ್ಷರಗಳಲ್ಲಿದ್ದು ಕೆಲವೇ ಕಡೆಗಳಲ್ಲಿ ಜತೆಗೆ ಚಿಕ್ಕ ಇಂಗ್ಲೀಷ್ ಅಕ್ಷರಗಳಲ್ಲಿ ಬರೆದಿರುವುದು ಕಂಡಿತು.

ಈ ಮಾಯಾನಗರಿಯನ್ನು ಮೂರು ದಿನಗಳಲ್ಲಿ ಎಷ್ಟು ನೋಡಲು ಸಾಧ್ಯ? ನಾವು ಉಳಿದಿದ್ದ ಹೋಟೆಲ್ ಸಮೀಪವೇ ಇದ್ದ 56 ಅಂತಸ್ತಿನ ಕಟ್ಟಡ ಎತ್ತರದಲ್ಲಿ ಐಫೆಲ್ ಟಾವರಿಗೆ ಸಮ ಸಮ.

ಪ್ಯಾರಿಸ್ಸಿನ ಪ್ರಿಯ ಸ್ಮೃತಿಗಳೊಂದಿಗೆ ಅಲ್ಲಿಯ ವಾಸ್ತವ್ಯ ಮುಗಿಸಿ ಪ್ರಧಾನಿಗಳ ಮುಂದಿನ ಕಾರ್ಯಕ್ರಮದಂತೆ ಮಾಸ್ಕೋಕ್ಕೆ ಹೊರಟೆ. ★

ಪೀಟರ್ ಪ್ಲ್ಯಾಟ್‌ಮನ್‌ನೆಂಬ ಪ್ರಖ್ಯಾತ ಡಚ್ ಚಿತ್ರಕಾರನೊಬ್ಬ ಶರೀರದ ಅವಯವಗಳ ಚಿತ್ರರಚನೆಗಾಗಿ ತನ್ನ ಡ್ರಾಯಿಂಗ್ ರೂಮಿನಲ್ಲಿ ತಾನೇ ತಂದು ತೂಗುಹಾಕಿದ ಒಂದು ಅಸ್ಥಿಪಂಜರದ ಗೂಡನ್ನು ಅಭ್ಯಸಿಸಿ ಚಿತ್ರ ರಚಿಸುತ್ತಿರುವಾಗ ಭಯಭೀತನಾಗಿ 1692ರ 18ನೇ ಡಿಸೆಂಬರಿನಂದು ಸಾವನ್ನಪ್ಪಿದ.

ಆದರೆ ತನ್ನ ಮನೆಯ ಸ್ಟುಡಿಯೋದಲ್ಲಿ ತೂಗು ಹಾಕಿದ ಅಸ್ಥಿ ಪಂಜರದ ಗೂಡು ತನಗೆ ಕೈಬೀಸಿ ಮತ್ತೆ ಮತ್ತೆ ಕರೆದಿದ್ದು ಭೂಕಂಪದಿಂದ ಎಂದು ಆತನಿಗೆ ಕೊನೆಯವರೆಗೂ ತಿಳಿಯಲೇ ಇಲ್ಲ.

–ಕಾಣಕೋಣಕರ

ಸತ್ತವ

ಸಮುದ್ರ ಭೋರ್ಗರೆಯುತ್ತಿತ್ತು. ಅಟ್ಲಾಂಟಿಕ್ ಸಾಗರದಲ್ಲಿ 'ಪಿಯೂರಡ್' ಎಂಬ ದೊಡ್ಡದಾದ ಹಡಗೊಂದು ಸಾಗುತ್ತಿತ್ತು. ಒಂದು ಸಮುದ್ರದ ದೊಡ್ಡ ಅಲೆಯೊಂದು ಹಡಗಿಗೆ ಅಪ್ಪಳಿಸಿ ಹಡಗು ತಲೆಕೆಳಗಾಯಿತು. ಹಡಗಿನಲ್ಲಿದ್ದವರೆಲ್ಲ ನೀರು ಪಾಲಾದರು. ಸಮುದ್ರದ ಮಧ್ಯೆ ಸ್ವಲ್ಪೇ ಸಮಯದಲ್ಲಿ ಕೆಲವರು ಜಲ ಸಮಾಧಿಯಾದರೆ ಇನ್ನು ಕೆಲವರು ಸಾಗರ ಜೀವಿಗಳಿಗೆ ಆಹಾರವಾದರು. ಅದೃಷ್ಟವಶಾತ್ ಬದುಕಿದ ನಾಲ್ವರು ಒಂದು ಚಿಕ್ಕ ರಬ್ಬರ್‌ಬೋಟನ್ನೇರಿ ಅಪಾಯದಿಂದ ಪಾರಾದರು.

ಆ ನಾಲ್ವರಲ್ಲಿ 'ಟಾಮ್ಲಿನ್' ಎಂಬ ಹದಿನೆಂಟು ವಯಸ್ಸಿನ ಯುವಕನೂ ಒಬ್ಬ. ಮಿಕ್ಕ ಮೂವರು ಎಡ್ವಿನ್, ಟಟ್ಲಿ, ಹೂನ್ ಎಂಬುವರು. ಈ ನಾಲ್ವರೂ ನಡು ಸಮುದ್ರದಲ್ಲಿ ಆ ರಬ್ಬರ್ ಬೋಟಿನಲ್ಲಿ ದಿಕ್ಕು-ದಿಶೆ ತಿಳಿಯದೆ ಒದ್ದಾಡಿದರು. ಅವರ ಬಳಿ ಉಣ್ಣಲು ಆಹಾರವಿರಲಿಲ್ಲ. ಎಂದಾದರೊಂದು ದಿನ ಯಾವುದಾದರೂ ಹಡಗು ಕಣ್ಣಿಗೆ ಬೀಳಬಹುದೆಂಬ ಗಾಢವಾದ ವಿಶ್ವಾಸದಿಂದ ಅವರೆಲ್ಲ ಜೀವವನ್ನು ಹಿಡಿದುಕೊಂಡಿದ್ದರು. ಆದರೆ ಹಸಿವನ್ನು ಇಂಗಿಸಿಕೊಳ್ಳಲು ಏನಾದರೂ ಇದ್ದರೆ ತಾನೆ? ಎಲ್ಲರೂ ಸಾಯುವ ಸ್ಥಿತಿಯಲ್ಲೇ. ಆ ಸಮಯದಲ್ಲಿ ಎಡ್ವಿನ್,

''ಎಲ್ಲರ ಹೆಸರನ್ನು ಚೀಟಿಯಲ್ಲಿ ಬರೆದು ಹಾಕಿ ಚೀಟಿ ತೆಗೆಯಿರಿ. ಅದರಲ್ಲಿ ಯಾರ ಹೆಸರು ಬರುತ್ತದೋ ಅವರನ್ನು ಕೊಂದು ಮಾಂಸವನ್ನು ತಿನ್ನೋಣ. ಅದರಿಂದ ಮಿಕ್ಕ ಮೂವರಾದರೂ ಇನ್ನು ಸ್ವಲ್ಪ ದಿನ ಜೀವಂತವಾಗಿರಬಹುದು. ಅಷ್ಟರಲ್ಲಿ ನಮ್ಮ ಸಹಾಯಕ್ಕೆ ಯಾವುದಾದರೂ ಹಡಗು ಬಂದೇ ಬರುತ್ತದೆ'' ಎಂದು ಉಪಾಯ ಹೇಳಿದರು. ಈ ಕಠೋರ ಭಯಂಕರ ಉಪಾಯಕ್ಕೆ ಹದಿನೆಂಟು ವರ್ಷದ ಎಡ್ವಿನ್ ವಿರೋಧಿಸಿ.

''ಬಾಳಿದರೆ ಎಲ್ಲರೂ ಬಾಳೋಣ.... ಇಲ್ಲದಿದ್ದರೆ ಎಲ್ಲರೂ ಸಾಯೋಣ'' ಎಂದ.

ಇದಾದ ನಂತರ ಬಹಳ ಹೊತ್ತು ವಿಚಾರ ವಿನಿಮಯ ಮಾಡಿ ನಿರ್ಧಾರಕ್ಕೆ ಬರಲಾಗದೆ ನಾಲ್ವರೂ ಸುಮ್ಮನಾದರು.

ಅಂದು ರಾತ್ರಿ ಎಡ್ವಿನ್ ತನ್ನ ಪ್ಯಾಕೆಟ್ಟಿನಲ್ಲಿದ್ದ ಕತ್ತಿಯನ್ನು ಹೊರತೆಗೆದ. ಮಿಕ್ಕ ಮೂವರೂ ಆರಾಮವಾಗಿ ನಿದ್ರಿಸುತ್ತಿದ್ದಾಗ ಆತ ನಿಧಾನವಾಗಿ ಟಾಮ್ಲಿನ್‌ನ ಹತ್ತಿರ ಹೋಗಿ, ಅವನ ಕುತ್ತಿಗೆಗೆ ಚೂರಿ ಹಾಕಿಯೇ ಬಿಟ್ಟ. ಟಾಮ್ಲಿನ್ ಹೆದರಿ ಅರಚಿದ. ಹಡಗಿನಲ್ಲಿದ ಟಟ್ಲಿ, ಹೂನ್ ಇಬ್ಬರೂ ಎಚ್ಚರಗೊಂಡರು. ಹಸಿವು ಅವರಿಬ್ಬರನ್ನೂ ಮೃಗವನ್ನಾಗಿಸಿತ್ತು...ಎಡ್ವಿನ್‌ನೊಂದಿಗೆ ಅವರೂ ಸೇರಿ ಟಾಮ್ಲಿನ್‌ನ ಮೇಲೆ ಬಿದ್ದರು... ಪಾಪ, ಆ ಯುವಕ ''ನಾಳೆಯೇ ನಮ್ಮ ಸಹಾಯಕ್ಕೆ ಹಡಗು ಯಾವುದಾದರೂ ಬಂದೇ ಬರುತ್ತದೆ ನನ್ನನ್ನು ಸಾಯಿಸಬೇಡಿ ಬಿಟ್ಟುಬಿಡಿ... ಕೊಲ್ಲಬೇಡಿ,'' ಎಂದು ಅಂಗಲಾಚಿದ. ಆದರೆ ಅವರು ಬಿಡಲಿಲ್ಲ. ಅವನು ವಿಲಿ ವಿಲಿ ಒದ್ದಾಡಿ ಪ್ರಾಣ ಬಿಟ್ಟ ನಂತರ ಹಸಿದ ಹುಲಿಗಳಂತೆ ಮೂವರೂ ಅವನ ಮಾಂಸವನ್ನು ತಿಂದರು. ರಬ್ಬರ್ ಬೋಟಿನಲ್ಲಿ ಅಕಸ್ಮಾತ್ ಸಿಕ್ಕ ಬ್ಯಾಂಡೇಜ್ ಕ್ಲಾತಿನಿಂದ ಆ ಶರೀರವನ್ನು ಸುತ್ತಿ ಮಾರನೆಯ ದಿನದ ಆಹಾರಕ್ಕಾಗಿ ಇಟ್ಟುಕೊಂಡರು. ಹೀಗೆ ಮೂರು ನಾಲ್ಕು ದಿನಗಳವರೆಗೆ ಸ್ವಲ್ಪ-ಸ್ವಲ್ಪವಾಗಿ ಆ ಶರೀರವನ್ನು ತಿಂದು ಮುಗಿಸಿದರು. ನಾಲ್ಕನೆಯ ದಿನ ಒಂದು ಹಡಗು ಕಣ್ಣಿಗೆ ಬಿತ್ತು. ಬಹಳ ಪರಿಶ್ರಮದಿಂದ ಕೈ ಬೀಸಿ ಆ ಹಡಗಿನಲ್ಲಿದ್ದವರಿಗೆ ತಮ್ಮ ಬೋಟು ಕಾಣುವಂತೆ ಮಾಡಿದರು.

ಸೇಡು ತೀರಿಸಿಕೊಂಡನೇ?

ಕಲ್ಯಾಣಿ ಮೂರ್ತಿ ರಾಮನಾಥಪುರ

ಬಾತ್‌ಮೌತ್ ಎಂಬ ಹೆಸರಿನ ಆ ಹಡಗು ಇವರತ್ತ ಸಾಗಿತು. ಮೂವರೂ ಆ ಹಡಗನ್ನು ಹತ್ತಿದರು. ಬೋಟಿನಲ್ಲಿ ಬ್ಯಾಂಡೇಜ್ ಕ್ಲಾತಿನಿಂದ ಸುತ್ತಿಟ್ಟಿದ್ದ ಆ ಯುವಕನ ಶರೀರ ಅಕಸ್ಮಾತ್ತಾಗಿ ಹಡಗಿನ ಕ್ಯಾಪ್ಟನ್ನಿನ ಕಣ್ಣಿಗೆ ಬೀಳಲು, ಆ ಮೂವರನ್ನು ಕುರಿತು, ಅದೇನೆಂದು ಕೇಳಿದ. ಆಗ ಅವರು ದಾರಿ ಕಾಣದೆ ನಡೆದ ಸಂಗತಿಯನ್ನು ಹೇಳಲೇಬೇಕಾಯಿತು. ಕ್ಯಾಪ್ಟನ್ ಆ ಶರೀರವನ್ನು ಹಡಗಿನಿಂದ ಸಮುದ್ರಕ್ಕೆ ಎಸೆಯುತ್ತೇನೆಂದಾಗ ಮೂವರೂ ಮೊದಲು ಒಪ್ಪಿದರಾದರೂ ಅವರ ಮನಸ್ಸಿನಲ್ಲಿ ಅವ್ಯಕ್ತವಾದ ಒಂದು ಭಯ ಅವರನ್ನು ಹಾಗೆ ಮಾಡಬೇಡವೆಂದು ತಡೆಯಿತು. ಅಷ್ಟರಲ್ಲಿ "ನೋಡಿ, ಇವರನ್ನು ಸುಮ್ಮನೆ ಬಿಡಬೇಡಿ. ನನ್ನನ್ನು ಅನ್ಯಾಯವಾಗಿ ಸಾಯಿಸಿದ್ದಾರೆ. ಅಷ್ಟಿಷ್ಟು ಉಳಿದನ್ನ ಶರೀರವೇ ಇದಕ್ಕೆ ಸಾಕ್ಷಿ ." ಎಂದು ಯಾರೋ ಕ್ಯಾಪ್ಟನ್ನನಿಗೆ ಹೇಳಿದ ಹಾಗಾಯಿತು. 'ಇದೆಲ್ಲಾ ಭ್ರಮೆ' ಎಂದುಕೊಂಡ ಕ್ಯಾಪ್ಟನ್. ಆದರೂ ಆ ಶರೀರವನ್ನು ಸಮುದ್ರಕ್ಕೆ ಎಸೆಯಲು ಅವನಿಂದಾಗಲೇ ಇಲ್ಲ. ಬದಲು ಆ ಶವವನ್ನು ಹಾಗೆಯೇ ಬ್ಯಾಂಡೇಜ್ ಕ್ಲಾತಿನಿಂದ ಮತ್ತಷ್ಟು ಬಿಗಿದು ಅದನ್ನು ಒಂದು ಪೆಟ್ಟಿಗೆಯಲ್ಲಿಟ್ಟುಕೊಂಡು ಇಂಗ್ಲೆಂಡಿಗೆ ಹೊರಟ.

ನಡೆದ ಸಂಗತಿಯನ್ನು ಪೋಲೀಸರಿಗೆ ತಿಳಿಸಿ, ಆ ಮೂವರನ್ನೂ ಕೋರ್ಟಿಗೆ ಹಾಜರುಪಡಿಸಲಾಯಿತು. 'ಪರಿಸ್ಥಿತಿಯ ಕಾರಣದಿಂದಾಗಿ ಎಡ್ವಿನ್, ಟಟ್ಲ, ಹೂನ್ ಎಂಬ ಈ ಮೂವರೂ ಟಾಮ್ಲಿನ್ ಎಂಬ ಹದಿನೆಂಟು ವರ್ಷದ ಯುವಕನನ್ನು ಕೊಂದಿದ್ದಾರೆ. ಬೇರೆ ಪರಿಸ್ಥಿತಿಯಲ್ಲಾಗಿದ್ದಿದ್ದರೆ ಈ ಕೊಲೆಗೆ ಗಲ್ಲು ಶಿಕ್ಷೆಯೇ ಆಗ ಬೇಕಿತ್ತು' ಎಂದು ವಕೀಲರು ವಾದಿಸಿದ ಪರಿಣಾಮವಾಗಿ ಆ ಮೂವರಿಗೆ ಕೇವಲ ಆರು ತಿಂಗಳ ಸೆರೆವಾಸದ ಶಿಕ್ಷೆಯನ್ನು ವಿಧಿಸಿದ ಮರುಕ್ಷಣವೇ ನ್ಯಾಯಾಧೀಶರ ಶರೀರಕ್ಕೆ ಏನೇನೋ ಅನುಭವವಾಗಲು ತಕ್ಷಣವೇ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಸ್ಥಿತಿಯುಂಟಾಯಿತು. ನ್ಯಾಯಾಧೀಶರ ತೀರ್ಪಿನಲ್ಲಿ ಏನೋ ತಪ್ಪಾಗಿದೆ ಎಂದು ಹಲವರು ಹಲವು ರೀತಿಯಲ್ಲಿ ಮಾತನಾಡಿಕೊಂಡರು.

ಆರು ತಿಂಗಳ ಸೆರೆವಾಸದ ನಂತರ ಆ ಮೂವರೂ ಜೈಲಿಂದ ಹೊರಬಂದರು. ಅವರಲ್ಲಿ ಒಬ್ಬನಾದ ಟಟ್ಲ ಕುದುರೆ ಲಾಯವೊಂದರಲ್ಲಿ ಕೆಲಸಕ್ಕೆ ಸೇರಿದ. ಕುದುರೆ ಸವಾರಿ ಮಾಡುತ್ತಿದ್ದಾಗ ಒಂದು ದಿನ ಇದ್ದಕ್ಕಿದ್ದಂತೆಯೇ ತಾನು ಪಳಗಿಸಿದ ಕುದುರೆಯೆ ಹಠ ಹಿಡಿದು ನೆಗೆದು ದಿಕ್ಕು-ದಿಶೆ ಇಲ್ಲದೆ ಓಡಲಾರಂಭಿಸಿತು. ಕಾರಣ ತಿಳಿಯದ ಟಟ್ಲ ಕುದುರೆಯನ್ನು ಪಳಗಿಸಲು ಪ್ರಯತ್ನಿಸಿದ. ಆದರೆ ಕುದುರೆ ಹುಚ್ಚು ಹಿಡಿದಂತೆ ಆಡಲಾರಂಭಿಸಿ ಜೋರಾಗಿ ಕೆನೆಯುತ್ತಾ ಟಟ್ಲಯ ಕಡೆಗೆ ಓಡಿ ಬಂದಿತು. ಭಯದಿಂದ ತತ್ತರಿಸಿದ ಆತ ಕೆಳಗೆ ಬಿದ್ದ. ಕುದುರೆ ಅವನನ್ನು ತುಳಿದು ಹಾಕಲು, ಅದೇ ಸಮಯಕ್ಕೆ ಸರಿಯಾಗಿ ಕುದುರೆಯ ಮಾಲಿಕ ಅಕಸ್ಮಾತ್ತಾಗಿ ಅಲ್ಲಿಗೆ ಬಂದ. ಟಟ್ಲ, "ಎಡ್ವಿನ್ ತಾನೆ ತನ್ನ ಕತ್ತಿಯಿಂದ ನಿನ್ನನ್ನು ಚುಚ್ಚಿದ್ದು... ನನ್ನನ್ನು ಬಿಟ್ಟು ಬಿಡು... ಪ್ರಾಣ ತೆಗೆಯಬೇಡ" ಎಂದೆಲ್ಲಾ ಅರಚಿದ. ಕುದುರೆಗಳಿಂದ ಧ್ವಂಸಗೊಳಿಸಲ್ಪಟ್ಟ ಟಟ್ಲ

ಮರಣ ಹೊಂದಿದ. ಈ ವಿಷಯ ಎಡ್ವಿನ್ನನ ಕಿವಿಗೆ ಬಿತ್ತು. ಅವನೇ ಟಾಮ್ಲಿನ್ನನನ್ನು ಕತ್ತಿಯಿಂದ ಇರಿದು ಕೊಂದದ್ದು. ಹಲವು ದಿನಗಳಲ್ಲಿಯೇ ಆತನ ಕನಸಿನಲ್ಲಿ ಯಾವುದೋ ಅರ್ಥವಾಗದ ಆಕೃತಿಯೊಂದು ಕಾಣಿಸಿಕೊಂಡು ಅವನ ಕೈಗೆ ರಕ್ತದಿಂದ ತೊಯ್ದ ಬ್ಯಾಂಡೇಜ್ ಬಟ್ಟೆಯನ್ನು ಇಟ್ಟಿತು. ಎಡ್ವಿನ್ ಭಯಾಶ್ಚರ್ಯದಿಂದ ಎಚ್ಚರಗೊಂಡ. ಮೂವರಲ್ಲಿ ಒಬ್ಬ ಕುದುರೆಗಳ ತುಳಿತಕ್ಕೆ ಸಿಲುಕಿ ಸತ್ತ. ತನ್ನ ಹೊರತು ಮತ್ತೊಬ್ಬನಾದ ಹೂನ್ ಎಂಬಾತ ಎಲ್ಲಿದ್ದಾನೆ? ಹೇಗಿದ್ದಾನೆ? ಎಂದು ನೋಡಲು ಇಚ್ಛಿಸಿ ಕೊನೆಗೂ ಅವನಿರುವ ಜಾಗವನ್ನು ಕಂಡು ಹಿಡಿದ. ಹೂನ್ ಮಹಾ ಕುಡುಕ. ಎಡ್ವಿನ್ನನ ನೋಡಿ ಏನೇನೋ ಹೇಳಿದ. ಅಷ್ಟೇ ಅಲ್ಲ, ಬ್ಯಾಂಡೇಜ್ ಕ್ಲಾತ್ ಸುತ್ತಿರುವ ಆಕೃತಿಯೊಂದು ಆಗಾಗ್ಗೆ ಅವನನ್ನು ತನ್ನ ಮಡಿಲಲ್ಲಿ ಮಲಗಿಸಿಕೊಂಡು ಲಾಲಿ ಹಾಡಿ ನಿದ್ರಿಸುವಂತೆ ಮಾಡುವುದೆಂದೂ ಹೇಳಿದ. ಕುಡಿತದಿಂದಾಗಿಯೋ ಏನೋ ಹೂನ್‌ನ ದೇಹ ಸ್ಥಿತಿ ಬಹಳವೇ ಶಿಥಿಲಗೊಂಡಿತ್ತು. ಎಡ್ವಿನ್ ಸ್ವಲ್ಪ ಹಣವಂತನಾಗಿದ್ದರಿಂದ ಹೂನ್‌ನನ್ನು ಆಸ್ಪತ್ರೆಗೆ ಸೇರಿಸಿದ. ಒಂದು ದಿನ ರಾತ್ರಿ ಡಾಕ್ಟರ್ ಬರೆದುಕೊಟ್ಟ ಔಷಧಿಯನ್ನು ಎಡ್ವಿನ್ ತೆಗೆದುಕೊಂಡು ಹೂನ್‌ನ ರೂಮಿಗೆ ಹೋದ. ಒಳಗೆ ಯಾರೋ ಮೆಲು ಧ್ವನಿಯಲ್ಲಿ ಹಾಡುತ್ತಿರುವ ಶಬ್ದ ಕೇಳಿತು. ಆಶ್ಚರ್ಯದಿಂದ ಹೊರಗೆ ನಿಂತ ಅಷ್ಟರಲ್ಲಿ ಒಳಗೆ ಹೂನ್ ಕಿರುಚಿದ ಶಬ್ದ. ಎಡ್ವಿನ್ ತಕ್ಷಣ ಬಾಗಿಲನ್ನು ಹಿಂದಕ್ಕೆ ನೂಕಿ ಒಳಗೆ ಹೋದ. ಅಲ್ಲಿ ರಕ್ತ ತೊಟ್ಟಿಕ್ಕುತ್ತಿರುವ ಬ್ಯಾಂಡೇಜ್ ಕ್ಲಾತಿನಿಂದ ಸುತ್ತಿದ್ದ ಆಕೃತಿಯೊಂದು ತನ್ನ ಮಡಿಲಲ್ಲಿ ಹೂನ್‌ನನ್ನು ಮಲಗಿಸಿಕೊಂಡು ಲಾಲಿ ಹಾಡುತ್ತಿತ್ತು. ಎಡ್ವಿನ್‌ನ್ನು ನೋಡಿದೊಡನೇ ಆ ಆಕೃತಿ ಅಟ್ಟಹಾಸದಿಂದ "ಮುಂದಿನವ ನೀನೇ" ಎಂದಿತು. ಮರುಕ್ಷಣವೇ ಆ ಆಕೃತಿ ಮಾಯವಾಯಿತು. ಎಡ್ವಿನ್ ಹೆದರಿ ಅರಚಿದ. ಡಾಕ್ಟರ್ ಓಡಿ ಬಂದು ನೋಡಿದಾಗ ಹೂನ್ ಸತ್ತು ಬಿದ್ದಿದ್ದ. ಈ ಘಟನೆಯ ನಂತರ ಎಡ್ವಿನ್ ಬಹಳ ಹೆದರಿದ. ಪೋಲೀಸಿಗೆ ಎಲ್ಲ ವಿಷಯವನ್ನು ವಿವರವಾಗಿ ಹೇಳಿ ತನಗೆ ರಕ್ಷಣೆ ಬೇಕೆಂದು ಪ್ರಾರ್ಥಿಸಿದ. ಅವನ ಪರಿಸ್ಥಿತಿಯನ್ನು ಅರಿತ ಅವರು, ಸಾಧ್ಯವಿರುವಷ್ಟು ಬಂದೋಬಸ್ತು ಮಾಡಿದರು. ಆದರೆ ಮಾರನೆಯ ದಿನ ಎಡ್ವಿನ್ನನ ಶರೀರ ಎರಡಾಗಿ ಬಟ್ಟೆಯಂತೆ ಕಸಕಿ ಹೋಗಿತ್ತು. ಕೈಯಲ್ಲಿ ಏನನ್ನೋ ಬಿಗಿಯಾಗಿ ಹಿಡಿದಿರುವಂತೆ ಮುಷ್ಟಿ ಬಿಗಿಯಾಗಿತ್ತು. ಕೈಯನ್ನು ಬಿಡಿಸಿ ನೋಡಿದಾಗ ರಕ್ತದಲ್ಲಿ ನೆನೆಸಿದ್ದ ಬ್ಯಾಂಡೇಜ್ ಕ್ಲಾತ್ ಇತ್ತು.

ಹೀಗೆ ಮೂವರೂ ಸತ್ತಿದ್ದು 'ನಾವು ತಪ್ಪು ಮಾಡಿದೆವು' ಎಂದು ಅವರ ಒಳ ಮನಸ್ಸು ಮಿಡುಕಾಡಿದ್ದೇ ಕಾರಣ ಎಂದು ಮನೋವಿಜ್ಞಾನಿಗಳು ಹೇಳಿದರು. ಆದರೆ ಕುದುರೆಗಳ ಮಾಲಿಕನ ಕಣ್ಣಿಗೆ ಆತ ಸಂಬಂಧವಿಲ್ಲದಿದ್ದರೂ ಆ ಆಕೃತಿ ಕಂಡಿದ್ದು ಹೇಗೆ? ಎಡ್ವಿನ್‌ನ ಕೈಯಲ್ಲಿ ರಕ್ತದಿಂದ ತೊಯ್ದಿದ್ದ ಬ್ಯಾಂಡೇಜ್ ಕ್ಲಾತ್ ಹೇಗೆ ಬಂತು? ಎಂದು ಯಾರಿಂದಲೂ ಹೇಳಲಾಗಲಿಲ್ಲ.

(ತಮಿಳಿನ 'ಭಾಗ್ಯ'ದಿಂದ)

ನ್ಯೂಜಿಲೆಂಡಿನ ಒರೆನಾ ಪಾರ್ಕಿನ ವನ್ಯಮೃಗ ಅಭಯಾರಣ್ಯದ ಪ್ರವೇಶ ದ್ವಾರದಲ್ಲಿ ಈ ಫಲಕ ಹಾಕಲಾಗಿದೆ:

"ಅತಿಕ್ರಮಿಸುವವರನ್ನು ತಿನ್ನಲಾಗುತ್ತದೆ."

ಎಸ್. ಜೆ. ಸುಜಾತ

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳ ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

1. ಬೀಡಾಡಿ
   (ಅ) ಅಲೆಮಾರಿ
   (ಆ) ತಿಂದು ತಿರುಗುವವನು
   (ಇ) ವೀಳ್ಯದೆಲೆ ಮಾರುವವನು
   (ಈ) ಆಟಗಳಲ್ಲಿ ಮಧ್ಯಸ್ಥ

2. ಜರ್ದಾ
   (ಅ) ಎತ್ತರದಿಂದ ಬಿದ್ದವನು
   (ಆ) ಮುಷ್ಟು
   (ಇ) ಬಾದಾಮಿ ಹಣ್ಣು
   (ಈ) ಸುಗಂಧಿತ ಹೊಗೆಸೊಪ್ಪು

3. ಝಡತಿ
   (ಅ) ಅಕಸ್ಮಾತ್ತಾಗಿ
   (ಆ) ಕೂಡಲೇ
   (ಇ) ಮುದುಕಿ
   (ಈ) ಶೋಧಿಸುವುದು

4. ತಾಣ
   (ಅ) ಶಕ್ತಿ
   (ಆ) ನೆಲೆ
   (ಇ) ಹೊಡೆತ
   (ಈ) ಧ್ವನಿತರಂಗ

5. ತೆರೆಮರೆ
   (ಅ) ಸಮುದ್ರದಲ್ಲಿ
   (ಆ) ಕಾಣಿಸದಂತೆ
   (ಇ) ತೆರಿಗೆ ತಪ್ಪಿಸುವಿಕೆ
   (ಈ) ಗುಟ್ಟಾಗಿ ಓಡಿಹೋಗುವುದು

6. ಫಸಲು
   (ಅ) ಬೆಳೆ
   (ಆ) ಬಂಡವಾಳ
   (ಇ) ಹಲಗೆ
   (ಈ) ಹೂವು

7. ಪೀಸ
   (ಅ) ಆಸೆಬುರುಕ
   (ಆ) ನೆಗಡಿಯಾದವ
   (ಇ) ಕೊಬ್ಬಿದ
   (ಈ) ಹಳದಿ

8. ಶಕ್ಕು
   (ಅ) ಹಕ್ಕಿ
   (ಆ) ಸಾಮರ್ಥ್ಯ
   (ಇ) ಸಂಶಯ
   (ಈ) ಹಿಟ್ಟು

9. ವಜ್ರಾಘಾತ
   (ಅ) ಸಿಡಿಲಿನ ಬಡಿತ
   (ಆ) ಭಾರವಾದದ್ದು, ಕುಸಿಯುವುದು
   (ಇ) ಹೊಳೆಯುವಿಕೆ
   (ಈ) ವಜ್ರದಿಂದ ಉಜ್ಜುವುದು-

10. ಭೇದಕ
   (ಅ) ಭಾವನಂಟ
   (ಆ) ಚುಚ್ಚುವ
   (ಇ) ಮಲಹೋಗಿಸುವ ಔಷಧ
   (ಈ) ಉಪದೇಶಮಾಡುವ

11. ಕೀಲಾರ
   (ಅ) ಅಗಳಿ
   (ಆ) ಬಡಗಿ
   (ಇ) ರಾಕ್ಷಸ
   (ಈ) ಗೋಶಾಲೆ

12. ವಜನು
   (ಅ) ಕೆಲಸದಿಂದ ತೆಗೆದುಹಾಕುವಿಕೆ
   (ಆ) ಓದುವುದು
   (ಇ) ತೂಕ
   (ಈ) ನಿಕ್ಕಿ ಉಳಿದ ಹಣ

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

1. ಬೀಡಾಡಿ

ಅ) ನೆಲೆಯಿಲ್ಲದೆ ಸುಮ್ಮನೆ ಅಲೆಯುವವನು, ಅಲೆಮಾರಿ. ಉದಾ: ಬೀಡಾಡಿ ನಾಯಿಗಳು (ದೇಶ್ಯ-ಬೀಡು=ನೆಲೆ+ಆಡು-ಆಡಿ=ತಿರುಗುವವ)

2) ಜರ್ದಾ

ಈ) ಸುಗಂಧ ಹಾಕಿ ವೀಳ್ಯೆದೊಡನೆ ತಿನ್ನಲು ತಯಾರಿಸಿದ ಹೊಗೆಸೊಪ್ಪಿನ (ತಂಬಾಕು) ಪುಡಿ. ಉದಾ: ಜರ್ದಾದ ಅಭ್ಯಾಸ ತಗಲಿಸಿಕೊಂಡ. (ಪಾರಸಿಕ-ಜರ್ದ:)

3)ಝುಡತಿ

ಈ) (ಕಳವಿನ ಮಾಲು ಅಥವಾ ಯಾವುದೇ ಮೊಕದ್ದಮೆಗೆ ಸಂಬಂಧಿಸಿ) ಮನೆ ಅಥವಾ ವ್ಯಕ್ತಿಯನ್ನು ಆಮೂಲಾಗ್ರವಾಗಿ ಹುಡುಕುವುದು, ಶೋಧನೆ (ಹಿಂದಿ, ಮರಾಠಿ.)

4) ತಾಣ

ಅ) ನೆಲೆ, ಸ್ಥಾನ, ಎಡೆ, ಉದಾ: ನಿಲ್ದಾಣ = ನಿಲ್ಲುವ ಸ್ಥಾನ. (ಸಂ.ಸ್ಥಾನ.)

5. ತೆರೆಮರೆ

ಅ) ಕಾಣಿಸದಂತೆ ಮರೆಯಲ್ಲಿ, ಪರದೆಯ ಹಿಂದೆ. ಉದಾ: ತೆರೆಮರೆಯಲ್ಲಿ ಪಿತೂರಿ ನಡೆಯಿತು. (ದೇಶ್ಯ- ತೆರೆ = ಪರದೆ+ಮರೆ)

6. ಫಸಲು

ಅ) ಬೆಳೆ, ಪೀಕು, ಕೃಷಿ ಹುಟ್ಟುವಳಿ ಇತ್ಯಾದಿ. ಉದಾ: ಫಸಲು ಚೆನ್ನಾಗಿದೆ. (ಅರಬ್ಬಿ-ಫಸ್ಲ್=ಋತುಮಾನ, ಬೆಳೆ.)

7.

ಪೀನ

ಇ) ಕೊಬ್ಬಿದ, ತುಂಬಿಕೊಂಡು ದುಂಡಾದ. ಉದಾ: ಪೀನವಾದ ಭುಜಗಳು (ಸಂ)

8. ಶಕ್ಕು

ಇ) ಸಂದೇಹ, ಶಂಕೆ, ಸಂಶಯ, ಉದಾ: ನನಗೆ ಶಕ್ಕು ಇದ್ದೇ ಇತ್ತು. (ಅರಬ್ಬಿ- ಶಕೆ)

9. ವಜ್ರಾಘಾತ

ಅ) ಸಿಡಿಲಿನ ಬಡಿತ, (ಆಲಂಕಾರಿಕವಾಗಿ ಅನಿರೀಕ್ಷಿತ ವಿಪತ್ತಿನಿಂದ ಒದಗುವ ಗಾಬರಿ. ಉದಾ: ಸುದ್ದಿ ಕೇಳಿ ವಜ್ರಾಘಾತವಾಯಿತು. (ಸಂ.ವಜ್ರ=ಸಿಡಿಲು+ಆಘಾತ=ಪೆಟ್ಟು.)

10. ಭೇದಕ

ಅ) ಚುಚ್ಚುವ, ಒಳಹೊಕ್ಕು ನಾಟುವ, ಉದಾ: ಕೈದಿಯನ್ನು ಭೇದಕ ದೃಷ್ಟಿಯಿಂದ ನೋಡಿದನು. (ಸಂ.)

11. ಕೀಲಾರ

ಈ) ದನಗಳ ಹಟ್ಟಿ, ಗೋಶಾಲೆ, ಉದಾ: ಕೀಲಾರದಲ್ಲಿ ನೂರಾರು ಆಕಳು ಇದ್ದವು. (ಸಂ. ಕ್ಷೀರಾಗಾರ=ಹಾಲಿನ ಕೋಣೆ.)

12. ವಜನು

ಇ) ತೂಕ, ವಜ್ಜೆ, ಭಾರ, ಗೌರವ, ಉದಾ: ಅವನ ವ್ಯಕ್ತಿತ್ವಕ್ಕೆ ವಜನು ಇತ್ತು. (ಅರಬ್ಬಿ-ವಜನ್.)

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

6- 8	ಸರಿಯಿದ್ದರೆ	... ಸಾಧಾರಣ
9-10	”	... ಉತ್ತಮ
11-12	”	... ಅತ್ಯುತ್ತಮ

ಎಸ್.ರವಿಕುಮಾರ ಮಾಗಳ

ಬಾಡಿಗೆ ತಾಯಂದಿರ ಬೇಬಿ ಎಮ್ ಪ್ರಕರಣ

ಅಮೇರಿಕದ ನ್ಯೂಜೆರ್ಸಿ ನಗರದ ವಿಲಿಯಂ ಸಟರ್ನ್ ಹಾಗೂ ಆತನ ಪತ್ನಿ ಎಲಿಜಬೆತ್ತಳಿಗೆ ಮಕ್ಕಳಿರಲಿಲ್ಲ. ತನ್ನ ವೀರ್ಯದಿಂದ ಮಗುವನ್ನು ಹೆರಬಲ್ಲ ಬಾಡಿಗೆ ತಾಯಂದಿರಿಗಾಗಿ ವಿಲಿಯಂ ತಡಕಾಡಿದಾಗ ಎರಡು ಮಕ್ಕಳ ತಾಯಾದ ಮೇರಿ ವೈಟ್‌ಹೆಡ್ ಎಂಬಾಕೆ ಗರ್ಭಧರಿಸಲು ಸಿದ್ಧಳಾದಳು. ಒಟ್ಟು ಹತ್ತು ಸಾವಿರ ಡಾಲರಿನಷ್ಟು ಹಣಕ್ಕೆ ಮಗುವನ್ನು ಹೆತ್ತು ಕೊಡುವ ಒಪ್ಪಂದವಾಯಿತು.

ಮುಂದೆ ಮುದ್ದಾದ ಹೆಣ್ಣು ಮಗು ಜನಿಸಿದ ಮೇಲೆ ಮೇರಿಯ ಮನಸ್ಸು ಬದಲಾಯಿತು. ಹಣ ಬೇಡ ಮಗು ತನ್ನ ಬಳಿಯೇ ಇರಲೆಂದು ಆಕೆ ಹೇಳಿದಾಗ ವಿಲಿಯಂ ದಾವೆ ಹೂಡಿದ. ನ್ಯಾಯಾಲಯದಲ್ಲಿ ಎರಡೂ ಪಕ್ಷಗಳು ಹಣಾಹಣಿ ನಡೆಸಿದವು.

'ಬೇಬಿ ಎಮ್ ಪ್ರಕರಣ' ಎಂದೇ ಈ ಪ್ರಕರಣ ಪ್ರಸಿದ್ಧವಾಯಿತು. 'ನ್ಯೂಸ್ ವೀಕ್' ವರದಿಯ ಪ್ರಕಾರ ನ್ಯೂಜೆರ್ಸಿ ನ್ಯಾಯಾಲಯ ಮೊದಲ ಹುಟ್ಟು ಹಬ್ಬ ಆಚರಿಸಿದ್ದ ಬೇಬಿ ಎಮ್‌ಗೆ ಮಲಿಸ್ಸಾ ಸ್ಟರ್ನ್ ಎಂದು ಕಾನೂನು ರೀತ್ಯಾ ನಾಮಕರಣ ಮಾಡಿ, ಅವಳನ್ನು ತಂದೆಯ ವಶಕ್ಕೆ ಒಪ್ಪಿಸಿತು. ಒಪ್ಪಂದದ ಪ್ರಕಾರ ಬಾಡಿಗೆ ತಾಯಿಗೆ ಮಗುವಿನ ಋಣ ತೀರಿತೆಂದೂ, ಅವಳಿಗೆ ಮಲಿಸ್ಸಾಳನ್ನು ತಂದೆ ತಾಯಿಗಳ ಅನುಮತಿಯಿಲ್ಲದೆ ಭೇಟಿ ಮಾಡುವ ಹಕ್ಕಿಲ್ಲವೆಂದೂ ನ್ಯಾಯಾಲಯ ತೀರ್ಪಿತ್ತಿತು.

ನಂತರ ಈ ಪ್ರಕರಣದ ಇನ್ನೊಂದು ಅಂಕ ಪ್ರಾರಂಭವಾಯಿತು. ನ್ಯಾಯಾಲಯದಲ್ಲಿ ಸೋತ ಮೇರಿ ಪತ್ರಿಕಾಗೋಷ್ಠಿಯಲ್ಲಿ ಕಣ್ಣೀರಿಡುತ್ತ, "ಅದು ನನ್ನ ಮಗು. ಅದಕ್ಕೆ ನಾನೇ ರಕ್ತ ಮಾಂಸ ನೀಡಿ ರೂಪಿಸಿದ್ದೇನೆ. ಯಾವ ನ್ಯಾಯಾಲಯವೂ ನನ್ನನ್ನು ಅದರಿಂದ ಬೇರ್ಪಡಿಸಲಾರದು. ನ್ಯಾಯಕ್ಕಾಗಿ ನಾನು ಹೋರಾಡುತ್ತೇನೆ," ಎಂದು ಹೇಳಿಕೆ ನೀಡಿದಳು.

ನ್ಯಾಯಾಲಯ ನೀಡಿದ ಈ ತೀರ್ಪಿನಿಂದಾಗಿ ಅನೇಕ ಹೊಸ ಸಮಸ್ಯೆಗಳು ಉದ್ಭವಿಸಿವೆ. ವಕೀಲರು, ಮಹಿಳಾ ವಿಮೋಚನೆಗಾರರು, ಮನೋವಿಜ್ಞಾನಿಗಳು ಹೀಗೆ ಎಲ್ಲರೂ



''ನಮ್ಮಲ್ಲಿ ಕೆಲ ಗಂಭೀರ ಬರಹಗಳೂ ಹಾಸ್ಯಾಸ್ಪದ.''

ಈ ಪ್ರಕರಣವನ್ನು ಕುರಿತು ಚರ್ಚೆ ನಡೆಸಿದ್ದಾರೆ. ತಾಯಿ-ಮಗುವಿನ ಸಂಬಂಧ ಇಷ್ಟು ಯಾಂತ್ರಿಕವೇ? ಮಹಿಳೆ ಕೇವಲ ಮಗು ಹೆರುವ ಯಂತ್ರವೇ? ಹಣವಿದ್ದವರು ಯಾರಿಂದಲಾದರೂ ಮಗುವನ್ನು ಹೆರೆಸಿ ಖರೀದಿಸಬಹುದೇ? ಮೇರಿ ಮೊದಲು ಒಪ್ಪಂದಕ್ಕೆ ಸಹಿ ಹಾಕಿ ನಂತರ ಮನಸ್ಸು ಬದಲಾಯಿಸಿ ಒಪ್ಪಂದ ಮುರಿದಿದ್ದಾಳೇನೋ ನಿಜ. ಹಾಗೆಂದಮಾತ್ರಕ್ಕೆ ''ತಾಯಿ'' ಎಂಬುದನ್ನಾಕೆ ಮರೆಯಬೇಕೆ? ವಸ್ತುವಿನ ಉತ್ಪಾದನೆಗೂ ಮಗುವಿನ ಸೃಷ್ಟಿಗೂ ವ್ಯತ್ಯಾಸವೇ ಇಲ್ಲವೇ?

ಈ ವಿಚಾರಗಳ ಮೇಲೆ ಬೆಳಕು ಚೆಲ್ಲಲು ಕೋರ್ಟಿನಲ್ಲಿ ಭೀಕರ ವಾಗ್ಯುದ್ಧಗಳೇ ನಡೆದವು. ವಾದಿ-ಪ್ರತಿವಾದಿಗಳಿಬ್ಬರೂ ತಜ್ಞರ ತಂಡಗಳನ್ನೇ ಕರೆತಂದರು. ಪತ್ತೆದಾರರನ್ನೂ ಮನೋವಿಜ್ಞಾನಿಗಳನ್ನೂ ಶಿಶುತಜ್ಞರನ್ನೂ ಹಣಕೊಟ್ಟು ವಾದಕ್ಕೆ ನಿಲ್ಲಿಸಿದ್ದರು. ಮೇರಿಯ ವಕೀಲರು ಗುಪ್ತಚಾರರ ಮೂಲಕ ಸ್ಟರ್ನ್ ದಂಪತಿಗಳ ಖಾಸಗೀ ಜೀವನವನ್ನು ಶೋಧಿಸಿ, ''ಈ ದಂಪತಿಗಳಲ್ಲಿ ಮಕ್ಕಳಾಗದಂತಹ ಯಾವ ನ್ಯೂನತೆಯೂ ಇಲ್ಲ,'' ಎಂದು ವಾದಿಸಿದರು. ಆದರೆ ವೃತ್ತಿಯನ್ನವಲಂಬಿಸಿದ ವಿಲಿಯಮ್ಮನ ಪತ್ನಿಗೆ ಗರ್ಭಿಣಿಯಾಗಲು ಬಿಡುವಿಲ್ಲವೆಂದು ಕೋರ್ಟಿನಲ್ಲಿ ವಾದಿಸಲಾಯಿತು. ವಿಲಿಮ್ಮನ ವಕೀಲರು, ಮನೋವಿಜ್ಞಾನಿಗಳು, ''ಮೇರಿಯ ಮಗುವನ್ನು ನೋಡಿಕೊಳ್ಳಲು ಅಷ್ಟೇನೂ ವೇಳೆ ವ್ಯಯಿಸುತ್ತಿಲ್ಲ; ಸೂಕ್ತ ಆಟಿಗೆಗಳನ್ನು ಒದಗಿಸಿಲ್ಲವೆಂದೂ; ಮಲಿಸ್ಸಾ ಅಪ್ಪನ ಬಳಿ ಇರುವುದೇ ಉತ್ತಮ,'' ಎಂದೂ ವಾದ ಹೂಡಿದರು.

ಈ ಮಧ್ಯೆ ಒಂದು ಟೇಪು ಹಗರಣ ಸಹ ನಡೆಯಿತು. ವಿಲಿಯಂ ಆಗಾಗ ಮೇರಿಗೆ ಫೋನ್ ಮಾಡಿ ತನ್ನ ಮಗುವನ್ನು ತನಗೇ ಒಪ್ಪಿಸುವಂತೆ ಯಾಚಿಸುತ್ತಿದ್ದ. ಹೀಗೆ ಮಾಡುವಾಗ ಆತ ಪ್ರತಿ ಬಾರಿಯೂ ಈ ಟೆಲಿಫೋನ್ ಸಂಭಾಷಣೆಯನ್ನು ಧ್ವನಿ ಮುದ್ರಿಸಿ ಕೊಳ್ಳುತ್ತಿದ್ದು, ''ನನ್ನ ಮಗಳು ನನಗೆ ಬೇಕೇ ಬೇಕು'' ಎಂದು ವಿಲಿಯಂ ಹೇಳಿದ್ದಕ್ಕೆ ಮೇರಿ ಕೂಗಾಡಿದ್ದಳು: ''ಮರೆತು ಬಿಡು ವಿಲಿಯಂ. ನಾನು ಸತ್ತಮೇಲೆಯೇ ಅವಳು ನಿನಗೆ ಸಿಗುವಳು. ನಾನು ಅವಳಿಗೆ ಜೀವ ಕೊಟ್ಟಿದ್ದೇನೆ. ಬೇಕಾದರೆ ಅವಳ ಜೀವವನ್ನು ತೆಗೆಯಬಹುದು,'' ಎಂದೊಮ್ಮೆ ಅಂದಿದ್ದಳು.

''ಬಾಡಿಗೆ ತಾಯ್ತನವೆಂದರೆ ಒಬ್ಬರ ಮನೋವೇದನೆಯನ್ನು ಇನ್ನೊಬ್ಬರಿಗೆ ವರ್ಗಾಯಿಸುವುದು. ದಂಪತಿಗಳಿಗೆ ಮಕ್ಕಳಿಲ್ಲದ ಚಿಂತೆಯನ್ನು ಬಾಡಿಗೆ ತಾಯಿ ದೂರ ಮಾಡುತ್ತಾಳೆ. ಆಮೇಲೆ ಮಗುವಿನ ಅಗಲುವಿಕೆಯ ಚಿಂತೆಯನ್ನು ಹೊರುತ್ತಾಳೆ,'' ಎನ್ನುವ ತಜ್ಞರು, ಮಲಿಸ್ಸಾ ದೊಡ್ಡವಳಾದ ಮೇಲೆ ಅವಳ ಮನಃಸ್ಥಿತಿ ಹೇಗಿರಬಹುದು ಎಂಬ ಬಗ್ಗೆ ಶೋಧನೆ ನಡೆಸುತ್ತಿದ್ದಾರೆ. ಅಂಥ ಮಕ್ಕಳ ಪಾಲಿಗೆ ''ತಾಯಿ'' ಪದದ ಅರ್ಥವೇ ಬೇರೆಯಾಗುತ್ತದೆ. ಕೇವಲ ಹಣಕ್ಕಾಗಿ ಗರ್ಭ

ಧರಿಸಿ ಹೊತ್ತು-ಹೆತ್ತು ದೂರ ಮಾಡಿದ ತಾಯಂದಿರ ಬಗ್ಗೆ ಜಿಗುಪ್ಸೆ ಮೂಡಲೂಬಹುದು.

ತಾಯಿ-ಮಗುವಿನ ಭಾವನಾತ್ಮಕ ಸಂಬಂಧಕ್ಕೆ ಕಾನೂನಿನ ಮಿತಿ ಹೇರುವುದು ತೀರಾ ಇಕ್ಕಟ್ಟಿನ ಕೆಲಸ. ಇತ್ತೀಚೆಗಿನ ಕೃತಕ ಗರ್ಭಧಾರಣೆ, ಪ್ರನಾಳಶಿಶು ಸೃಷ್ಟಿಯ ವೈಜ್ಞಾನಿಕ ಸಾಹಸದಿಂದ ತಾಯಿ-ಮಕ್ಕಳ ಸಂಬಂಧವೂ ತಲೆಕೆಳಗಾಗಿದೆ. ದಕ್ಷಿಣ ಆಫ್ರಿಕದ ಮಹಿಳೆಯೊಬ್ಬಳು ತನ್ನ ಮಗಳು ಮತ್ತು ಅಳಿಯನ ಸಂಪರ್ಕದಿಂದಾದ ಭ್ರೂಣವನ್ನು ತನ್ನ ಗರ್ಭದಲ್ಲಿ ಪೋಷಿಸಿ ಹೆರಲು ತಯಾರಾಗಿದ್ದಾಳೆ. ಅವಳು ನೇರವಾಗಿ ಮೊಮ್ಮಕ್ಕಳನ್ನೇ ಹೆರುತ್ತಾಳೆ!

ಬಾಡಿಗೆ ತಾಯಂದಿರ ಸಂಖ್ಯೆ ಇತ್ತೀಚೆಗೆ ಪಾಶ್ಚಾತ್ಯ ದೇಶಗಳಲ್ಲಿ ಹೆಚ್ಚುತ್ತಿದೆ. ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಹೊಸ ಬಗೆಯ ಕಾನೂನುಗಳನ್ನು ನಿರ್ಮಿಸಬೇಕಾಗಿದೆ. ಹಾಗೆಯೇ ಗರ್ಭಕೋಶಗಳನ್ನು 'ಮಾರಾಟ' ಮಾಡಿಸುವ ಅಥವಾ ಬಾಡಿಗೆಗೆ ಕೊಡಿಸುವ ದಲ್ಲಾಳಿಗಳೂ ಹೆಚ್ಚಾಗುತ್ತಿದ್ದಾರೆ. ಅಮೇರಿಕದಲ್ಲಿ ಬಾಡಿಗೆ ಮಹಿಳೆಯರು (ತಾಯಂದಿರು) ಮತ್ತು ದಲ್ಲಾಳಿಗಳ ನಡುವೆ ವಿರಸವುಂಟಾಗಿ ಅವರಿಬ್ಬರ ನಡುವೆ ಒಂದು ದೊಡ್ಡ ಆಂದೋಳನವೇ ನಡೆದಿದೆ.

ಈ ಬಗೆಯ ಹೊಸ ಮಾನವ ಸಂಬಂಧಗಳಿಗಾಗಿ ಹೊಸದಾದ ನೈತಿಕ-ಧಾರ್ಮಿಕ ರೀತಿ-ನೀತಿಗಳು ಬರಲಿರುವ ದಿನಗಳಲ್ಲಿ ಅಗತ್ಯವಾಗಿ ಬೇಕಾಗುತ್ತವೆ. ನಾರ್ವೆ, ಪಶ್ಚಿಮ ಜರ್ಮನಿ, ಸ್ವೀಡನ್, ನೆದರ್‌ಲ್ಯಾಂಡ್‌ಗಳಲ್ಲಿ ಕೃತಕ ಗರ್ಭಧಾರಣೆಯ ಬಗ್ಗೆ ಕಾನೂನುಗಳನ್ನು ರಚಿಸಲು ಸಿದ್ಧತೆಗಳು ನಡೆದಿವೆ. ಹೊಸ ಸಿದ್ಧಾಂತಗಳ, ಪದಕೋಶಗಳ ರಚನೆಯೂ ಆಗ ಅಗತ್ಯವಾದರೆ ಆಶ್ಚರ್ಯವಲ್ಲ. ★

ಮುದ್ರಣ ಜಗತ್ತಿನ ಅತಿ ಸಣ್ಣ ಪುಸ್ತಕವನ್ನು ಜರ್ಮನಿಯ ಮೆಝು ಎಂಬಲ್ಲಿ 'ಗಟೆನಬರ್ಗ್' ಮ್ಯೂಸಿಯಂಗಾಗಿ ಮುದ್ರಿಸಲಾಗಿತ್ತು. ಅದರ ಗಾತ್ರ 0.14 ಇಂಚುಗಳಷ್ಟಿತ್ತು. ಈ ಪುಸ್ತಕದಲ್ಲಿ ಯೇಸು ಕ್ರಿಸ್ತನ ಪ್ರಾರ್ಥನೆ ಏಳು ಭಾಷೆಗಳಲ್ಲಿ ಮುದ್ರಿತವಾಗಿದೆ.

ಜಗತ್ತಿನ ಅತ್ಯಂತ ಕಡಿಮೆ ಭಾರದ ಪುಸ್ತಕವೆಂದರೆ ಅಮೇರಿಕದ ಮೆಸಾಚುಸೆಟ್ಸ್ ಎಂಬಲ್ಲಿ 1956 ರಲ್ಲಿ ಎಡ್‌ವರ್ಡ್ ಫಿಟ್ಸ್‌ಜೆರಾಲ್ಡ್ ಎಂಬುವನು ಪ್ರಕಟಿಸಿದ ಉಮರ್ ಖಯ್ಯಾಮನ ರುಬಾಯತ್. ಈ ಪುಸ್ತಕದ 150 ಪ್ರತಿಗಳ ಒಂದು ಆವೃತ್ತಿ ಪ್ರಕಟವಾಗಿತ್ತು. ಆ ಎಲ್ಲಾ ಪ್ರತಿಗಳ ಭಾರ ಕೇವಲ 0.34 ಔನ್ಸುಗಳಷ್ಟು.

ಜಗತ್ತಿನ ಅತಿ ಹೆಚ್ಚಿನ ಭಾರದ ಪುಸ್ತಕವೆಂದರೆ ಸುಪರ್ ಬುಕ್. 1976 ಕೊಲೊರಡೋದಲ್ಲಿ ಪ್ರಕಟಿಸಲ್ಪಟ್ಟ ಈ ಪುಸ್ತಕದ ಪುಟಗಳು 300 ಮತ್ತು ಅದರ ಭಾರ 557 ಪೌಂಡುಗಳಷ್ಟು. ಅದರ ಉದ್ದ ಒಂಭತ್ತು ಅಡಿಗಳಾಗಿದ್ದು ಅಗಲ 10 ಅಡಿ 2.80 ಇಂಚುಗಳಷ್ಟು.

ಜಗತ್ತಿನ ಅತಿ ದೊಡ್ಡ ಪ್ರಕಟಿತ ಪುಸ್ತಕವೆಂದರೆ ಬ್ರಿಟಿಶ್ ಪಾರ್ಲಿಮೆಂಟರಿ ಪೇಪರ್ಸ್ (1800-1900) ಐರೀಷ್ ಯೂನಿವರ್ಸಿಟಿ ಪ್ರೆಸ್ ಮೂಲಕ ಪ್ರಕಟವಾದ ಈ ಪುಸ್ತಕ 1112 ಭಾಗಗಳಲ್ಲಿದ್ದು 1968ರಿಂದ 1972ರವರೆಗೆ ಮುದ್ರಿತವಾಗುತ್ತಲಿತ್ತು. ಎಲ್ಲಾ ಭಾಗಗಳೂ ಸೇರಿ ಅದರ ಒಟ್ಟು ಭಾರ 3.64 ಟನ್ನುಗಳಷ್ಟು.

ಜಗತ್ತಿನ ಅತಿ ದೊಡ್ಡ ಕಾದಂಬರಿಯೆಂದರೆ ಲೂಯಿಹೆನ್ರಿ ಜ್ಯಾಫ್ರಿ ಗೊಡಲೆ ಉರ್ಫ ಜ್ಯೂಲ್ಸ್ ರೋಮನ್' ಎಂಬ ಫ್ರೆಂಚ್ ಲೇಖಕ ಬರೆದ 'ಲಹೋಮ್ಮಸ್ ಡಿ ಬೊನ್ನೆವೊಲೊಂತೆ' ಎಂಬುದು. ಈ ಕಾದಂಬರಿಯನ್ನು ಆತ 1932ರಿಂದ 1946ರವರೆಗಿನ ಕಾಲಾವಧಿಯಲ್ಲಿ ಬರೆದ. ಮೂಲ ಕಾದಂಬರಿ 27 ಭಾಗಗಳಲ್ಲಿದ್ದುದಾಗಿದೆ.

ಸಂಗ್ರಹ - *'ಶ್ರೀಅಬಂ'*



ಖಜಾನೆ ಕೃಷ್ಣಮೂರ್ತಿ

ನೆಲವತ್ತರ ದಶಕ ಚಲನಚಿತ್ರ ಜಗತ್ತಿನಲ್ಲಿ
ಅಶೋಕಕುಮಾರ ನಾಯಕನಾಗಿ ಮಿಂಚುತ್ತಿ
ದ್ದ ಕಾಲ. ಆ ದಿನಗಳಲ್ಲಿ ಮುಂಬಯಿಯ
ಒಂದು ಹೆಸರಾಂತ ಫಿಲ್ಮ್ ಸ್ಟುಡಿಯೋದ
ರಿಟೈರಿಂಗ್ ರೂಂ ಒಂದರಲ್ಲಿ ಒಂದು
ಶೂಟಿಂಗ್ ಶೆಡ್ಯೂಲ್ ಮುಗಿಸಿ ಬಂದು ವಿಶ್ರ
ಮಿಸುತ್ತಿದ್ದ ಅದೇ ಅಶೋಕಕುಮಾರನನ್ನು
ಮುಚ್ಚಿದ ಬಾಗಿಲುಗಳ ಹಿಂದೆ ಮೆಟ್ಟಿಂಗಾ
ಲಲ್ಲಿ ಕುರ್ಚಿಯೊಂದರ ಮೇಲೆ ನಿಂತ ಇಬ್ಬರು
ಬಾಲಿಕೆಯರು ಆ ಬಾಗಿಲ ಮೇಲಿನ ಸಂದಿ

ಯಿಂದ ನೋಡುತ್ತಿದ್ದುದು ಅಕಸ್ಮಾತ್ ಅವನ ಕಣ್ಣಿಗೆ ಬಿದ್ದಿತು. "ಏಯ್....ಯಾರದು....?" ಎನ್ನುತ್ತಾ ಅವನು ಎದ್ದೇಳುವುದರೊಳಗೆ ಆ ಹುಡುಗಿಯರು ಕುರ್ಚಿಯಿಂದ ನೆಗೆದು ಓಡಿ ಹೋಗಿದ್ದರು. ಒಬ್ಬಳು ಬೇಬಿ ಮಮ್ತಾಜ್; ಇನ್ನೊಬ್ಬಳು ಬೇಬಿ ಮಹಜಬೀನ್. ಇಬ್ಬರಿಗೂ ಅಶೋಕಕುಮಾರನೆಂದರೆ ಪ್ರಾಣ. ಅವರಾಗಲೇ ಬಾಲನಟಿಯರಾಗಿ ಚಲನಚಿತ್ರಗಳಲ್ಲಿ ಚಿಕ್ಕಪುಟ್ಟ ಪಾತ್ರ ಮಾಡುತ್ತಿದ್ದರು. ಮುಂದೆ ದೊಡ್ಡವರಾದ ಮೇಲೆ ಅವನೊಂದಿಗೆ ನಾಯಕಿಯರಾಗಿ ಅಭಿನಯಿಸಬೇಕೆಂಬುದು ಅವರ ಮಹದಾಕಾಂಕ್ಷೆ!

ಅದೃಷ್ಟದಾಟ! ಮುಂದೆ ಅವರೇ ಕ್ರಮವಾಗಿ ಮಧುಬಾಲಾ ಮತ್ತು ಮೀನಾಕುಮಾರಿಯರಾಗಿ ಬಾಲ್ಯದ ತಮ್ಮ ಮನೋಭಿಲಾಷೆಯಂತೆ ಕ್ರಮವಾಗಿ 'ಮಹಲ್' 'ನಿರಾಲಾ' ('ಬಂದಿಶ್') ಮತ್ತು 'ಪರಿಣೀತಾ'ಗಳಲ್ಲಿ ಅಶೋಕಕುಮಾರನ ನಾಯಿಕೆಯರಾಗಿ ಅಭಿನಯಿಸಿ ಚಿತ್ರಪ್ರೇಮಿಗಳನ್ನು ರಂಜಿಸಿದ್ದು ಬೇರೆ ಮಾತು. ಇಬ್ಬರೂ ಬಾಲ್ಯದ ಜೊತೆಗಾತಿಯರು. ಬೆಳೆದು ಬಾಳಿ ಬದುಕಬೇಕಾದ ವಯೋಮಾನದಲ್ಲೇ ಅತ್ಯಂತ ದಾರುಣ ಸ್ಥಿತಿಯಲ್ಲಿ ಇಬ್ಬರೂ ನಿಧನರಾದದ್ದು ಎರಡೂ ನೆಲಕ್ಕೆ ಬಿದ್ದ ನಕ್ಷತ್ರಗಳೇ! ನಾನೀಗ ಹೇಳಹೊರಟದ್ದು ಭಾರತದ ಚಿತ್ರಜಗತ್ತಿನ ಪ್ರಥಮ ದರ್ಜೆಯ ದುರಂತ ನಾಯಕಿ ಮೀನಾಕುಮಾರಿಯನ್ನು ಕುರಿತು!

ಐವತ್ತರ ದಶಕದಲ್ಲಿ ಜಯಭೇರಿ ಬಾರಿಸಿದ 'ಬೈಜುಬಾವರಾ'ದ ಯುಗಳಗೀತೆ-(ಭೈರವಿ ರಾಗದ್ದು)- "ತೂ ಗಂಗಾ-ಕಿ ಮೌಜ್ ಮೈ ಜಮುನಾ ಕಾ ಧಾರಾ" ಮತ್ತು (ಭೈರವ್ ರಾಗದ-ನಮ್ಮ ದಕ್ಷಿಣಾದಿಯ ಮಾಯಾಮಾಳವ ಗೌಳಕ್ಕೆ ಸಮೀಪದ) "ಭೂಲ್‌ಗಯೆ ಸಾವರಿಯಾ" ಮತ್ತು (ದರ್ಬಾರಿ ರಾಗದ) "ದುನಿಯಾಕೆ ರಖ್‌ವಾಲೇ" ಇಂದಿನ ತಲೆಮಾರಿನ ಎಷ್ಟು ಜನರಿಗೆ ತಿಳಿದಿದೆ? ಈಗ ರೇಡಿಯೋದಲ್ಲಿ ಆ ಗೀತೆಗಳು ಎಂದಾದರೂ 'ರಿಲೇ' ಆಯಿತೆಂದರೆ ಆ ಪಾತ್ರಧಾರಿಗಳು-ಆ ಹಿನ್ನೆಲೆ-ಆ ದುರಂತ ಕಥಾನಕಗಳು ಇಡಿಇಡಿ

ನೆಲಕ್ಕೆ ಬಿದ್ದ ನಕ್ಷತ್ರ



ಯಾಗಿ ಸ್ಮರಣೆಗೆ ಬರುವುದಲ್ಲದೆ-ಎಲ್ಲಿ ಹೋದುವೋ ಆ ದಿನಗಳು? ಎಲ್ಲಿ ಹೋದರೋ ಆ ಜನಗಳು? ಎಂದು ಹಂಬಲಿಸುವಂತಾಗುತ್ತದೆ, ಇಂದಿಗೂ.

1932ರ ಅಗಸ್ಟ ಒಂದರಂದು ಮುಂಬಯಿಯ ಉಪನಗರ ಪರೇಳದ ಖಾಸಗಿ ಮೆಟರ್ನಿಟಿ ಹೋಂ ಒಂದರಲ್ಲಿ ಅವಳ ಜನನ. ಪಾಕಿಸ್ತಾನದಲ್ಲಿರುವ ಭೇರಾ ಎಂಬ ಗ್ರಾಮದಿಂದ ಅದೃಷ್ಟವನ್ನರಸಿ ಮುಂಬೈಗೆ ಬಂದ ಖಯಾಲಿ ಮನುಷ್ಯ-ಹಾರ್ಮೋನಿಯಂ ವಾದಕ ಅಲ್ಲಾಬಕ್ಷ ಅವಳ ತಂದೆ. ಟಾಗೋರ್ ವಂಶದಲ್ಲಿ ಜನಿಸಿದ್ದರೂ ಮುಂದೆ ಯಾವುದೋ ಕಾರಣಕ್ಕಾಗಿ ಕ್ರಿಶ್ಚಿಯನ್ ಆದ ಪ್ರಭಾವತಿ ಎಂಬ ನರ್ತಕಿ ಈ ಅಲ್ಲಾಬಕ್ಷನಿಗೆ ಮರುಳಾಗಿ ಮುಸ್ಲಿಮಳಾಗಿ ಮತಾಂತರ ಹೊಂದಿದ ಇಕ್ಬಾಲ್ ಬೇಗಂ ಅವಳ ತಾಯಿ. ಅವಳು ಹಡೆದದ್ದು ಸಾಲಾಗಿ ಮೂರೂ ಹೆಣ್ಣು! ಮೊದಲಿನ ಖುರ್ಷಿದ್ (ಜೂನಿಯರ್); ನಡುವಿನ ಮಹಜಬೀನ್; ಕೊನೆಯ ಮಧು.

ದಾರಿದ್ರ್ಯ-ಬಡತನಗಳು ದಿನನಿತ್ಯದ ಆವಳಿ ಬಂಧುಗಳು ಈ ಕುಟುಂಬಕ್ಕೆ! ವಾಸವಾಗಿದ್ದುದು ದಾದರಿನ ಒಂದು ದೊಡ್ಡ ಹೆಸರಿನ ಕೊಳಕು ರಸ್ತೆಯಲ್ಲಿ ಒಂದೇ ಕಿಟಕಿ ಇದ್ದ ಮೇಲಂತಸ್ತಿನ ಮೀಟಾವಾಲಾ 'ಚಾಳಿ'ನಲ್ಲಿ. ಎದುರಿನಲ್ಲೇ 'ರೂಪ್‌ತಾರಾ' ಫಿಲ್ಮ್ ಸ್ಟುಡಿಯೋ! ಕಾಲಕ್ರಮೇಣ ಹಿರಿಯ ಖುರ್ಷಿದ್ ಬಾಲನಟಿಯಾಗಿ ಚಿಕ್ಕ ಪುಟ್ಟ ಪಾತ್ರಮಾಡಿ ಪುಡಿಗಾಸುಗಳನ್ನು ಸಂಪಾದಿಸಿ ಗೃಹನಿರ್ವಹಣೆಯಲ್ಲಿ ನೆರವಾಗಲಾರಂಭಿಸಿದಳು. ಉಳಿದೆರಡನ್ನೂ ಕಾಲಾಂತರದಲ್ಲಿ ಅದೇ ವೃತ್ತಿಗೆ ಹಚ್ಚಿದರೆ ಸಂಸಾರಕ್ಕೆ ಇನ್ನೂ ಅನುಕೂಲವಾಗದೆ ಎಂದು ಸಾಹೇಬರು ಚಿಂತಿಸಿದ್ದರೆ ಆಶ್ಚರ್ಯವೇನಲ್ಲ. ಮಕ್ಕಳಿಗೆ ಓದು, ಆಟ ಎರಡೂ ಅವರ ದೃಷ್ಟಿಯಲ್ಲಿ ಕಾಲ ಮತ್ತು ಹಣದ ಅಪವ್ಯಯ. ಆದ್ದರಿಂದ ಮಕ್ಕಳು ಶಾಲೆಗೂ ಹೋಗಲಿಲ್ಲ. ಉಳಿದ ಮಕ್ಕಳಂತೆ ತಮ್ಮ ಓರಿಗೆಯವರೊಡನೆ ಆಡಲೂ ಇಲ್ಲ. ಬಕ್ಷ ಒಂದು ರೀತಿಯ ನಯ ಜೀವನವನ್ನರಿಯದ ಹೃದಯಹೀನ ವ್ಯಕ್ತಿ. ಆ ತಂದೆ ಮಕ್ಕಳ ನಡುವೆ ಅಭಿಮಾನ ಅಂತಃಕರಣಗಳ ಬಾಂಧವ್ಯ ಎಂದೂ ಬೆಳೆಯಲೇ ಇಲ್ಲ. ಆರ್ಥಿಕ ಅನುಕೂಲ ಮತ್ತು ವರಮಾನ-ಈ ಎರಡರ ದೃಷ್ಟಿಯಿಂದ ಮಾತ್ರ ಅವರಿಗೆ ಅವು ಮಕ್ಕಳು. ಉಗ್ರ ಮುಖ ಮಾಡಿಕೊಂಡು ಮಕ್ಕಳನ್ನು ಸ್ಟುಡಿಯೋ ಕೆಲಸಕ್ಕೆ ಕರೆದುಕೊಂಡು ಹೋಗುವುದು; ಕೆಲಸ ಮುಗಿದ ನಂತರ ಅಷ್ಟೇ ಕೆಟ್ಟ ಮುಖದಿಂದ ಅವರನ್ನು ಮನೆಗೆ ಕರೆತರುವುದು. ಒಂದು ಪ್ರೀತಿಯ ಮಾತಾಗಲಿ, ಲಾಲಿಸುವುದಾಗಲಿ, ಪಾಲಿಸುವುದಾಗಲಿ ಊಹೂಂ!

ಇಂತಹ ತಂದೆ-ಈ ನಡುವಣ ಮಗಳನ್ನು-ವಿವಿಧ ಸ್ಟುಡಿಯೋಗಳಿಗೆ ಕರೆದೊಯ್ದು ಅವುಗಳ ಮಾಲೀಕರಿಗೂ ನಿರ್ದೇಶಕರುಗಳಿಗೂ ದಮ್ಮಯ್ಯ ಗುಡ್ಡೆ ಹಾಕಿ ಗೋಗರೆದುದರ ಪರಿಣಾಮವಾಗಿ ಅಂದಿನ ಪ್ರಕಾಶ ಚಿತ್ರ ಸಂಸ್ಥೆ-ಸ್ಟುಡಿಯೋಗಳ ಮಾಲೀಕ-ನಿರ್ದೇಶಕರಾದ ಶ್ರೀ ವಿಜಯಶಂಕರ ಭಟ್(ನಿಮಗೆ ಗೊತ್ತಿಲ್ಲ ಬಿಡಿ: ಇವರು ಅಂದಿನ ಹೆಸರಾಂತ ಚಿತ್ರಗಳಾದ ಭರತ್ ಮಿಲಾಪ್-ರಾಮರಾಜ್ಯ-ನಂತರ ಬೈಜೂಬಾವರಾ ಮಾಡಿದವರು!) ರವರು ಆಗ ತಯಾರಿಸುತ್ತಿದ್ದ 'ಲೆದರ್ ಫೇಸ್' ಎಂಬ ತಮ್ಮ ಚಿತ್ರದಲ್ಲಿ ಜೈರಾಜ್ (ನಾಯಕ) ಮೆಹತಾಬ್(ನಾಯಿಕೆ)ರ ಚಿಕ್ಕಮಗಳ ಪಾತ್ರಕೊಟ್ಟರು. ಕೊಟ್ಟ ಸಂಭಾವನೆ ಎಷ್ಟು ಗೊತ್ತೆ? ಅಂದಿನ ದಿನಗಳ 25 ರೂಪಾಯಿಗಳು!

ಅಂದಿನಿಂದ ಆ ಬಾಲಿಕೆ ಆ ವೃತ್ತಿಯಲ್ಲಿ ತಿರುಗಿ ನೋಡಲೇ ಇಲ್ಲ. ಒಂದರ ಮೇಲೊಂದರಂತೆ 'ಅಧೂರಿ ಕಹಾನಿ', 'ಪೂಜಾ', 'ನಯೀ ರೋಷ್‌ನಿ', 'ಕಸೌಟಿ', 'ಗರೀಬ್' ಮುಂತಾದ ಚಿತ್ರಗಳು ಅವಳಿಗೆ ಅವಕಾಶವನ್ನೊದಗಿಸಿದ್ದುದರಿಂದ ಕೇವಲ ತನ್ನ ನಾಲ್ಕನೆಯ ವಯಸ್ಸಿಗೇ ಆಕೆ ತನ್ನ ತಾಯಿತಂದೆಗ

ಳಿಗೆ ಆ ಬಡಸಂಸಾರಕ್ಕೆ ಆಧಾರವಾದಳು. ಶಾಲೆಯ ಓದು ಸೊನ್ನೆ. ಚಿನ್ನದ ಮೊಟ್ಟೆಯಿಡುವ ಈ ಮರಿ ಕೋಳಿಗೆ ಶಾಲೆ ವಿದ್ಯೆಯೇ ಎಂದು ಅವಳ ಅಪ್ಪ! ಯಾರದ್ದೋ ನೆರವಿನಿಂದ ಅವಳು ಸ್ವಯಂ ಶಿಕ್ಷಣ ಪಡೆದದ್ದು. ಉರ್ದು ನೀರು ಕುಡಿದಷ್ಟು ಸರಾಗ. (ಆಕೆ ಮುಂದೆ ಉರ್ದು ಕವಯಿತ್ರಿಯೂ ಆದದ್ದಿದೆ) ಹಿಂದಿ-ಇಂಗ್ಲಿಷ್ ತಡವರಿಸಿಕೊಂಡು ಓದಬಲ್ಲವಳಾದಳು. ತನ್ನ ಆರನೆಯ ವಯಸ್ಸಿನ ವೇಳೆಗೇ ಆಕೆ ಸಾಕಷ್ಟು ಖ್ಯಾತಳಾದಳು. ಮಿನರ್ವಾದ ನಿರ್ದೇಶಕ-ಮಾಲೀಕರಾದ ಸೋಹ್ರಾಬ ಮೋದಿಯವರ 'ಜೈಲರ್' ಚಿತ್ರಕ್ಕೂ ಅವಳ ಹೆಸರು ಶಿಫಾರಸ್ ಆಗುವ ಮಟ್ಟ ಮುಟ್ಟಿತ್ತು ಅವಳ ಖ್ಯಾತಿ. ಮುಂದೆ ವಿಜಯಭಟ್‌ರವರು ತಮ್ಮ 'ಏಕ್ ಹಿ ಭೂಲ್' ಚಿತ್ರದಲ್ಲಿ ಅವಳು ಪಾತ್ರವಹಿಸುವ ಕಾಲಕ್ಕೆ ಅವಳ ಹೆಸರು ಹೆಚ್ಚು ಆಕರ್ಷಕವಾಗುವಂತೆ "ಬೇಬಿ ಮೀನಾ" ಮಾಡಿದರು. 1946ರ ವೇಳೆಗೆ ಬೇಬಿತನ ಕಳೆದು ಮೀನಾಕುಮಾರಿಯಾದಳು. ಕಟ್ಟಾ ಮಹಮ್ಮದೀಯಳಾದ ಈಕೆ ಹಿಂದೂ ದೇವಿಯರ ಪಾತ್ರ ಮಾಡಿದರೆ ಈಕೆ ಮುಸ್ಲಿಮಳೆಂದು ಪ್ರಮಾಣ ಮಾಡಬೇಕು! 'ಲಕ್ಷ್ಮೀನಾರಾಯಣ್', 'ಹನುಮಾನ್ ಪಾತಾಳ್' 'ಗಣೇಶ್ ಮಹಿಮಾ' ಮೊದಲಾದ ಚಿತ್ರಗಳಲ್ಲಿ ಇಂತಹ ಪಾತ್ರ ಮಾಡಿದ ಆಕೆಯನ್ನು ಕುರಿತು, ಪಂಡಿತ ಮದನಮೋಹನ ಮಾಲವೀಯರಂತಹವರು ಕೂಡ ತಮ್ಮ ಮಿತಿಯನ್ನು ಮೀರಿ ಫಿಲ್ಮ್ ಪತ್ರಿಕೆಯೊಂದಕ್ಕೆ ನಿಂದಾಸ್ತುತಿಯ ಒಂದು ಪತ್ರ ಬರೆದಿದ್ದರೆಂದ ಮೇಲೆ ಅವಳ ನಟನೆ ಹೇಗಿದ್ದಿರಬೇಡ!

ತಮ್ಮ ಚಿತ್ರಗಳಲ್ಲಿ ಪಾತ್ರಮಾಡಿ ಹಣ-ಕೀರ್ತಿ ಎರಡನ್ನೂ ತಂದ ಆಕೆಗೆ ವಾಡಿಯಾ ಸಂಸ್ಥೆಯವರು ತಮ್ಮ ಮೊದಲ ಚಿತ್ರಕ್ಕೆ ರೂ. 4000/- ಸಂಭಾವನೆ ಕೊಟ್ಟರೆ ಅವಳ (ತಮ್ಮ) ಕೊನೆಯ ಚಿತ್ರ 'ಅಲ್ಲಾದೀನ್ ಅದ್ಭುತ ದೀಪ' ಕ್ಕೆ ರೂ. 10,000/- ಕೊಟ್ಟರು. ಬಕ್ಷ ಸಾಹೇಬರಿಗೆ ಕಾರು ಬಂದುದಲ್ಲದೆ ಮನೆಯ ಮುಂದೆ ಹೂದೋಟವಿರುವ-ಮೆಹಬೂಬ್ ಸ್ಟುಡಿಯೋ ಪಕ್ಕದಲ್ಲೇ ಇರುವ ಒಂದು ಭವ್ಯ ಭವನ-ಬಾಂದ್ರಾದಲ್ಲಿ ಒದಗಿತು. ದಾದರಿನ ದರಿದ್ರ ಚಾಳಿನಿಂದ ಬಕ್ಷ ಕುಟುಂಬ ಬಾಂದ್ರಾದ ಬಂಗ್ಲೆಗೆ ಸರಿಯಿತು. ಇಷ್ಟಾದರೂ ಆ ಶತಮೂರ್ಖ ತಂದೆಗೆ ತನ್ನದೇ ತನ್ನ ದೌಲತ್ತು-ದುರಹಂಕಾರ-ದರ್ಪ ಕಪಿಮುಷ್ಠಿ ಅದೇ ಬಿಸಿನೆಸ್-ಲೈಕ್ ನಡವಳಿಕೆ. 1947ರಲ್ಲಿ ಮಡದಿ ಇಕ್‌ಬಾಲ್ ಬೇಗಂ ನಿಧನಳಾದ್ದರಿಂದ ಈ ಅಭಿಮಾನ ಶೂನ್ಯನೆ ಆ ಮಕ್ಕಳಿಗೆ ತಾಯಿ ಮತ್ತು ತಂದೆ ಎರಡೂ ಆದ. ಅಭಿಮಾನ, ಪ್ರೀತಿ, ಪ್ರೇಮಗಳು ಮನೆಯಲ್ಲಿ ದೊರೆಯದಾದಾಗ ಬೆಳೆದ



ಮಕ್ಕಳು ಅವನ್ನು ಮನೆಯಿಂದ ಹೊರಕ್ಕೆ ಹುಡುಕಲಾರರೇ? ಎಂಬುದರ ಪರಿಜ್ಞಾನ ಕೂಡ ಅವನಿಗಿರಲಿಲ್ಲ. ತಂದೆತಾಯಿಗಳ ಪ್ರೇಮಗಳಿಂದ ಬಾಲ್ಯದಿಂದಲೂ ವಂಚಿತಳಾಗಿದ್ದ ಮೀನಾ ಆ ದಿನಗಳಲ್ಲಿ ಕೀರ್ತಿಯ ಶಿಖರದಲ್ಲಿದ್ದ ಲೇಖಕ-ನಿರ್ಮಾಪಕ-ನಿರ್ದೇಶಕ ಕಮಾಲ್ ಅಮ್ರೋಹಿ('ಮಹಲ್' ಖ್ಯಾತಿ)ಯನ್ನು ಪ್ರೇಮಿಸಲಾರಂಭಿಸಿದಳು. ಅವಳ-ಅವನ ನಡುವೆ ಇದ್ದ ವಯೋಮಾನದ ಅಂತರ 'ಕೇವಲ' ಹದಿನೈದು ವರ್ಷಗಳು. ಅವಳು ಹದಿನೆಂಟರ ಡಿಸ್ಡಿಮೋನಾ. ಅವನು 33 ದಾಟಿದ-(ಆಗಲೇ ಎರಡು ಮಕ್ಕಳ ತಂದೆ ಕೂಡ) ಒಥೆಲೋ! ಅವರಿಬ್ಬರ ಪ್ರೇಮ-

ವಿವಾಹಗಳ ಕತೆ ಮತ್ತೊಂದು ರಂಜಿತ ಅಧ್ಯಾಯ!

ಅವರಿಬ್ಬರೂ ಪ್ರೇಮದ ಯಾತನೆಯಲ್ಲಿ ಬೇಯುತ್ತಿದ್ದಾಗಲೇ 'ಬೈಜುಬಾವರಾ' ಸಿದ್ಧವಾದದ್ದು. ಹೀಗಾಗಿ ಮೀನಾ ಅದರಲ್ಲಿ ಅಭಿನಯ ಮಾಡಬೇಕಾದ್ದೇ ಇರಲಿಲ್ಲ. ಸ್ವಾಭಾವಿಕವಾಗಿ ನಡೆದುಕೊಂಡರೆ ಸಾಕಿತ್ತು. ಇದರಿಂದಾಗಿ ಆ ಚಿತ್ರ ನಿರೀಕ್ಷೆ ಮೀರಿ ಯಶಸ್ಸು ಪಡೆದು ಚಪ್ಪರಮುರಿದು ಹಣ ಸುರಿಯಿತು. ಯಾರ ಬಾಯಲ್ಲಿ ನೋಡಿದರೂ "ತೂ ಗಂಗಾ, ಕಿಮೌಜ್ ಮೆ!"

'ತಮಾಷಾ,' 'ಬೈಜು ಬಾವರಾ' ಮತ್ತು 'ಫುಟ್‌ಪಾತ್' ಎಂಬ ಚಿತ್ರಗಳ ನಿರ್ಮಾಣ ಮುಗಿಯುವುದರೊಳಗಾಗಿ ಬೈಜು-ಗೌರಿಯರ ತಮಾಷೆ ನಡೆದು ಬಕ್ಷ ಸಾಹೇಬರು ಕೇರಾಫ್ ಫುಟ್‌ಪಾತ್ ಆದರು. ಹಕ್ಕಿ ಹಾರಿ ಹೋಯಿತು. 1952ರ ಫೆಬ್ರುವರಿ 14 ರ ರಾತ್ರಿ 8 ಗಂಟೆಯ ವೇಳೆಗೆ ಈ ಸುಭದ್ರಾರ್ಜುನರ ವಿವಾಹ ಕಳ್ಳತನದಲ್ಲಿ ನಡೆದೇ ಹೋಯಿತು. 3-4 ತಿಂಗಳ ಕಾಲ ರಹಸ್ಯವಾಗಿದ್ದ ಸುದ್ದಿ ಅದು ಹೇಗೋ ಬಕ್ಷ ಸಾಹೇಬರಿಗೆ ತಿಳಿದು ರಾದ್ಧಾಂತವಾಗಿ ಹೋಯಿತು. ಕೂಗಾಟ-ಕಿರಿಚಾಟ-ಬೈಗಳ ರೋದನ-ಡೈವೋರ್ಸ್ ತೆಗೆದುಕೋ-ಅವಹೇಳನ-ಒತ್ತಾಯ ಯಾವುದೂ ಪ್ರಯೋಜನಕ್ಕೆ ಬಾರದೇ ಹೋದವು. ಅವಳು ಗಟ್ಟಿಯಾಗಿ ನಿಂತಳು. ಚುಚ್ಚು ಮಾತು, ನಿಂದೆಗಳು ಸಹಿಸಲಾರದ ಮಟ್ಟ ಮುಟ್ಟಿದಾಗ 1953ರ ಅಕ್ಟೋಬರ್‌ನಲ್ಲಿ ಒಂದ್ಯೆದಾರು ಬಟ್ಟೆಬರೆಗಳೊಂದಿಗೆ ತಂದೆಯ ಮನೆ ಬಿಟ್ಟು ಸಯಾನಿನಲ್ಲಿದ್ದು ಅಮ್ರೋಹಿ ಸಾಹೇಬರ ಮನೆಯನ್ನು ಈ "ಛೋಟಿ ಅಮ್ಮಿ" ಪ್ರವೇಶ ಮಾಡಿದಳು.

ಅದು ಅವಳ ಜೀವನದ ಉತ್ಕರ್ಷಕಾಲ. ಈಗ ಬಾಳೆಲ್ಲ ಕಲರ್-ಬೈ-ಟೆಕ್ನಿಕಲರ್. ಖ್ಯಾತ ನಿರ್ದೇಶಕ ನಿರ್ಮಾಪಕರುಗಳು ಕಾಂಟ್ರಾಕ್ಟ್‌ಗಳನ್ನೂ ಹಣದ ಚೀಲಗಳನ್ನೂ ಹಿಡಿದು ಅವಳ ಬಾಗಿಲು ಕಾದರು. ಯಾವ ಚಲನಚಿತ್ರ ಪತ್ರಿಕೆಗಳನ್ನು ನೋಡಿದರೂ ಅವಳ ಕುರಿತು ಪ್ರಶಂಸೆ-ಮುದ್ದುಮುಖದ ಚಿತ್ರಗಳು.

ಅಶೋಕಕುಮಾರನ ನಾಯಿಕೆಯಾಗುವ ಅವಳ ಬಾಲ್ಯದ ಹಂಬಲ ನೆರವೇರಿತು. ಬಿಮಲ್‌ರಾಯರು ಅವಳನ್ನು 'ಬಂದಿಶ್' ಮತ್ತು 'ಪರೀಣೀತಾ' ಚಿತ್ರಗಳಲ್ಲಿ ಅಶೋಕಕುಮಾರನ ಎದುರಾಗಿ ನಾಯಕಿಯನ್ನಾಗಿ ಮಾಡಿದರು. ದೀಲಿಪಕುಮಾರ, ರಾಜೇಂದ್ರಕುಮಾರ, ರಾಜಕುಮಾರ, ಕಿಶೋರಕುಮಾರ, ಪ್ರದೀಪಕುಮಾರ ಮುಂತಾದ ಟೋಳಿಯೇ ಅವಳೊಂದಿಗೆ ನಾಯಕರಾಗಿ ವಿವಿಧ ಚಿತ್ರಗಳಲ್ಲಿ ನಟಿಸಿತು. ಮದರಾಸಿನವರೂ ಈ ವಿಷಯದಲ್ಲಿ ಹಿಂದೆ ಬೀಳದೆ ಕೊಯಮತ್ತೂರಿನ ಪಕ್ಷಿರಾಜಾರವರ 'ಆಜಾದ್' ಅಲ್ಲದೆ ಎಲ್.ವಿ.ಪ್ರಸಾದರು 'ಶಾರದಾ'ದಲ್ಲಿ ನಾಯಿಕೆಯ ಪಾತ್ರವಿತ್ತರು. 'ಶಾರದಾ' ಅವಳ ಸ್ತ್ರೀತ್ವಕ್ಕೆ-ಅಭಿನಯ ಸಾಮರ್ಥ್ಯಕ್ಕೇ-ಸವಾಲೆಸೆದ ಪಾತ್ರ. ರಾಜ್‌ಕಪೂರ್ ಆ ಚಿತ್ರದ ನಾಯಕ. ಚಿತ್ರದ ಮೊದಲರ್ಧದಲ್ಲಿ ಅವಳು ಪ್ರಣಯಿನಿ. ಕೊನೆಯ ಅರ್ಧದಲ್ಲಿ ಅವನ ತಾಯಿ! ಎಂತಹ ಸಂದಿಗ್ಧ! ಎಂತಹ ವಿಪರ್ಯಾಸ! ಮಾಡಿ ಗೆದ್ದೇ ಬಿಟ್ಟಳು. ("ಜಪ್ ಜಪ್ ಜಪ್ ಜಪ್‌ರೇ" ಸನ್ನಿವೇಶ ನೆನಪಾಗುತ್ತದೆಯೇ ನಿಮಗೆ?) ಹಣ ಹೆಸರು ಎರಡೂ ಅಸಹ್ಯವಾಗಿ ಉಬ್ಬಳಿಕೆ ಬರುವಷ್ಟು ಸಂಪಾದನೆ! ಒಂದು ಕಡೆ ಈ ಜೀವನ ವರ್ಣರಂಜಿತವಾಗಿದ್ದರೆ ಖಾಸಗೀ ಜೀವನ ಪೂರ್ತಿ ಬ್ಲ್ಯಾಕ್ ಅಂಡ್ ವೈಟ್! ಸಯಾನಿನಿಂದ ಅಮ್ರೋಹಿ ದಂಪತಿಗಳು ಪಾಲಿಹಿಲ್‌ನ 'ರೆಂಬ್ರಾಂಟ್' ಭವ್ಯ ಬಂಗಲೆಗೆ ಬಂದರೂ ಅವಳಿಗೆ ತಾನೊಂದು ಬಂಗಾರದ ಪಂಜರದಲ್ಲಿ ಸಿಕ್ಕಿಕೊಂಡ ಪಕ್ಷಿ ಅಷ್ಟೆ ಎಂಬ ಭಾವನೆ ಬರಲಾರಂಭಿಸಿತು. ಕಾರ್ ಆಕ್ಸಿಡೆಂಟ್ ಆಗಿ-ಕೈ ಬೆರಳುಗಳ ಮೂಳೆಜಜ್ಜಿ ಹೋಗಿ-ಪೂನಾದಲ್ಲಿನ ಸಸೂನ್ ಆಸ್ಪತ್ರೆಯ ವಾರ್ಡಿನಲ್ಲಿ ನರಳುತ್ತಾ (ವಿವಾಹಕ್ಕೆ ಮುನ್ನ) ಟೆಲಿಫೋನಿನಲ್ಲಿ ದಿನಗ

ಟ್ಟಿಲೆ ಭಾವೀ ಪತಿ ಅಮ್ರೋಹಿಯೊಂದಿಗೆ ಸಂಭಾಷಿಸುತ್ತ ಕದ್ದು ವಿವಾಹವಾಗಿ ತಾನಿಚ್ಛಿಸಿದ ಪತಿಯೊಂದಿಗೇ ಬಾಳಲು ಬಂದ ಆಕೆಯ ಹಣೆಯಲ್ಲಿ ಸುಖವೆಂಬುದೇ ಬರೆದಿರಲಿಲ್ಲ. ಬಕ್ಷ ಸಾಹೇಬರು ವಿವಾಹ ಪೂರ್ವದಲ್ಲಿ ಮಗಳನ್ನು ದುಡಿಸಿ ಹಣ ಗಂಟು ಹಾಕುತ್ತಿದ್ದರೆ ಈಗ ಅದೇ ಕೆಲಸವನ್ನು ಕೈ ಹಿಡಿದ ಕಮಾಲ ಸಾಹೇಬರು ಮಾಡುತ್ತಿದ್ದರು ಅಷ್ಟೆ. ಈ ದೃಷ್ಟಿಯಿಂದ ಅವಳದು ಒಂದು ರೀತಿಯ ''ಪಿತಾಭಕ್ಷತಿ ಕೌಮಾರೇ ಭರ್ತ ಭಕ್ಷತಿಯೌವನೇ'' ಆಗಿತ್ತು. ಬಾಲ್ಯದಿಂದ ಎಲ್ಲರ ಪ್ರೀತಿ ಪ್ರೇಮಗಳಿಂದ ವಂಚಿತಳಾಗಿದ್ದ ಆಕೆ ನಿಜವನ್ನು ಮರೆಯಿಸಿ ಅದು ಹೇಗೆ ನಗುಮುಖ ಲಜ್ಜೆಗಳಿಂದ ಪ್ರಣಯಿನಿಯ ಪಾತ್ರಮಾಡುತ್ತಿದ್ದಳೋ ತಿಳಿಯದು. ಅವಳದು ನಿಜವಾಗಿಯೂ ''ದಿಲ್ ಅಪನಾ ಔರ್ ಪ್ರೀತ್ ಪರಾಯಿ''ಯೇ!''!

1952ರ ವೇಳೆಗೆ ಮುಂಬಯಿಯ 'ಫಿಲ್ಮ್ ಇಂಡಿಯಾ' ಮತ್ತು 'ಸೌಂಡ್' ಚಲನಚಿತ್ರ ಮಾಸಪತ್ರಿಕೆಗಳ ಕಾಲ ಮುಗಿಧು ಅವುಗಳ ಜಾಗವನ್ನು 'ಫಿಲ್ಮ್ ಫೇರ್' ಆಕ್ರಮಿಸಿಕೊಂಡಿತು. 1954ರಲ್ಲಿ ಈ ಸಂಸ್ಥೆ ''ವಾರ್ಷಿಕ ಫಿಲ್ಮ್ ಫೇರ್ ಅವಾರ್ಡ್'' ಹುಟ್ಟಿ ಹಾಕಿತು. ಆ ವರ್ಷದ ಅತ್ಯುತ್ತಮ ನಟ-ನಾಯಕಿ ಮೀನಾಕುಮಾರಿ ಎಂದು ತೀರ್ಪು ಬಂದು ಅವಳಿಗೆ ಮೊದಲ ಅವಾರ್ಡ್ ದಕ್ಕಿಬಿಡಬೇಕೆ! ಅಮೇರಿಕದ ರಾಯಭಾರಿ ಜಾರ್ಜ್ ಅಲನ್‌ರವರು ಅಂದಿನ ಸಮಾರಂಭದ ಮುಖ್ಯ ಅತಿಥಿಯಾಗಿ ಬಂದು ಆ ಪಾರಿತೋಷಕವನ್ನು ಶ್ವೇತ ವಸ್ತ್ರಧಾರಿಣಿಯಾಗಿ ಬಂದಿದ್ದ ಮೀನಾಕುಮಾರಿಗೆ ಅರ್ಪಿಸಿ ಹೋದರು. 'ಪರಿಣೀತಾ' ಚಿತ್ರದಲ್ಲಿ ನಾಯಕಿ ಲಲಿತೆಯಾಗಿ ನೀಡಿದ ಅತ್ಯುತ್ತಮ ಅಭಿನಯಕ್ಕಾಗಿ ಆ ವರ್ಷದ ಮಧ್ಯದಲ್ಲಿಯೇ ಮತ್ತೊಂದು ಅವಾರ್ಡ್! 1963ರಲ್ಲಿ ನೆಹರೂರವರ ಸೋದರಿ ವಿಜಯಲಕ್ಷ್ಮೀ ಪಂಡಿತರ ಹಸ್ತದಿಂದ ಮತ್ತೊಮ್ಮೆ ಫಿಲ್ಮ್ ಫೇರ್ ಅವಾರ್ಡ್1966ರಲ್ಲಿ ಮಗುದೊಮ್ಮೆ ಹೀಗೇ. ಇವಲ್ಲದೆ ಲೆಕ್ಕವಿಲ್ಲದಷ್ಟು ಸಣ್ಣಪುಟ್ಟ ಪಾರಿತೋಷಕಗಳು! ಗೌರವ! ಸನ್ಮಾನ. ಹೀಗೆ ಉನ್ನತಿಯನ್ನೇ ತೋರಿಸುತ್ತಿತ್ತು ಅವಳ ಬಾಹ್ಯ ಜೀವನದ ಗ್ರಾಫ್ ಪೇಪರು! ಕಮಾಲ್ ಸಾಹೇಬರದು ಇಳಿಮುಖ! ಪುರುಷ ಪ್ರಧಾನ ಅಹಂ ಮತ್ತು ಅಭಿಮಾನಗಳ ಕತ್ತಿವರಸೆ ಆರಂಭವಾಯಿತು.

ಡೆಸ್ಡಿಮೋನಾ ಕುರಿತು ಒಥೆಲೋಗೆ ಬಂದಂತೆ ಕಮಾಲ್ ಸಾಹೇಬರಿಗೂ ತನಗಿಂತ 15 ವರ್ಷ ಚಿಕ್ಕವಳಾಗಿದ್ದ ರೂಪರಾಣಿಯಾಗಿದ್ದ ಈ ಮಡದಿ ಬೇರೆ ಯಾರೊಂದಿಗಾದರೂ ಓಡಿಹೋದರೆ? ಎಂಬ ಸಂಶಯ ಬರುವಂತಹ ಹಲವು ಘಟನೆಗಳು ಸಂಭವಿಸಿದವೆನ್ನಲಾಗುತ್ತದೆ. ಅವರು ಕಿರುಕುಳ ಆರಂಭಿಸಿದರು. ಅವಳಿಗೆ ಪಾಲಿಸಲು ಸಾಧ್ಯವಾಗದಂತಹ ಶರತ್ತುಗಳನ್ನು ವಿಧಿಸಿದರು. ಚಲನಚಿತ್ರಗಳಲ್ಲಿ ಪಾತ್ರ ಮಾಡಲು ಹೋಗುವ ಹೆಂಡತಿ ಸಂಜೆ ಆರರೊಳಗೆ ಮನೆಯಲ್ಲಿ ಇರಬೇಕು; ತನ್ನ ಕಾರಿನ ವಿನಾ ಅನ್ಯರ ಕಾರನ್ನೇರಬಾರದು; ಮೇಕ್‌ಅಪ್ ರೂಮಿನಲ್ಲಿ ಅವಳ ವಿನಾ ಬೇರಾವ ಗಂಡು ನೊಣವೂ ಇರಬಾರದು ಎಂಬ ಶರತ್ತುಗಳನ್ನವಳಿಗೆ ವಿಧಿಸಿದರು. ಹಲವು ಹತ್ತುತರದ ಜನರ ನಡುವೆ ಕೂಡಿ ದುಡಿಯುವ ಆ ಕೂಟ ಜಗತ್ತಿನಲ್ಲಿ-ಒಂದೆರಡು ಬಾರಿ ನೆಪಹೇಳಿ ತಪ್ಪಿಸಿಕೊಂಡರೂ- ಉಳಿದ ಕಾಲಗಳಲ್ಲಿ ಇಂಥ ನಿಯಮಗಳನ್ನು ಪಾಲಿಸುವುದಾದರೂ ಹೇಗೆ? ಅವಳು ತುಂಬ ಸಂದಿಗ್ಧಕ್ಕೊಳಗಾಗಿ ಮೌನವಾಗಿ ಎಲ್ಲ ಕಷ್ಟಗಳನ್ನು ಹಲ್ಲು ಕಚ್ಚಿಕೊಂಡು ಸಹಿಸಿದಳು. ಆದರೆ ಅವು ಮಿತಿಮೀರಿದಾಗ ಆ ನಿಯಮಗಳನ್ನೆಲ್ಲ ಗಾಳಿಗೆ ತೂರಲೇಬೇಕಾಯಿತು.

ಅವಳನ್ನು ಕಾಯಲು, ಮಾಡಿದ್ದು-ನಡೆದದ್ದೆಲ್ಲವನ್ನೂ ವರದಿ ಮಾಡಲು-ಸಾಹೇಬರು ತಮ್ಮ ಆಪ್ತ ಕಾರ್ಯದರ್ಶಿ 'ಬಾಕರ್'ನನ್ನು ನಿಯೋಜಿಸಿದರು. ವಿಶ್ವಾಮಿತ್ರನಿಗಿಂತ ನಕ್ಷತ್ರಕ ಹೆಚ್ಚು ಕ್ರೂರಿಯಾದ. ಕಣ್ಣಲ್ಲಿ ಕಣ್ಣಿಟ್ಟು ಅವಳನ್ನು ಕಾಯುತ್ತಿದ್ದು ನಡೆದುದನ್ನು ಅವನು ದಣಿಗೆ ವರದಿ ಒಪ್ಪಿಸಲಾರಂಭಿಸಿದ.

ಗಂಡನ ದೌಲತ್ತು ಮೇರೆ ಮೀರಿತು. ಮಿನರ್ವಾದ ಸೊಹ್ರಾಬ್ ಮೋದಿಯವರು ಒಮ್ಮೆ ರೋಟರಿ ಕ್ಲಬ್ಬಿನವರೊಂದಿಗೆ ನಿಯೋಜಿಸಿದ್ದ ಕಾರ್ಯಕ್ರಮಕ್ಕೆ ಈ ಅಮ್ರೋಹಿ ದಂಪತಿಗಳನ್ನು ಕರೆದಿದ್ದರು. ಅಲ್ಲಿ ಇವರನ್ನು ಮುಖ್ಯರಾದವರೊಬ್ಬರಿಗೆ ಪರಿಚಯ ಮಾಡಿಸುವಾಗ "ಈಕೆ, ಖ್ಯಾತ ಅಭಿನೇತ್ರಿ ಮೀನಾಕುಮಾರಿ; ಈತ ಅವರ ಪತಿ ಕಮಾಲ್ ಅಮ್ರೋಹಿ" ಎಂದದ್ದೇ ಅಮ್ರೋಹಿ ಸಾಹೇಬರಿಗೆ ಬೇಕಾದಷ್ಟಾಯಿತು. ತಕ್ಷಣ ಅವರು ಸಭಾಗೌರವವನ್ನೂ ಲೆಕ್ಕಿಸದೆ "ಇದು ಖ್ಯಾತ ಲೇಖಕ-ನಿರ್ಮಾಪಕ-ನಿರ್ದೇಶಕ ಕಮಾಲ್ ಅಮ್ರೋಹಿ. ಈಕೆ ಅವರ ಪತ್ನಿ" ಎನ್ನುತ್ತಾ ಎದ್ದು ಹೋಗಿ ಬಿಡಬೇಕೆ!

ಮುಂದೆ ಗುರುದತ್ತರ 'ಸಾಹಿಬ್, ಬೀಬಿ ಜಾರ್ ಗುಲಾಂ' ಚಿತ್ರ ಬರ್ಲಿನ್ನಿನ ಚಿತ್ರೋತ್ಸವಕ್ಕೆ ಆರಿಸಲ್ಪಟ್ಟು ಆಕೆಗೊಂದು-ಸಾಹೇಬರಿಗೊಂದು ಏರ್‌ಟಿಕೆಟ್-ಬರ್ಲಿನ್ನಿಗೆ ಬುಕ್ ಮಾಡಿಕೊಟ್ಟರೆ ಅವರು ಹೋಗಲೇ ಇಲ್ಲ. ಬೇಕಾದರೆ ಬಾಕರನನ್ನು ಕರೆದುಕೊಂಡು ಹೋಗಬಹುದು ಎಂದು ಉದಾರವಾದ ರಿಯಾಯಿತಿಯ ರಹದಾರಿ ಬೇರೆ! ಪರಿಣಾಮ ಈ ಟ್ರಿಪ್ ಕ್ಯಾನ್ಸಲ್ಲೇ ಆಗಿಬಿಟ್ಟಿತು.

ಅವಳು ಕೊಂಡ ಕಾರಿನಲ್ಲಿ ಅವರು ಎಂದೂ ಕೂರಲೇ ಇಲ್ಲ. ಇದನ್ನು ಹೇಗೆ ಸಹಿಸುವುದು? ಇಂದವಳು ಪ್ರದೀಪ್‌ಕುಮಾರನ ಹೊಸ ಕ್ರಿಸ್ಲರ್ ಕಾರನ್ನೇರಿ ಮೆರೆಯಲು ಹೋದಳು; ಈಚೆಗೆ ಗುಲ್‌ಜಾರ್‌ನೊಂದಿಗೆ ಅವಳ ಏಕಾಂತ ಹೆಚ್ಚುತ್ತಿದೆ; ರಶಿಯದ ಯಾರೋ ಪ್ರಮುಖರಿಗಾಗಿ ರಾಜ್‌ಕಪೂರ್ ತನ್ನ ಸ್ಟುಡಿಯೋದಲ್ಲಿಟ್ಟುಕೊಂಡ-ರಾತ್ರಿ 7 ಗಂಟೆಯ ಮೇಲಿನ-ಪಾರ್ಟಿಯಲ್ಲಿ ರಾತ್ರಿ 10-11ರವರೆಗೂ ಮೀನಾಕುಮಾರಿ ಇದ್ದಳು ಎಂದೆಲ್ಲ ಸುದ್ದಿಗಳನ್ನು ಬಾಕರ್ ಒಂದಕ್ಕೆ ನೂರು ಸೇರಿಸಿ ಸಾಹೇಬರಿಗೆ ವರದಿ ಮಾಡುತ್ತಿದ್ದ. ಇದರಿಂದಾಗಿ ಜಗಳ-ಮನಸ್ತಾಪ-ಮಾತುಕತೆಗಳ ನಿಲುಗಡೆ ಎಲ್ಲ ಆಯಿತು.

'ಪಿಂಜರೇಕೆ ಪಂಛಿ' ಎಂಬ ಚಿತ್ರದಲ್ಲಿ ಆಕೆ ನಾಯಿಕೆಯಾಗಿ ಮೂಹೂರ್ತಕ್ಕೆಂದು ಗೊತ್ತು ಮಾಡಿದ ದಿನ ಅಲ್ಲಿ ನೆರೆದಿದ್ದವರೆಲ್ಲರ ಎದುರು ನಡೆದ ಘಟನೆ ಕೊನೆಯದು. ಅದು ಅವರಿಬ್ಬರ ಭಗ್ನ ಕೌಟುಂಬಿಕ ಜೀವನದ ಶವಪೆಟ್ಟಿಗೆಗೆ ಹೊಡೆದ ಕೊನೆಯ ಮೊಳೆ! ಮೇಕಪ್ ರೂಮಿನಲ್ಲಿ ಅವಳ ಹೊರತು ಬೇರಾವ ಗಂಡಸೂ ಇರಬಾರದೆಂಬ ಅಮ್ರೋಹಿಯವರ ಷರತ್ತಿಗೆ ವಿರುದ್ಧವಾಗಿ ಮೀನಾ ಅಂದು ಬೇಕೆಂದೇ ಗುಲ್‌ಜಾರನನ್ನು ಕರೆದುಕೊಂಡು ಹೋದಾಗ ಬಾಕರ್ ಅವರನ್ನು ತಡೆದು ಗಲಾಟೆಯಾಗಿ ಅವಳ ಮುಖದ ಮೇಲೆ ಬಾರಿಸಿ-ಏನೇನೋ ಆಗಿಬಿಟ್ಟಿತು. ಅವಳು ಗುಲ್‌ಜಾರನನ್ನು ಎದೆಗಪ್ಪಿಕೊಂಡೇ ಎಳೆದುಕೊಂಡು ಹೋಗಿ ಮೇಕಪ್ ರೂಂ ಹೊಕ್ಕಳೆಂದು ಒಂದು ಸುದ್ದಿ ಮೂಲ ಹೇಳುತ್ತದೆ. "ನಾನವರ ಸೂಳೆಯಲ್ಲ. ಇನ್ನೆಂದಿಗೂ ಅವರ ಮೆಟ್ಟಿಲು ತುಳಿಯಲಾರೆ. ಹೋಗಿ ಕಮಾಲ್ ಸಾಹೇಬರಿಗೆ ಹೇಳು," ಎಂದೆನ್ನುತ್ತ ಅವಳು ಬಾಗಿಲು ಮುಚ್ಚಿಕೊಂಡಳಂತೆ.

ಅವರ ಸಂಶಯ, ಹಠಮಾರಿತನಗಳು ಬಿಮಲ್‌ರಾಯ್-ಗುರುದತ್ತರಂತಹ ಪ್ರತಿಭಾವಂತರನ್ನೂ ಎದುರು ಹಾಕಿಕೊಳ್ಳುವಂತೆ ಮಾಡಿದವು. ಮೀನಾ ಅವರ ಚಿತ್ರಗಳಲ್ಲಿ ನಟಿಸದಂತೆ ಮಾಡಿದರು. "ಪಾರ್ವತಿಯ ಪಾತ್ರಮಾಡುತ್ತೀರಾ? ನಾನು 'ದೇವದಾಸ್' ತಯಾರಿಸಬೇಕೆಂದಿದ್ದೇನೆ." ಎಂದು ಪ್ರಾರ್ಥಿಸಿದ ಬಿಮಲ್‌ರಾಯರ ಬಿನ್ನಹ ಅವಳಿಗೆ ಮುಟ್ಟದಂತೆ ಕಾರಸ್ಥಾನ ಮಾಡಿದರು. ವಿಧಿಯಿಲ್ಲದೆ ಅವರು 'ದೇವದಾಸ್' ಮಾಡಿದಾಗ ದಿಲೀಪನ ಎದುರಿಗೆ ಅವನ ಅಕ್ಕ ಅಥವಾ ಅತ್ತೆಯಂತೆ ಕಾಣುವ ಸುಚಿತ್ರಾಳಿಗೆ ಸೇನಳಿಗೆ ಆ ಪಾತ್ರ ನೀಡಿ ಮುಗಿಸಬೇಕಾಯಿತು. "ಆ ಪಾತ್ರ ಮಾಡಲು ನಾನು ಹಂಬಲಿಸುತ್ತಿದ್ದೆ. ಬಿಮಲ್‌ದಾ ನನಗೊಂದು ಮಾತೂ ತಿಳಿಸದೇ ಹೋದರೆ?" ಎಂದು ಮೀನಾ ನೊಂದು ನುಡಿದಳಂತೆ. ಇಷ್ಟು ಪರಿಯಲ್ಲಿ ಉರಿಸಿದ ಈ

ಪತಿಯನ್ನು ಅವಳು ಎಷ್ಟೆಂದು ಅನುಸರಿಸಿಯಾಳು! ಪಿಂಜರೇಕೆ ಪಂಛಿ ಪಂಜರವನ್ನೊಡೆದು ಹೊರಕ್ಕೆ ಹಾರಿ ಹೋಯಿತು. 1964ರಲ್ಲಿ ಈ ಘಟನೆ ನಡೆದು ಅವರು ಬೇರೆಯಾದರು. ದುಡಿತ ನಿನ್ನದು, ದುಡ್ಡೆಲ್ಲ ಅವನದು. ನಿನ್ನ ಹಣವನ್ನೆಲ್ಲ ಅವನು ಗಂಟು ಹಾಕುತ್ತಿದ್ದಾನೆ ಎಂದು ಸುತ್ತಲಿನವರು (ಮಹಮೂದ್ ಮತ್ತು ಬಿಮಲ್‌ರಾಯ್ ಗುಂಪಿನವರು) ಅವಳನ್ನು ಹಂಗಿಸಿದಾಗ ಅವಳ ಮನಸ್ಸು ಮುರಿಯಿತು. ಅವಳು ಸ್ಟುಡಿಯೋದಿಂದ ನೇರವಾಗಿ ಹಾಸ್ಯನಟ-ಮೈದುನ-ಮಹಮೂದನ ಮನೆ ಸೇರಿಕೊಂಡಳು. ಅಮ್ರೋಹಿ ಸಾಹೇಬರು ಅವಳನ್ನು ಹುಡುಕಿ ದಣಿದರು. ಈ ಹುಡುಕಾಟ ಹುಲ್ಲಿನ ರಾಶಿಯಲ್ಲಿ ಸೂಜಿಯನ್ನು ಹುಡುಕಿದಂತೆ. ಮುಂಬಯಿಯನ್ನೆಲ್ಲಾ ಜಾಲಾಡಿದ್ದಕ್ಕೆ ಎರಡನೇ ರಾತ್ರಿ ಪತ್ತೆಯಾಯಿತು. ಮುಚ್ಚಿದ ಬಾಗಿಲ ಹೊರಕ್ಕೆ ನಿಂತು, ಏನೇನೋ ಕಮಾಲ್ ಮಾಡಿದರು. ಬಾಗಿಲು ತೆರೆಯಲೇ ಇಲ್ಲ. ಇನ್ನಿವಳನ್ನು ಕರೆಯಲು ಬರುವುದಿಲ್ಲ ಎಂದು ನಡೆದರು.

ಮೀನಾಕುಮಾರಿ ಸೇರಿದ ಮಹಮೂದನ ಆ ಮನೆಯ ಹೆಸರು ''ಪ್ಯಾರಾಡೈಸ್''. ಅಲ್ಲಿ 38ಜನ ಅವನ ಅನುಬಂಧಿಗಳು! ಮೀನಾ 39ನೇಯವಳು.

ಚಿಕ್ಕಂದಿನಿಂದಲೂ ಮಾತಾಪಿತೃಗಳ ಪ್ರೇಮದಿಂದ ವಂಚಿತಳಾದ ಅವಳು ತನ್ನನ್ನು ಹೃತ್ಪೂರ್ವಕವಾಗಿ ಪ್ರೀತಿಸಿ ಪ್ರೇಮ ಸುರಿಸುವ ಒಂದು ವ್ಯಕ್ತಿಗೆ ಅವನ ನುಡಿಗೆ ಜೀವಮಾನವೆಲ್ಲ ಹಂಬಲಿಸಿದಳು. ಕೊನೆಗೂ ಅದು ಅವಳಿಗೆ ಸಿಕ್ಕಲೇ ಇಲ್ಲ. ಬಾಲ್ಯದಲ್ಲಿ ಅಕ್ಕ ಖುರ್ಷಿದ್ ಬಾಲನಟಿಯಾಗಿ ಹಣ ತರುತ್ತಿದ್ದಾಗ ಅವಳಿಗೇ ಬಟ್ಟೆ-ಬರೆ-ಚಾಕಲೇಟ್-ಪ್ರೀತಿಪ್ರೇಮಗಳ ಸೂರೆ-ಆ ತಂದೆತಾಯಿಗಳದು. ಆಗೆಲ್ಲ ಮೀನಾಕುಮಾರಿ ಆ ಮನೆಯ ಸಿಂಡ್ರೆಲಾ! ಅಕ್ಕ ಹಾಕಿಕೊಂಡು ಬಿಟ್ಟ ಜಾಕೆಟ್-ಜಂಪರ್‌ಗಳು ಅವಳಿಗೆ! ಸ್ವಂತ ತಾಯಿತಂದೆ ನಡೆದುಕೊಂಡದ್ದೇ ಹೀಗೆ. ಮುಂದೆ ತಾನು ಸಂಪಾದಿಸಲಾರಂಭಿಸಿದಾಗ ಅವರ ನಡೆವಳಿಕೆ ಪೂರ್ತಿ ಟ್ರಾನ್ಸ್‌ಫರ್ ಸೀನರಿ. ಸೂಕ್ಷ್ಮಮತಿಯಾದ ಅವಳು ಇದನ್ನೆಲ್ಲ ಕಂಡು ಮೌನವಾಗಿ ಅನುಭವಿಸಿದಳು. ಅಲ್ಲೊಂದು ರೀತಿಯ ಕಷ್ಟ. ಈಗ ಇನ್ನೊಂದು ರೀತಿಯದು. ಅವರು ಅವಳನ್ನು ಪ್ರೀತಿಸಿದ್ದು ಕೇವಲ ಅವಳ ಹಣಕ್ಕಾಗಿ; ಸಂಪಾದನೆಗಾಗಿ. ಅವಳಿಗೆ ಇದೂ ಗೊತ್ತಿತ್ತು. ಆದರೆ ಅದೇನು ದುಷ್ಕರ್ಮದ ಫಲವೋ! ಆ ವಿಷವೃತ್ತದಿಂದ ಹೊರಬಾರದೆ ಅವರನ್ನು ದೂರವಿರಿಸಲಾರದೆ-ಒದ್ದು ಹೊರಕ್ಕೆ ಬರಲಾರದೆ ಅಲ್ಲೇ ಇದ್ದು ಅವರ ಕುಟಿಲ ಕಾರಸ್ಥಾನಗಳಿಗೆ ಪೂರ್ಣಬಲಿಯಾಗಿ ಹೋದಳು.



ಪ್ಯಾರಾಡೈಸ್ ಕೂಡ ಅವಳ ಭಾಗಕ್ಕೆ ಇನ್‌ಫರ್ನೋ ಆಗಿ ಬಿಟ್ಟಿತು. ನಿದ್ರೆ ಹೋಯಿತು. ಮನಶ್ಶಾಂತಿ ಶೂನ್ಯ. ಅವಳ ಖಾಸಗಿ ವೈದ್ಯರು ನಿದ್ರೆಗಾಗಿ ಆಗಾಗ ಒಂದು ಪೆಗ್ ''ಶ್ರೀರಾಮ'' ಹಾಕಬಹುದು ಎಂದು ಸೂಚಿಸಿದ್ದೇ ಅವಳ ಮೂಲಕ್ಕೆ ಬಂತು. ಅಂದಿನಿಂದ ಅವಳಿಗೆ ಮಹಾಮಾರಿ ಮದಿರೆ (ಬ್ರಾಂದಿ)ಯ ಅಭ್ಯಾಸವಾಯಿತು. ಒಂದು ಪೆಗ್ಗು ಒಂದು ಬಾಟಲ್ ಆಗಿ ಪರಿವರ್ತನೆಯಾಗಲು ಕಾಲ ಬಹಳ ಬೇಕಾಗಲಿಲ್ಲ. ಮುಂದಿನದೆಲ್ಲ ಇಳಿದಾರಿ; ಜಾರುದಾರಿ!

ಪ್ಯಾರಾಡೈಸ್‌ನಲ್ಲಿದ್ದ ಜನ ಬರೀ ಪ್ಯಾರಾಸೈಟುಗಳು. ಎಗ್ಗು ಎಣೆಯಿಲ್ಲದೆ ದುಡಿತ

ಮಾಡಿ ಮನೆಗೆ ಬಂದರೆ ಏನಿದೆ ಅಲ್ಲಿ? ತಿನ್ನಲು ಒಂದೊಂದು ದಿನ ಅನ್ನಕ್ಕೂ ಇರುತ್ತಿರಲಿಲ್ಲ. ಅವಳು ಬರುವುದರೊಳಗೆ ಅವರು ಎಲ್ಲ ಮುಗಿಸಿ ಅಡಿಗೆ ಮನೆ ಖಾಲಿ ಮಾಡಿ ಮಲಗಿರುತ್ತಿದ್ದರು. ಅವಳಿಗೆ ಬರುತ್ತಿದ್ದ ಕಾಗದ ಪತ್ರಗಳನ್ನೊಡೆದು ಓದುತ್ತಿದ್ದರು. ಬರುವ ಫೋನ್ ಕಾಲ್‌ಗಳನ್ನೆಲ್ಲ ತಾನೇ ರಿಸೀವ್ ಮಾಡಿಕೊಂಡು ಆ ಕೊನೆಯಲ್ಲಿದ್ದವರ ಹೆಸರು ವಿಳಾಸ ಉದ್ದೇಶಗಳ ತನಿಖೆ ಮಾಡಿ 'ಅವರಿಲ್ಲ ಮನೇಲಿ' ಎಂದು ಫೋನ್ ಕುಕ್ಕಿ ಎಷ್ಟೋ ಸಾರಿ ಅಮೂಲ್ಯವಾದ ಭೇಟಿ ಕಾಂಟ್ರಾಕ್ಟುಗಳು ತಪ್ಪಿಹೋಗುವಂತೆ ಮಾಡಿದರು. ಇದರಿಂದೆಲ್ಲ ಮೀನಾ ಬೇಸತ್ತು ಮುಂದೆ ಜುಹುವಿನಲ್ಲಿ 'ಜಾನಕೀ ಕುಟೀರ್' ಎಂಬಲ್ಲಿನ ಒಂದು ಮನೆಗೆ ಬದಲಾಯಿಸಿಕೊಂಡಳು.

ತಾಯಿ ತಂದೆ ಕೈ ಹಿಡಿದವರ ಪ್ರೀತಿ ಪ್ರೇಮಗಳಿಂದ ವಂಚಿತಳಾದ ಈಕೆ ಮುಂದೆ ಅದೇ ಪ್ರೀತಿ, ಪ್ರೇಮಗಳನ್ನು ತೋರುವ ಅಥವಾ ಅಂತಹ ಒಂದು ಮಾತಾಡುವ ಯಾವುದೇ ತಲೆ ಹೋಕನೆಡೆಗೆ ವಾಲುತ್ತ ನಡೆದದ್ದು ಅವಳ ಪ್ರಾರಬ್ಧದ ದುರ್ವಿಪಾಕ ಎನ್ನದೆ ವಿಧಿಯಿಲ್ಲ. ಈ ಸಾಲಿನಲ್ಲಿ ಗುಲ್ ಜಾರ್; ನಂತರ ಅವಳ ಕುಡಿತ ಹೆಚ್ಚಲು ಕಾರಣನಾದ ಧರ್ಮೇದ್ರ ಮುಖ್ಯರಾದವರೆನ್ನುತ್ತಾರೆ. ಧರ್ಮೇದ್ರ ವಯೋಮಾನದಲ್ಲಿ ಅವಳಿಗಿಂತ ಚಿಕ್ಕವನು. ಎರಡು ಮಕ್ಕಳ ತಂದೆ ಕೂಡ. ಪಂಜಾಬಿ ಎಲ್ಲ ಪಂಜಾಬಿಗಳಂತೆ ಒಂದು ಪೀಪಾಯಿ ಖಾಲಿ ಮಾಡಬಲ್ಲವ. ಅಭಿನಯ, ಅನುಭವಗಳ ದೃಷ್ಟಿಯಿಂದ ಚಿತ್ರ ಜಗತ್ತಿನಲ್ಲಿ ಚಿಕ್ಕವನು. ಮೀನಾಕುಮಾರಿಯಿಂದ ಬಹಳಷ್ಟು ಕಲಿತವನು. ಅವಳಿಗೆ ಅವನು ಎಷ್ಟು ಋಣಿಯಾಗಿದ್ದರೂ ಸಾಲದು. ಅವಳಿಂದಾಗಿ ಅವನಿಗೆ ಅನೇಕ ಚಿತ್ರಗಳಲ್ಲಿ ಅವಕಾಶ! ಅವಳ ಕುರಿತು ಹುಟ್ಟಿದ ಗಾಸಿಪ್‌ಗಳಿಗೆ ಲೆಕ್ಕವಿಲ್ಲ. ''ಧರ್ಮೇದ್ರ ನನ್ನ ಲವರ್'' ಎಂದು ಅವಳು ಹತ್ತು ಜನರ ಮುಂದೆಯೇ ಹೇಳಿಕೊಂಡಳೆಂದು ಪತ್ರಿಕೆಗಳು ಬರೆದವು. ಆದರೆ ಅವನೇ ಅವಳ ಭಗ್ನ ಪ್ರಣಯಕ್ಕೆ ಕಾರಣನಾದದ್ದು ಅವಳ ದುರ್ದೈವವಲ್ಲದೆ ಮತ್ತೇನು? ಅವನು ಕೈಬಿಟ್ಟ ಮೇಲೆ ಇನ್ನೊಬ್ಬ; ಇನ್ನೊಬ್ಬನಾದ ಮೇಲೆ ಮತ್ತೊಬ್ಬ ಎಂಬ ಅವಳ ಬ್ಯಾಡ್‌ಮಿಂಟನ್ ಆಟ ಮುಂದುವರಿಯುತ್ತ ಕೊನೆಗೆ ತನಗಿಂತ ತುಂಬ ಕಿರಿಯನಾದ ರಾಹುಲ್ ಎಂಬಾತನನ್ನು ಹಿಂದೂ ದೇವಾಲಯವೊಂದರಲ್ಲಿ ಆರ್ಯಸಮಾಜದ ವಿಧಿ ವಿಧಾನಗಳಂತೆ ವಿವಾಹವಾದಳು.

ಒಂದು ಕಾಲದಲ್ಲಿ ಇದು ಮಡಿವಂತಿಕೆಯ ಪ್ರಶ್ನೆ. ಇದೇನು! ಈ ಹೆಂಗಸು ಇಷ್ಟು ದಾಟಿದಳಲ್ಲ! ಎಂದು ಪ್ರಾಚೀನರು (50-60ನೇಯ ದಶಕದವರು! ಈಗ ಬಿಡಿ. ಅದೆಲ್ಲ ಕಾಮನ್!) ಹುಬ್ಬೇರಿಸಬಹುದು. ಒಂದು ಸಾರಿ ಪ್ರಣಯ ಭಗ್ನವಾದರೇನೆ-ಅದರ ವಿಯೋಗ-ನಿರಾಶೆ ಸಹಿಸದೆ ಎಷ್ಟು ಜನ ಆತ್ಮಹತ್ಯೆ ಮಾಡಿಕೊಂಡಿಲ್ಲ! ಹೀಗಿರುವಾಗ ಮೀನಾಕುಮಾರಿಯಂತೆ ಬಹುಮಂದಿಯನ್ನು ಪ್ರೀತಿಸಿ- ವಂಚಿತರಾಗಿ ಬದುಕಿದವರು ನಿಜಕ್ಕೂ ಗಟ್ಟಿಗರೇ ಸರಿ. ಅದೆಂತಹ ಗಟ್ಟಿ ಹೃದಯ ಅವರದ್ದು! ಅಷ್ಟು ಹೊಡೆತ-ವಂಚನೆ-ದು:ಖ-ವಿಯೋಗಗಳನ್ನು ಸಹಿಸಿಯೂ ಭಗ್ನವಾಗದೇ ಅಂತಹವರನ್ನೂ ಬದುಕಗೊಟ್ಟಿತಲ್ಲ!

ಎಲ್ಲರಿಂದ-ಎಲ್ಲದರಿಂದ ವಂಚಿತಳಾದ ಆಕೆಗೆ ಕೊನೆಗೆ ಕುಡಿತವೊಂದೇ ಸರ್ವಸ್ವವಾಗಿ ಬಿಟ್ಟಿತು. ಇಲ್ಲೂ ಸ್ವಾರ್ಥಿಗಳು ಅವಳ ಕೈಗೆಟಕುವಂತೆ ಬಾಟಲುಗಳನ್ನು ಇರಿಸಲಾರಂಭಿಸಿದರೇ ವಿನಾ ಅದರಿಂದ ಅವಳನ್ನು ದೂರವಿರಿಸುವ ಕಾರ್ಯ ಮಾಡಲಿಲ್ಲ. ಅಷ್ಟೇ ಅಲ್ಲ, ಬ್ರಾಂದಿಯ ಹೆಸರಲ್ಲಿ ಆ ಸೀಸೆಗಳ ತುಂಬ 'ಕಂಟ್ರಿ' ಪದಾರ್ಥ ಕೂಡ ತಂದು ತುಂಬಿಸಿದರು. ಮೀನಾ ದಿನ ದಿನಕ್ಕೆ ಅವನತಿ ಮೆಟ್ಟಿಲುಗಳನ್ನಿಳಿಯುತ್ತಾ ನಡೆದಿದ್ದಳು. ವೈದ್ಯರ ವಾರ್ನಿಂಗ್ ಕೂಡ ಕೆಲಸಕ್ಕೆ ಬಾರದಾಯಿತು.

ದೇಹ ಎಷ್ಟು ದಿನ ತಡೆದೀತು! ಬಳುಕುವ ಮುದ್ದಾದ ಶರೀರ ತೋರವಾಗಿ ನಡುವಿನ ಸುತ್ತಳತೆ ಹೆಚ್ಚಿತು. ಬಾದಾಮಿಯಾಕಾರದ ಮುದ್ದು ಮುಖ ದಪ್ಪವಾಗಿ ಚೌಕವಾಯಿತು. ನಾಯಕಿಯ ಪಾತ್ರಕ್ಕೆ ಇನ್ನಿವಳು ಉಪಯೋಗವಿಲ್ಲ ಎನ್ನುವಂತಾಯಿತು. ಈ ಮಧ್ಯೆ ಅವಳ ಆರೋಗ್ಯ ಕೆಟ್ಟು ಅವಳ ಲಿವರ್ ''ಸಿರ್ರೋಸಿಸ್'' ಎಂಬ ಕೆಟ್ಟ ರೋಗಕ್ಕೆ ಬಲಿಯಾಯಿತು.

ಎಲ್ಲರ ಬಲವಂತದಿಂದ ಚಿಕಿತ್ಸೆಗೆಂದು ಇಂಗ್ಲಂಡಿಗೆ ಹೋಗಿ ಅಲ್ಲಿ ಉತ್ತರಲಂಡನ್ನಿನ ಐಲಿಂಗ್‌ಟನ್ ಎಂಬಲ್ಲಿ ಒಂದು ಆಸ್ಪತ್ರೆಯಲ್ಲಿ 3-4 ತಿಂಗಳಿದ್ದು-ಲಂಡನ್ನಿನ ಟಾನಿಕ್ಕನಂತಹ ಹವೆ, ಶುಶ್ರೂಷೆ, ಪಥ್ಯ, ಅನುಪಾನ, ಔಷಧಗಳಿಂದ ಗುಣ ಹೊಂದಿ, ಅಲ್ಲಿಂದ ಸ್ವಿಟ್ಸರ್ಲಂಡಿನ ಜಿನೀವಾಕ್ಕೆ ಹೋಗಿ ಅಲ್ಲಿಂದ ಮೊದಲಿನಂತೆಯೇ ಆರೋಗ್ಯಪೂರ್ಣಳಾಗಿ, ಸುಂದರಿಯಾಗಿ ಹಿಂದಿರುಗಿದಳು. ಬಂದ 4-5 ದಿನಗಳಲ್ಲಿಯೇ ಸ್ಟುಡಿಯೋಕ್ಕೆ ಹೋಗಲಾರದಿದ್ದುಕ್ಕಾಗಿ 'ಅಭಿಲಾಷಾ' ಎಂಬ ಅವಳ ಚಿತ್ರದ ಚಿತ್ರೀಕರಣ ಮನೆಯಲ್ಲಿಯೇ ನಡೆಯಿತು.

1969ನೇಯ ವರ್ಷವು ಭಾರತದ ಚಲನಚಿತ್ರ ಜಗತ್ತಿಗೇ ಬಂದ ಒಂದು ಮನ್ವಂತರದ ವರ್ಷ. ಕಲೆ(!)ಯ ದೃಷ್ಟಿಯಲ್ಲಿ-ಆದೂ ಇನ್ನೊಬ್ಬರ ಹೆಣ್ಣಿನದು ನಗ್ನತೆ-ಚುಂಬನ-ಆಲಿಂಗನದ ಪ್ರದರ್ಶನಗಳಿಗೆ-ರೇಪ್‌ಗೆ-ಬ್ಲೌಸ್‌ಲೆಸ್ ಸ್ಲಿವ್, ಹಿಪ್‌ಸ್ಪರ್ ಸೀರೆಗಳಿಗೆ ಮುಕ್ತ ದ್ವಾರ ತೆರೆದು, ''ಛಾನ್ಸ್ ಸಿಕ್ಕುವುದಾದರೆ ನಾನು ಬಟ್ಟೆ ಬಿಚ್ಚುವುದಕ್ಕೂ ತಯಾರು'' ಎಂದು ದಿಟ್ಟ ಹೇಳಿಕೆ ನೀಡಿದ ಸತಿ ಸಾವಿತ್ರಿಯರೂ-ಅಹಲ್ಯೆಯರೂ ''ಕಲಾತ್ಮಕ ಚಿತ್ರಗಳು'' ಎಂಬ ಹಣೆ ಪಟ್ಟಿ ಕಟ್ಟಿ ಹೆಣ್ಣನ್ನು ಭರೀ ಬಾಜಾರದಲ್ಲಿ ಹರಾಜು ಹಾಕಿದ ಆತ್ಮವಂಚಕ ನಿರ್ದೇಶಕ ನಿರ್ಮಾಪಕರುಗಳೂ ಚಿತ್ರ, ಜಗತ್ತಿಗೆ ನುಸುಳಿದ ವರ್ಷ ಅದು. ನಯ-ನೀತಿಗಳನ್ನು ನಿರ್ಲಜ್ಜೆಯಿಂದ ನುಂಗಿ ನೊಜ್ಜಿದ ಈ ಕಾಮುಕರ ಮತ್ತು ಇಂತಹ ಪ್ರತಿಭಾಶಾಲಿನಿ(!)ಯರ ಮುಂದೆ ಮೀನಾ ನಿಲ್ಲಲಾರದಾದಳು. ಆಕೆಗೆ ಆಗ 37 ವರ್ಷ. ಇನ್ನೂ ಹದಿಹರೆಯದ ಯುವತಿಯಂತೆ ಕಾಣುತ್ತಿದ್ದರೂ ಬದಲಾದ ಆ ಮಾರ್ಕೆಟ್ಟಿನಲ್ಲಿ ಈ ನಾಣ್ಯದ ಚಲಾವಣೆ ಕಡಿಮೆಯಾಯಿತು. ಈ ನಿರ್ಮಾಪಕ-ನಿರ್ದೇಶಕರುಗಳು ಅವಳನ್ನು ಅಕ್ಕ-ಅತ್ತಿಗೆ-ವಿಧವೆಯ ಪಾತ್ರಗಳಿಗೆ ನಿಯೋಜಿಸಲಾರಂಭಿಸಿದರು.

1960ರಲ್ಲಿ ಆಕೆ ಪತಿಯಿಂದ ದೂರವಾಗುವಾಗ ಅಮ್ರೋಹಿ ಸಾಹೇಬರು ತಮ್ಮ ಸುಂದರ ಸ್ವಪ್ನವಾದ 'ಪಾಕೀಜಾ' ಚಿತ್ರದಲ್ಲಿ ಈಕೆಯನ್ನೇ ನಾಯಕಿಯನ್ನಾಗಿ ಮಾಡಿ ಅಶೋಕ ಕುಮಾರನನ್ನು ನಾಯಕನನ್ನಾಗಿ ಮಾಡಿ ಒಂದೆ



ರಡು ರೀಲ್ ಚಿತ್ರೀಕರಣ ಕೂಡ ಆಗಿತ್ತು. ಅಷ್ಟರಲ್ಲಿ ಪರಸ್ಪರರು 'ಚಲೀಜಾ' ಆಗಿ ಪಾಕೀಜಾ ಪಿಕ್ಚರು ಡಬ್ಬಿ ಸೇರಿತ್ತು. 12 ವರ್ಷಗಳ ನಂತರ ಪುನ: ಸಾಹೇಬರು ಅದನ್ನು ಕೈಗೆತ್ತಿಕೊಂಡರು. ಅದನ್ನು ಮುಗಿಸಲೇಬೇಕೆಂಬ ಹಂಬಲ ಅವರದು. ಆದರೆ ಈ ಮುನಿದ ಮಡದಿಯ ವಿನಾ ಅನ್ಯರು ಆ ಪಾತ್ರಕ್ಕೆ ಸರಿ ಹೋಗರು. ಆಕೆ ಮನೆ-ಮನ ಎರಡನ್ನೂ ಮುರಿದು ದೂರವಾಗಿದ್ದಾಳೆ. ಏನು ಮಾಡಬೇಕು?

ಈ 12 ವರ್ಷಗಳಲ್ಲಿ ಬಹಳಷ್ಟು ನೀರು ವೈತರಣಿಯಲ್ಲಿ ಹರಿದಿತ್ತು. ಅಶೋಕ ಕುಮಾರ ಈಗ 12 ವರ್ಷಗಳಷ್ಟು ಹೆಚ್ಚು

ವೃದ್ಧಾಪ್ಯದ ಕಡೆ ನಡೆದಿದ್ದ. ಆದಕ್ಕಾಗಿ ಬೇರೊಬ್ಬ (ರಾಜಕುಮಾರ)ರನ್ನು ನಾಯಕರನ್ನಾಗಿ ಮಾಡಿ ಚಿತ್ರೀಕರಣ ಪುನ: ಆರಂಭಿಸುವ ಕಾರ್ಯಕ್ಕೆ ಸಂಧಾನ ಆರಂಭವಾಯಿತು. ನರ್ಗೀಸಳ ಮಧ್ಯಸ್ಥಿಕೆಯಿಂದಾಗಿ ಮೀನಾಕುಮಾರಿ ಒಪ್ಪಿದ್ದಳು. ಆ ನಿರ್ದೇಶಕ-ನಿರ್ಮಾಪಕ ಪತಿಗೆ ಪೂರ್ಣ ಸಹಕಾರ ನೀಡಿ 'ಪಾಕೀಜಾ' ಮುಗಿಸಿಕೊಟ್ಟಳು. ಈ ವಯಸ್ಸಲ್ಲೂ ಅಷ್ಟು ಸೊಗಸಾಗಿ ಅಭಿನಯಿಸಿದ ಮೀನಾಕುಮಾರಿಯನ್ನು ಪತ್ರಕರ್ತರು ಹಾಡಿಹೊಗಳಿದರು. ಹಣದ ಮಳೆ ಸುರಿಯಿತು.

ಅನಂತರ ಮತ್ತೆ ಜಗತ್ತೆಲ್ಲ ಶೂನ್ಯ! ನಲುಗಿದ ಮನ. ಮುರಿದ ಮನೆ ಕೈಕೊಟ್ಟ ಪ್ರೇಮಿಗಳು ಹಿಂದಣ ಆದರ ಅಭಿಮಾನಗಳನ್ನು ತೋರದ ಚಿತ್ರಜಗತ್ತು-ಇವೆಲ್ಲ ಆಕೆಯನ್ನು ಹಿಂಡಿ ಹಿಪ್ಪೆ ಮಾಡುತ್ತಿದ್ದವು. ಮತ್ತೆ ಯಾವುದೋ ಮಾಯದಲ್ಲಿ ಬಾಟಲಿ ಅವಳ ಕೈಗೆ ಬಂದಿತ್ತು. ಬಾಳಿನ ದಾರಿಯೆಲ್ಲ ಸವೆದು ಸಾವು ಸಮೀಪಿಸುತ್ತ ನಡೆಯಿತು. ಅವಳ ಜೀವಿತದ ಕೊನೆಯ ನಾಲ್ಕೂವರೆ ವರ್ಷಗಳು ಬರೀ ಶರಶಯ್ಯೆ! ಕೈಕಾಲುಗಳೆಲ್ಲ ಊದಿಕೊಂಡು ಆಡಿಸಲೂ ಬರುತ್ತಿರಲಿಲ್ಲ. ಸಂದುಗೊಂದುಗಳಲ್ಲೆಲ್ಲ ಪ್ರಾಣಾಂತಿಕವಾದ ನೋವು! ಗೋಳಾಡಿದಳು ಮೀನಾ. ಬಾಳೆಲ್ಲ ಬಾಡಿಗೆ ಮನೆಯೇ ಆಯಿತೆ? ಸ್ವಂತ ಮನೆಯೊಂದನ್ನು ಮಾಡಿಕೊಂಡು ಅದನ್ನು ತನ್ನ ಮನೋಭಿಲಾಷೆಗೆ ತಕ್ಕಂತೆ ಅಲಂಕರಿಸಿ ಅದರಲ್ಲಿರಬೇಕೆಂಬ ಅವಳ ಆಸೆ-ಬಾಂದ್ರಾದಲ್ಲಿನ 'ಲ್ಯಾಂಡ್‌ಮಾರ್ಕ್' ಎಂಬ ಭವ್ಯ ಕಟ್ಟಡದ ಹನ್ನೊಂದನೆಯ ಅಂತಸ್ತಿನ ಫ್ಲ್ಯಾಟನಿಂದಾಗಿ ಪೂರ್ಣವಾಯಿತು. ಆದರೆ ಬಾಳಿ ಬದುಕಲು ಬೇಕಲ್ಲ ಭಾಗ್ಯ!

1972ರ ಜನವರಿ-ಫೆಬ್ರುವರಿ ಕಳೆದು ಮಾರ್ಚಿನ ಮೂರುವಾರಗಳು ಕಳೆದಿದ್ದವು. 24ನೇ ತಾರೀಖಿನ ಸುಮಾರಿಗೆ ಜವರಾಯ ಲ್ಯಾಂಡ್‌ಮಾರ್ಕಿನ ಆವರಣದಲ್ಲಿ ಸುಳಿದಾಡಲಾರಂಭಿಸಿದ. ಅವಳ ಮೈಯಲ್ಲಿ ನೀರು ತುಂಬಿ ಯಮಯಾತನೆ ಆರಂಭವಾಯಿತು. ಪೂರ್ವ ಸೂಚನೆಯಿಂದಲೋ ಏನೋ ಅವಳು ಮಕ್ಕಾದಿಂದ ಹೊಚ್ಚ ಹೊಸ ಕಫನ್ (ಶವವಸ್ತ್ರ) ಕೂಡ ತರಿಸಿಯಾಗಿತ್ತು. ಈಗ ದಿನ ಹತ್ತಿರವಾಗುತ್ತಿತ್ತು. ಅವಳನ್ನು ಪರೀಕ್ಷಿಸುತ್ತಿದ್ದ ಡಾ. ಷಾ ಮತ್ತು ಡಾ. ಮೋದಿಯವರು ಆಕೆಯನ್ನು ಕೂಡಲೇ ಆಸ್ಪತ್ರೆಗೆ ಸೇರಿಸಲು ಸೂಚಿಸಿದರು. ಮಲಬಾರ್‌ಹಿಲ್‌ನಲ್ಲಿದ್ದ ಒಂದು ಪ್ರತಿಷ್ಠಿತ ಖಾಸಗೀ ನರ್ಸಿಂಗ್ ಹೋಂ ಅನ್ನು ಅವರು ಸೂಚಿಸಿದ್ದರು. ಹೆಸರಿಗೆ ಅದು ಚಾರಿಟಿ ಆಸ್ಪತ್ರೆಯಾಗಿದ್ದರೂ ಕೊಡುವವರು ಹಣ ಕೊಡಲೇಬೇಕಾಗಿದ್ದ ದುಬಾರಿ ಆಸ್ಪತ್ರೆ!

ಕೈ ನಡೆಯುತ್ತಿದ್ದ ಕಾಲದಲ್ಲಿ ಲಕ್ಷ-ಲಕ್ಷ ಸಂಪಾದಿಸಿದ ಮೀನಾಕುಮಾರಿಯ ಬ್ಯಾಂಕ್ ಅಕೌಂಟಲ್ಲಿ ಅಂದು ಇದ್ದ ಹಣ ಕೇವಲ ನೂರು ರೂಪಾಯಿ ಮಾತ್ರ! ಆ ಮಹಾನಗರದ ಥಿಯೇಟರುಗಳಲ್ಲಿ 'ಪಾಕೀಜಾ' ಇನ್ನೂ ನಡೆಯುತ್ತಿದ್ದು ಅಮ್ರೋಹಿ ಸಾಹೇಬರು ಸಹ ಸ್ರಗಟ್ಟಲೆ ಹಣ ಬಾಚುತ್ತಿದ್ದರು. ಇವಳು ಮಾತ್ರ ಭಿಕಾರಿ! ಆ ನಿರ್ಮೋಹಿ ಗಂಡನ ಮುಂದೆ ಹೋಗಿ ಕೈ ಚಾಚಲು ಅವಳ ಅಭಿಮಾನ ಬಿಡಲಿಲ್ಲ. ಪ್ರೇಮಜೀ ಎಂಬೊಬ್ಬ ನಿರ್ಮಾಪಕ ಅವಳ ಫೋನ್ ಕರೆ ಕೇಳಿಯೇ ಹತ್ತು ಸಾವಿರ ರೂಪಾಯಿಗಳ ಒಂದು ಪ್ಯಾಕೆಟ್ ಕಳುಹಿಸಿಕೊಟ್ಟನಂತೆ. ಅದರಲ್ಲಿ ಐದು ಅವಳನ್ನು ನೋಡಿಕೊಳ್ಳುತ್ತಿದ್ದ ಡಾಕ್ಟರರಿಗೆ, ಆಸ್ಪತ್ರೆಯ ವೆಚ್ಚಕ್ಕೊಂದಿಷ್ಟು: ಉಳಿದದ್ದು ಅಕ್ಕತಂಗಿಯರಿಗೆ ಹಂಚಿ ಮೀನಾ ಕೊನೆಯದಾಗಿ ಲ್ಯಾಂಡ್‌ಮಾರ್ಕನ್ನು ನೋಡಿ ಲಿಫ್ಟ್ ಇಳಿದು (28-3-72) ನರ್ಸಿಂಗ್‌ಹೋಂ ಸೇರಲು ನಡೆದಳು.

ಆಸ್ಪತ್ರೆಗೆ ಹೊರಟಿದ್ದಾಳಂತೆ-ಮೀನಾ ಕುಮಾರಿ-ಎಂಬ ಸುದ್ದಿ ಆಗಲೇ ಎಲ್ಲೆಡೆ ಹರಡಿ ಸಹಸ್ರ ಸಂಖ್ಯೆಯಲ್ಲಿ ಅಭಿಮಾನಿಗಳು ಅಲ್ಲಿ ಗುಂಪು ಸೇರಿದ್ದರು. ಆ 'ಗೌರಮ್ಮ' ಎಲ್ಲರಿಗೂ ಖುದಾ ಹಾಫಿಜ್ ಹೇಳಿ ನಡೆದೇ ಬಿಟ್ಟಳು.

ಆಸ್ಪತ್ರೆಯೆ ಈಗವಳ ಮನೆ. ನೋವು ಕಡಿಮೆ ಮಾಡಲು ಹೊಟ್ಟೆಯಿಂದ ಎರಡು ಬಕೆಟ್‌ಗಳಿಗೂ ಮೀರಿ ನೀರು ಹೊರಕ್ಕೆ ತೆಗೆದರಂತೆ! ಮೈ ಎಲ್ಲ ಸೂಜಿಗಳು! ಮೂಗಿಂದ ಆಕ್ಸಿಜನ್ ನಳಿಕೆ..!! ಕಾಲಬೆರಳ ತುದಿಯಿಂದ ಗ್ಲೂಕೋಸ್ ಸೂಜಿ!!! ಒಂದಲ್ಲ-ಎರಡಲ್ಲ, ಆ ಯಾತನೆ!

ಪತಿ ಮಾತ್ರವಲ್ಲದೆ ಇಡೀ ಚಲನಚಿತ್ರ ಜಗತ್ತಿನ ಜನ ಆಸ್ಪತ್ರೆಯಲ್ಲಿ ಸೇರಿದ್ದರು. ಮಾರ್ಚ್ 29-30. ಈ ಎರಡೂ ದಿನಗಳೂ ನರಳಾಟ. 31ರ ಮಧ್ಯಾಹ್ನ 3.20ರ ವೇಳೆಗೆ ಅವಳು ನಿಧನಳಾಗಿ ಕಾಣದಲೋಕಕ್ಕೆ ನಡೆದೇ ಬಿಟ್ಟಳು. ಎಲ್ಲ ಮುಗಿದೇ ಹೋಯಿತು.

ಮುಂದಿನದೆಲ್ಲ ಅಸಹ್ಯ-ತಿರಸ್ಕಾರ ಹುಟ್ಟಿಸುವ ಘಟನೆಗಳು.

ಲಕ್ಷಾಂತರ ರೂಪಾಯಿ ಸಂಪಾದಿಸಲಿಕ್ಕೂ, ಅಯೋಗ್ಯರು ಹಣ-ಅವಕಾಶ ಮಾಡಿಕೊಳ್ಳಲಿಕ್ಕೂ ಕಾರಣಳಾದ ಈಕೆಯ ಶವವನ್ನು ಆಸ್ಪತ್ರೆಯಿಂದ ಬಿಡಿಸಿಕೊಳ್ಳುವ ಮುನ್ನ ಅಲ್ಲಿನ ಬಿಲ್ ಮೂರುವರೆ ಸಾವಿರ ರೂಪಾಯಿಗಳನ್ನು ಯಾರು ತೆರಬೇಕು! ಯಾರೂ ಮುಂದೆ ಬರಲಿಲ್ಲ. ಪತಿ ಅಮ್ರೋಹಿ ಈಗ ಅನಾಸಕ್ತ. ಪ್ರೇಮಿಗಳು-ಪ್ರಣಯಿಗಳು ಅನ್ಯಾಸಕ್ತರು. ಮೀನಾ ಈಗ ಯಾರಿಗೆ ಬೇಕು!

ಕಡೆಗೆ ಅಲ್ಲಿದ್ದ ಡಾಕ್ಟರರೊಬ್ಬರು ತಮ್ಮ ಮನೆಯಾಕೆಗೆ-ಹಲೋ ಹಲೋ-ಮಾಡಿದ್ದುದರ ಪರಿಣಾಮವಾಗಿ ಹಣ ಒದಗಿ ಬಂದು ಅದನ್ನು ತೆತ್ತು ಹೆಣ ಬಿಡಿಸಿಕೊಂಡರು. ತಮಗೆ ಕೊಟ್ಟಿದ್ದ ಐದು ಸಾವಿರವನ್ನು ಅವಳನ್ನು ನೋಡಿಕೊಳ್ಳುತ್ತಿದ್ದ ಡಾಕ್ಟರರು ತಮ್ಮ ಹಿಂದಣ ಬಾಕಿಗೆ ವಜಾ ಹಾಕಿಕೊಂಡು ಬಲು ಜತನದಿಂದ ಜೇಬಿನಲ್ಲಿಟ್ಟುಕೊಂಡಿದ್ದರು ಪಾಪ!

ಶವವನ್ನು ಎಲ್ಲಿ ದಫನ್ ಮಾಡಬೇಕೆಂಬುದಕ್ಕೂ ನೂರೆಂಟು ರೀತಿಯ ತಲಾತಟ್ಟಿಯ ಚರ್ಚೆ. ದಾದರಿನ ರುದ್ರಭೂಮಿಯಲ್ಲೇ ತಾಯ ಪಕ್ಕದಲ್ಲೇ ತನ್ನ ಗೋರಿಯಾಗಬೇಕೆಂದು ಸತ್ತವಳ ಅಂತಿಮ ಆಸೆ. ಆದರೆ ಅಮ್ರೋಹಿ ಸಾಹೇಬರು ತಮ್ಮ ಊರಾದ ಅಮ್ರೋಹಾದಲ್ಲಿ ತಮ್ಮ ತಾಯಿತಂದೆಗಳ ಸಮಾಧಿಯ ಪಕ್ಕದಲ್ಲಿ ಎಂದು ಅವಳ ಇಚ್ಛೆಯಾಗಿತ್ತು ಎಂದು ವಾದ ತೆಗೆದರು. ಅಕ್ಕತಂಗಿಯರದು ಇನ್ನೊಂದು ವಾದ. ಯಾವುದೂ ಬಗೆಹರಿಯದೆ ಕೊನೆಗೆ ಶವವನ್ನು ಮೊದಲು ಅವಳ ಮನೆ ಲ್ಯಾಂಡ್‌ಮಾರ್ಕ್‌ಗೆ ಒಯ್ಯೋಣ; ಅಲ್ಲಿಂದ ಮುಂದೆ-ಮುಂದಿನ, ಮಾತು-ಎಂದು ತೀರ್ಪು ಬಂದು ಮೃತ ಮೀನಾ ಲ್ಯಾಂಡ್‌ಮಾರ್ಕಿಗೇ ಬಂದಳು. ಅಲ್ಲಿ ಅವಳ ಅಂತ್ಯ ವಿಧಿಗಳೆಲ್ಲ ಮುಗಿಯುವ ವೇಳೆಗೆ ಇಡೀ ಮುಂಬಯಿಯ ಚಿತ್ರನಗ



ರಿಯೇ ಅಲ್ಲಿ ನೆರೆದಿತ್ತು. ಕೆಳಕ್ಕೆ ಒಯ್ಯಲು ಶವವನ್ನೆತ್ತಿ ಜನ ಹೆಗಲ ಮೇಲಿರಿಸಿಕೊಳ್ಳುವ ಮುನ್ನ "ಲಾ ಇಲ್ಲಾಹ್ ಇಲ್ಲಲ್ಲಾ.. ಮುಹಮ್ಮದೂನ್ ರಸೂಲ್ ಅಲ್ಲಾ..." ಹೇಳುವ ಹೊತ್ತಿಗೆ ರಾತ್ರಿಯ 8 ಗಂಟೆಯ ಸನಿಹ! ಶವವನ್ನೆತ್ತಿ ಹನ್ನೊಂದನೇ ಮಹಡಿಯಿಂದ ಕೆಳಕ್ಕೆ ನಿಧಾನವಾಗಿ ಇಳಿಸುತ್ತಿರುವಾಗ ಅಲ್ಲೊಂದು ಮಹಡಿಯಿಂದ ಯಾರೋ ಪಾಕೀಜಾದ ಹಾಡಿನ ಟೇಪ್ "ಇನ್ಹೀ ಲೋಗೋನೆ ಲೇಲಿಯಾ ದುಪಟ್ಟಾ ಮೇರಾ" ಹಾಕಿದ್ದರಂತೆ. ಆ ಗೀತೆ ಅಲ್ಲಿದ್ದವರ ಕಿವಿಯ ಮೇಲೆ ಮುಖದ ಮೇಲೆಲ್ಲಾ ರಪ್ಪೆಂದು ಬಡಿಯುತ್ತಿತ್ತು.

ಶವವನ್ನು ಮುಂಬಯಿಯಲ್ಲೇ ಮಜಗಾಂವ್‌ನ ರೆಹ್ಮತಾಬಾಗ್ ಎಂಬಲ್ಲಿನ ದರಿದ್ರ ರುದ್ರಭೂಮಿಯಲ್ಲಿ ಮಣ್ಣು ಮಾಡುವ ತೀರ್ಮಾನವಾಯಿತು. ಕೆಳಗೆ ಮೂರು ನಾಲ್ಕು ಸಾವಿರ ಜನರ ಗುಂಪು-ನೂಕುನುಗ್ಗಲು. ಬೈಜುನ ಗೌರಿಯನ್ನು ಶವವಾಹಕ ರಥಕ್ಕೆ ವರ್ಗಾಯಿಸಲಾಯಿತು. ಅದು ಅತಿಕಷ್ಟದಿಂದ ಆ ಸಾವಿರಾರು ಜನರ ಗುಂಪನ್ನು ಭೇದಿಸಿಕೊಂಡು 'ಬಾಂದ್ರಾ-ಮಾಹೀಮ್-ದಾದರ್, ಬೈಕಳಾ, ಡಾ: ಮಾಸ್ಕರೆ ನಾಸ್ ರೋಡ್. ಇವೆಲ್ಲ ದಾಟಿ 10 ಗಂಟೆಯ ವೇಳೆಗೆ ರುದ್ರಭೂಮಿಯನ್ನು ತಲುಪಿತು. ಅಲ್ಲೂ ಆಗಲೇ ಸಾವಿರಾರು ಸಂಖ್ಯೆಯಲ್ಲಿ ಜನ, ಕಾರು ಮುಂದೆ ಕೂಡ ಚಲಿಸಲಾರದಷ್ಟು ಗದ್ದಲ, ಒತ್ತಡ! ಉತ್ತರ ದಕ್ಷಿಣವಾಗಿ ತೋಡಿದ್ದ ಆ ಗುಂಡಿಯಲ್ಲಿ ಅಮ್ರೋಹಿಯವರ ಇಬ್ಬರು ಗಂಡುಮಕ್ಕಳು ಮುಂಚಿತವಾಗಿ ಇಳಿದು ಎಚ್ಚರಿಕೆಯಿಂದ ಈ ಭೋಟಿ ಅಮ್ಮಿಯ ಶವವನ್ನು ಇಳಿಸಿಕೊಂಡರು. ಬಿಳಿಯ ಶಾಲೊಂದನ್ನು ಹೊದ್ದಿಸಿ ಅವಳ ಮುಖವನ್ನು ಮಕ್ಕಾದ ಕಡೆ ತಿರುಗಿಸಲಾಯಿತು. ಉಳಿದ ಎಲ್ಲರಂತೆ ತಾನೂ ಬಿಳಿಯ ಕರ್ಚೀಫ್ ತಲೆಗೆ ಕಟ್ಟಿಕೊಂಡು, "ಓ ಅಲ್ಲಾ! ಅವಳನ್ನು ಕ್ಷಮಿಸು" ಎಂದು ಪ್ರಾರ್ಥನೆ ಸಲ್ಲಿಸಿ ಧರ್ಮೇದ್ರನೂ ನಮಾಜು ಮಾಡಿದ. ಹೂಗಳಿಂದ ಮುಚ್ಚಿದ ಮೀನಾಕುಮಾರಿಯ ಮೇಲೆ ಈಗ ಅಮ್ರೋಹಿ ಸಾಹೇಬರಿಂದ ಆರಂಭಿಸಿ 'ಒಂದೊಂದು ಮುಷ್ಟಿ ಮಣ್ಣು ಹಾಕಿ ನೆಲಕ್ಕೆ ಬಿದ್ದ ಆ ನಕ್ಷತ್ರವನ್ನು ಮಣ್ಣಿಂದ ಮುಚ್ಚಲಾಯಿತು... ಅಲ್ಲಿಗೆ ಎಲ್ಲ ಮುಗಿದೇ ಹೋಯಿತು. ✶

ನಮ್ಮ ಮೊದಲ ತಂಡದ ಡ್ರಮಾಟಿಕ್ ಟ್ರೈನಿಂಗ್ 1954ರಲ್ಲಿ ಬೆಂಗಳೂರಿನ ನಾಟ್ಯ ಸಂಘ ಥಿಯೇಟರ್ಸ್ ಆಶ್ರಯದಲ್ಲಿ ಗಾಂಧೀ ನಗರದ ದೇವಾಂಗ ಸಂಘದಲ್ಲಿ. ಅದಕ್ಕೆ ಈಗಿನ ಖ್ಯಾತ ನಿರ್ದೇಶಕ ಶ್ರೀ.ಎಂ.ಎಸ್. ಸತ್ಯು ಬಂದಿದ್ದರು. ಒಮ್ಮೆ ಕಡಿಮೆ ಸಂಬಳ ತಿಂದು ಮುಂಬಯಿಯ ಸ್ಟುಡಿಯೊ ಒಂದರಲ್ಲಿ ಕೆಲಸಗಾರರೆಲ್ಲ ಸಂಪು ಹೂಡಿದಾಗ (ಅವರೂ ಅದರಲ್ಲಿದ್ದರೆಂದು ಕೇಳಿದ್ದ ನೆನಪು) ಅದೇ ಫ್ಲೋರ್‌ನಲ್ಲಿ ಮೂರು ಸಾವಿರ ರೂಪಾಯಿ ಸಂಬಳ ಪಡೆಯುತ್ತಿದ್ದ ಮೀನಾಕುಮಾರಿ ಆ ಸ್ಥಳಕ್ಕೆ ಬಂದು ಸಂಪುಗಾರರ ಅಹವಾಲು ಕೇಳಿ ಅವರೊಂದಿಗೆ ತಾನೂ ಸೇರಿ ಅವರಿಗೆ ನ್ಯಾಯ ದೊರಕಿಸಲು ಹೋರಾಡಿ ಸಹಕರಿಸಿದ್ದ ಘಟನೆ ವಿವರಿಸಿದ್ದು ಈಗ ನೆನಪಿಗೆ ಬರುತ್ತಿದೆ.

ಹದಿನೇಳು ವರ್ಷಗಳು ಉರುಳಿವೆ. ನನಗೆ ಅವಳ ನೆನಪು ಮರವೆಯಾಗಿಲ್ಲ, ಆಗದು.

'ಪಾಕೀಜಾ' ಚಿತ್ರದ ಔಟ್‌ಡೋರ್ ತಂಡ ಒಂದು ರಾತ್ರಿ ಒಂದು ಸ್ಥಳದಿಂದ ಇನ್ನೊಂದಕ್ಕೆ ಹೋಗುತ್ತಿದ್ದ ದಾರಿಯಲ್ಲಿ ಡಕಾಯಿತರ ತಂಡದ ಕೈಗೆ ಸಿಕ್ಕಿಬಿತ್ತು. ಕಾರಲ್ಲಿ ಮೀನಾಕುಮಾರಿ ಇದ್ದಾಳೆ ಎಂದು ಗೊತ್ತಾದ ಕೂಡಲೇ ಆ ತಂಡದ ನಾಯಕ ಚಿತ್ರತಂಡಕ್ಕೆ ಕೆಂಪು ಜಮಖಾನೆಯ ಸ್ವಾಗತ ನೀಡಿ ನೃತ್ಯ, ಗಾಯನ, ಭೋಜನ ಮಾಡಿಸಿ ಅತ್ಯಂತ ಗೌರವದಿಂದ ಬಂದೂಕು ಪಹರೆಯಲ್ಲಿ ಗಡೀದಾಟಿಸಿ ಕಳುಹಿಸಿದ್ದ!

ಅವಳ ಓರ್ವ ನೌಕರ ಒಮ್ಮೆ ಅವಳನ್ನು ತನ್ನ ಮನೆಯ ಒಂದು ಸಮಾರಂಭಕ್ಕೆ ಆಹ್ವಾನಿಸಿದ. ಆ ಮನೆಯಿದ್ದದ್ದು ಮುಂಬಯಿಯ ಪ್ರಸಿದ್ಧ ಸೂಳೆಗೇರಿ-ಫೆರಾಸ್‌ರೋಡಿನಲ್ಲಿ! ಅವಳೆಲ್ಲಿ ಬರುತ್ತಾಳೆ! ಎಂದು ಅವನ ಸಂಗಡಿಗರು ಹಂಗಿಸಿ ಭಂಗಿಸುತ್ತಿದ್ದರೆ ಆಕೆ ಬಂದೇ ಬಿಡಬೇಕೆ? ಮೂರುಗಂಟೆ ಕಾಲ ಆ ಮನೆಯಲ್ಲಿದ್ದು ಸಮಾರಂಭದಲ್ಲಿ ಭಾಗವಹಿಸಿ ಹೋದದ್ದೂ ಉಂಟು.



ವೃದ್ಧಾಪ್ಯ

ಸಿಹಿಯಾಗಿರಬೇಕೆ?

''ಅಮ್ಮಾ, ತಾಯೀ....''ಧರ್ಮ ಮಾಡೀ....'' ದೇವಸ್ಥಾನದ ಬಳಿ ಕಿವಿಸೇರಿದ ಹತ್ತಾರು ದನಿಗಳಲ್ಲಿ ಒಂದು ಕ್ಷೀಣ ದನಿ ಆದರೆ ಹೊಸದಾಗಿ ಕೇಳುತ್ತಿರುವ ದನಿ-ನನ್ನ ಗಮನ ಸೆಳೆಯಿತು. ಆ ದನಿ ಎಲ್ಲೋ ಪರಿಚಿತ ಎನಿಸಿತು. ಇಲ್ಲಂತೂ ಅಲ್ಲ, ಹಾಗಾದರೆ ಎಲ್ಲಿ? ಎಂದು ಆ ದನಿಯನ್ನರಸುತ್ತ ಮುಂದೆ ನಡೆದೆ. ಅರೆ.. ಅದೇ ಅಜ್ಜಿ! ವರ್ಷಗಳ ಹಿಂದೆ ನಾನು ನಿತ್ಯ ಮಾತಾಡಿಸುತ್ತಿದ್ದ ಅಜ್ಜಿ.

ಕೂಡಲೇ ನನಗೆ ಆಕೆಯ ಮನೆಯ ಪರಿಸ್ಥಿತಿಯ ಚಿತ್ರ, ಕಣ್ಣೆದುರು ಬಂತು. ಮೊದಲ ಸೊಸೆ ತೀರಿ, ತನ್ನ ಮಗನಿಗೆ ಸ್ವಂತ ತಮ್ಮನ ಮಗಳನ್ನು ತಂದುಕೊಂಡಿದ್ದ ಅಜ್ಜಿಗೆ ಹೊಸ ಸೊಸೆ ಕೊಡುತ್ತಿದ್ದ ಕೀಟಲೆ ನನಗೆ ಗೊತ್ತಿತ್ತು. ಒಂದೆರಡು ಸಲ ಮನೆಯಿಂದ ತನ್ನ ಮೊದಲ ಸೊಸೆಯ ಮಕ್ಕಳೊಂದಿಗೆ ಓಡಿಹೋದ ವಿಷಯವೂ ತಿಳಿದಿತ್ತು. ಮನೆ ಆಕೆಗೆ ನರಕವಾಗಿತ್ತು. ಎಲ್ಲೆಲ್ಲೂ ಸುತ್ತಿ ಸುತ್ತಿ ಕೊನೆಗೆ ಈ ಸ್ಥಳಕ್ಕೆ ಬಂದು ತಲುಪಿದ್ದಳು. ಅಜ್ಜಿಯ ಹರಕು ಮುರುಕು ಮಾತಿನಿಂದ ತಿಳಿದ ಕಥೆಯಿದು: ಅಜ್ಜಿಯ ಕಥೆ ಕೇಳಿದ ನನ್ನ ಹೃದಯ ಭಾರವಾಗಿ, ಕಣ್ಣುಗಳು ತುಂಬಿ ಬಂದವು. ''ಅಜ್ಜಿ ನಿಮಗೆ ಪೆನ್‌ಶನ್ ಬರ್ತಾಯಿತ್ತಲ್ಲ, ಅದನ್ಯಾಕೆ ತೆಗೆದುಕೊಳ್ಳಲಿಲ್ಲ?'' ಅಂದೆ. ಮಗನಿಗಾಗಿ ಬರುತ್ತಿದ್ದುದು ತನಗಾಗಿ ಅಲ್ಲ ಎಂಬುದು ಆಕೆಯ ಕಲ್ಪನೆ. ''ಕರ್ಮಂಡು

ನಾಗರತ್ನ


ಹೋಗೋಕ್ಕೆ ಅವನೇ ಇರಲಿಲ್ಲವಲ್ಲ, ಹೇಗೆ ಅದನ್ನು ತೆಗೆದುಕೊಳ್ಳೋದು?'' ಎಂದು ಅಸಹಾಯಕತೆ ವ್ಯಕ್ತಪಡಿಸಿದಳು. ಬಹುಶ: ಈಕೆಯ ಹೆಸರಿನಲ್ಲಿ ಹಣ ಪಡೆಯಲು ಆತ ಬೇರೆಯೇ ವ್ಯವಸ್ಥೆಯನ್ನು ಮಾಡಿಕೊಂಡಿದ್ದಿರಬಹುದು.

ನಮ್ಮ ದೇಶದಲ್ಲಿ ಈ ಅಜ್ಜಿಯಂತಹ ನತದೃಷ್ಟರು ಅದೆಷ್ಟು ಮಂದಿಯೋ. ಈ ಅಜ್ಜಿಯ ಕಷ್ಟ-ಕಾರ್ಪಣ್ಯಕ್ಕೆ ಚಿಕ್ಕಂದಿನಲ್ಲಿ ಸರಿಯಾದ ಯೋಜನೆ ಮಾಡದಿದ್ದುದೇ ಕಾರಣ. 1981ರ ಜನಗಣತಿಯ ಪ್ರಕಾರ ಭಾರತದ ಜನಸಂಖ್ಯೆ 685,1846192, ಇದರಲ್ಲಿ ಶೇಕಡಾ 51ರಷ್ಟು ಜನ ಯುವಕರು ಹಾಗೂ ಮಧ್ಯವಯಸ್ಕರು. ಈ ಮಧ್ಯವಯಸ್ಕರು ಹಾಗೂ ಯುವಕರು ಮುಂದೆ 15-20 ವರ್ಷಗಳಲ್ಲಿ ವೃದ್ಧಾಪ್ಯ ತಲುಪಿರುತ್ತಾರೆ. ಅಥವಾ ವೃದ್ಧಾಪ್ಯದ ಅಂಚಿನಲ್ಲಿರುತ್ತಾರೆ. ಅಂದಮೇಲೆ ಇಪ್ಪತ್ತೊಂದನೆ ಶತಮಾನಕ್ಕೆ ನಾವು ಕಾಲಿಡುವಾಗ ವೃದ್ಧರ ಸಂಖ್ಯೆ ಇಂದಿಗಿಂತ ಹೆಚ್ಚಿಗೆ ಇರುತ್ತದೆ.

ಇಂದಿನ ವೃದ್ಧರಿಗಿಂತ ಮುಂದಿನ ವೃದ್ಧರ ಜೀವನ ಮತ್ತಷ್ಟು ದುರ್ಭರವಾಗುವ ಸಾಧ್ಯತೆಯೇ ಹೆಚ್ಚು. ಹಿಂದೆ ಮಕ್ಕಳನ್ನು ಪಡೆಯುವಲ್ಲಿ ಮಿತಿಯಿರಲಿಲ್ಲ. ಹಾಗಾಗಿ ಒಂದೊಂದು ಮನೆಯಲ್ಲೂ ಎಂಟ್ಹತ್ತು ಮಕ್ಕಳಿರುತ್ತಿದ್ದರು. ಕುಟುಂಬಕ್ಕೆ ಎಷ್ಟೇ ಆದಾಯವಿದ್ದರೂ ಸೌಲಭ್ಯ ಹತ್ತಾರು ಮಕ್ಕಳಲ್ಲಿ ಹಂಚಿಹೋಗುತ್ತಿದ್ದುದರಿಂದ, ಬೇರೆ ಸಮಸ್ಯೆ ಹೇಗಾದರೂ ಇರಲಿ, ಅನುಸರಣೆ ಹಾಗೂ ಹೊಂದಾಣಿಕೆಯ ಗುಣ ಚಿಕ್ಕಂದಿನಲ್ಲಿಯೇ ಬೆಳೆದಿರುತ್ತಿತ್ತು. ಇಂದಿನ ಮಧ್ಯವಯಸ್ಕರು ತಮ್ಮ ಹಿಂದಿನ ಕಷ್ಟಕಾರ್ಪಣ್ಯಗಳನ್ನು ನೆನಪಿಗೆ ತಂದುಕೊಂಡು, ಮಕ್ಕಳಿಗೆ ಆದಷ್ಟೂ ಸೌಲಭ್ಯ ಕೊಟ್ಟು, ಸುಖವಾಗಿ ಬೆಳೆಸುತ್ತಿದ್ದಾರೆ. ಜೊತೆಗೆ ವಿಭಕ್ತ ಕುಟುಂಬ ಪದ್ಧತಿ ವ್ಯಾಪಕವಾಗಿ ಬೆಳೆದಿದೆ. ಅದರ ಪರಿಣಾಮವಾಗಿ ಮೂರನೇ ವ್ಯಕ್ತಿಯ ಇರವನ್ನು ಅವರಾಗಲೇ ಸಹಿಸದೆ ಇರುವ ಮಟ್ಟವನ್ನು ಮುಟ್ಟಿದ್ದಾರೆ. ಮುಂದೆ ಅವರು ಸಂಸಾರದಲ್ಲಿ ಗಂಡ, ಹೆಂಡತಿ, ತಮ್ಮ ಮಕ್ಕಳನ್ನು ಬಿಟ್ಟು ಮತ್ತಾರನ್ನೂ ಇಷ್ಟಪಡದೇಹೋಗಬಹುದು.


ಆದುದರಿಂದ ಇಂದಿನ ಮಧ್ಯವಯಸ್ಕರು ಮುಂದಿನ ಸಮಾಜಕ್ಕೆ, ಮಕ್ಕಳಿಗೆ ಹೊರೆಯಾಗದಂತೆ ಇರಬೇಕಾದರೆ ತಮ್ಮ ಜೀವನಕ್ಕೊಂದು ಯೋಜನೆ ಮಾಡಿಟ್ಟುಕೊಳ್ಳುವುದು ಒಳ್ಳೆಯದು. ಜೊತೆಗೆ ಇಂದಿನ ಮಕ್ಕಳಿಗೆ ವೃದ್ಧಾಪ್ಯ ಮುಂದೆ ಒಂದು ಸಾಮಾಜಿಕ ಪಿಡುಗಾಗಿ ಪರಿಣಮಿಸಲು ಅವಕಾಶ ಕೊಡದಂತೆ ಎಚ್ಚರಿಕೆ ವಹಿಸುವ ಶಿಕ್ಷಣ ಒದಗಿಸುವುದು ಅತ್ಯವಶ್ಯಕ.

ಮನುಷ್ಯನ ಜೀವನವನ್ನು ಪ್ರಮುಖವಾಗಿ ಐದು ಘಟ್ಟಗಳಾಗಿ ವಿಂಗಡಿಸಬಹುದು: ಬಾಲ್ಯ, ಯೌವ್ವನ, ಮಧ್ಯವಯಸ್ಸು, ವೃದ್ಧಾಪ್ಯ ಹಾಗೂ ಮುಪ್ಪು. ಹುಟ್ಟಿನಿಂದ 18 ವರ್ಷಗಳ ಒಳಗಿನ ಸಮಯವನ್ನು ಬಾಲ್ಯವೆಂದು ಪರಿಗಣಿಸಬಹುದು. 14ರಿಂದ 18ರ ನಡುವಿನ ಅವಸ್ಥೆಯನ್ನು ಕಿಶೋರಾವಸ್ಥೆ ಎಂದೂ ಕರೆದರೂ, ಇತ್ತ ಬಾಲ್ಯವೂ ಅಲ್ಲದ ಅತ್ತ ಯೌವ್ವನವೂ ಅಲ್ಲದ ಪರಿಸ್ಥಿತಿ; ಆದುದರಿಂದ ಪ್ರಬುದ್ಧತೆ ಪಡೆದಿಲ್ಲದ ಕಾರಣ ಅದನ್ನು ಬಾಲ್ಯಕ್ಕೆ ಸೇರಿಸುವುದು ಉಚಿತ. 18ರಿಂದ 40ರವರೆಗಿನ ವಯಸ್ಸನ್ನು ಯೌವ್ವನ ಎಂದೂ, 40ರಿಂದ 60ರವರೆಗಿನ ವಯಸ್ಸನ್ನು ಮಧ್ಯವಯಸ್ಸು ಎಂದೂ, 60ರಿಂದ 75ರ ವಯಸ್ಸನ್ನು ವೃದ್ಧಾಪ್ಯ ಎಂದೂ 75ರ ನಂತರದ ವಯಸ್ಸನ್ನು ಮುಪ್ಪು ಎಂದೂ ಕರೆಯಬಹುದು.



ಬಾಲ್ಯ ಹಾಗೂ ನಂತರದ ನಾಲ್ಕಾರು ವರ್ಷಗಳವರೆಗೆ ಮಕ್ಕಳನ್ನು ಸಾಕುವ ಜವಾಬ್ದಾರಿ ಸಂಪೂರ್ಣ ತಂದೆ-ತಾಯಿಯರದು. ಸಾಮಾನ್ಯವಾಗಿ 25ರಿಂದ 60 ವರ್ಷಗಳವರೆಗೆ ಹೆಂಗಸರೇ ಆಗಲಿ, ಗಂಡಸರೇ ಆಗಲಿ ತಮ್ಮ ಕಾಲಮೇಲೆ ತಾವು ನಿಲ್ಲುವ ಸಾಮರ್ಥ್ಯ ಹೊಂದಿರುತ್ತಾರೆ. 60ರಿಂದ 75ರ ವಯಸ್ಸು ಮಾನವನ ಜೀವನದ ಸ್ಥಿತ್ಯಂತರದ ಕಾಲ. ಈ ಕಾಲದಲ್ಲಿ ಮನುಷ್ಯರನ್ನು ನಾನಾ ರೀತಿಯ ಕಾಯಿಲೆಗಳು, ಮಾನಸಿಕ ಒತ್ತಡಗಳು ಕಾಡುತ್ತವೆ. ಜವಾಬ್ದಾರಿಯೆಲ್ಲಾ ಮುಗಿದಿದ್ದರೂ, ಯಜಮಾನಿಕೆ ಕಳೆದುಕೊಳ್ಳುವ ಭಯ, ತನ್ನ ಮಾತಿಗೆ ಯಾರೂ ಬೆಲೆಕೊಡುವುದಿಲ್ಲವೆಂಬ ಹತಾಶೆ ಕಾಡುತ್ತವೆ. ಇದೇ ಸಮಯದಲ್ಲಿ ಅತಿ ಅಭಿಮಾನಿಗಳಾದ ಕೆಲವರು ಅಳಿದುಳಿದ ಶಕ್ತಿಯನ್ನು ಕ್ರೋಢೀಕರಿಸಿ 'ನನ್ನ ಅನ್ನ ನಾನು ದುಡಿದು ತಿನ್ನುತ್ತೇನೆ' ಎಂದು, ಹೇಳದೆ ಕೇಳದೆ ಮನೆ ಬಿಟ್ಟು ಹೋಗುವುದೂ ಉಂಟು. ಮುಂದೆ ತಮ್ಮ ಸ್ಥಿತಿ ಏನಾಗಬಹುದು? ಎಂಬ ವಿವೇಚನೆ ಅವರಿಗೆ ಇರುವುದಿಲ್ಲ. ಇಂತಹವರಲ್ಲಿ ಸಾಮಾನ್ಯವಾಗಿ ಗಂಡಸರೇ ಹೆಚ್ಚು.

ಸಾಮಾನ್ಯವಾಗಿ ಹೆಚ್ಚು ಮಂದಿ ವೃದ್ಧರು 60ರಿಂದ 75ರ ವಯಸ್ಸಿನ ಸಂಧಿ ಸಮಯದಲ್ಲಿ ಮರಣ ಹೊಂದುತ್ತಾರೆ. ಮುಪ್ಪನ್ನು ತಲುಪುವವರ ಸಂಖ್ಯೆ ಕಡಿಮೆ. ಕಾಯಿಲೆ, ಕಷ್ಟ-ಕಾರ್ಪಣ್ಯಗಳ ಕಾರಣದಿಂದ ಕೆಲವರಿಗೆ ವೃದ್ಧಾಪ್ಯವೇ ಮುಪ್ಪಾಗಿ ಪರಿಣಮಿಸುತ್ತದೆ. ವೃದ್ಧಾಪ್ಯ ಹಾಗೂ ಮುಪ್ಪಿನಲ್ಲೂ ಅಲ್ಲೊಬ್ಬರು, ಇಲ್ಲೊಬ್ಬರು ಎಂಬಂತೆ ಬೆರಳೆಣಿಕೆಯಷ್ಟು ಮಂದಿ ದೈಹಿಕ ಹಾಗೂ ಮಾನಸಿಕ ಸಮತೋಲನವನ್ನು ಕಾಯ್ದುಕೊಂಡಿರುವದನ್ನು ಕಾಣಬಹುದು. ಒಟ್ಟಿನಲ್ಲಿ ಹೇಳಬೇಕೆಂದರೆ, ಈ ವೃದ್ಧಾಪ್ಯ ಮತ್ತು ಮುಪ್ಪು, ಮುಂದಾಲೋಚನೆ ಇಲ್ಲದವರಿಗೆ, ತಮಗೆ ತಾವೇ ಹಾಗೂ ಕುಟುಂಬದ ಇತರ ಸದಸ್ಯರಿಗೆ ಕಿರಿಕಿರಿ ಉಂಟು ಮಾಡುವ ಸಮಯ. ಕಣ್ಣು




ಮಂಜಾಗುವುದು, ಕಿವಿ ಕೇಳಿಸದಿರುವುದು, ಮುಂತಾದ ಕಾಯಿಲೆಗಳು ಮುದುಕರಿಗೆ ಹಾಗೂ ಅವರನ್ನು ನೋಡಿಕೊಳ್ಳುವವರಿಗೆ ಸಮಸ್ಯೆಯಾಗಿ ಪರಿಣಮಿಸುತ್ತವೆ. ಈ ಸಮಸ್ಯೆಗಳಿಗೆ ಪೂರ್ಣ ಪರಿಹಾರವಿಲ್ಲ. ಆದರೆ ಮನೆಯ ಸದಸ್ಯರ ಸಹಕಾರ ಹಾಗೂ ಸಹನೆಗಳೇ ಈ ಸಮಸ್ಯೆಯನ್ನು ಪರಿಹರಿಸಬೇಕು.

ವೃದ್ಧಾಪ್ಯದ ಹಾಗೂ ಮುಪ್ಪಿನ ಸಮಸ್ಯೆಗಳನ್ನು ಆಳವಾಗಿ ವಿವೇಚಿಸಿ ನೋಡಿದರೆ, ಪ್ರತಿಯೊಬ್ಬ ಮಧ್ಯ ವಯಸ್ಸಿನ ವ್ಯಕ್ತಿಯೂ ಹೆಣ್ಣು ಗಂಡೆಂಬ ಭೇದವಿಲ್ಲದೆ, ಕಾಲ ದೇಶಕ್ಕೆ ಅನುಗುಣವಾಗಿ, ಮುಪ್ಪು ಹಾಗೂ ವೃದ್ಧಾಪ್ಯ ಎದುರಿಸಲು ಒಂದು ಯೋಜನೆ ತಯಾರಿಸಿಕೊಳ್ಳುವುದು ಅತ್ಯವಶ್ಯಕ. ವೃದ್ಧರಾಗುವವರು ಹಾಗೂ ಮುಪ್ಪಾಗುವವರನ್ನು ಸ್ಥೂಲವಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದು: ಸ್ವಂತ ಉದ್ಯೋಗ ಹೊಂದಿ ಅಥವಾ ವ್ಯವಸಾಯವನ್ನು ಉದ್ಯೋಗವಾಗಿ ಮಾಡಿಕೊಂಡವರು ವೃದ್ಧರಾಗಿರುವವರು ಹಾಗೂ ಸರ್ಕಾರಿ ಸೇವೆಯಲ್ಲಿದ್ದು ನಿವೃತ್ತರಾಗಿರುವವರು. ಮೊದಲ ಗುಂಪಿನವರಿಗೆ-ದುಡಿಯುವ ಶಕ್ತಿ ಹಾಗೂ ಇಚ್ಛೆ ಇರುವವರಿಗೆ ತಮಗೆ ಇಷ್ಟ ಬಂದಷ್ಟು ದಿನ ದುಡಿಯುವ ಅವಕಾಶವಿರುತ್ತದೆ. ಹಾಗಾಗಿ ಮುಪ್ಪು ಇವರಿಗೆ ಗರೆ ಕೊಯ್ದಂತೆ ಇಂತಿಷ್ಟೇ ವಯಸ್ಸಿಗೆ ಎಂದು ಬಂದು ಅಡರುವುದಿಲ್ಲ. ಹಾಗಾಗಿ ವೃದ್ಧಾಪ್ಯ ದೇಹವನ್ನು ಆಕ್ರಮಿಸುತ್ತಾ ಬಂದರೂ ಕುಳಿತಲ್ಲಿಯೇ ಕುಳಿತು ಕಾಲ ಕಳೆಯುವುದೇ ಒಂದು ದೊಡ್ಡ ಸಮಸ್ಯೆ ಎನಿಸುವುದಿಲ್ಲ. ಇವರಿಗೆ ಪ್ರಕೃತಿಯೊಡನೆ ಸ್ಪಂದಿಸುತ್ತಾ ಕಾಲ ಕಳೆ

ಯುವ ಅವಕಾಶ ದೊರೆಯುತ್ತದೆ. ಅಥವಾ ಸ್ವಂತ ಉದ್ಯೋಗವಾದರೆ ಇಷ್ಟ ಬಂದಷ್ಟು ಸಮಯ ದುಡಿಯುವ ಅವಕಾಶವಿರುತ್ತದೆ. ಅತೃಪ್ತರಾಗಿ, ಮಾನಸಿಕ ಅಶಾಂತಿಯಿಂದ ಇವರು ತೊಳಲಬೇಕಾಗಿಲ್ಲ. ಆದರೂ ತಮ್ಮ ಜೀವನಕ್ಕಾಗುವಷ್ಟು ಆಸ್ತಿಯನ್ನು ತಮ್ಮ ಸ್ವಾಧೀನದಲ್ಲೇ ಉಳಿಸಿಕೊಳ್ಳುವುದು ಬುದ್ಧಿವಂತಿಕೆಯ ಲಕ್ಷಣ. ಏಕೆಂದರೆ ಕಾಲಮಾನ, ಪರಿಸ್ಥಿತಿಗಳು ಒಂದೇ ಸಮನಾಗಿರುವುದಿಲ್ಲ.

ಎರಡನೆಯ ಗುಂಪಿನ ಜನ, ಎಂದರೆ ಸರಕಾರಿ ಅಥವಾ ಇನ್ನಾವುದೇ ವೃತ್ತಿಯಿಂದ ನಿವೃತ್ತರಾದ ಜನ. ಇವರಿಗೆ ನಾನಾ ವಿಧದ ಸಮಸ್ಯೆಗಳು ಎದುರಾಗುತ್ತವೆ. ಇಂಥವರಲ್ಲಿ ಹೆಚ್ಚು ಮಂದಿ ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಅತ್ತಿತ್ತ ನೋಡದಂತೆ, ಕಡಿವಾಣ ಹಾಕಿದ ಕುದುರೆಯಂತೆ ಸಂದಿರುತ್ತದೆ ಇವರ ಜೀವನ. ಮುಂದೆಯೂ ತಾವೇ ಕಟ್ಟಿಸಿದ, ಅಥವಾ ಮಗ ಕಟ್ಟಿಸಿದ, ಇಲ್ಲದಿದ್ದರೆ ಬಾಡಿಗೆ ಮನೆಯ ನಾಲ್ಕು ಗೋಡೆಗಳೊಳಗೆ ಇವರ ಜೀವನ ನಡೆಯಬೇಕಾಗುತ್ತದೆ. ಇಂತಹ ವ್ಯಕ್ತಿಗಳು ಒಂದು ಯೋಜನೆ ತಯಾರಿಸಿಟ್ಟುಕೊಳ್ಳದಿದ್ದರೆ, ಅವರಿಗೆ ಮುಪ್ಪು ಒಂದು ದುರ್ಭರ ಸಮಸ್ಯೆಯಾಗಿ ಪರಿಣಮಿಸುತ್ತದೆ. ಇಂಥವರಿಗೆ ಆರ್ಥಿಕ ಸ್ವಾವಲಂಬನೆಯ ಯೋಜನೆ ಹಾಗೂ ಕಾಲ ಕಳೆಯಲು ಯಾವುದಾದರೂ ಹವ್ಯಾಸ ಎರಡರ ಅವಶ್ಯಕತೆಯೂ ಇರುತ್ತದೆ. ಇಂತಹ ಕುಟುಂಬದ ಮಕ್ಕಳು ಸಾಮಾನ್ಯವಾಗಿ ವೃದ್ಧ ತಂದೆ ತಾಯಿಗಳ ಆರ್ಥಿಕ ಆದಾಯದ ಮೇಲೆ ಅವಲಂಬಿಗಳಾಗಿರುವುದಿಲ್ಲ. ಆದರೆ ಹೆಚ್ಚಿನ ಮಂದಿಗೆ ತಮ್ಮ




ಸಂಪಾದನೆ ತಮ್ಮ ಸಂಸಾರಕ್ಕೇ ಸಾಲದಿಷ್ಟಿರುತ್ತದೆ. ತಮ್ಮನ್ನು ಹೆತ್ತು, ಹೊತ್ತು ಬೆಳೆಸಿದ ತಂದೆ-ತಾಯಿಯರೇ ಆದರೂ, ಅವರ ಹೊಣೆ ಭಾರವೆನಿಸುತ್ತದೆ. ಇನ್ನೂ ಕೆಲವರಿಗೆ, ಇರುವ ಮೂರ್ನಾಲ್ಕು ಮಕ್ಕಳಲ್ಲಿ ಯಾರು ಅವರ ಹೊರೆ ಹೊರಬೇಕೆಂದು ಸಮಸ್ಯೆಯಾಗುತ್ತದೆ. ಮತ್ತೆ ಕೆಲವರಿಗೆ ಪಿತ್ರಾರ್ಜಿತವಾಗಿ ಬರುವ ಹಣ ವಯಸ್ಸಿರುವಾಗಲೇ ದೊರೆತರೆ ಯಾವುದಾದರೂ ಆದಾಯ ಬರುವ ವ್ಯವಹಾರದಲ್ಲಿ ತೊಡಗಿಸುವ ಹವಣಿಕೆಯಿರುತ್ತದೆ.

ವೃದ್ಧಾಪ್ಯ ಸಮೀಪಿಸುತ್ತಿದ್ದಂತೆಯೆ 'ನನ್ನಿಂದ ಯಾರಿಗೂ ಪ್ರಯೋಜನವಿಲ್ಲ' ಎಂಬ ಮಾನಸಿಕ ವ್ಯಥೆ ಕಾಡತೊಡಗುತ್ತದೆ. ಅದರ ಜೊತೆಗೆ ಆರ್ಥಿಕ ಅವಲಂಬನೆಯೂ ಸೇರಿಕೊಂಡರೆ ಮತ್ತೂ ಕಷ್ಟ. ಹಿಂದೆ ಎಷ್ಟೇ ಖರ್ಚು, ಸಹಾಯ ಒದಗಿಸಿದ್ದರೂ ಅದು ಕರ್ತವ್ಯದ ಪಟ್ಟಿಯಲ್ಲಿ ಸೇರಿ ಹೋಗುತ್ತದೆ. ಆದುದರಿಂದ ಜೀವನಾವಶ್ಯಕ ವಸ್ತುಗಳಿಗಾಗಿ ಬೇರೆಯವರನ್ನು ಕೇಳುವುದು ಕಷ್ಟದ ಕೆಲಸ. ವೃದ್ಧಾಪ್ಯದಲ್ಲಿ ಆರ್ಥಿಕ ಅವಲಂಬನೆಗೆ ಗುರಿಯಾಗದೇ ಇರಬೇಕಾದರೆ, ವ್ಯವಸ್ಥಿತವಾಗಿ ದೊರೆಯುವ ಮಾಸಿಕ ಆದಾಯದ ಶೇ.10 ರಷ್ಟು ಭಾಗವನ್ನು, ಸಾಧ್ಯವಾದರೆ ಇನ್ನೂ ಸ್ವಲ್ಪ ಹೆಚ್ಚು-ಉಳಿತಾಯ ಮಾಡಿ, ಗಂಡಸಾದರೆ ತಮ್ಮ ಹಾಗೂ ಹೆಂಡತಿಯ, ಹೆಂಗಸಾದರೆ ತಮ್ಮ ಹಾಗೂ ಗಂಡನ ಹೆಸರಿನಲ್ಲಿ ಇಟ್ಟುಕೊಳ್ಳಬೇಕು. ವಾಸ್ತವ್ಯಕ್ಕೆ ತಮ್ಮದೇ ಮನೆ ಏನಾದರೂ ಇದ್ದರೆ ಯಾವುದೇ ಒತ್ತಡಕ್ಕೆ ಮಣಿಯದೆ ಸಾಯುವವರೆಗೆ ತಮ್ಮ ಹೆಸರಿನಲ್ಲೇ ಅದನ್ನು ಇಟ್ಟುಕೊಳ್ಳಬೇಕು. ಏಕೆಂದರೆ ಮುಂದೆ ಅಜ್ಜಗಾದ ಸ್ಥಿತಿ ಒದಗಬಾರದಲ್ಲ! ಮಕ್ಕಳಿಗೆ ಬೇಸರವಾಗುತ್ತದೆಂಬ ಯೋಚನೆ ಬೇಡ. ಏಕೆಂದರೆ ನಿಮ್ಮ ಮರಣದ ನಂತರ ಅದು ಅನಾಯಾಸವಾಗಿ ಮಕ್ಕಳಲ್ಲಿ ಸಮಾನವಾಗಿ ಹಂಚಿಕೆಯಾಗುತ್ತದೆ. ನಿಮ್ಮ ಸಂಪಾದನೆಯ ಒಡವೆ, ವಸ್ತುಗಳೇನಾದರೂ ಇದ್ದರೆ, ಅಯ್ಯೋ, ವಯಸ್ಸಾಯ್ತು ನನಗಿ

ನ್ನೇಕೆ? ಎಂಬ ಉದಾಸೀನ ಖಂಡಿತ ಬೇಡ. ಹಾಗೆಂದಾಕ್ಷಣ ಜಿಪುಣತನ ಮಾಡಿ ಮಕ್ಕಳು, ಸೊಸೆಯಂದಿರ ಅವಹೇಳನಕ್ಕೆ ಗುರಿಯಾಗಬೇಡಿ. ನಿಮಗೆ ಬರುವ ಪೆನಶನ್ ಹಣ ಮತ್ತು ನೀವು ವ್ಯವಸ್ಥಿತವಾಗಿ ಬಡ್ಡಿ ಬರುವಂತೆ ಬ್ಯಾಂಕಿನಲ್ಲಿ ತೊಡಗಿಸಿರುವ ಬಡ್ಡಿಯ ಹಣ, ಇವುಗಳನ್ನು ನಿಗದಿತವಾಗಿ ತಿಂಗಳಿಗೊಮ್ಮೆ ಮಕ್ಕಳಿಗೆ ಕೊಟ್ಟುಬಿಡಿ. ಯಾವ ಮಕ್ಕಳೊಡನೆ ಇರಬಯಸುತ್ತೀರೋ ಅವರಿಗೆ ಆ ಹಣ ಸಂದಾಯವಾಗುವಂತೆ ಎಚ್ಚರ ವಹಿಸಿ. ನಿಮ್ಮಿಬ್ಬರ ಅಥವಾ ಒಬ್ಬರಾದರೆ ಒಬ್ಬರ ಜೀವನಕ್ಕೆ ಸಾಲುವಂತಿರಲಿ ನೀವು ಕೊಡುವ ಹಣ. ಹೀಗೆ ಸುವ್ಯವಸ್ಥಿತ ಯೋಜನೆಗಳಿಂದ ನಿಮ್ಮ ಜೀವನವನ್ನು ನೀವು ರೂಪಿಸಿಕೊಂಡರೆ ಆರ್ಥಿಕವಾಗಿ ಅವಲಂಬಿಯಾಗಿದ್ದೇನೆಂಬ ಅನಾಥ ಪ್ರಜ್ಞೆ ನಿಮ್ಮನ್ನು ಕಾಡುವುದಿಲ್ಲ. ಮಕ್ಕಳು ಸೊಸೆಯಂದಿರೂ, ಅವರಿಗೆ ನೀವು ಹೊರೆಯಾಗಿಲ್ಲ, ಎಂಬ ಕಾರಣದಿಂದ ಗೌರವ, ಆದರ ತೋರುತ್ತಾರೆ. ಸಮಾಜದಲ್ಲೂ ಪ್ರತಿಷ್ಠೆ ಉಳಿಯುತ್ತದೆ. ಎಲ್ಲದಕ್ಕಿಂತ ಹೆಚ್ಚಾಗಿ ಮಕ್ಕಳಲ್ಲೇ ಆಗಲಿ, ಯಾರಲ್ಲೇ ಆಗಲಿ, ಊಟ, ಬಟ್ಟೆಬರೆ ಔಷಧಗಳಿಗೆ ದೈನ್ಯದಿಂದ ಕಾಯುವ ಹೀನ ಸ್ಥಿತಿ ತಪ್ಪುತ್ತದೆ.

ಆರ್ಥಿಕ ಸ್ವಾತಂತ್ರ್ಯವೊಂದರಿಂದಲೇ ನೆಮ್ಮದಿಯ ಜೀವನ ಸಾಗಿಸಲು ಸಾಧ್ಯವಾಗುವುದಿಲ್ಲ. ಜೊತೆಗೆ ಉಳಿದ ಕಾಲವನ್ನು ಅರ್ಥಪೂರ್ಣವಾಗಿ ಕಳೆಯಲು ಒಂದು ಒಳ್ಳೆಯ ಹವ್ಯಾಸದ ಅವಶ್ಯಕತೆಯಿರುತ್ತದೆ. 'ಊರು ಹೋಗು ಎನ್ನುತ್ತಿದೆ. ಕಾಡು ಬಾ ಎನ್ನುತ್ತಿದೆ. ಹವ್ಯಾಸ ಕಟ್ಟಿಕೊಂಡು ಯಾವ ಮಹಾಸಾಧನೆ ಮಾಡಬೇಕಿದೆ ಜೀವನದಲ್ಲಿ?' ಎಂಬ ಉದಾಸೀನ ಖಂಡಿತ ಬೇಡ. ಇಷ್ಟವಿರಲಿ, ಇಲ್ಲದಿರಲಿ ಸಾವು ಬಂದೊದಗುವವರೆಗೆ ಕಾಲ ತಳ್ಳಲೇಬೇಕಲ್ಲ? ಆ ಕಾಲವನ್ನು ಹೊರೆಯಾಗಿಸಿಕೊಳ್ಳುವ ಬದಲು ಹಗುರಾಗಿಸಿಕೊಳ್ಳುವುದು ದೈಹಿಕ ಹಾಗೂ ಮಾನಸಿಕ ದೃಷ್ಟಿಗಳಿಂದ ಒಳ್ಳೆಯದು.



ನಮ್ಮ ಮನೆಯ ಹತ್ತಿರ ಒಂದು ಹವ್ಯಾಸಿ ಕಲಾತಂಡ ಇದೆ. ಹಿಂದೂಸ್ಥಾನಿ ಸಂಗೀತ ಅವರ ಹವ್ಯಾಸ. ಮೊನ್ನೆ ಮೊನ್ನೆ ಈ ತಂಡದವರ ಜೊತೆ ಮನೋರಂಜನೆ ಪಡೆಯುವ ಅವಕಾಶ ನನಗೂ ದೊರಕಿತ್ತು. ಆ ಕಲಾವಿದರು ಒಂದೊಂದು ದಿನ ಒಬ್ಬೊಬ್ಬರ ಮನೆಯಲ್ಲಿ ಸೇರುತ್ತಾರೆ. ಅಲ್ಲಿ ನನ್ನ ಗಮನ ಸೆಳೆದ ಅಂಶವೆಂದರೆ ಸುಮಾರು 70-75ರ ವಯಸ್ಸಿನ ವೃದ್ಧರಿಬ್ಬರ ಸ್ಫೂರ್ತಿ. ಕಣ್ಣಿಗೆ ಕನ್ನಡಕ, ಕಿವಿಗೆ ಕೇಳಿಸುವ ಯಂತ್ರ ಹಾಕಿಕೊಂಡು ವಯಸ್ಸಾಗಿದ್ದರೂ ಅದನ್ನೆಲ್ಲಾ ಮರೆತು ಸಂಗೀತ ಕಚೇರಿಗೆ ತಬಲ ಬಾರಿಸುತ್ತಿದ್ದರು. ಅನೇಕ ಶಿಷ್ಯರಿಗೆ ಮನೋರಂಜನೆಯ ಜೊತೆಗೆ ತರಬೇತಿ ಆಗುತ್ತಿತ್ತು. ಅವರ ಮಧ್ಯೆ ಹೆಂಡತಿ-ಸುಮಾರು 70 ವಯಸ್ಸಿನಾಕೆ. ಮಧ್ಯೆ ಅವರೂ ಒಂದೊಂದು ಹಾಡು ಹಾಡುತ್ತಿದ್ದರು. ಅವರೇನೂ ಕಚೇರಿ ನಡೆಸಿ ರೇಡಿಯೋ, ಟಿ.ವಿ. ಎಂದು ಪ್ರಸಿದ್ಧಿ ಪಡೆದವರಲ್ಲ. ಪ್ರಸಿದ್ಧಿಗಿಂತ ಜೀವನದಲ್ಲಿ ನೆಮ್ಮದಿ ಮುಖ್ಯ ಅವರಿಗೆ. ಜೀವನದ ಬಗೆಗಿನ ಅವರ ಆ ಲವಲವಿಕೆ ಅನುಕರಣೀಯವಾಗಿ ಕಂಡಿತು. ಅವರ ಹಾಗೆ ಪ್ರತಿಯೊಬ್ಬರೂ ತಮಗಿಷ್ಟವಾದ ಅಥವಾ ತಮಗಾಗುವ ಒಂದೊಂದು ಹವ್ಯಾಸ ಬೆಳೆಸಿಕೊಂಡಿದ್ದಾದರೆ. ವೃದ್ಧಾಪ್ಯದಲ್ಲಿ ಅದು ಅನುಕೂಲಕ್ಕೆ ಬರುತ್ತದೆ. ಜೀವನವನ್ನು ಅರ್ಥಪೂರ್ಣವಾಗಿಸಿಕೊಳ್ಳಲು ಸಹಾಯಕವಾಗುತ್ತದೆ.

ವೃದ್ಧಾಪ್ಯದಲ್ಲಿ ಕಾಲ ಕಳೆಯಲು ಸಹಾಯಕವಾಗುವ ಹವ್ಯಾಸಗಳು ಅನೇಕ ಇವೆ. ಪಕ್ಷಿವೀಕ್ಷಣೆ (ಪಕ್ಷಿ ತಜ್ಞ ಸಲೀಂ ಅಲಿ ಹೇಳಿರು

ವಂತೆ), ಸಂಗೀತ, ಓದುವುದು, ಬರೆಯುವುದು, ತೋಟಗಾರಿಕೆ, ಚೆಸ್, ಪಗಡೆ ಮುಂತಾದ ಆಟಗಳು, ಜಪ ಮಾಡುವುದು, ರಾಮನಾಮ ಬರೆಯುವುದು, ಭಜನೆ, ಹರಿಕಥೆ ಮುಂತಾದವನ್ನು ಕೇಳುವುದು, ಚಿತ್ರ ಬರೆಯುವುದು, (ಶಾಸ್ತ್ರೀಯವಾಗಿ ಬರದಿದ್ದರೂ ಮನಸ್ಸಂತೋಷಕ್ಕಾಗಿ ಬರೆಯಬಹುದು) ದೇವಸ್ಥಾನ, ಪಾರ್ಕುಗಳಲ್ಲಿ ಸಮವಯಸ್ಕರೊಡನೆ ಕುಳಿತು ಹರಟೆ ಹೊಡೆಯುವುದು ಮುಂತಾದವು. ಇದಾವುದೂ ಆಗದಿದ್ದರೆ ಒಂದೆರಡು ಗಂಟೆ ಕಾರ್ಡ್ಸ್ ಆಡಿದರೂ ತಪ್ಪೇನಿಲ್ಲ. ಆದರೆ ಅದೇ ಒಂದು ಚಟವಾಗಿ ಪರಿಣಮಿಸಬಾರದು, ಅಷ್ಟೆ.

ಈ ಹವ್ಯಾಸಗಳ ಜೊತೆಗಿನ ಕೆಳಗಿನ ಅಂಶಗಳಿಗೂ ಗಮನ ಕೊಡಿ. ನಿಮ್ಮ ಸಣ್ಣ ಪುಟ್ಟ ಕೆಲಸಗಳಿಗೆ ಬೇರೆಯವರನ್ನು ಅವಲಂಬಿಸುವುದನ್ನು ಕಡಿಮೆ ಮಾಡಿ. ಸಣ್ಣ ಪುಟ್ಟ ಕೆಲಸಗಳಿಗೂ ಬೇರೆಯವರನ್ನು ಅವಲಂಬಿಸುವುದನ್ನು ಮೊದಲಿನಿಂದಲೇ ಕಡಿಮೆ ಮಾಡುತ್ತಾ ಬಂದರೆ, ಸ್ವಾವಲಂಬನೆಯ ಜೊತೆಗೆ ಅಲ್ಪಸ್ವಲ್ಪ ವ್ಯಾಯಾಮವೂ ಆದಂತಾಗುತ್ತದೆ. ಮುಂದೆ ಸಮಯ ಸದುಪಯೋಗವಾಗಲು ಅವಕಾಶವೂ ದೊರೆತಂತಾಗುತ್ತದೆ.

ಈ ಎಲ್ಲಾ ವಿವರ ಓದಿ ಮಕ್ಕಳು-ಮರಿ ಸೊಸೆಯಂದಿರು, ಮುದುಕರನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನೆಲ್ಲಾ ಬಿಟ್ಟು ನಿಶ್ಚಿಂತರಾಗಿರಲು ಸಾಧ್ಯ ಎಂದು ಭಾವಿಸಬಾರದು. ಶೈಶವದಲ್ಲಿ ನಿಮ್ಮನ್ನು ಸಾಕಿ ಸಲಹಿದ ಅವರ ಸೇವೆ ನಿಮ್ಮ ಆದ್ಯ ಕರ್ತವ್ಯ. ದೇಹವು ವೃದ್ಧಾಪ್ಯದ ಅಂಚನ್ನು ಬಿಟ್ಟು ಮುಪ್ಪನ್ನು ತಲುಪತೊಡಗಿದಂತೆ ಬೇರೆಯವರ ಸಹಾಯ ಖಂಡಿತ ಬೇಕಾಗುತ್ತದೆ. ಬುದ್ಧಿ ಸ್ತಿಮಿತ ತಪ್ಪಬಹುದು; ಕೈಕಾಲು ಸ್ವಾಧೀನ ಕಳೆದುಕೊಳ್ಳಬಹುದು, ಕಿವಿ, ಕಣ್ಣು ತಮ್ಮ ಕೆಲಸ ಸರಿಯಾಗಿ ನಿರ್ವಹಿಸದೇ ಹೋಗಬಹುದು. ಆಗ ನೀವು ಬೇಸರಪಟ್ಟುಕೊಳ್ಳದೆ ಅವರ ಸೇವೆಯನ್ನು ಮಾಡಬೇಕು. ಏಕೆಂದರೆ ಮುಂದೆ ಒಂದು ದಿನ ನೀವೂ ಈ ಮಜಲನ್ನು ತಲುಪಬಹುದು. ಆಗ ನಿಮ್ಮ ಮಕ್ಕಳು-ಮರಿ-ಸೊಸೆಯಂದಿರು ನಿಮ್ಮ ದಾರಿ ಅನುಸರಿಸಿ, ನಿಮ್ಮನ್ನು ಸರಿಯಾಗಿ ನೋಡಿಕೊಳ್ಳಬೇಡವೇ?

ಇತ್ತೀಚಿನ ದಿನಗಳಲ್ಲಿ ವಯಸ್ಸಾದ ಮುದುಕರನ್ನು ಕಡೆಗಣಿಸುವವರ ಸಂಖ್ಯೆ ಹೆಚ್ಚುತ್ತಿದೆ. ಕೈಲಾಗದೆ ಇರುವ ಆ ಸಮಯದಲ್ಲಿ ಅಶುಚಿತ್ವ ಹಾಗೂ ಅಪೌಷ್ಟಿಕತೆಯಿಂದ ಕುಷ್ಠ, ಕ್ಷಯ, ಗೂರಲು ಮುಂತಾದ ರೋಗಗಳಿಗೆ ಅವರು ತುತ್ತಾಗುತ್ತಿದ್ದಾರೆ. ಕಂಡಕಂಡಲ್ಲಿ ಭಿಕ್ಷೆ ಬೇಡುವ ಪ್ರವೃತ್ತಿಯನ್ನು ಅವರು ಬೆಳೆಸಿಕೊಂಡಿದ್ದಾರೆ. ಇದರಿಂದ ಅವರು ಸಂಚರಿಸಿದಲ್ಲೆಲ್ಲಾ ಆ ರೋಗ ಹರಡುತ್ತದೆ. ಹಾಗಾಗಿ ಸಮಾಜಕ್ಕೆ ಹಾಗೂ ಸರಕಾರಕ್ಕೆ ಅವರು ಒಂದು ದೊಡ್ಡ ತಲೆನೋವೇ ಆಗಿದ್ದಾರೆ. ಈ ಪರಿಸ್ಥಿತಿ ವಿಷಮ ಸ್ಥಿತಿಗೆ ಮುಟ್ಟುವ ಮೊದಲೇ ಎಚ್ಚೆತ್ತುಕೊಳ್ಳುವುದು ಒಳ್ಳೆಯದು. ಆದುದರಿಂದ ಪ್ರತಿಯೊಬ್ಬ ವ್ಯಕ್ತಿಯೂ ತಮಗೆ ಸಂಬಂಧಪಟ್ಟ ವೃದ್ಧರನ್ನು ತಾವೇ ಕಾಪಾಡುವುದು ಅತ್ಯವಶ್ಯ. ಅದು ಮಾನವೀಯತೆಯೂ ಹೌದು. ಹೆತ್ತು, ಹೊತ್ತು ಸಾಕಿ ಸಲಹಿದ ಅವರ ಋಣ ತೀರಿಸುವ ದೃಷ್ಟಿಯಿಂದಲಾದರೂ ಅವರನ್ನು ಸಲಹುವುದು ನಮ್ಮ-ನಿಮ್ಮೆಲ್ಲರ ಕರ್ತವ್ಯವಲ್ಲವೆ? ★

ಜಗತ್ತಿನಲ್ಲಿ ಜಾತಿ, ಮತ, ದೇಶ ಕಾಲದ ಭೇದವಿಲ್ಲದೆ ಸಾಮಾನ್ಯವಾಗಿ ಹಾಡುವ ಹಾಡೊಂದಿದೆ. ಅದೇ "ಹ್ಯಾಪಿ ಬರ್ತಡೆ ಟು ಯು". ಶಿಶುವಿಹಾರದ ಅಧ್ಯಾಪಕ ಪ್ಯಾಟ ಹಿಲ್ ಹಾಗೂ ಸಹೋದರಿ ಮಿಲ್‌ಫ್ರೆಡ್ ಈ ಹಾಡನ್ನು 1893 ರಲ್ಲಿ ರಚಿಸಿದರು. 2010 ರವರೆಗೂ ಈ ಹಾಡಿನ ಕಾಪಿರೈಟ್ ಅಧಿಕಾರವನ್ನು ಹಿಲ್ ಫೌಂಡೇಷನ್ನಿಗೆ ಹಾಗೂ ಇಲಿನಾಯ್ ಮುದ್ರಕರಿಗೆ ನೀಡಲಾಗಿದೆ.

-ಎಸ್. ಜೆ. ಸುಜಾತ

ಇದುವೇ ಜೀವ ಇದು ಜೀವನ

ನಾನು ಎಂ.ಎ. ಪಾಸುಮಾಡಿದ ವರ್ಷ. ಕೆಲಸಕ್ಕೆ ಅಲ್ಲಿ ಇಲ್ಲಿ ಪ್ರಯತ್ನಮಾಡುತ್ತಿದ್ದೆ. ಒಂದು ಪ್ರೈವೇಟ್ ಕಾಲೇಜನಿಂದ 'ಇಂಟರವ್ಯೂ'ಗೆ ಪತ್ರ ಬಂತು. 'ಇಂಟರವ್ಯೂ' ಇದ್ದುದು ಮಾರನೇ ದಿನ 10 ಗಂಟೆಗೆ ಕಾಲೇಜನಲ್ಲಿ. ಹಿಂದಿನ ದಿನದ ಸಂಜೆ ಬಸ್ಸಿನಲ್ಲಿ ಸೀಟು ರಿಜರ್ವ್ ಮಾಡಿಸಿ ಹತ್ತು ಹದಿನೈದು ನಿಮಿಷ ಮುಂಚೆಯೇ ಬಂದು ಕಿಟಕಿ ಪಕ್ಕದ ರಿಜರ್ವ್ ಆಗಿದ್ದ ಸೀಟಿನಲ್ಲಿ ಆಸೀನನಾಗಿ ಓದುವುದಕ್ಕೆ ಒಂದು ಪುಸ್ತಕ ತೆಗೆದೆ. ಬಸ್ಸು ಹೊರಟಿತು.

ಅಷ್ಟರಲ್ಲಿ, ಆತುರಾತುರವಾಗಿ ಮಧ್ಯಮ ವಯಸ್ಸಿನ ದಂಪತಿಗಳು ಬಂದು ಬಸ್ ಹತ್ತಿದರು. ಕುಳಿತುಕೊಳ್ಳಲು ಜಾಗವಿಲ್ಲ. ಕಂಬಿಗೆ ನೇತು ಹಾಕಿಕೊಂಡು ನಿಂತರು. ಬಸ್ ಹತ್ತು ಹದಿನೈದು ಮೈಲು ಹೋಗಿರಬಹುದು; ಆ ಹೆಂಗಸಿಗೆ ವಾಕರಿಕೆ ಪ್ರಾರಂಭವಾಯಿತು. ''ನನ್ನ ಪತ್ನಿಗೆ ಬಸ್ ಪ್ರಯಾಣ ಆಗಲ್ಲ, ವಾಂತಿ ಆಗುತ್ತೆ. ನಿಮ್ಮ ಜಾಗ ಬಿಟ್ಟುಕೊಟ್ಟರೆ ಕಿಟಕಿಯಿಂದ ಮುಖ ಹೊರಗೆ ಹಾಕಿ ವಾಂತಿ ಮಾಡಬಹುದು,'' ಎಂದು ಗಂಡ ನನ್ನನ್ನು ವಿನಂತಿಸಿಕೊಂಡ. ಅದಕ್ಕುತ್ತರವಾಗಿ ನಾನು,''ಹಾಗಿರೋರು ಸೀಟನ್ನು ಮುಂಚೆಯೇ ರಿಜರ್ವ್ ಮಾಡಿಸಿಕೊಳ್ಳ ಬೇಕು....... ನನ್ನ ಸೀಟು ಬಿಡುವುದಕ್ಕೆ ಸಾಧ್ಯವಿಲ್ಲ.......'' ಎಂದೆ. ಅವರು ಸುಮ್ಮನಾದರು. ಇನ್ನಾರೋ ಅವರ ಸಹಾಯಕ್ಕೆ ಬಂದರು.

ನಾನು ತಲುಪುವ ಊರು ಬಂತು. 8.00 ಗಂಟೆ. ಮಳೆ. ಊರಿನಲ್ಲಿ ಉಳಿದುಕೊಳ್ಳಲು ಯಾವ ವಸತಿಗೃಹಗಳೂ ಇಲ್ಲ. ''ಕಾಲೇಜಿನ ಕೆಲಸಕ್ಕೆ ಬಂದಿರೋದಾದ್ರೆ ಪ್ರಿನ್ಸಿಪಾಲರಿಗೆ ಹೇಳಿ ಕಾಲೇಜಿನ ರೂಮಿನಲ್ಲಿ ಉಳಿದುಕೊಳ್ಳಿ,'' ಎಂದು ಯಾರೋ ಹೇಳಿದರು. ಅವರು ಹೇಳಿದ್ದು ಸರಿಯೆನಿಸಿತು. ಕಾಕಾ ಅಂಗಡೀಲಿ ಬ್ರೆಡ್ ತಿಂದು, ಟೀ ಕುಡಿದು, ನಿಧಾನವಾಗಿ ಪ್ರಿನ್ಸಿಪಾಲರ ಮನೆ ಹುಡುಕಿಕೊಂಡು ಹೋದೆ. ಮನೆ ಸಿಕ್ಕಿತು. ಬಾಗಿಲು ತಟ್ಟಿದೆ. ಒಳಗಿನಿಂದ ಬಂದವರು, ನಾನು ಯಾರಿಗೆ ಬಸ್‌ನಲ್ಲಿ ಸಹಾಯ ಮಾಡಲಿಲ್ಲವೋ ಅವರೇ. ''ಕುಳಿತುಕೊಳ್ಳಿ,'' ಎಂದು ಆಕೆ ಹೇಳಿ ಒಳಕ್ಕೆ ಹೋದಳು. ಅವರ ಯಜಮಾನರೇ ಕಾಲೇಜಿನ ಪ್ರಿನ್ಸಿಪಾಲರು. ಏಕಾದರೂ ಇಲ್ಲಿಗೆ ಬಂದೆನೋ ಅನ್ನಿಸಿತು ನನಗೆ. ''ನಾಳೆಯ ಇಂಟರ್‌ವ್ಯೂಗೆ ಬಂದಿದ್ದೇನೆ..... ರಾತ್ರಿ ಇರೋದಕ್ಕೆ ಕಾಲೇಜಿನಲ್ಲಿ ಅವಕಾಶ ಮಾಡಕೊಡಿ,'' ಎಂದೆ. ''ಕಾಲೇಜಿನಲ್ಲಿ ಲೈಟಿಲ್ಲ, ತುಂಬಾ ಕತ್ತಲು. ಊರು ಹೊರಗೆ ಕಾಲೇಜದೆ. ನಮ್ಮ ಮನೇಲಿ ಇರಿ. ಊಟಕ್ಕೆ ಏನು ಮಾಡಿದಿರಿ.....?'' ಎಂದೆಲ್ಲಾ ಮಾತನಾಡಿಸಿದರು ಪ್ರಿನ್ಸಿಪಾಲರು. ಅವರ ಹೃದಯ ವೈಶಾಲ್ಯ ಕಂಡು ನಾನೆಷ್ಟು ಕುಬ್ಜ ಎನ್ನಿಸಿತು.

ಎಚ್. ಆರ್. ಸಿ. ರಾವ್

ಕೆಲವು ಕಾಲದ ಹಿಂದೆ ನಮ್ಮ ಸೋದರತ್ತೆಯವರು ದಕ್ಷಿಣ ಕನ್ನಡದ ಒಂದು ಸುಪ್ರಸಿದ್ಧ ಆಸ್ಪತ್ರೆಯಲ್ಲಿ ಚಿಕಿತ್ಸೆಗೆಂದು ಹೋದಾಗ ಅಲ್ಲಿಯೇ ದೈವಾಧೀನರಾದರು. ಅವರ ಶವವನ್ನು ಊರಿಗೆ ಸಾಗಿಸಿ ಮುಂದಿನ ಕ್ರಮ ಜರುಗಿಸಬೇಕಾಗಿತ್ತು. ನಮ್ಮ ಊರು ಸುಮಾರು 150 ಕಿಲೋಮೀಟರುಗಿಂತ ದೂರ. ಮೇಲಾಗಿ ಅದೊಂದು ಹಳ್ಳಿ. ಅದನ್ನು ತಲುಪಲು ಯಾವುದೇ ಸುಲಭಸಾಧ್ಯವಾದ ಸಂಪರ್ಕ ಸಾಧನವಿರಲಿಲ್ಲ. ತೀರಿಕೊಂಡವರ ಹತ್ತಿರ ಒಬ್ಬ ಮಗ ಮತ್ತು ಒಬ್ಬ ಮಗಳು ಮಾತ್ರ ಇದ್ದರು. ಶವವನ್ನು ಸಾಗಿಸಲು ಏರ್ಪಾಡು ಮಾಡುವುದಕ್ಕಾಗಿ ಡಿಸ್‌ಚಾರ್ಜ್ ಮಾಡಲು ಡಾಕ್ಟರನ್ನು ಕೇಳಿದಾಗ ಚಿಕಿತ್ಸೆ ವೆಚ್ಚ ತುಂಬಿ ಡಿಸ್‌ಚಾರ್ಜ್ ಮಾಡಿಸಿಕೊಳ್ಳಿ ಎಂದು ನಿಷ್ಠುರವಾಗಿ ಹೇಳಿದರು. ಊರಿಗೆ ಹೋಗಿ ಕಳುಹಿಸುತ್ತೇವೆಂದರೂ ಒಪ್ಪಲಿಲ್ಲ. ಊರಿಗೆ ಹೋಗಿ ವಾಪಸ್ಸು ಬರೋಣವೆಂದರೆ 2 - 3 ದಿನವಾಗುತ್ತಿತ್ತು. ಅಲ್ಲಿಯೇ ವ್ಯವಸ್ಥೆ ಮಾಡೋಣವೆಂದರೆ ಅಪರಿಚಿತ ಸ್ಥಳ ಬೇರೆ. ಹೀಗೆ ಕೈಕಟ್ಟಿ ಕುಳಿತು ಯೋಚಿಸುತ್ತಿದ್ದಾಗ ಒಬ್ಬರು ಬಂದು, "ಏನು ಸಮಾಚಾರ? ಹೀಗೇಕೆ ಅಳುತ್ತಾ ಇದ್ದೀರಿ?" ಎಂದು ಕೇಳಿದಾಗ ಸಂಗತಿಯನ್ನು ತಿಳಿಸಿದೆವು. ಅವರು, "ಅದಕ್ಕೇನು ಚಿಂತೆ ಮಾಡುತ್ತೀರಿ? ನಾನು ನಿಮ್ಮೂರಿನ ಸಮೀಪದವನು; ಶಿರಾಳಕೊಪ್ಪದವನು. ನಿಮ್ಮ ವಿಚಾರ, ಮನೆತನ ಎಲ್ಲಾ ಗೊತ್ತು. ನಾನೆಲ್ಲಾ ಸರಿಮಾಡುತ್ತೇನೆ ಬನ್ನಿ," ಎಂದು ತಮ್ಮ ಹೆಂಡತಿಯ ಚಿಕಿತ್ಸೆಗಾಗಿ ತಂದಿದ್ದ ಹಣ ಕೊಟ್ಟು ಡಿಸ್‌ಚಾರ್ಜ್ ಮಾಡಿಸಿ ಶವ ಊರಿಗೆ ಸಾಗಿಸಲು ವ್ಯವಸ್ಥೆ ಮಾಡಿದರು. ಇಂಥವರಿಂದಲೇ ಈ ಜಗತ್ತು ನಡೆದಿದೆಯೆ! ಎಂಬ ಭಾವನೆ ಆಗ ನನಗೆ ಬಾರದೆ ಇರಲಿಲ್ಲ.

ಶ್ರೀನಿವಾಸಮೂರ್ತಿ ಉಡುಗಣಿ

ಮದುವೆಯ ಹಿಂದಿನ ದಿನ. ಹೆಣ್ಣಿನ ಕಡೆಯವರೆಲ್ಲ ಗಂಡಿನ ಕಡೆಯವರಿಗಾಗಿ ಕಾಯುತ್ತಿದ್ದರು. ಬೆಂಗಳೂರಿನಿಂದ ಗಂಡಿನ ಕಡೆಯವರು ಬರಬೇಕಿತ್ತು. ರಾತ್ರಿ 7 ಗಂಟೆಗೆ ಬರಬೇಕಿದ್ದವರು ರಾತ್ರಿ 10 ಆದರೂ ನಾಪತ್ತೆ! ಹೆಣ್ಣಿನ ತಂದೆ-ತಾಯಿ, ಹತ್ತಿರದ ಬಳಗದವರಿಗೆ ಕಳವಳ, ಆತಂಕ, ಕಾತರ ಹೆಚ್ಚಾಗುತ್ತಿತ್ತು. ಅಂತೂ ರಾತ್ರಿ 11ರ ಸುಮಾರಿಗೆ ಬೀಗರ ಬಸ್ಸು ಬೆಂಗಳೂರಿನಿಂದ ಆಗಮಿಸಿದಾಗ ಹೆಣ್ಣಿನ ತಂದೆ ಸಮಾಧಾನದ ನಿಟ್ಟುಸಿರು ಬಿಡುವಂತಾಯಿತು. ಆದರೆ ಈ ಸಮಾಧಾನ, ಸಂತೋಷ ತುಂಬ ಹೊತ್ತು ಇರಲು ಸಾಧ್ಯವಾಗಲಿಲ್ಲ! ಏಕೆಂದರೆ ಗಂಡಿನ ಕಡೆಯ ನೆಂಟರಿಷ್ಟರು, ಸ್ನೇಹಿತರು ಬಸ್ಸಿನಿಂದ ಇಳಿದರೂ ವರಮಹಾಶಯ ಮಾತ್ರ ಬಂದಿರಲಿಲ್ಲ. ಸರಿ, ಹೆಣ್ಣಿನ ತಂದೆ ತಾಯಿಗಳಿಗೆ ಉದ್ವೇಗ ಹೆಚ್ಚಾಯಿತು. ವಿಚಾರಿಸಿದಾಗ ಗಂಡಿನ ತಂದೆ ಹೇಳಿದರು: "ನಮ್ಮ ಹುಡುಗನಿಗೆ ಈ ಮದುವೆ ಇಷ್ಟವಿಲ್ಲವಂತೆ, ಬೇರೆ ಹುಡುಗಿಯನ್ನು ಮದುವೆ ಮಾಡಿಕೊಳ್ಳುತ್ತಾನಂತೆ. ಆದರೆ ನೀವೇನೂ ಯೋಚನೆ ಮಾಡಬೇಡಿ. ನಿಮ್ಮ ಮಗಳಿಗೆ ನನ್ನ ಇನ್ನೊಬ್ಬ (ಎರಡನೇ ಮಗ) ಮಗನನ್ನು ಮದುವೆ ಮಾಡಿಕೊಡಲು ಸಿದ್ಧತೆ (ಮಾನಸಿಕ) ಮಾಡಿಕೊಳ್ಳಿ." ಕೆಲವು ಹಿರಿಯರ ಸಂಗಡ ಸಮಾಲೋಚಿಸಿದ ತರುವಾಯ ಹಾಗೂ ಹೆಣ್ಣಿನ ಒಪ್ಪಿಗೆಯನ್ನು ಪಡೆದು ಮೊದಲು ನಿಶ್ಚಯವಾಗಿದ್ದ ಹುಡುಗನ ತಮ್ಮನಿಗೇ ಕೊಟ್ಟು ಮದುವೆ ಮಾಡಿಕೊಟ್ಟರು. ವಿಧಿಯ ಆಟಕ್ಕೆ ಎಲ್ಲರೂ ಸೋತರು. ಸಿಡಿಲಿನಂತೆ ಬಂದೆರಗಿದ್ದ ಆಘಾತ ಹೂವಿನಂತೆ ಪರಿಹಾರವಾಯಿತು. ನೆರೆದಿದ್ದ ಬಂಧು ಬಳಗದವರೆಲ್ಲರಿಗೂ ಸಂತೋಷವಾಯಿತು. ಈ ನವದಂಪತಿಗಳು ಸುಖವಾಗಿ ಅನ್ಯೋನ್ಯತೆಯಿಂದ ಬಾಳು ನಡೆಸುತ್ತಿದ್ದಾರೆ.

-ಎನ್ನಾರ್ ವಾಸುದೇವರಾವ್

ಬಾಜೀರಾವ್ - ಮಸ್ತಾನಿಯ

ಪ್ರೇಮ ಪ್ರಕರಣ

ಎಸ್. ಜೆ. ಸುಜಾತ

ಇತಿಹಾಸದಲ್ಲಿ ಸೇರಿಹೋಗಿರುವ ಬಾಜೀರಾವ್ ಹಾಗೂ ಮಸ್ತಾನಿಯರ ಪ್ರೇಮಕ್ಕೆ ಪುಣೆಯ ಶನಿವಾರವಾಡ ಇಂದಿಗೂ ಸಾಕ್ಷಿಯಾಗಿದೆ.

ಬಾಜೀರಾವ್ ಜನಿಸಿದ್ದು ಅಗಸ್ಟ್ 18, ಕ್ರಿ.ಶ. 1700ರಲ್ಲಿ. ಆಗಿನ ಕಾಲದ ಪದ್ಧತಿಯಂತೆ 1713ರಲ್ಲಿ ಕಾಶೀಬಾಯಿಯೆಂಬ ಕೊಂಕಣಿ ಬ್ರಾಹ್ಮಣ ಹುಡುಗಿಯೊಡನೆ ಬಾಜೀರಾಯನ ಬಾಲ್ಯ ವಿವಾಹವಾಯಿತು. ಇವನಿಗೆ ಇಪ್ಪತ್ತೊಂಭತ್ತು ವರ್ಷಗಳಾದಾಗ ಶಿವಾಜಿಯ ಮೊಮ್ಮಗ ಸಾಹುವಿಗೆ ಆತ ಮುಖ್ಯಮಂತ್ರಿಯಾದ. ಬದಲಾವಣೆಯ ಗಾಳಿ ಬೀಸುತ್ತಿದ್ದ ಕಾಲವದು. ಪೇಶ್ವೆಗಳ ಆಡಳಿತ ಬ್ರಾಹ್ಮಣರನ್ನು ಯೋಧರು ಹಾಗೂ ಆಡಳಿತಗಾರರಾಗಿ ರೂಪಿಸಿತ್ತು.

ಬಾಜೀರಾವ್ ಹಾಗೂ ಮಸ್ತಾನಿಯ ಭೇಟಿಯ ಬಗ್ಗೆ ಹಲವಾರು ದಂತಕಥೆಗಳಿವೆ. ಒಂದು ಕಥೆಯ ಪ್ರಕಾರ ಬುಂದೇಲ್‌ಖಂಡದ ರಾಜ ಛಾತ್ರಸಾಲನು ಮುಸ್ಲಿಂ ವಾರಾಂಗನೆಯಿಂದ ಜನಿಸಿದ್ದ ಮಗಳು ಮಸ್ತಾನಿಯನ್ನು ನಿಜಾಮರ ವಿರುದ್ಧ ಯುದ್ಧದಲ್ಲಿ ಸಹಾಯ ಮಾಡಿದ್ದಕ್ಕಾಗಿ ಬಾಜೀರಾಯನಿಗೆ ಒಪ್ಪಿಸಿದ್ದ.

ಇನ್ನೊಂದು ಕಥೆಯ ಪ್ರಕಾರ 1729ರ ಬುಂದೇಲ್‌ಖಂಡದ ಯುದ್ಧದಲ್ಲಿ ಸೋತ ನಿಜಾಮ ಶಾಂತಿ ಒಪ್ಪಂದದ ಪ್ರತೀಕವಾಗಿ ಮಸ್ತಾನಿಯನ್ನು ಬಾಜೀರಾಯನಲ್ಲಿಗೆ ಕಳುಹಿಸಿಕೊಟ್ಟಿದ್ದ.

ಇನ್ನೊಂದು ಕಥೆಯ ಪ್ರಕಾರ ನಿಜಾಮರ ವಿರುದ್ಧ ದಂಗೆಯೆದ್ದ ಶಾಹಜಹಾನ್‌ಖಾನನನ್ನು ಬಗ್ಗುಬಡಿಯಲು ಬಾಜೀರಾಯನ ಚಿಕ್ಕ ತಮ್ಮ ಚಿಮಾಜೀಅಪ್ಪಾನ ಸೈನ್ಯ, ಖಾನನ ಬೀಡಿನ ಮೇಲೆ ದಾಳಿ ಮಾಡಿದಾಗ ಮಸ್ತಾನಿಯು ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳುವ ಸನ್ನಾಹದಲ್ಲಿದ್ದಳು. ಚಿಮಾಜೀ ಅವಳನ್ನು ಕಾಪಾಡಿ ಪುಣೆಗೆ ಕರೆತಂದ.

ಆಕೆಯ ಸೌಂದರ್ಯದ ಬಗ್ಗೆ ಹಲವಾರು ಉತ್ಪ್ರೇಕ್ಷಿತ ಹೇಳಿಕೆಗಳಿವೆ. ಅವುಗಳ ಪೈಕಿ ಮಸ್ತಾನಿಯು ವೀಳ್ಯವನ್ನು ಅಗಿದ ನಂತರ ಅದರ ಕೆಂಪು ರಸ ಗಂಟಲ ಮೂಲಕ ಸರಿಯುವುದನ್ನು ಕಾಣಬಹುದಿತ್ತೆಂಬದೂ ಒಂದು.

ಮೇಲಿನ ಕಥನಗಳನ್ನು ಅವಲೋಕಿಸಿದಾಗ ಮೊದಲನೆಯದು ಇತಿಹಾಸಕ್ಕೆ ಸಮೀಪವೆನಿಸುತ್ತದೆ. 1729ರ ಸುಮಾರಿಗೆ ಮಸ್ತಾನಿಯನ್ನು ಭೇಟಿಯಾದ ಬಾಜೀರಾವ್ 1730-31ರಲ್ಲಿ ಪುಣೆಯ ಅತಿ ದೊಡ್ಡ ಶನಿವಾರವಾಡೆಯನ್ನು ಕಟ್ಟಿಸಿದ. (ಇದರ ಅವಶೇಷಗಳನ್ನು ಇಂದೂ ನೋಡಬಹುದು.) 1818ರ ಕಾಡ್ಕಿ ಯುದ್ಧದಲ್ಲಿ ಕೊನೆಯ ಬಾರಿ ಬ್ರಿಟಿಶರು ಮರಾಠರನ್ನು ಸೋಲಿಸಿದಾಗ ಇದರ ಒಳಭಾಗ ಸುಟ್ಟು ಹೋಯಿತು. ಮಸ್ತಾನಿಯ ಸಾನ್ನಿಧ್ಯ ದೊರಕಿದ ಮೇಲೆ ಬಾಜೀರಾಯನಿಗೆ ಮದ್ಯ ಹಾಗೂ ಮಾಂಸಾಹಾರದ ಅಭ್ಯಾಸವಾಯಿತು. ಆದರೂ ಬಾಜೀರಾಯನ ಪತ್ನಿ ಕಾಶೀಬಾಯಿ ಮಸ್ತಾನಿಯೊಡನೆ ಪ್ರೀತಿಯಿಂದಿದ್ದಳು.



ಬಾಜೀರಾಯನ ತಾಯಿ ರಾಧಾಬಾಯಿ ಹಾಗೂ ತಮ್ಮ ಚಿಮಾಜೀಅಪ್ಪಾನಿಗೆ ಮಸ್ತಾನಿಯನ್ನು ಕಂಡರೆ ಅಷ್ಟಕ್ಕಷ್ಟೆ. ಅವರಿಬ್ಬರೂ ಆಗಾಗ್ಗೆ ಮಸ್ತಾನಿ ಹಾಗೂ ಬಾಜೀರಾಯನ ನಡುವೆ ವಿರಸ ಹುಟ್ಟಿಸಲು ಪ್ರಯತ್ನಿಸುತ್ತಲೇ ಇದ್ದರು. ಹೀಗಾಗಿ ಬಾಜೀರಾವ್ ಮಸ್ತಾನಿಯನ್ನು ಆಕೆಯನ್ನು ಆಕೆಗಾಗಿ ಕಟ್ಟಿಸಿದ ಶನಿವಾರವಾಡೆಯಲ್ಲಿ ಇರಿಸಿದಳು (1736).

ಮಸ್ತಾನಿ ಬರೀ ರೂಪವತಿಯಷ್ಟೇ ಅಲ್ಲ, ವೀರ ಯೋಧಳೂ ಆಗಿದ್ದಳೆಂಬುದು ಬಾಜೀರಾಯನೊಡನೆ ಯುದ್ಧಭೂಮಿಗೆ ತೆರಳುತ್ತಿದ್ದರೆ ಬಗೆಗಿನ ದಾಖಲೆಗಳಿಂದ ತಿಳಿದುಬರುತ್ತದೆ. ಜೊತೆಗೆ ಆಕೆ ಕಲಾ ಆರಾಧಕಳೂ ಆಗಿದ್ದಳು. ಗಣೇಶನ ಹಬ್ಬ ಹಾಗೂ ಜನ್ಮಾಷ್ಟಮಿಯಂದು ಪೇಶ್ವೆದರ್ಬಾರಿನಲ್ಲಿ ಮಸ್ತಾನಿಯ ನೃತ್ಯ ಹಾಗೂ ಸಂಗೀತ ಕಾರ್ಯಕ್ರಮಗಳಿರುತ್ತಿದ್ದವು.

ಮುಂದೆ ಮಸ್ತಾನಿ ಗಂಡುಮಗುವಿಗೆ ಜನ್ಮ ನೀಡಿದಳು. ಇವನೇ ಶಮ್‌ಶೇಂರಸಿಂಗ್ (ಪೇಶ್ವೆ ಸೈನ್ಯದಲ್ಲಿ ಮುಂದೆ ಉನ್ನತಾಧಿಕಾರಿಯಾದ). ಮಸ್ತಾನಿ ಗಂಡುಮಗುವಿಗೆ ಜನ್ಮವಿತ್ತದ್ದು ರಾಧಾಬಾಯಿ ಹಾಗೂ ಚಿಮಾಜೀಅಪ್ಪಾನಿಗೆ ನುಂಗಲಾರದ ತುತ್ತಾಯಿತು. ಮುಂದೆ ಇವನೇ ಪೇಶ್ವೆಯಾಗಬಹುದೆಂಬ ಭಯ ಇವರನ್ನು ಕಾಡತೊಡಗಿತು. ಇದಲ್ಲದೆ ಬಾಜೀರಾಯನ ಹಿರಿಯ ಮಗ ನಾನಾಸಾಹೇಬನೊಡನೆ ಮಸ್ತಾನಿಯ ಸಂಬಂಧವಿದೆಯೆಂಬ ಗುಲ್ಲು ಹರಡಿತು. ಈ ಅನಿಶ್ಚಿತ ಸ್ಥಿತಿ ಹಾಗೂ ಅಭದ್ರತೆಯಲ್ಲಿ ಮಸ್ತಾನಿ ಹೇಗೋ ಕಾಲ ತಳ್ಳತೊಡಗಿದಳು.

1740ರ ಜನವರಿ 26ರಂದು ಬಾಜೀರಾವ್ ನಿಧನನಾದ. ಮಸ್ತಾನಿಯನ್ನು ಪುಣೆಯ ಪಾರ್ವತಿ ಬೆಟ್ಟದಲ್ಲಿ ಗೃಹಬಂಧನದಲ್ಲಿರಿಸಬೇಕೆಂಬ ಪ್ರಯತ್ನ ನಡೆಯುತ್ತಿದ್ದಾಗ ಅದನ್ನು ಹೇಗೋ ತಿಳಿದ ಮಸ್ತಾನಿ ತಪ್ಪಿಸಿಕೊಂಡಳು. ಆದರೆ ಬಾಜೀರಾಯನ ಮರಣದ ನಂತರದ ತನ್ನ ಜೀವನದ ಅಭದ್ರತೆ ಹಾಗೂ ಸೆರೆಯಾಳಾಗುವ ಭಯದಿಂದ ಆತ್ಮಹತ್ಯೆ ಮಾಡಿಕೊಂಡಳು.

ಬದುಕಿದ್ದಾಗ ಮಸ್ತಾನಿಯನ್ನು ದ್ವೇಷಿಸುತ್ತಿದ್ದರೂ ಅವಳು ಸತ್ತಮೇಲೆ ಚಿಮಾಜೀ ಅಪ್ಪಾ ಅವಳು ವಾಸಿಸುತ್ತಿದ್ದ ಶನಿವಾರವಾಡೆಯ ಬಾಗಿಲಿಗೆ ''ಮಸ್ತಾನಿಗೇಟ್'' ಎಂದು ಹೆಸರಿಸಿದ.

ಪುಣೆಯ ರಾಜ ಕೇಳ್ಕರ್ ವಸ್ತುಸಂಗ್ರಹಾಲಯದಲ್ಲಿ ಮಸ್ತಾನಿ ವಾಸಿಸುತ್ತಿದ್ದ ಕೊಠಡಿಯ ಮಾದರಿಯಲ್ಲಿ ಇನ್ನೊಂದು ಕೊಠಡಿಯೊಂದನ್ನು ಕಟ್ಟಲಾಗಿದೆ. ಇದರ ಛಾವಣಿ ಮಾತ್ರ ಮೂಲ ಕೊಠಡಿಯದು. ಪುಣೆಯ ಈ ಕೊಠಡಿ ಬಾಜೀರಾಯ ಹಾಗೂ ಮಸ್ತಾನಿಯ ಪ್ರೇಮಕ್ಕೆ ಸಾಕ್ಷಿಯಾಗಿ ನಿಂತಿದೆ. (ಆಧಾರ)

ಸಂಪಟೂರು ವಿಶ್ವನಾಥ್

ಛತ್ರಿ

(ರೋಲ್ಡ್‌ಡಾಲ್ ಅವರ
‘ದಿ ಅಂಬ್ರೆಲಾ ಮ್ಯಾನ್’
ಸ್ಫೂರ್ತಿಯಿಂದ)

“ನಿನ್ನೆ ಸಾಯಂಕಾಲ, ನಾನು ನನ್ನಮ್ಮ ಪೇಟೆಗೆ ಹೋಗಿದ್ದಾಗ ಒಂದು ತಮಾಷೆ ನಡೆಯಿತು. ಗಿಜಗಿಜಯೆಂದು ಜನ ಎಲ್ಲೆಲ್ಲೂ ಓಡಾಡುತ್ತ ಇದ್ದರು. ನಾನು ಅಮ್ಮನ ಕೈ ಹಿಡಿದುಕೊಳ್ಳುವ ಬದಲು ಅವಳೇ ನನ್ನ ಕೈ ಹಿಡಿದುಕೊಂಡಿದ್ದಳು.

ನಾನೇನು ಚಿಕ್ಕ ಪಾಪ ಅಲ್ಲ. ನನಗೂ ಹನ್ನೆರಡು ವರ್ಷ. ನಿನ್ನೆ ಮಧ್ಯಾಹ್ನ ಅಮ್ಮ ನನ್ನನ್ನು ಪೇಟೆಯ ಮಧ್ಯ ಇದ್ದ ಹಲ್ಲು ಡಾಕ್ಟರ ಹತ್ತಿರ ಕರೆದುಕೊಂಡು ಹೋದಳು. ಡಾಕ್ಟ್ರು ಒಂದು ಹಲ್ಲು ತೂತಾಗಿದೆ, ಕಪ್ಪಾಗಿದೆ ಅಂತೆಲ್ಲಾ ಹೇಳಿ, ಬಹಳ ನೋವಾಗದೆ ಇರೊ ತರಹಾ ತೂತನ್ನು ಮುಚ್ಚಿದ್ದರು.

ಆಮೇಲೆ ಅಮ್ಮ ನನ್ನನ್ನು ದೊಡ್ಡ ಉಡುಪಿ ಹೋಟಲಿಗೆ ಕರೆದುಕೊಂಡು ಹೋಗಿ ಸ್ಪೆಷಲ್ ಬೆಣ್ಣೆ ಮಸಾಲೆ ದೋಸೆ ಕೊಡಿಸಿ, ತಾನು ಮಾತ್ರ ಲೈಟ್ ಕಾಫಿ ಕುಡಿದಳು. ಹೋಟೆಲಿನಿಂದ ಹೊರಕ್ಕೆ ಬರುವ ವೇಳೆಗೆ ಸುಮಾರು ಆರು ಗಂಟೆ ಆಗಿತ್ತು. ಕಪ್ಪು ಮೋಡ ಆಕಾಶದಲ್ಲೆಲ್ಲಾ ಹರಡಿತು.

ಬೇಗ ಆಟೊದಲ್ಲಿ ಮನೆಗೆ ಹೋಗಿಬಿಡೋಣ; ನಾವು ಕೊಡೆ, ರೈನ್‌ಕೋಟು, ಟೋಪಿ ಏನೂ ತಂದಿಲ್ಲ,” ಅಂದಳು ಅಮ್ಮ.

“ಮಳೆ ಜೋರಾಗಿ ಬಂದ್ಬಿಟ್ರೆ ಆಟೋಗಳು ಸಿಕ್ಕೋದು ಕಷ್ಟ. ಒಂದು ಸಾರಿ ಮಳೆ ಬಂದು ನಿತ್ಕೋಗ್ಲಿ, ಆಮೇಲೆ ಹೊರಡೋಣ. ಹೇಗಿದ್ರೂ ಅಪ್ಪ ಬರೋದು ಹತ್ತು ಗಂಟೆಗೆ. ಅಮ್ಮಾ, ಮಳೆ ನಿಲ್ಲೋದ್ರೊಳಗೆ.....
ಬೇಕಾದರೆ..ನಾನು..ಒಂದು......
ಐಸ್‌ಕ್ರೀಮೊ..ಫ್ರೂಟ್‌ಸಲಾಡೊ ತಿನ್ನಬಹುದು,” ಅಂತ ಮುದ್ದು ಮುದ್ದಾಗಿ ಹೇಳಿದೆ.

“ಮಳೆ ಒಂದುಸಾರಿ ಶುರುವಾದ್ರೆ ನಿಲ್ಲುತ್ತೆ ಅಂತ ಹೇಗೆ ಹೇಳೋದು? ಪುನ: ಹೊಟೆಲಿನ ಒಳಕ್ಕೆ ಹೋಗೋ ಬದಲು ಮನೇಗೇ ಹೊರಟುಬಿಡೋಣ,” ಅಂದವಳೇ ಅಮ್ಮ, “ಆಟೋ, ಆಟೋ,” ಅಂತ ಕೂಗಿದಳು. ಆಟೋಗಳೇನೋ ರಸ್ತೆಯಲ್ಲಿ ಓಡಾಡ್ತಾ ಇದ್ದವು. ಯಾವುದೂ ಖಾಲಿ ಇರಲಿಲ್ಲ.

“ನಮ್ಮನೆಲೇ ಒಂದು ಕಾರು, ಡ್ರೈವರು ಇದ್ದಿದ್ದರೆ ಎಷ್ಟು ಚೆನ್ನಾಗಿರ್‍ತಾ ಇತ್ತು ಅಲ್ವೆ ನಮ್ಮ?”

ಇಷ್ಟು ಹೊತ್ತಿಗೆ ಸರಿಯಾಗಿ, “ಕ್ಷಮಿಸಿ ತಾಯೀ...ಕ್ಷಮೀಸಿಮ್ಮ,” ಅನ್ನೋ ಮಾತು ಕೇಳಿಸಿತು. ಆ ಧ್ವನಿ ಬಡಕಲು ದೇಹದ ಮುದುಕನೊಬ್ಬನದಾಗಿತ್ತು. ಅವನ ಬಿಳಿ

ಮೀಸೆ, ಬಿಳಿ ಹುಬ್ಬುಗಳು, ತಲೆಯ ಮೇಲೆ ಎತ್ತರಕ್ಕೆ ಹಿಡಿದುಕೊಂಡಿದ್ದ ಛತ್ರಿ, ಹಾಗೂ ಉಣ್ಣೆ ಉಡುಪನ್ನು ನೋಡಿದರೆ ಆತ ಶ್ರೀಮಂತನಂತೆ ಕಾಣುತ್ತಾ ಇದ್ದ.

ಏನು ಬೇಕಾಗಿತ್ತು, ನಮ್ಮನ್ನೆನಾ ನೀವು ಕರೆದಿದ್ದು ಅನ್ನುವ ಹಾಗೆ ಅವನ ಕಡೆ ನೋಡಿದಳು ಅಮ್ಮ. ''ನಿಮ್ಮಿಂದ ಒಂದು ಸಣ್ಣ ಸಹಾಯ ಆಗಬೇಕಾಗಿತ್ತು; ಸಣ್ಣದೂಂದ್ರೆ ತೀರ ಸಣ್ಣದು,'' ಅವನು ಅಂದ. ಅಮ್ಮನ ಮುಖದಲ್ಲಿ ಅನುಮಾನದ ಚಿಹ್ನೆ ಕಾಣಿಸಿತು. ಅಮ್ಮನಿಗಂತೂ ಯಾರಾದರೂ ಅಪರಿಚಿತರು ಅತಿ ವಿನಯವಾಗಿ ವರ್ತಿಸಿದರೆ ಅನುಮಾನ;




ಹಾಲಿನ ಪಾತ್ರೆ ಮೇಲಿರೊ ಮುಚ್ಚಳ ಪಕ್ಕಕ್ಕೆ ಸರಿದಿದ್ದರೂ ಅನುಮಾನ. 'ಅತಿ ವಿನಯ ತೋರಿಸೋದು ಧೂರ್ತರ ಲಕ್ಷಣ' ಅಂತ ಅಮ್ಮ ಆಗಾಗ ಹೇಳ್ತಾ ಇದ್ದಳು. ಹಾಗಂದ್ರೆ ಏನೂಂತ ನನಗಂತೂ ಸರಿಯಾಗಿ ಗೊತ್ತಿಲ್ಲ.

ನನಗಂತೂ ಅಮ್ಮನಷ್ಟು ಅನುಮಾನ ಇಲ್ಲ. ನಮ್ಮನ್ನು ಮಾತಾಡಿಸಿದ ಮುದುಕ ಮೋಸಗಾರ ಇರಲಿಕ್ಕಿಲ್ಲ ಅನ್ನಿಸಿತು. ಯಾಕೆಂದ್ರೆ, ಅವನ ಬೂಡ್ಸಿಗೆ ಹೊಸದಾಗಿ ಬಣ್ಣ ಹಾಕಿದಹಾಗಿತ್ತು. ಮೋಸಕ್ಕೂ ಬಣ್ಣಕ್ಕೂ ಏನು ಸಂಬಂಧ ಅಂತ ನಿಮಗೆ ಅನ್ನಿಸಬಹುದು ಅಲ್ವಾ? ಅಮ್ಮ ಒಂದು ಸಲ ಅಪ್ಪನಿಗೆ ಹೇಳಿದ್ಳು, "ಅವನು ಹಾಕ್ಕೊಂಡಿರೋ ಬೂಡ್ಸು ನೋಡಿದರೆ ಗೊತ್ತಾಗೊಲ್ವ ಅವನ ಯೋಗ್ಯತೆ?" ಅಂತ. ಈ ಮಾತಿಗೂ ನನಗೆ ಸರಿಯಾಗಿ ಅರ್ಥ ಗೊತ್ತಿರಲಿಲ್ಲ. ಆ ಮುದುಕ ಪುನಃ ಮಾತಾಡಿದ:

"ಒಂದು ಸಣ್ಣ ಇಕ್ಕಟ್ಟಿನ ಪರಿಸ್ಥಿತೀಲಿ ಸಿಕ್ಕಿಹಾಕಿಕೊಂಡಿದ್ದೀನಿ... ನೋಡಿ, ಮುದುಕರಾದಮೇಲೆ ಅಷ್ಟೇಂತ ಕಾಣಿಸುತ್ತೆ... ಏನೋ ಮರೆವು ಹಾಳಾದ್ದು."

ಅಮ್ಮ ಅವನ ಕಡೆಯೇ ತೀಕ್ಷ್ಣ ದೃಷ್ಟಿ ಬೀರ್ತಾ ಇದ್ದಳು. (ಅಪ್ಪನ ಕಡೆಯೂ ಅಮ್ಮ ಒಂದೊಂದು ಸಾರಿ ಹೀಗೆ ನೋಡ್ತಾಳೆ. ಆಗ ಅಪ್ಪನಿಗೂ, ಪಾಪ, ಹೇಳಬೇಕೂಂತಿರೋದೆಲ್ಲಾ ಮರೆತೇಹೋಗುತ್ತೆ). ಈ ದೃಷ್ಟಿ ಆ ಮುದುಕನ ಮೇಲೆ ಯಾವ ಪರಿಣಾಮವನ್ನೂ ಮಾಡಿದ ಹಾಗೆ ಕಾಣಿಸಲಿಲ್ಲ. ಅವನೇ ಮಾತು ಮುಂದುವರೆಸಿದ, "ತಾಯಿ, ದಾರಿಯಲ್ಲಿ ಮರ್ಯಾದಸ್ಥರನ್ನು ತಡೆದು, ಕಾಡುವುದು, ನನ್ನ ಕಷ್ಟಗಳನ್ನು ಹೇಳಿಕೊಳ್ಳೊದು ನನಗೂ ಅಭ್ಯಾಸವಿಲ್ಲ, ಆದರೆ ಈಗ ನನ್ನ ಇಕ್ಕಟ್ಟು-"

"ರಸ್ತೆಯ ಪಕ್ಕದಲ್ಲಿ ನಿಂತಿದ್ದಾಗ ಅಪರಿಚಿತರೊಂದಿಗೆ ಮಾತಾಡೋದು ನನಗೂ ಹಿಡಿಸೋಲ್ಲ."

'ಪಾಪ, ಆ ಮುದುಕನಿಗೆ ಇಷ್ಟು ಒರಟಾಗಿ ಯಾಕಮ್ಮಾ ಉತ್ತರ ಹೇಳ್ತೀಯ, ನಿಮ್ಮ ಅಪ್ಪನಷ್ಟು ವಯಸ್ಸಾಗಿದೆ' ಅಂತ ಹೇಳಬೇಕೂಂತಿದ್ದೆ. ಆದರೆ ಬಾಯಿಂದ ಮಾತು ಹೊರಬೀಳಲಿಲ್ಲ.

ಸಹಾಯ ಬಯಸಿದ ಮುದುಕ ಕೊಡೆಯನ್ನು ಇನ್ನೊಂದು ಕೈಗೆ ಬದಲಾಯಿಸಿಕೊಂಡು, ಬಿಡುವಾಗಿದ್ದ ಕೈಯಿಂದ ತಲೆ ಕೆರೆದುಕೊಂಡು, "ಈವತ್ತಿನವರೆಗೂ ನಾನು, ಅದನ್ನ, ಮರೆತಿರಲಿಲ್ಲ," ಅಂದ.

"ಅದನ್ನ... ಅದನ್ನ ಅಂದ್ರೆ, ಯಾವುದನ್ನ?"

"ಅದೇನಮ್ಮ, ನನ್ನ ಪರ್ಸು. ಅದನ್ನ, ಆ ಕೋಟಿನ ಜೇಬಿನಲ್ಲಿಟ್ಟು ಈ ಕೋಟನ್ನ ಹಾಕ್ಕೊಂಡು ಬಂದಿದ್ದೀನಿ ಈವತ್ತು. ನೋಡಿ ಎಂಥಾ ಪೆದ್ದು ಕೆಲಸ ಮಾಡಿದ್ದೀನಿ, ಇದನ್ನೇನ ಅರಳು-ಮರಳು ಅನ್ನೋದು!"

"ಅಂದ್ರೆ, ನನ್ನನ್ನ ದುಡ್ಡು ಕೇಳ್ತಾ ಇದ್ದೀರೇನು?"

"ಅಯ್ಯೋ ದೇವ್ರೇ, ಹೆಂಗಸರ ಹತ್ತಿರ, ಅದೂ ನಿಮ್ಮಂಥಾ ಮರ್ಯಾದಸ್ಥ ಮಹಿಳೆಯರ ಹತ್ತರ ದುಡ್ಡು ಕೇಳೋದೇ?"

"ಮಳೆ ಬೇರೆ ಬೀಳ್ತಾ ಇದೆ ಜೋರಾಗಿ, ನಿಮಗೇನು ಬೇಕೂಂತ ಬೇಗ ಹೇಳಿ."

"ಮಳೆಯಿಂದ ತಪ್ಪಿಸಿಕೊಳ್ಳೋಕೆ ಕೊಡೆ ಇದ್ರೆ, ಒಳ್ಳೇದು. ನಾನು ನಿಮಗೆ ಅದನ್ನ ಕೊಡ್ತೀನಿ.. ಅದರ ಬದಲು?"

"ಬದಲು?"

"ಹತ್ತು ರೂಪಾಯಿ ಕೊಡಿ, ಆಟೋರಿಕ್ಷಾದಲ್ಲಿ ಮನೇಗೆ ಹೋಗ್ತೀನಿ."

ಸ್ವಲ್ಪ ಕೂಡಾ ದುಡ್ಡಿಲ್ಲದ ಇಲ್ಲಿಗೆ ಹೇಗೆ ಬಂದ್ರಿ?"

"ನಡೆದೇ ಬಂದೆ. ಆರೋಗ್ಯಕ್ಕೆ ಒಳ್ಳೆದೂಂತ ಒಂದು ಸಾರಿ ನಡೆಯೋದು ನನ್ನ ದಿನನಿತ್ಯದ ಅಭ್ಯಾಸ. ಆದರೆ ಕತ್ತಲಾಗೋದಕ್ಕೆ ಮುಂಚೆ ಆಟೊದಲ್ಲೋ ಟ್ಯಾಕ್ಸಿಯಲ್ಲೋ ಹಿಂದಿರುಗೋದೂ ಅಭ್ಯಾಸ. ಎಷ್ಟೋ ವರ್ಷಗಳಿಂದ ಹೀಗೇ ಮಾಡ್ತಾ ಇದ್ದೀನಿ."

''ಈವತ್ತು ಒಂದು ದಿನ ನಡಕೊಂಡೇ ಮನೇಗೆ ಹೋಗಿ; ಹೇಗೂ ಛತ್ರಿ ಇದೆಯಲ್ಲಾ,'' ಅಂದಳು ಅಮ್ಮ ತೀರ್ಪು ಕೊಡುವ ನ್ಯಾಯಾಧೀಶನ ಧ್ವನಿಯಲ್ಲಿ.

''ನಾನೂ ಹಾಗೇ ಅಂದ್ಕೊಂಡೆ. ಆದರೆ, ಈ ನನ್ನ ಕಾಲುಗಳು ಒಪ್ಪಿಕೋಬೇಕಲ್ಲ.''

ಅಮ್ಮನ ಮನಸ್ಸು ಬದಲಾಗ್ತಾ ಇದೆ ಅನ್ನಿಸ್ತು, ಯಾಕೇಂದ್ರೆ, ಅಮ್ಮನ ದೃಷ್ಟಿ ಛತ್ರಿಯ ಕಡೆ ತಿರುಗಿತ್ತು. ಇದನ್ನು ಗಮನಿಸಿದ ಮುದುಕ ಹೇಳಿದ,

''ಇದು, ಬಹಳ ಒಳ್ಳೇ ಛತ್ರಿ.''

''ನೋಡಿದರೇನೇ ಗೊತ್ತಾಗುತ್ತೆ.''


''ಕಪ್ಪು ಟಫಾಟ್ ಬಟ್ಟೆ ನೀರನ್ನು ಸರಿಸಿ ಬಿಡತ್ತೆ.''

''ಕಾಣ್ತಾನೆ ಇದೆ.''

''ನಾನು ಇದಕ್ಕೆ ಬಹಳ ದುಡ್ಡು ಕೊಟ್ಟಿದ್ದೆ. ಇರಲಿ ಬಿಡಿ, ಬೇಗ ಮನೆ ಸೇರಿ ಈ ಕಾಲುಗಳಿಗೆ ವಿಶ್ರಾಂತಿ ಕೊಡಬೇಕು ಅನ್ನಿಸ್ತಾ ಇದೆ.''

ನಾನು ಅಮ್ಮನ ಕಡೆ ನೋಡಿದೆ. ಅವಳ ಬೆರಳು ಪರ್ಸಿನ ಜಿಪ್‌ನೊಂದಿಗೆ ಆಟ ಆಡ್ತಾ ಇದ್ದವು. ಅಮ್ಮ ಬೇರೆಯವರ ಕಡೆ ವಾರೆ ನೋಟ ಬೀರುವ ಹಾಗೆಯೇ ನಾನೂ ಅಮ್ಮನನ್ನು ನೋಡಿದೆ. ಬಾಯಿ ತೆಗೆಯದೆಯೇ, 'ಪಾಪ, ಮುದುಕ, ಕೊಡೆ ಕೊಡ್ತೀನಿ, ಹತ್ತು ರೂಪಾಯಿ ಕೊಡಿ ಅಂದರೆ ಒಪ್ಪಿಕೊಳ್ತಾ ಇದ್ದೀಯಾ? ಇದೂ ಒಂದು ರೀತಿಯ ಶೋಷಣೆ ಅಲ್ವಾ? ಅಸಹಾಯಕತೆಯನ್ನು ದುರುಪಯೋಗ ಮಾಡಿಕೊಂಡ ಹಾಗೆ ಆಗೋದಿಲ್ವಾ?' ಅಂತ ನಾನು ಅಂದ್ಕೊಂಡೆ. ನಂತರ ಅವಳು ಸ್ವಲ್ಪ ಮೃದುವಾದ ಧ್ವನಿಯಲ್ಲಿ ಹೇಳಿದಳು, ''ನಿಮ್ಮಂಥಾವ್ರ ಹತ್ರ ಐವತ್ತು ರೂಪಾಯಿ ಕೊಡೆ ತೊಗೊಂಡು ಹತ್ತು ರೂಪಾಯಿ ಕೊಡೋದು ನ್ಯಾಯ ಅಲ್ಲ. ಹತ್ತು ರೂಪಾಯಿ ಸುಮ್ಮನೇನೇ ಕೊಡ್ತಿನಿ.''

''ಛೆ! ಛೆ! ಎಲ್ಲಾದರೂ ಉಂಟೆ? ಸುಮ್ಮನೆ ನೀವು ಕೊಡ್ತೀನೀಂದ್ರೆ, ನಾನು



''ನಿನಗೆ ಅಲ್ಲಿರುವವರಲ್ಲಿ ಯಾರ ನೆಕ್ಲೇಸ್ ಇಷ್ಟವಾಯಿತು ಹೇಳು, ತಂದ್ಕೊಡ್ತೀನಿ.''

ತೊಗೊಳ್ತೀನಾ? ತೊಗೊಳ್ಳಿ, ಈ ಛತ್ರಿ ನಿಮ್ಮದೇ.''

''ಅಮ್ಮ ನನ್ನ ಕಡೆ ನೋಡಿ, ತುಟಿ ಎರಡು ಮಾಡದೆ ಉತ್ತರಿಸಿದಳು, ಕೇವಲ ಮುಖಭಾವದಿಂದಲೇ: ನೋಡಿದೆಯಾ, ನಾನೇನೂ ನೀನು ಅಂದುಕೊಂಡ ಹಾಗೆ ಮುದುಕನ ಅಸಹಾಯಕತೆಯನ್ನು ದುರುಪಯೋಗ ಮಾಡಿಕೊಳ್ಳಲಿಲ್ಲ, ಅವನೇ ಬಲವಂತ ಪಡಿಸ್ತಾ ಇದ್ದಾನೆ'' ಅಂತ.

ಅಮ್ಮ ತನ್ನ ಪರ್ಸನ್ನು ಬಿಚ್ಚಿ ಮುದುಕನ ಕೈಲಿ ಐದು ರೂಪಾಯಿಯ ಎರಡು ಹಳೇ ನೋಟುಗಳನ್ನು ಇಟ್ಟಳು. ಕೊಡೆ ತೆಗೆದುಕೊಂಡು ಪರ್ಸ್‌ಗೆ ಜಿಪ್ ಹಾಕಿದಳು. ಆ ಮುದುಕ, ''ತುಂಬಾ... ತುಂಬಾ ಉಪಕಾರವಾಯಿತು,'' ಅಂದು, ಜಾಗ ಖಾಲಿ ಮಾಡಿದ.

ಅಮ್ಮ ಕೊಡೆ ಬಿಡಿಸಿ, ''ಈ ಕಡೆ ಬಾ, ಆತ ಛತ್ರಿ ಕೊಟ್ಟು ಹೋಗಿದ್ದಾನೆ, ನಿಮ್ಮಪ್ಪ ಇದೂವರೆಗೂ ಇಂಥಾ ಕೊಡೆ ಕೊಡಿಸಿರಲಿಲ್ಲ ನನಗೆ,'' ಅಂದಳು.

"ಮತ್ತೆ, ಆತ ಮಾತಾಡಿಸಿದಾಗ, ದುರದುರಾಂತ ಯಾಕೆ ನೋಡಿದ್ದು?"

"ಯಾಕೇಂದ್ರೇ ಆತ ಮೋಸಗಾರ ಅಲ್ಲ ಅಂತ ತಿಳಿದುಕೊಳ್ಳಬೇಕಲ್ಲಾ? ತಿಳಿದುಕೊಂಡ ಮೇಲೆ, ಅಯ್ಯೋ ಪಾಪ ಅನ್ನಲಿಲ್ವಾ?"

"ಹೌದು," (ಹತ್ತು ರೂಪಾಯಿ ಕೊಟ್ಟು, ಅದರ ಹತ್ತರಷ್ಟು ಬೆಲೆ ಬಾಳೋ ಕೊಡೆ ಪಡೆದರೆ 'ಪಾಪ' ಅನ್ನಿಸೊಲ್ವಾ ಮತ್ತೆ ಅಂತ ಮನಸ್ಸಿನಲ್ಲೇ ಅಂದುಕೊಂಡ.)

"ಆತ ಒಳ್ಳೇ ಸ್ವಭಾವದವನು ಮಾತ್ರವೇ ಅಲ್ಲದೆ, ಶ್ರೀಮಂತನೂ ಆಗಿರಬೇಕು."

"ಇರಬಹುದು ಅಮ್ಮ."

"ಇಂಥಾದ್ದನ್ನು ನೀನೂ ಜ್ಞಾಪಕ ಇಟ್ಕೊಂಡು ಪಾಠ ಕಲಿಯಬೇಕು. ವಿಷಯ ತಿಳಕೊಳ್ಳದೆ ತಕ್ಷಣ ತೋಚಿದ ಹಾಗೆ ಮಾಡಿಬಿಡಬಾರದು."

"ಆಗಲೀಮ್ಮಾ, ಆ ಮುದುಕ ಸರಸರಾಂತ ಹೇಗೆ ಹೋಗ್ತಾ ಇದ್ದಾನೆ ನೋಡು."

"ಎಲ್ಲಿ?"

"ಅಗೋ ಆ ಬಿಳಿ ಪಟ್ಟೆ ಹಾಕಿದ್ದಾರಲ್ಲಾ ಆ ಕರಿ ರಸ್ತೆಯ ಮೇಲೆ, ಅಲ್ಲಿ.. ಸರಸರಾಂತ ಹೆಜ್ಜೆ ಹಾಕ್ತಾ ಇದ್ದಾನೆ, ಕಾಣ್ಲಿಲ್ವಾ?"

"ಹ್ಞಾಂ! ಕಾಣಿಸಿದ; ಅವನು ಎಷ್ಟು ಉಪಾಯವಾಗಿ ಎದುರಿನಿಂದ ಬಂದವರಿಗೆ ಡಿಕ್ಕಿ ಹೊಡೀದೆ ತಪ್ಪಿಸಿಕೊಂಡು ಹೋಗ್ತಾ ಇದ್ದಾನೆ!"

ಛತ್ರಿ ಕೊಟ್ಟ ಮುದುಕ ಎಡಕ್ಕೆ ತಿರುಗಿದ. ನಾನು ಕೇಳಿದೆ, "ಅವನು ನಡೀತಾ ಇರೋ ರೀತಿ ನೋಡಿದರೆ ಅವನಿಗೆ ಸುಸ್ತಾಗಿದೆ ಅನ್ನಿಸ್ತಾ ನಿನಗೆ?"

"ಅವನು ಆಟೋರಿಕ್ಷಾನೂ ಕರೀತಾ ಇಲ್ಲ ಅನ್ನಿಸುತ್ತೆ."

"ಹೌದು, ಅವನು ಏನೋ ಮಾಡೊಕ್ಕೆ ಪ್ರಯತ್ನಿಸ್ತಾ ಇದ್ದಾನೆ."

"ಏನು ಮಾಡೊಕ್ಕೊ?"

"ನನಗೂ ಗೊತ್ತಾಗ್ತಾ ಇಲ್ಲ, ನೋಡೋಣ ಬಾ."

"ನೋಡು, ಪುನಃ ಅವನು ಬಲಕ್ಕೆ ತಿರುಗಿದ."

ನಾವೂ ಅವನನ್ನು ಹಿಂಬಾಲಿಸಿದೆವು. ಅವನು ನಮಗಿಂತ ಸುಮಾರು ಐವತ್ತು ಅಡಿ ಮುಂದೆ ಇದ್ದ. ಕಾಡುದಾರಿಯಲ್ಲಿ ಮೊಲ ಕುಪ್ಪಳಿಸಿ ಶತ್ರುವಿನಿಂದ ತಪ್ಪಿಸಿಕೊಳ್ಳೋಹಾಗೆ ಆ ಮುದುಕ ಲವಲವಿಕೆಯಿಂದ ನಡೀತಾ ಇದ್ದ. ತಲೆ ಮೇಲೆ ಉದುರ್ತಾ ಇದ್ದ ಮಳೆಹನಿಗಳನ್ನೂ ಅವನು ಲೆಕ್ಕಿಸ್ತಾ ಇರ್ಲಿಲ್ಲ.

"ಅಮ್ಮ, ಅವನು ತಿರುಗಿ ನೋಡಿದರೆ ನಾವು ಕಾಣಿಸಿಬಿಡ್ತಿವಿ."

"ಕಾಣಿಸಿದರೆ ಏನು? ಅವನು ಮೋಸಗಾರನೇ ಇರಬೇಕು. ಕಾಲು ಸೋತಿವೆ, ನಡೆಯೋಕ್ಕಾಗೋಲ್ಲ, ಆಟೋದಲ್ಲಿ ಹೋಗಬೇಕೂಂದ, ಈಗ ಆಟೋಗಳೇ ಓಡಾಡದೆ ಇರೋ ರಸ್ತೆಯಲ್ಲಿದ್ದಾನೆ. ಅಂದ ಮೇಲೆ.... " ಅಮ್ಮನ ಧ್ವನಿ ಗಡಸಾಗಿತ್ತು.

ನಾನು ಕೆಣಕಿದೆ, " ಹಾಗಾದರೆ ಅವನು ಮರ್ಯಾದಸ್ಥ ಅಲ್ಲಾ."

"ನೀನು ಸ್ವಲ್ಪ ಸುಮ್ಮನೆ ಇರ್ತಿಯಾ?"

ಮುಂದಿನ ತಿರುವಿನಲ್ಲಿ ಅವನು ಎಡಕ್ಕೆ ತಿರುಗಿದ. ಸ್ವಲ್ಪ ದೂರ ಹೋಗಿ ಪುನಃ ಬಲಕ್ಕೆ ತಿರುಗಿದ.

"ಅಮ್ಮಾ, ನಮ್ಮಿಂದ ತಪ್ಪಿಸಿಕೊಳ್ಳೊಕ್ಕೆ ಹೀಗೆ ಮಾಡ್ತಾ ಇರಬಹುದಲ್ವಾ?"

"ಅವನು ಎಲ್ಲೇ ಹೋದರೂ ನಾನಂತೂ ಅವನನ್ನು ಬಿಡೋದಿಲ್ಲ."

ನೆಲದ ಮೇಲೆ ನಿಂತಿದ್ದ ಹಳ್ಳವನ್ನು ಹುಷಾರಾಗಿ ದಾಟಿ, ಅಡ್ಡ ಬಂದ ಒಂದಿಬ್ಬರಿಂದ ತಪ್ಪಿಸಿಕೊಂಡು ತಲೆ ಎತ್ತಿದಾಗ ಆ ಮುದುಕ ಅದೃಶ್ಯನಾಗಿದ್ದ.

"ಅವನು, ಎಲ್ಲಿ ಮಾಯ ಆಗಿಬಿಟ್ನಮ್ಮಾ..."

"ಮಾಯಾನೂ ಆಗ್ಲಿಲ್ಲ, ಕರಗಿ ಹೋಗಲೂ ಇಲ್ಲ, ಅಗೋ, ಅಲ್ಲಿ ಆರಿ ಹತ್ತಿಕೊಳ್ತಾ ಇರೋ ದೀಪ ಇದ್ಯಲ್ಲಾ, ಅದರ ಕೆಳಗಿರೋ ಬಾಗಿಲು ತಳ್ಳಿಕೊಂಡು ಒಳಕ್ಕೆ

ಹೋದ. ನಾನು ನೋಡಿದ್ದೀನಿ, ನನ್ನ ಕಣ್ಣು-''

''ಅದೇನಮ್ಮ, ಅದು ಹೋಟಲಾ?''

''ಹ್ಞಾಂ!... ಅಲ್ಲ... ಹ್ಞೂಂ! ಅದೂ ಒಂದು ಥರಾ ಹೊಟಲ್ಲೇ!''

''ನೀನೂ ಅಪ್ಪ ಯಾವತ್ತಾದ್ರೂ, ಅದಕ್ಕೆ ಹೋಗಿದ್ರಾ?''

''ಥೂ ಇಲ್ಲಪ್ಪ-''

''ಥೂ ಯಾಕಮ್ಮ?''

''ಎಂಥಾ ಮುದುಕ ಇವ್ನು.... ನಾವು ಇಲ್ಲೇ ನಿಲ್ಲೋಣ.'' ನಾನು ಸ್ವಲ್ಪ ಪಕ್ಕಕ್ಕೆ ಸರಿದು ಅಗಲವಾದ ಗಾಜಿನ ಬಾಗಿಲಿನೆದುರು ಫುಟ್‌ಪಾತ್ ಮೇಲೆ ನಿಂತೆ. ಆ ಛತ್ರಿ ಮುದುಕ ಒಂದು ದುಂಡು ಸ್ಟೂಲಿನ ಮೇಲೆ ಕೂತಿದ್ದ. ಅವನ ಎದುರಿಗಿದ್ದ ಮೇಜಿನ ಮೇಲೆ ಬೇರೆ ಬೇರೆ ಆಕಾರದ ಗ್ಲಾಸುಗಳಿದ್ದವು. ಮೇಜಿನ ಹಿಂದೆ ಕಪಾಟಿನಲ್ಲಿ, ನವರಾತ್ರಿ ಹಬ್ಬದಲ್ಲಿ ಬೊಂಬೆಗಳನ್ನು ಕೂಡಿಸೋ ಹಾಗೆ ಅನೇಕ ಬಾಟಲಿಗಳನ್ನು ಇರಿಸಿದ್ದರು. ನಾನು ಅಮ್ಮನ ಕೈಯನ್ನು ಹಿಡಿದುಕೊಂಡೆ. ಅಮ್ಮ ತೆರೆದಿದ್ದ ಕೊಡೆಯನ್ನು ಮುಚ್ಚಿದಳು, ಆ ಮುದುಕ ತಾನು ಹಾಕ್ಕೊಂಡಿದ್ದ ಕೋಟು, ಮಫ್ಲರನ್ನು ತೆಗೆದುಬಿಟ್ಟಿದ್ದ.

ಈ ವೇಳೆಗೆ ಬಾಗಿಲ ಹೊರಗೆ ನಿಂತಿದ್ದ ಖಾಕಿ ಬಟ್ಟೆ ಕಾವಲುಗಾರ ಹೊರಹೋಗುವವನಿಗೆ ಬಾಗಿಲು ತೆಗೆದು ಸಲಾಮುಹಾಕಿದ. ಬಾಗಿಲು ಮುಚ್ಚಿಕೊಳ್ಳುವುದರೊಳಗೆ ಆ ಮುದುಕನ ಕೈಯಲ್ಲಿ ಒಂದು ಗ್ಲಾಸುಇದ್ದಿದ್ದು ಕಂಡಿತು. ಗ್ಲಾಸಿನಲ್ಲಿ ಏನೋ ಹಳದಿ ಬಣ್ಣದ್ದು ಇದ್ದಹಾಗಿತ್ತು.


ತಲೆಯೆತ್ತಿ ನೋಡಿದಾಗ ಅಮ್ಮನ ಹುಬ್ಬುಗಳು ಗಂಟು ಹಾಕಿ ಕೊಂಡಿದ್ದು ಕಾಣಿಸಿತು, ''ನಾನು ಕೊಟ್ಟ ಹತ್ತುರೂಪಾಯಿ... ಹೆಂಡಕ್ಕೆ'' ಅಂತ ಗೊಣಗಿಕೊಂಡಳು.

''ಗ್ಲಾಸಿನಲ್ಲಿರೋದು..ಹೆಂಡಾನಾ?''

''ಯಾತರದೋ, ಹೆಂಡನೋ, ಸುಡುಗಾಡೋ''

''ಅಗೋ, ಅವನು ಏಳ್ತಾ ಇದ್ದಾನೆ.''

''ಏಳಲಿ, ಬರಲಿ, ಏನಯ್ಯಾ, ಇಂಥಾ ಕೆಲಸ ಮಾಡಬಹುದಾಂತ ಕೇಳೇ ಬಿಡ್ತಿನಿ.''



ಅಮ್ಮ ಮುಚ್ಚಿದ್ದ ಕೊಡೆಯನ್ನು ಅವನಿದ್ದ ಕಟ್ಟಡದ ಕಡೆ ತೋರಿಸ್ತಾ ಕತ್ತಿಯ ಹಾಗೆ ಝುಳಪಿಸಿದಳು.

ಒಂದರ್ಧ ನಿಮಿಷ ಆ ಮುದುಕ ಕಾಣಿಸ ಲಿಲ್ಲ. ಆಮೇಲೆ ಮುಂದಿನ ಬಾಗಿಲು ತೆರ ಯಿತು. ಕೋಟು, ಮಫ್ಲರ್ ಧರಿಸಿದ್ದ ಛತ್ರಿ ಮುದುಕ ಹೊರಬಿದ್ದ. ಅವನ ಕೈಲಿ ಇನ್ನೊಂದು ಕೊಡೆ ಇತ್ತು!

''ಅಮ್ಮಾ, ಅಮ್ಮಾ ಅಲ್ನೋಡಮ್ಮ ಅವನ ಕೈನಲ್ಲಿ ಇನ್ನೊಂದು ಛತ್ರಿ!'' ಹೊರಗೆ ಬಂದ ಮುದುಕ ನಮ್ಮನ್ನು ಗಮನಿಸಲಿಲ್ಲ.

''ಇನ್ನು ಯಾರಿಗೆ ಟೋಪಿ ಹಾಕ್ತಾನೋ....ನಮ್ಮಂತಹಾ ಯಾರು ಬೇಸ್ತು ಬೀಳ್ತಾರೋ''

ಅಮ್ಮನ ಮಾತು ಮುಗಿಯುವುದರೊಳಗೇ ಇನ್ನೊಂದು ಧ್ವನಿ ಕೇಳಿಸಿತು, ''ರೀ.. ಮೇಡಂ... ನಾನು ಸುಮಾರು ಕಾಲುಗಂಟೆ ಯಿಂದ ನಿಮ್ಮ ಹಿಂದೇನೇ ಬರ್ತಾ ಇದ್ದೀನಿ.''

''ಯಾಕೆ? ಯಾರು ನೀನು, ನಾವೇನು ಮಾಡಿದೆವು''

''ನಾನು...ನನ್ನ ಹೆಸರು ನಾರಾಯಣ ರಾವ್ ಅಂತ, ನೀವೇನೂ ತಪ್ಪು ತಿಳಿದು ಕೊಳ್ಳದೆ ಹೋದ್ರೆ......''

''ಏನು ಬೇಕು, ಬೇಗ ಹೇಳಿ... ಅವನು ಹೊರಟುಹೋಗ್ತಾನೆ-''

''ಅವ್ನು, ಅವ್ನೊಂದ್ರೆ ಯಾರು? ಎಲ್ಲೀಗೆ ಹೊರಟು ಹೋಗ್ತಾನೆ? ಇನ್ನೇನೂ ಇಲ್ಲ... ನನ್ನ ಕೊಡೆ.''

''ಕೊಡೆ? ನನ್ನದೇ.''

ತಕ್ಷಣ ನಾನು ಹೇಳಿದೆ, ''ನಮ್ಮದಲ್ಲ, ಆ ಮುದುಕ ಕೊಟ್ಟದ್ದು... ಹತ್ತು ರೂಪಾಯಿ ಗೆ-''

''ಯಾರು ತಾಯಿ ಅವನು ಹತ್ತು ರೂಪಾ ಯಿಗೆ ಮಾರಿದವನು?''

''ಯಾರಾದರೆ ನಿಮಗೇನು? ನಿಮ್ಮದಾಗಿ ದ್ದರೆ ನೀವು ಕೇಳಬೇಕು.''

''ಅದಕ್ಕೇ ಕೇಳ್ತಾ ಇದ್ದೀನಿ... ನನ್ನದೇ ಇರೋ ಹಾಗಿದೆ... ಒಂದ್ನಿಮಿಷ ಇಲ್ಲಿ ಕೊಡ್ತೀರಾ?''

ಅಮ್ಮ ನನ್ನ ಕಡೆ ನೋಡಿ ಆತನ ಕೈಗೆ ಕೊಟ್ಟಳು. ಆತ ಕೊಡೆಯ ಮಧ್ಯಭಾಗದ ಲ್ಲಿದ್ದ ಕಡ್ಡಿಯನ್ನು ಮೃದುವಾಗಿ ಸವರಿ ಹಿಡಿ ಕೆಗೆ ಸ್ವಲ್ಪ ಹಿಂದೆ ಹೆಚ್ಚೆರಳನ್ನು ಅಮುಕಿ ಸಂತೋಷದಿಂದ ಹೇಳಿದ, ''ಹ್ಞಾಂ, ನೋಡಿ, ಇಲ್ಲಿದೆ ನನ್ನ ಹೆಸರು!''

ಅಮ್ಮ ಆತನ ಹೆಸರನ್ನು ನೋಡುವ ಗೋಜಿಗೆ ಹೋಗಲಿಲ್ಲ. ಗಡುಸಾಗಿಯೇ ಹೇಳಿದಳು, ''ನಿಮ್ಮದಾದರೆ ನೀವೇ ಇಟ್ಟು ಕೊಳ್ಳಿ, ನಮಗೇನೂ ಬೇಡ. ಇದನ್ನು ಕೊಟ್ಟ ಆ ಮೋಸಗಾರ ಮುದುಕ ಎಲ್ಲಿ ಹೊರಟು ಹೋದನೊ ಏನೋ....ಈ ವೇಳೆಗೆ ಆ ಎರ ಡನೇ ಛತ್ರಿಯನ್ನೂ?''

ನಾನು ಮಧ್ಯೆ ಬಾಯಿಹಾಕಿದೆ, ''ಇನ್ನೊಂದು ಗ್ಲಾಸನ್ನು ಕೈಲಿ ಹಿಡಿದು ಕೊಂಡು ಕೂತಿರಬಹುದು ಅಲ್ವೇನಮ್ಮ?''

ನನ್ನ ಮಾತಿಗೆ ಉತ್ತರಿಸುವ ಸ್ಥಿತಿಯಲ್ಲಿರ ಲಿಲ್ಲ ಅಮ್ಮ. ಈ ವೇಳೆಗೆ ಮಳೆ ನಿಂತುಹೋ ಗಿತ್ತು. ಛತ್ರಿಯ ಮಾಲಿಕ ಜನರ ಮಧ್ಯೆ ಮಾಯವಾಗಿದ್ದ. ಮೋಸಮಾಡಿದವನೂ ಮರೆಯಾಗಿದ್ದ.

''ಅಮ್ಮಾ, ನಾವೂ ಆಟೋದಲ್ಲೇ ಮನೆಗೆ ಹೋಗೋಣವಾ?''

ಏನೂ ಬೇಡ; ಬಸ್ಸಿನಲ್ಲೇ ಹೋಗೋಣ. ಈ ಛತ್ರಿಪುರಾಣ ನಿಮ್ಮಪ್ಪನಿಗೆ ಹೇಳದೆ ಇದ್ರೆ ನಾಳೇನೂ ನಿನ್ನ ಕರಕೊಂಡು ಬಂದು ಫ್ರೂಟ್ ಸಲಾಡ್ ಕೊಡಿಸ್ತೀನಿ,'' ಅಂದಳು ಅಮ್ಮ.

ಈ ಸಾರಿ ನಾನೇ ಅಮ್ಮನ ಕೈ ಹಿಡಿದು ಕೊಂಡೆ. ★

ಟಿಬೇಟದ ''ಅರುತ್ಸ' ಸರೋವರದ ನೀರು ಪ್ರತಿ 12 ವರುಷಗಳಿಗೊಮ್ಮೆ ಸಿಹಿಯಾಗಿಯೂ ನಂತರ 12 ವರುಷ ಉಪ್ಪಾಗಿಯೂ ಪರಿವರ್ತನೆಗೊಳ್ಳುತ್ತದೆ. -ಕಾಣಕೋಣಕರ

ಮೊಗಲ್ ಸಾಮ್ರಾಜ್ಯದ ಅರಮನೆಯ ಸುಂದರಿ

★ ಪಿ.ಎಸ್.ಅಭಿನಂದನ

'ಮೀನಾ ಬಜಾರ್' ಅಂತ:ಪುರಕ್ಕೆ ಸಂಬಂಧಿಸಿದ ಖಾಸಗಿ ಮಾರುಕಟ್ಟೆ. ಅಲ್ಲಿ ಉಚ್ಚ ಕುಲದ ಸ್ತ್ರೀಯರು ತಮ್ಮ ಪ್ರಸಾಧನ ವಸ್ತುಗಳನ್ನು ಖರೀದಿಸುತ್ತಿದ್ದರು. ಅಲ್ಲಿ ಅಕ್ರಮ ಪ್ರವೇಶ ಮಾಡಿ ಸಿಕ್ಕಿಬಿದ್ದ ಪುರುಷರ ಕೈಕಾಲು ಕತ್ತರಿಸಲಾಗುತ್ತಿತ್ತು. ತಿಂಗಳಲ್ಲಿ ಒಂದೆರಡು ದಿನಗಳಲ್ಲಿ ಮಾತ್ರ ಮುಕ್ತ ಪ್ರವೇಶ. ಒಮ್ಮೊಮ್ಮೆ 'ಮೀನಾ ಬಜಾರಿ'ಗೆ ಬಾದಷಹ ಕೂಡ ಬರುತ್ತಿದ್ದ. ಸಾಮಾನ್ಯವಾಗಿ ನಮ್ರವಾಗಿರುತ್ತಿದ್ದ ಪತ್ನಿ, ಉಪಪತ್ನಿಯರು ಇಲ್ಲಿ ತುಂಟ ಅಂಗಡಿ ಕಾರರರಾಗಿರುತ್ತಿದ್ದರು. ಆಗ ಅವರು ಬುರುಕಾಗಳನ್ನು ಧರಿಸುತ್ತಿರಲಿಲ್ಲ. ಪ್ರಾಸಬದ್ಧ ಪರ್ಷಿಯನ್ ದ್ವಿಪದಿಗಳಲ್ಲಿ ಬೆಲೆ ಚರ್ಚಿತವಾಗುತ್ತಿತ್ತು.

1607ರಲ್ಲಿ ಇಂಥ ಒಂದು ಮೀನಾ ಬಜಾರಿಗೆ ರೇಷ್ಮೆ ಹಾಗೂ ಕಾಜಿನ ಮಣಿಗಳ ನರ್ತಕಿಯಾಗಿ ಪ್ರಧಾನಿಯ ಹದಿನೈದು ವರ್ಷದ ಮಗಳು ಅರ್ಜುಮನ್ ಬಾನು ಬೇಗಂ ಆಗಮಿಸಿದ್ದಳು. ಪ್ರಧಾನಿ ಅಸಫ್‌ಖಾನ್ ಪ್ರಭಾವಿಯೂ ಸಂಶಯದ ಸ್ವಭಾವದವನೂ ಆಗಿದ್ದ. ಇಂಥ ಮುಕ್ತ ದಿನಗಳಂದು ಸಹ ಅವನ ಸಂಬಂಧಿಗಳೊಂದಿಗೆ ಲಘುವಾಗಿ ನಡೆದುಕೊಳ್ಳುವುದು ಅಪಾಯಕಾರಕವಾಗಿತ್ತು.

ಆ ದಿನ ರಾಜಕುಮಾರ ಖುರ‍್ರಮ್ ಮೀನಾ ಬಜಾರಿಗೆ ಬಂದ. ಮಾರುಕಟ್ಟೆಯ ಮೂಲೆಯಲ್ಲಿದ್ದ ಅಪೂರ್ವ ಸುಂದರಿ ಅರ್ಜುಮನ್ನಳ ಮೇಲೆ ಅವನ ದೃಷ್ಟಿ ನೆಟ್ಟಿತು. ಕ್ಷಣಾರ್ಧದಲ್ಲಿ ಅವಳ ಮುಂದೆ ನಿಂತು, ವಜ್ರದ ಆಕಾರದಲ್ಲಿ ಕೊರೆದಿರಿಸಲಾಗಿದ್ದ ಕಾಜಿನ ಬೆಲೆ ವಿಚಾರಿಸಿದ. ಅವಳು ಅದು ನಿಜವಾದ ವಜ್ರವೆಂದೇ ಸಾಧಿಸಿ, ಬೆಲೆ ಹತ್ತುಸಾವಿರ ರೂಪಾಯಿಗಳೆಂದು ಹೇಳಿದಳು. ಜೊತೆಗೆ, ''ನಿನ್ನಂಥ ರಾಜಕುಮಾರನೂ ಅಷ್ಟು ಬೆಲೆ ನೀಡಲಾರ,'' ಎಂಬ ಚುಚ್ಚು ಮಾತನ್ನೂ ಸೇರಿಸಿದಳು.

ಖುರ‍್ರಮ್ ಸ್ತಂಭೀಭೂತನಾಗಿ ಅವಳನ್ನೇ ನೋಡುತ್ತಾ ನಿಂತ. ಆಸ್ಥಾನದ ಹರಟೆಮಲ್ಲರು, ಅರ್ಜುಮನ್ನಳ ಅಪೂರ್ವ ಸೌಂದರ್ಯದ ಬಗೆಗೆ ಅದೇಕೆ ಪಿಸುಗುಟ್ಟಿರಲಿಲ್ಲ ಎಂದು ಅವನಿಗೆ ಸೋಜಿಗ. ಮರುಮಾತಿಲ್ಲದೆ ಹತ್ತು ಸಾವಿರ ತೆತ್ತು ಕಾಜಿನ ಮಣಿಯನ್ನೂ ಅದರೊಂದಿಗೆ ಅರ್ಜುಮನ್ನಳ ಹೃದಯವನ್ನೂ ತೆಗೆದುಕೊಂಡು ಹೊರಟ.

ಪ್ರಧಾನಿಯ ಮಗಳನ್ನು ಲಗ್ನವಾಗಲು ಖುರ‍್ರಮ್ ತನ್ನ ತಂದೆ ಜಹಾಂಗೀರನ ಸಮ್ಮತಿಗಾಗಿ ಅಹವಾಲು ಸಲ್ಲಿಸಿದ. ಮೊಗಲ ರಾಜಮನೆತನಗಳಲ್ಲಿ ಪ್ರೇಮ ವಿವಾಹಗಳ ಸೊಲ್ಲಿರಲಿಲ್ಲ. ಎಷ್ಟು ಬೇಕಾದರೂ ಉಪಪತ್ನಿಯರನ್ನು ಹೊಂದಿರಬಹುದಿತ್ತು. ಆದರೆ ಖುರ‍್ರಮ್ ನಿಜಕ್ಕೂ ಧೈರ್ಯಶಾಲಿ. ಪಟ್ಟುಹಿಡಿದಾಗ ಜಹಾಂಗೀರ ಸಮ್ಮತಿ ಸೂಚಿಸಿದ.

ಇದಾದ ಒಂದು ವರ್ಷದ ನಂತರ ಖುರ‍್ರಮ್‌ನ ವಿವಾಹವಾಯಿತು. ಅರ್ಜುಮನ್ನಳೊಂದಿಗಲ್ಲ. ಪರ್ಷಿಯ ರಾಜಮನೆತನದ ಸಂಬಂಧಿಕಳೊಂದಿಗೆ. ವಿವಾಹ ರಾಜಕೀಯ ಕಾರಣಗಳನ್ನು ಅವಲಂಬಿಸಿದ್ದಲ್ಲದೆ ವಿವಾಹದ ದಿನಾಂಕ ಆಸ್ಥಾನ ಜೋತಿಷಿಗಳ ಅಭಿಪ್ರಾಯವನ್ನವಲಂಬಿಸಿತ್ತು. ವಿವಾಹಕ್ಕಾಗಿ ವಧೂವರರು ಐದು ವರ್ಷ ಕಾಯಬೇಕಾಯಿತು. ಮದುವೆಗೆ ಮುನ್ನ ಅವರೀರ್ವರೂ ಭೇಟಿಯಾಗುವಂತಿರಲಿಲ್ಲ. ಕೊನೆಗೆ 1612ರ ಮಾರ್ಚ್ 27ರಂದು ಗ್ರಹಗತಿಗಳು ಸರಿಯಾಗಿವೆಯೆಂದು ರಾಜಜ್ಯೋತಿಷಿಗಳು ತೀರ್ಮಾನಿಸಿದರು. ಜಹಾಂಗೀರ್ ತನ್ನ ಸೊಸೆಯ ಅಪ್ರತಿಮ ಸೌಂದರ್ಯವನ್ನು ಮೆಚ್ಚಿ 'ಅರಮನೆಯ ಸುಂದರಿ' ಎಂದು ಅಬಿದಾನವಿತ್ತ ★

ಕಸ್ತೂರಿ ನಡೆದು ಬಂದ ದಾರಿ

1969ರ ಜುಲೈ ಸಂಚಿಕೆಯಲ್ಲಿ ಪ್ರಕಟವಾದದ್ದು

ಕಾಂಬೇಕರ ರಸ್ತೆ ಕೊಲೆ ಪ್ರಕರಣ

ಸಿ.ಕೆ.ರಜದಾನ್

ಮುಂಬಯಿಯಲ್ಲಿ ಜರುಗಿದ ಅನೇಕಾನೇಕ ಕೊಲೆ ಪ್ರಕರಣಗಳಲ್ಲಿ "ಕಾಂಬೇಕರ ರಸ್ತೆ ಕೊಲೆ" ಪ್ರಕರಣ ಅತ್ಯಂತ ಕ್ರೂರವಾದದ್ದೂ ಅವಿಸ್ಮರಣೀಯವೂ ಆಗಿದೆ.

1890, ಫೆಬ್ರುವರಿ ತಿಂಗಳಲ್ಲಿ ನಗರದಲ್ಲಿ ಭೀಕರ ಕಾಲರಾ ಹಾವಳಿ ತಲೆದೋರಿತು. ಆಗ ಒಂದು ಮುಂಜಾನೆ ಗೋವಿಂದದಾಸ ರಾಮಲಾಲ ಮತ್ತು ಅವನ ಕುಟುಂಬದ ಐದು ಜನರು ತೀವ್ರ ಕಾಲರಾದಿಂದ ರಾತ್ರಿ ಸತ್ತು ಹೋದರು ಎಂದು ಸುದ್ದಿ ಹರಡಿದಾಗ ಜನ ಆಶ್ಚರ್ಯಾಘಾತದಿಂದ ದಿಙ್ಮೂಢರಾದರು. ಗೋವಿಂದದಾಸರ ತಮ್ಮನ ಮಗ ಹರಿಚಂದ ಎಂಬ ತರುಣನೊಬ್ಬ ಮಾತ್ರ ಬೇನೆಗೆ ತುತ್ತಾಗದೆ ಬದುಕಿದ್ದ.

ಹಿಂದು ಪದ್ಧತಿಯಂತೆ ಶವಗಳ ದಹನಕ್ಕಾಗಿ ಸಿದ್ಧತೆಗಳು ಬೇಗ ಬೇಗ ಮಾಡಲ್ಪಟ್ಟು ಮೂರು ಸಂಜೆಯ ಹೊತ್ತಿಗೆ ಸ್ಮಶಾನಕ್ಕೆ ಮೆರವಣಿಗೆ ಹೊರಟಿತು.

ಆದರೆ ಸ್ವಲ್ಪವೇ ದೂರ ಸಾಗಿದ್ದಾಗ ಪೋಲೀಸ್ ಅಧಿಕಾರಿಯೊಬ್ಬ ಕೆಲ ಶಿಪಾಯಿಗಳೊಂದಿಗೆ ಬಂದು ಅದನ್ನು ತಡೆದು ಶವಗಳನ್ನು ಪರೀಕ್ಷೆಗಾಗಿ ಶವಾಲಯಕ್ಕೆ ಸಾಗಿಸಬೇಕೆಂದು ಅಪ್ಪಣೆ ಮಾಡಿದ. ಮೆರವಣಿಗೆಯಲ್ಲಿದ್ದ ಗೋವಿಂದದಾಸನ ಜ್ಞಾತಿಬಾಂಧವರು ಗದ್ದಲವೆಬ್ಬಿಸಿ ಶಿಪಾಯಿಗಳ ಮೇಲೆ ಏರಿಹೋದರು. ಪ್ರತಿಭಟನೆಯಲ್ಲಿ ಹರಿಚಂದ ಎಲ್ಲರಿಗೆ ಮುಂದಿದ್ದ. ಆದರೆ ಶಿಪಾಯಿಗಳು ಬಂದೂಕಿನ ಬಲದಿಂದ ಜನರನ್ನು ಹಿಮ್ಮೆಟ್ಟಿಸಿ ಶವಗಳನ್ನು ವಶಕ್ಕೆ ತೆಗೆದುಕೊಂಡರು.

ಡಾಕ್ಟರರು ಶವಗಳನ್ನು ತಪಾಸಿಸಿದಾಗ ಮೃತರು ಕಾಲರಾದಿಂದ ಸತ್ತಿರದೆ ವಿಷ ಪ್ರಯೋಗದಿಂದ ಸತ್ತಿದ್ದಾರೆಂದು ಖಚಿತವಾಯಿತು.

ಹೆಚ್ಚಿನ ತಪಾಸಣೆ ಮಾಡಿದಾಗ ಕೇವಲ ಎರಡು ದಿನಗಳ ಹಿಂದೆ ಹರಿಚಂದ ಓರ್ವ ವ್ಯಾಪಾರಿಯಿಂದ 50 ಕ್ಕಿಂತಲೂ ಹೆಚ್ಚು ಜನರನ್ನು ಕೊಲ್ಲಲು ಸಾಲುವಷ್ಟು ಸ್ಟ್ರಿಕ್ನೈನ್ ಎಂಬ ವಿಷವನ್ನು ಕೊಂಡಿದ್ದನೆಂದು ತಿಳಿದುಬಂತು.

ಹರಿಚಂದನನ್ನು ಪೋಲಿಸರು ಹುಡುಕಿದರು. ಆದರೆ ಅಷ್ಟರಲ್ಲಿ ಪರಾರಿಯಾಗಿದ್ದ ಆತ ಅವರ ಕೈಗೆ ಸಿಗಲಿಲ್ಲ. ತಿಂಗಳುಗಟ್ಟಲೆ ದೇಶಾದ್ಯಂತ ಅವನನ್ನು ಹುಡುಕಿದರೂ ಅವನ ಪತ್ತೆ ಹತ್ತಲಿಲ್ಲ.

ಹರಿಚಂದ ಈ ಹೀನ ಅಪರಾಧಗೈಯುವುದಕ್ಕೆ ತನ್ನ ಮಾವನ ಆಸ್ತಿಯನ್ನು ದೊರಕಿಸಿಕೊಳ್ಳಬೇಕು ಎಂಬ ಆಶೆ ಮತ್ತು ಪ್ರೇಮಭಂಗ ಇವೇ ಕಾರಣವಾದವು ಎಂದು ತಿಳಿಯಿತು.

ಗೋವಿಂದದಾಸನ ಪ್ರೀತಿಯ ಸೋದರ

ಒಂದು ಕೊಲೆ ಪ್ರಕರಣದ ಇನ್ನೂ ದುರಂತವಾದ ಕೊನೆಯನ್ನು ಲೇಖಕರು ತಮ್ಮ ಅಜ್ಜನ ಡೈರಿಯಿಂದ ಎತ್ತಿ ಕೊಟ್ಟಿದ್ದಾರೆ.

ಸೊಸೆ ಮೋತಿಯನ್ನು ಲಗ್ನವಾದರೆ ಅನಾಯಾಸವಾಗಿ ತನಗೆ ಗೋವಿಂದದಾಸನ ಸಂಪತ್ತು ಲಭ್ಯವಾಗುವುದೆಂದು ಹರಿಚಂದ ಲೆಕ್ಕ ಹಾಕಿಕೊಂಡಿದ್ದ. ಆದರೆ ಗೋವಿಂದದಾಸ ಸ್ವಜಾತಿಯ ಇನ್ನೋರ್ವ ಶ್ರೀಮಂತನ ಮಗನಿಗೆ ಮೋತಿಯನ್ನು ಕೊಟ್ಟು ಲಗ್ನ ಮಾಡಿದ. ಹರಿಚಂದ ಹೊರಗೆ ತನ್ನ ನಿರಾಶೆ ಅಸಮಾಧಾನಗಳನ್ನು ವ್ಯಕ್ತಪಡಿಸದಿದ್ದರೂ ಲಗ್ನಸಮಾರಂಭಗಳು ಮುಗಿದೊಡನೆ ಶೀಘ್ರದಲ್ಲೆ ವಿಷಪ್ರಯೋಗ ಮಾಡಿ ಗೋವಿಂದದಾಸನ ಮೇಲೆ ತನ್ನ ಸೇಡು ತೀರಿಸಿಕೊಂಡ.

ಕೊಲೆಗಾರ ಪರಾರಿಯಾದ್ದರಿಂದಲೂ ಗೋವಿಂದದಾಸನ ಆಸ್ತಿಗೆ ಬೇರೆ ವಾರಸುದಾರರು ಇಲ್ಲದ್ದರಿಂದಲೂ ಮೋತಿ ಮತ್ತು ಅವಳ ಗಂಡ ಚಂದರದಾಸನಿಗೆ ಗೋವಿಂದದಾಸನ ಆಸ್ತಿಯೆಲ್ಲ ಸಿಕ್ಕಿತು. ಆದರೆ ಅವರಿಗೆ ಆ ಸಂಪತ್ತು ಸುಖದಾಯಕವಾಗಲಿಲ್ಲ. ಹರಿಚಂದನ ದುಷ್ಟತನದ ಕಲ್ಪನೆ ಅವರಿಗಿತ್ತಾದ್ದರಿಂದ ಆತ ತನ್ನ ಉದ್ದೇಶ ಸಾಧನೆಗಾಗಿ ಯಾವ ಹೊತ್ತಿಗೆ ಏನು ಮಾಡಿಯಾನು ಎಂಬ ಭಯ ಅವರಿಗಿದ್ದೇ ಇತ್ತು. ಹರಿಚಂದನ ದುಷ್ಕೃತ್ಯದಿಂದಾಗಿ ಆತ ಯಾರಿಂದ ಸಂಪತ್ತನ್ನು ಕಸಿದುಕೊಳ್ಳಬೇಕೆಂದಿದ್ದನೊ ಅವರಿಗೇ ಆ ಸಂಪತ್ತು ಸಿಕ್ಕಿತ್ತು.

ದು:ಖತಪ್ತಳಾದ ಮೋತಿಗೆ ಹರಿಚಂದನ ಭಯ ಸದಾ ಕಾಡಿಸುತ್ತಿತ್ತಾದ್ದರಿಂದ ಆಸ್ತಿಯೆಲ್ಲವನ್ನು ಮಾರಿ ಎಲ್ಲಿಯಾದರೂ ದೂರ ಹೋಗಿ ಇರೋಣವೆಂದು ಅವಳು ಸದಾ ಗಂಡನನ್ನು ಬೇಡಿಕೊಳ್ಳುತ್ತಿದ್ದಳು. ಆದರೆ ಹರಿಚಂದನ ಮಟ್ಟಿಗೆ ತಾವು ಬೇರೆ ಯಾವ ಸ್ಥಳಕ್ಕಿಂತಲೂ ಮುಂಬಯಿಯಲ್ಲೆ ಹೆಚ್ಚು ಸುರಕ್ಷಿತರು ಎಂದು ಚಂದರದಾಸ ಹೇಳುತ್ತಿದ್ದ.

ಮೋತಿಗೆ ಇದರಿಂದ ಸಮಾಧಾನವಾಗಲಿಲ್ಲ. ಕೊನೆಗೆ ಎಲ್ಲಿ ವಾಸ್ತವ್ಯ ಮಾಡಬೇಕು ಎಂಬ ನಿರ್ಧಾರವನ್ನೂ ಮಾಡಿಕೊಳ್ಳದೆ ಅವರಿಬ್ಬರೂ ಮುಂಬಯಿ ಬಿಟ್ಟು ಹೋದರು. ಮುಂದೆ ಅವರು ಮುಂಬಯಿಯಲ್ಲಿ ಎಂದೂ ಕಾಣಿಸಿಕೊಳ್ಳಲಿಲ್ಲ.

ಜನರಲ್ಲಿ ಆಶ್ಚರ್ಯಕರ ಗಡಬಡಿಯನ್ನುಂಟು ಮಾಡಿದ ಈ ಪ್ರಕರಣವನ್ನೂ ಕಾಂಬೇಕರ ರಸ್ತೆಕೊಲೆ ಪ್ರಕರಣವನ್ನೂ ನಾನು ಹೆಚ್ಚು ಕಡಿಮೆ ಮರೆತಿದ್ದಾಗ ಹಲವು ವರ್ಷಗಳ ನಂತರ ಈ ಕಥೆಯ ದುರಂತ ಉತ್ತರರಾಮಾಯಣ ನನಗೆ ಅಕಸ್ಮಾತ್ತಾಗಿ ತಿಳಿಯುವಂತಾಯಿತು.



ನಾನು ಪ್ರಾಚೀನ ನಗರವಾದ ಹೈದ್ರಾಬಾದಿಗೆ ಹೋಗಿದ್ದೆ. ಮೋಟಾಭಾಯಿ ಎಂಬ ಫಾರಸಿ ಗೃಹಸ್ಥರಲ್ಲಿ ಅತಿಥಿಯಾಗಿದ್ದೆ. ನನ್ನನ್ನು ತುಂಬ ಆದರದಿಂದ ಬರಮಾಡಿಕೊಂಡ ಅವರು ನನಗೆ ನಗರದ ವಿಶೇಷಗಳೆಲ್ಲವನ್ನೂ ತೋರಿಸಿದರು. ನನಗೆ ಸೆರೆಮನೆ ನೋಡುವ ಬಯಕೆಯಿರಲಿಲ್ಲ. ಆದರೆ ಹೈದರಾಬಾದಿನ ಸೆರೆಮನೆ ಮಾದರಿ ಸೆರೆಮನೆ, ನೀವು ನೋಡಲೇಬೇಕು ಎಂದು ಅವರು ನನ್ನನ್ನಲ್ಲಿಗೆ ಕರೆದೊಯ್ದರು.

ಸೆರೆಮನೆಯಲ್ಲಿ ಕಂದು ಬಣ್ಣದ ಟೊಪ್ಪಿಗೆಗಳನ್ನೂ ಕಾಲಿಗೆ ಬೇಡಿಗಳನ್ನೂ ಧರಿಸಿದ ಕೆಲ ಸೆರೆಯಾಳುಗಳು ಕಮ್ಮಾರ ಕೆಲಸವನ್ನು ಮಾಡುತ್ತಿದ್ದ ವಿಭಾಗ ನನಗೆ ಬಹಳ ಹಿಡಿಸಿತು. ಅವರು ಬಹಳ ಶ್ರಮಪಟ್ಟು ದುಡಿಯುತ್ತಿದ್ದರು. ಅವರ ಸುತ್ತಲೂ ಕುಲುಮೆಯ ಕಿಡಿಗಳು ಹಾರುತ್ತಿದ್ದವು. ''ದಣಿದು ಸುಣ್ಣವಾಗುವವರೆಗೂ ಇವರು ದುಡಿಯುತ್ತಾರೆ, ಇಂಥ ಕೆಲಸ ಸಿಕ್ಕಿದಾಗ'' ಎಂದು ಒಬ್ಬ ವಾರ್ಡನ್ ಹೇಳಿದ.

''ಇಂಥ ಕೆಲಸ! ಅವರೇನನ್ನು ತಯಾರಿಸುತ್ತಿದ್ದಾರೆ?'' ನಾನು ಕೇಳಿದೆ.

''ಬೇಡಿಗಳು.''

ಅಲ್ಲಿ ದುಡಿಯುತ್ತಿದ್ದ ಸೆರೆಯಾಳುಗಳಲ್ಲಿ ಒಬ್ಬನ ನನಗೆಬಗ್ಗೆ ಕುತೂಹಲ ಕೆರಳಿತು. ಆತ ಉಳಿದವರಿಗಿಂತ ಭಿನ್ನವಾಗಿದ್ದ. ಉಚ್ಚವರ್ಣದ ಹಿಂದೂ ಇರಬೇಕು ಆತ. ಅವನ ಮುಖವೂ ನನಗೆ ಎಲ್ಲೊ ನೋಡಿದ್ದಂತೆ ಅನಿಸಿತು.

ಗಂಟೆಯಾದೊಡನೆ ಕೆಲಸ ನಿಂತಿತು. ಸೆರೆಮನೆಯ ನಿಯಮಗಳು ಅಷ್ಟು ಕಟ್ಟುನಿಟ್ಟಾಗಿರದ್ದರಿಂದ ನನಗೆ ಆ ಕೈದಿಯನ್ನು ಕಂಡು ಮಾತನಾಡಲು ಅಪ್ಪಣೆ ಸಿಕ್ಕಿತು.

ನಾನು ಅವನನ್ನು ಕೂಗಿದಾಗ ಆತ ಗೌರವದಿಂದ ನಮಸ್ಕಾರ ಮಾಡಿದನಾದರೂ ಮಾತನಾಡುವ ಲವಲವಿಕೆ ತೋರಿಸಲಿಲ್ಲ. ನಾನು ಮುಂಬಯಿಯಿಂದ ಬಂದವನು, ನಿನ್ನನ್ನು ನೋಡಿದ ನೆನಪಿದೆ ಎಂದೆ. ಆತ ತನ್ನ ಹೆಸರು ಹೇಳಿದಾಗ ನಾನು ಆಶ್ಚರ್ಯದಿಂದ ಮೂಕನಂತಾದೆ. ಆತ ಮೋತಿ ಗಂಡ ಚಂದರದಾಸನಾಗಿದ್ದ.

ನೀನೇತಕ್ಕೆ ಜೇಲಿನಲ್ಲಿದ್ದಿ ಎಂದು ಕೇಳಿದಾಗ ಆತ ಈ ಮುಂದಿನ ಕಥೆ ಹೇಳಿದ. ಅದು ಪೂರ್ತಿ ಸತ್ಯವಿರಬಹುದು, ಇಲ್ಲದಿರಬಹುದು. ಆದರೆ ಸೇಡುತೀರಿಸಿಕೊಳ್ಳಲು ಪಣತೊಟ್ಟ ಮನುಷ್ಯನ ಯುಕ್ತಿ ಪ್ರಯುಕ್ತಿಗಳಿಗೆ ಅದು ಸರಿಹೋಗುತ್ತದೆ ಎಂದು ನನಗೆ ಖಾತ್ರಿಯಾಯಿತು.

ಚಂದರದಾಸ ಮತ್ತು ಮೋತಿ ಮುಂಬಯಿಯನ್ನು ಬಿಟ್ಟ ನಂತರ ಉತ್ತರ ಭಾರತದಲ್ಲಿ ಸಂಚರಿಸುತ್ತ ಕೊನೆಗೆ ಹೈದ್ರಬಾದಿಗೆ ಬಂದು ಅಲ್ಲೆ ನೆಲೆಸಲು ನಿಶ್ಚಯ ಮಾಡಿದರು. ಊರಿಗೆ ಬಂದ ಹೊಸಬರ ಪರಿಚಯ-ಸ್ನೇಹ ಮಾಡಿಕೊಳ್ಳಲು ಜಾತಿಬಾಂಧವರು ಯತ್ನಿಸಿದರೂ ಚಂದರದಾಸ ಮತ್ತು ಮೋತಿಯರು ಹಚ್ಚಿಕೊಳ್ಳಲಿಲ್ಲ. ಅದೇ ಅವರು ಮಾಡಿದ ಮಹಾ ಪ್ರಮಾದವಾಯಿತು. ಜನ ಇವರಿಂದ ದೂರವಿರತೊಡಗಿದರು. ಒಳ್ಳೆಯ ಉದ್ದೇಶದಿಂದ ಇವರು ಹೈದ್ರಾಬಾದಿಗೆ ಬಂದವರಲ್ಲ ಎಂದು ಜನ ಭಾವಿಸಿದರು.

ಮೋತಿ ಸದಾ ಮನೆಯಲ್ಲೆ ಇರುತ್ತಿದ್ದಳು. ಹೊರಗೆ ಬರುತ್ತಲೇ ಇರಲಿಲ್ಲ. ಆದರೆ ಚಂದರದಾಸ ಪೇಟೆಯಲ್ಲಿ ಅಡ್ಡಾಡುವಾಗ ಜನ ಅವನನ್ನು ಹೀಯಾಳಿಸುತ್ತಿದ್ದರು. ಪೋಲೀಸರು ಕೂಡ ಸಂಶಯದಿಂದ ಚಂದರದಾಸನ ಮೇಲೆ ಕಣ್ಣಿಟ್ಟಿದ್ದರು. ಈ ದುರ್ಭಾಗ್ಯ ದಂಪತಿಗಳಿಗೆ ಅವರು ಬಯಸಿದ ಶಾಂತಿ ಬಹಳ ಕಾಲ ಲಭ್ಯವಾಗಲಿಲ್ಲ.

ಒಂದು ರಾತ್ರಿ ಚಂದರದಾಸ ಮತ್ತು ಮೋತಿ ಮಾಳಿಗೆಯ ಕಟಾಂಜನದಲ್ಲಿ ಕುಳಿತಿದ್ದಾಗ ಕೆಳಗಿನ ಅಂಗಳದಲ್ಲಿ ಯಾರೋ ನರಳುತ್ತಿದ್ದ ಸಪ್ಪಳ ಕೇಳಿಸಿತು. ಗಾಬರಿಗೊಂಡ ಚಂದರದಾಸ ಕೆಳಗೆ ಬಗ್ಗಿ ನೋಡಿದ. ಕತ್ತಲೆಯಿದ್ದರೂ ನೆಲದ ಮೇಲೆ ಯಾರೂ ಬಿದ್ದಿರು

ವುದು ಕಾಣಿಸಿತು. ಅಷ್ಟರಲ್ಲಿ ಮೊದಲಿಗಿಂತಲೂ ಕರುಣಾಜನಕವಾದ ನರಳಾಟ ಕೇಳಿ ಬರಲು ಚಂದರದಾಸ ತನ್ನ ಸೇವಕರನ್ನು ಕೂಗುತ್ತಾ ಕೆಳಗೆ ಅಂಗಳಕ್ಕೆ ಧಾವಿಸಿದನು.

ನರಳುತ್ತಿದ್ದ ಸಾಧುವನ್ನು ಬಂಗಲೆಯೊಳಗೆ ಹೊತ್ತು ತಂದರು. ಲಂಗೋಟಿಯ ವಿನಾ ಅವನ ಮೈಮೇಲೆ ಮತ್ತಾವ ವಸ್ತ್ರವೂ ಇರಲಿಲ್ಲ. ಕಣ್ಣುಗಳು ಗುಳಿಬಿದ್ದಿದ್ದವು. ಮೈಮೇಲೆ ವ್ರಣಗಳಿದ್ದವು. ತಲೆಗೂದಲು ಜಡೆಗಟ್ಟಿತ್ತು. ಮೈ ಕೃಶವಾಗಿತ್ತು.

ಧಾರ್ಮಿಕ ಪ್ರವೃತ್ತಿಯ ಚಂದರದಾಸನು ಸಾಧುವಿಗೆ ಶಿರಸಾಷ್ಟಾಂಗ ನಮಸ್ಕಾರ ಹಾಕಿ ಕೈಮುಗಿದು ಪ್ರಾರ್ಥಿಸಿಕೊಂಡ: "ಸಾಧುಗಳೇ, ನಾನು ಜಗತ್ತಿನಲ್ಲಿಯೆ ಅತಿ ಪಾಪಿ. ನಿಮ್ಮಂಥವರ ದರ್ಶನಕ್ಕೆ ನಾನು ಯೋಗ್ಯನಲ್ಲ. ತಮ್ಮ ಪಾದಧೂಳಿ ನನ್ನ ಗೃಹದಲ್ಲಿ ಬೀಳುವಂತೆ ಪ್ರೇರೇಪಿಸಿದ ದೇವರ ಪ್ರೀತ್ಯರ್ಥವಾಗಿ ನಾನೇನು ಮಾಡಬೇಕು ತಿಳಿಸಿ ಬೇಕಾದ್ದನ್ನು ಕೇಳಿ. ಈ ಮನೆಯಲ್ಲಿರುವುದೆಲ್ಲ ತಮ್ಮದೇ!"

"ಸರಿ, ದೇವಭಕ್ತನಂತೆ ನೀನು ಮಾತಾಡಿದೆ. ನಿನಗೆ ಸುಖಶಾಂತಿ ಸಿಗಲಿ. ಆದರೆ ಪ್ರತಿಜ್ಞಾಬದ್ಧನಾದ ನಾನು ಧನವನ್ನು ಸ್ಪರ್ಶಿಸುವುದೂ ಇಲ್ಲ. ಈ ರಾತ್ರಿಯ ಮಟ್ಟಿಗೆ ಅನ್ನ ಮತ್ತು ವಿಶ್ರಾಂತಿಗೆ ಸ್ಥಳ ಇವಿಷ್ಟನ್ನು ನನಗಿತ್ತರೆ ಸಾಕು." ಎಂದು ಸಾಧು ಹೇಳಿದ.

"ನನ್ನದೆಲ್ಲವೂ ತಮ್ಮದೇ. ಏನು ಬಯಸುತ್ತೀರಿ ಎಂದು ತಿಳಿಸಿದರೆ ಸಾಕು. ನಿಂತ ಹೆಜ್ಜೆಯಲ್ಲಿ ಅದನ್ನು ಪೂರೈಸಿಕೊಡುತ್ತೇನೆ."

"ಹಾಗಾದರೆ ತ್ವರೆ ಮಾಡು. ಇಂದಿಡೀ ಒಂದು ತುತ್ತು ಅನ್ನ, ಒಂದು ಗುಟುಕು ನೀರು ಕೂಡ ಇಲ್ಲದ ದೂರದಿಂದ ಇಲ್ಲಿಗೆ ನಡೆದು ಬಂದು ಬಳಲಿದ್ದೇನೆ. ನನಗೆ ಒಂದಿಷ್ಟು ಚುರಮರಿ, ಕಡಲೆ ಮತ್ತು ನೀನೇ ಬಾವಿಯಿಂದ ಸೇದಿ ತಂದ ಒಂದು ತಂಬಿಗೆ ನೀರು ಸಿಕ್ಕರೆ ಸಾಕು. ಅದನ್ನು ಸೇವಿಸಿ ನಿನಗೆ ಆಶೀರ್ವಾದ



"ದೇವಸ್ಥಾನಕ್ಕೆ ಹೋಗಿ ಪ್ರಸಾದ ತಂದೆ ಕಣೇ."

ಮಾಡಿ ಇಲ್ಲೇ ಪಡಸಾಲೆಯ ಮೂಲೆಯಲ್ಲಿ ಮಲಗಿಕೊಳ್ಳುತ್ತೇನೆ."

ಚಂದರದಾಸ ಗಡಬಡಿಸಿ ಒಳಗೆ ಬಂದ. ಪಡಸಾಲೆ ದಾಟುವಾಗ ಬಾಗಿಲಬಳಿ ನಿಂತಿದ್ದ ಮೋತಿ ಹೇಳಿದಳು, "ಯಾರದು ಆ ಲಫಂಗ? ರಾತ್ರಿ ಆತನಿಗೆ ಇಲ್ಲಿರಲು ಅನುಮತಿ ಕೊಡಕೂಡದು. ಅವನಿಂದ ನಮಗೆ ಒಳ್ಳೆಯದಾಗದು."

"ಮೆತ್ತಗೆ ಮೋತಿ! ಸಾಧುವಿಗೆ ನಿನ್ನ ಮಾತು ಕೇಳಿಸಿದರೆ ನಮ್ಮ ಸರ್ವನಾಶವಾದೀತು: ನೀನು ನಿನ್ನ ಕೋಣೆಗೆ ಹೋಗು. ಆಹಾರ, ಆಶ್ರಯ ಬಯಸಿಬಂದಿರುವ ಈ ಅಪರಿಚಿತ ಓರ್ವ ಸಾಧು. ಅವನಿಗೆ ಅದನ್ನು ಒದಗಿಸುವುದು ನನ್ನ ಕರ್ತವ್ಯ ಮತ್ತು ಧರ್ಮ."

"ಇಲ್ಲ, ನಾನು ನೋಡುತ್ತಲೇ ಇದ್ದೆ. ನೀವು ನಮಸ್ಕಾರ ಮಾಡುತ್ತಿದ್ದಾಗ ಆ ಮನುಷ್ಯನ ಕಣ್ಣುಗಳು ಕ್ರೂರವಾಗಿ ನಿಮ್ಮನ್ನು ನೋಡುತ್ತಿದ್ದವು. ದೇವರ ಶಾಪ ನಿಮ್ಮನ್ನು ಪೀಡಿಸಲಿ ಎಂಬಂತೆ ಆತ ನಿಮ್ಮ ತಲೆಯ ಮೇಲೆ ತನ್ನ ಕೈಗಳನ್ನು ಎತ್ತಿಹಿಡಿದಿದ್ದ."

ಮೋತಿಯ ಮಾತುಗಳು ಸಾಧುಗಳಿಗೆಲ್ಲಿ ಕೇಳಿಸಿತೊ ಎಂಬ ಭಯದಿಂದ ಚಂದರದಾಸ ಸುತ್ತಲೂ ನೋಡಿದ. ಬಳಿಕ ಹೆಂಡತಿಯನ್ನು ಕೈಹಿಡಿದು ಕರೆದೊಯ್ದು ಅವಳ ಕೋಣೆಯಲ್ಲಿ ಬಿಟ್ಟು "ನೀನಿಲ್ಲೆ ಇರು." ಎಂದು ಹೊರಗೆ ಬಂದ.

ಆದರೆ ಭೀತಳಾಗಿದ್ದ ಮೋತಿಗೆ ಆ ರಾತ್ರಿ ನಿದ್ದೆಬರಲಿಲ್ಲ. ಅವಳಿಗೆ ಆಗಂತುಕನ ಭಯವಿತ್ತು. ಅವನಿಂದ ತಮಗೆ ಕೇಡುಂಟಾಗುವುದೆಂದು ಅವಳ ಅಂತರಂಗ ಹೇಳುತ್ತಿತ್ತು. ಗಂಡ ಮೂರ್ಖನಂತೆ ಅವನನ್ನು ನಂಬಿದ್ದರೂ ತಾನು ಅವನ ಮೇಲೆ ಕಣ್ಣಿಡಬೇಕೆಂದು ಅವಳು ನಿಶ್ಚಯಿಸಿದಳು.

ರಾತ್ರಿಯಲ್ಲಿ ಒಮ್ಮೊಮ್ಮೆ ಮೆಲ್ಲಗೆ ಅವಳು ಕೆಳಗೆ ಬಂದಳು. ಪಡಸಾಲೆಯಲ್ಲಿದ್ದ ಸಣ್ಣ ದೀಪದ ಪ್ರಕಾಶದಲ್ಲಿ ಸಾಧು ಮಲಗಿದ್ದನ್ನೂ ಅವನು ನಿದ್ದೆ ಮಾಡುತ್ತಿರುವುದನ್ನೂ ನೋಡಿಕೊಂಡು ಹೋದಳು.

ಬೆಳಗಿನ ಝಾವದಲ್ಲಿ ಸಮೀಪದ ಮಶೀದೆಯಿಂದ ಮುಲ್ಲಾ ಒಬ್ಬನ ಪ್ರಾರ್ಥನಾ ಕರೆ ಕೇಳಿದಾಗ ತುಸು ಜಂಪು ಹತ್ತಿದ ಮೋತಿ ಜಗ್ಗನೆ ಎದ್ದು ಕುಳಿತಳು. ಮತ್ತೆ ಅವಳು ಕೆಳಗೆ ಬಂದು ನೋಡಿದಳು. ಸಾಧು ಇರಲಿಲ್ಲ.

ಆತ ಹೋಗಿರಬಹುದು ಎಂದು ಅವಳು ಯೋಚಿಸಿದಳು. ಆದರೆ ಬಾಗಿಲಿಗೆ ಹಾಕಿದ ಅಗಳಿ ಹಾಗೇ ಇತ್ತಾದ್ದರಿಂದ ಆತ ಮನೆಯಲ್ಲಿಯೇ ಇದ್ದಿರಬೇಕು. ಪಡಸಾಲೆಯ ಮಗ್ಗುಲಿಗಿದ್ದ ಗಂಡನ ಖಾಸಗಿ ಕೋಣೆಯ ಬಾಗಿಲ ಪಡದೆ ಯಾರೋ ಅದನ್ನು ಅದೇ ಆಗ ಸರಿಸಿದಂತೆ ತುಸುವೆ ಅಲ್ಲಾಡುತ್ತಿತ್ತು.

ಸದ್ದಿಲ್ಲದೆ ಮೋತಿ ಅಲ್ಲಿಗೆ ಹೋಗಿ ಪಡದೆಯ ಸಂದಿನಿಂದ ಒಳಗೆ ಇಣಿಕಿ ನೋಡಿದಳು. ಚಂದರದಾಸ ಹಣವಿಡುತ್ತಿದ್ದ ಕಪಾಟಿನ ಬಳಿ ಸಾಧುವನ್ನು ಕಂಡಳು. ಸಾಧುವೊಬ್ಬ ಕಳ್ಳ ಎಂದು ಅವಳಿಗೆ ಖಾತ್ರಿಯಾಗಿತ್ತು. ಅದೇ ಹೊತ್ತಿಗೆ ಸಾಧು ಅವಳತ್ತ ಮುಖ ತಿರುಗಿಸಿದ. ಬಾಯಿಗೆ ಬಂದ ಕೂಗನ್ನು ಹೇಗೊ ಬಿಗಿಹಿಡಿದು ಮೋತಿ ಮಾಳಿಗೆಗೆ ಓಡಿ ಗಂಡನನ್ನು ಎಬ್ಬಿಸಿದಳು.

"ಏಳಿ, ಏಳಿ, ನಿಮ್ಮ ಅತಿಥಿ ಸಾಧುವಲ್ಲ, ಆತ ಹರಿಚಂದ."

"ಆಂ! ನಮ್ಮ ಮಾವನನ್ನು ಕೊಂದ ಹರಿಚಂದನೆ? ನೀನೇನೂ ಕನಸು ಕಾಣುತ್ತಿಲ್ಲವೆ? ಹರಿಚಂದನ ಭಯದಿಂದ ನಿನಗೆ ಎಲ್ಲೆಲ್ಲಿಯೂ ಅವನೇ ಕಾಣಿಸುತ್ತಾನೆ."

"ಇಲ್ಲ. ನಾನು ಕನಸು ಕಾಣುತ್ತಿಲ್ಲ. ನಿನ್ನೆ ರಾತ್ರಿಯೆ ನನಗೆ ಅವನ ಗುರುತು ಹತ್ತಿದಂತಾಯಿತು. ನನ್ನ ಮಾತು ನೀವು ಕೇಳಲಿಲ್ಲ. ನನಗೆ ಈಗ ಖಾತ್ರಿಯಾಗಿದೆ. ನಮಗೆ ಗುರುತು ಹತ್ತಬಾರದು ಎಂದು ಆತ ತನ್ನ ರೂಪ ಬೇರ್ಪಡಿಸಿಕೊಂಡಿದ್ದಾನೆ. ಸೇಡುತೀರಿಸಿಕೊಳ್ಳಲು ಇಲ್ಲಿಗೆ ನಮ್ಮ ಬೆನ್ನು ಹತ್ತಿ ಬಂದಿದ್ದಾನೆ. ಈಗ ಸದ್ಯ ನಿಮ್ಮ ಕೋಣೆಯಲ್ಲಿ ಖಜಾನೆ ಒಡೆಯುತ್ತಿದ್ದಾನೆ."

ಚಂದರದಾಸನಿಗೆ ಈಗ ಭಯವಾಯಿತು. ಆತ ಕರೆಗಂಟೆಯನ್ನು ಜೋರಾಗಿ ಬಾರಿಸಿದ. ಸೇವಕರನ್ನು ಎಬ್ಬಿಸುವ ಪ್ರಯತ್ನ ಮಾಡಿದರೆ ಕಳ್ಳ ಜಾಗ್ರತನಾಗಿ ಓಡಿಹೋದಾನೆಂದು ಭಾವಿಸಿ ಅವಳು ಕರೆಗಂಟೆ ಕಸಿದುಕೊಂಡಳು. ಅವಳು ಭಾವಿಸಿದ್ದೆ ಆಯಿತು. ಚಂದರದಾಸ, ಹೆಂಡತಿ ಮತ್ತು ಆಳುಗಳೊಂದಿಗೆ ಕೆಳಗೆ ಬಂದಾಗ ಸಾಧು ಪರಾರಿಯಾಗಿದ್ದ.

ಚಂದರದಾಸ ಖಜಾನೆಯನ್ನು ಪರೀಕ್ಷಿಸಿದ. ಅದನ್ನು ಸರಿಸಾಡಿಸಿದ್ದರೂ ಅದರ ಬೀಗವಿನ್ನೂ ಭದ್ರವಾಗಿತ್ತು. ಒಳಗಿನದೇನೂ ಕಾಣೆಯಾಗಿದ್ದಿಲ್ಲ. ಸಾಧು ಹರಿಚಂದನೇ ಆಗಿದ್ದು ನಿಜವಾಗಿದ್ದರೆ ಆತ ಗಂಟೆ ಸಪ್ಪಳ ಕೇಳಿ ಓಡಿಹೋಗಿರಬೇಕು ಎಂದಾತ ತಿಳಿದ.

ಅಂದೇ ಚಂದರದಾಸ ಪೇಟೆಯಲ್ಲಿ ಸಾಮಾನು ಕೊಳ್ಳುತ್ತಿದ್ದಾಗ ಒಬ್ಬ ಘಾತುಕ ತನ್ನ ಹಿಂದೆಯೇ ಸುಳಿದಾಡುತ್ತಿದ್ದನೆಂದು ಅವನಿಗೆ ತಿಳಿಯಲಿಲ್ಲ. ಚಂದರದಾಸ ಮನೆಗೆ ಹಿಂತಿರುಗಿದ. ಅವನನ್ನು ಹಿಂಬಾಲಿಸುತ್ತಿದ್ದ ಹರಿಚಂದ ಪೋಲೀಸ ಠಾಣೆಗೆ ಹೋಗಿ ಚಂದ

ರದಾಸನ ಬಗ್ಗೆ ತಾನು ಸ್ವಾರಸ್ಯಕರವಾದ ಮಾಹಿತಿ ಕೊಡುವುದಾಗಿ ಹೇಳಿದ.

ಪೋಲೀಸರಿಗೂ ಚಂದರದಾಸನ ಮೇಲೆ ಒಂದು ಬಗೆಯ ಸಂಶಯವಿತ್ತಾದ್ದರಿಂದ ಅವರು ಆತುರರಾಗಿ ಹರಿಚಂದ ಹೇಳಿದ್ದನ್ನು ಕೇಳಿದರು. ಚಂದರದಾಸ ಖೊಟ್ಟಿ ನಾಣ್ಯ ತಯಾರಿಸುವವನೆಂದೂ ಭಾರತದಲ್ಲೆಲ್ಲ ಖೊಟ್ಟಿ ನೋಟು ಚಲಾಯಿಸುತ್ತಿದ್ದಾನೆಂದೂ ಅದರಿಂದಲೇ ಆತ ಯಾರೊಡನೆಯೂ ಹೆಚ್ಚು ಸಂಪರ್ಕ ಬೆಳೆಸುವುದಿಲ್ಲವೆಂದೂ ಹರಿಚಂದ ಹೇಳಿದನು.

ತಾನು ಹಿಂದಿನ ರಾತ್ರಿ ಚಂದರದಾಸನ ಅತಿಥಿಯಾಗಿದ್ದುದನ್ನು ವಿವರಿಸಿ ತಾನು ಮಲಗಿದ್ದಾಗ ಚಂದರದಾಸ ಖೊಟ್ಟಿ ನೋಟುಗಳನ್ನು ತಯಾರಿಸಿದ್ದನ್ನು ಕಂಡನೆಂದೂ ಅವನ್ನೇ ಈಗ ಆತ ಈಗ ಪೇಟೆಯಲ್ಲಿ ಚಲಾಯಿಸಿದ್ದಾನೆಂದೂ ಹರಿಚಂದ ಹೇಳಿದ.

ತನ್ನ ಜೊತೆ ಬಂದರೆ ಚಂದರದಾಸ ಯಾವ ಯಾವ ಅಂಗಡಿಗಳಲ್ಲಿ ಖೊಟ್ಟಿ ನೋಟು ದಾಟಿಸಿದ್ದಾನೆಂದು ತೋರಿಸುವುದಾಗಿ ಹರಿಚಂದ ಹೇಳಲು ಪೋಲೀಸ ಅಧಿಕಾರಿ ಶಿಪಾಯಿಗಳೊಂದಿಗೆ ಹರಿಚಂದನ ಜೊತೆ ಪೇಟೆಗೆ ಹೋದ.

ಚಂದರದಾಸ ಇದಾವುದರ ಕಲ್ಪನೆಯೂ ಇಲ್ಲದೆ ಮನೆಯಲ್ಲಿ ಕುಳಿತಿದ್ದ. ಪೋಲೀಸರು ಬಂದು ಖೊಟ್ಟಿ ನೋಟು ತಯಾರಿಸಿ ಚಲಾಯಿಸಿದ್ದಕ್ಕಾಗಿ ನಿನ್ನನ್ನು ಬಂಧಿಸಿದ್ದೇವೆ, ಎಂದು ಹೇಳಿದಾಗ ಆತ ಅವಾಕ್ಕಾದ. ಅವನ ಖಜಾನೆ ತೆಗೆದುನೋಡಿದಾಗ ಅದರ ತುಂಬ ಖೊಟ್ಟಿ ನೋಟುಗಳೇ ಇದ್ದವು. ಅದರಲ್ಲಿದ್ದ ನಿಜವಾದ ನೋಟುಗಳು ಮಾಯವಾಗಿದ್ದವು.

ಪೋಲೀಸರು ಕೋಣೆಯ ಝಡತಿ ಮಾಡಿದಾಗ ನೆಲದಲ್ಲಿ ಹಲಗೆ ಮುಚ್ಚಿದ್ದ ಜಾಗೆ ಕಂಡಿತು. ಹಲಗೆ ತೆಗೆದುನೋಡಿದಾಗ ಕೆಳಗೆ ತಗ್ಗಿನಲ್ಲಿ ಚಿಕ್ಕ ಲಿಥೊ ಪ್ರೆಸ್ ಇದ್ದದ್ದು ಕಂಡು ಬಂತು. ಹರಿಚಂದನೇ ಅದನ್ನು ಅಲ್ಲಿ ಇಟ್ಟಿದ್ದನೆಂದು ಕಾಣುತ್ತದೆ. ಖೊಟ್ಟಿ ನೋಟು ತಯಾರಿಕೆಯ ಇತರ ಉಪಕರಣಗಳೂ ಅಲ್ಲಿದ್ದವು. ಸಾಕ್ಷಿ ಪುರಾವೆ ಸಿಕ್ಕ ಪೋಲೀಸರು ಚಂದರದಾಸನನ್ನು ಕೈದುಮಾಡಿ ಕರೆದೊಯ್ದರು.

ಇದೆಲ್ಲವನ್ನೂ ನೋಡುತ್ತಿದ್ದ ಮೋತಿ ಚಂದರದಾಸನನ್ನು ಬಂಧಿಸಿದೊಡನೆ ಚೀರಿ ಸ್ಮೃತಿ ತಪ್ಪಿಬಿದ್ದಳು. ಎಚ್ಚರಾದಾಗ ಹುಚ್ಚು ಹಿಡಿದಿತ್ತು.

ವಿಚಾರಣೆ ಕಾಲದಲ್ಲಿ ತನ್ನಲ್ಲಿಗೆ ಬಂದಿದ್ದ ಸಾಧು ಕಾಂಬೇಕರ ಬೀದಿ ಕೊಲೆಗಾರ ಹರಿಚಂದ ಎಂದು ಚಂದರದಾಸ ಹೇಳಿದ. ಆದರೆ ಸಾಧು ಕಣ್ಮರೆಯಾಗಿ ಬಿಟ್ಟಿದ್ದ. ಮೋತಿಗೆ ಹುಚ್ಚು ಹಿಡಿದಿತ್ತಾದ್ದರಿಂದ ಚಂದರದಾಸನಿಗೆ ತನ್ನ ಪರ ಬೇರೆ ಯಾವ ಸಾಕ್ಷಿಯೂ ಇಲ್ಲದಂತಾಯಿತು.

ಆತನ ಮೇಲೆ ಅಪರಾಧ ರುಜುವಾತಾಗಿ ಏಳು ವರ್ಷಗಳ ಕಠಿಣ ಶಿಕ್ಷೆಯಾಯಿತು.

ಹರಿಚಂದನ ಸೇಡು ಪೂರ್ತಿಯಾಗಿ ತೀರಿದಂತಾಯಿತು. ★

('ಮಿರರ್'ನಿಂದ)

ಒಮ್ಮೆ ಜಾರ್ಜ್ ಬರ್ನಾರ್ಡ್‌ಷಾರು ಶಿಲ್ಪಿ ಜೇಕಬ್ ಎಫ್‌ಸ್ಟೈನ್‌ರನ್ನು ನೋಡಲು ಹೋಗಿದ್ದರು. ದೊಡ್ಡ ಕಲ್ಲಿನ ಬಂಡೆಯೊಂದು ಕೊಠಡಿಯ ಮೂಲೆಯಲ್ಲಿದ್ದುದನ್ನು ಕಂಡು, "ಅದೇನು?" ಎಂದು ಪ್ರಶ್ನಿಸಿದಾಗ ಎಫ್‌ಸ್ಟೈನ್, "ಗೊತ್ತಿಲ್ಲ, ಇನ್ನೂ ಯೋಜನೆಯ ಹಂತದಲ್ಲಿಯೇ ಇದೆ," ಎಂದರು. "ನೀವೇ ಶಿಲ್ಪಿ. ಏಕೆ ಇನ್ನೂ ಗೊತ್ತಿಲ್ಲವೆಂದು ಹೇಳುವಿರಿ? ನಾನು ನನ್ನ ಮನಸ್ಸನ್ನು ದಿನಕ್ಕೆ ಎಷ್ಟೋ ಸಲ ಬದಲಾಯಿಸುತ್ತೇನೆ," ಎಂದು ಷಾ ಕೆಣಕಿದಾಗ ಎಫ್‌ಫ್‌ಸ್ಟೈನ್, "ನಾಲ್ಕು ಔನ್ಸ್ ತೂಕದ ಹಸ್ತ ಪ್ರತಿಗೆ ನಿಮ್ಮ ಮಾತು ಸರಿ ಹೋಗುತ್ತದೆ. ಆದರೆ ನಾಲ್ಕು ಟನ್ ಕಲ್ಲಿನ ಬಂಡೆಗಲ್ಲ," ಎಂದರು ತೀಕ್ಷ್ಣವಾಗಿ.

ಮಂಗಳಗೌರಿ

ಪಥ್ಯದಿಂದ ಸಂಧಿವಾತದ ನಿಯಂತ್ರಣ ಸಾಧ್ಯವೆ?

ಡಾ.ರಮಾಕಾಂತ ಕೇಣಿ

ಶರೀರದ ಅಂತರವಯವಗಳ ಸಾಮರ್ಥ್ಯ ಕುಗ್ಗಿದ ಹಾಗೆ, ಅವುಗಳ ಕಾರ್ಯಗತಿ ಕುಂಠಿತ ಗೊಂಡ ಹಾಗೆ ಸಂಧಿವಾತ ಬರುವ ಸಂಭವ ಹೆಚ್ಚು.

ಇದು ರೋಗಾಣುಗಳಿಂದ ತಗಲುತ್ತ ದೆಂದೋ, ದಂತಕ್ಷಯದಿಂದ ಉಂಟಾಗುತ್ತ ದೆಂದೋ ಆಂತ್ರಪುಚ್ಛ ಊದಿಕೊಳ್ಳುವುದ ರಿಂದ ಹೀಗಾಗುತ್ತದೆಂದೋ ಹಿಂದೆ ಭಾವಿಸ ಲಾಗಿತ್ತು. ಈಗಲೂ ಕೆಲವು ಜನ ಚಳಿಯಿಂದ ಅಥವಾ ತೇವದಿಂದ ಸಂಧಿವಾತ ಬರುತ್ತ ದೆಂದು ಭಾವಿಸುವುದಿದೆ. ಆದರೆ ಇವೆಲ್ಲವೂ ನಿರಾಧಾರವೆಂದು ಈಗ ಸ್ಪಷ್ಟವಾಗಿದೆ. ವಾಸ್ತ ವಿಕವಾಗಿ ಹಾರ್ಮೋನುಗಳ ಕಾರ್ಯವಿಧಾನ ನಿಧಾನವಾಗಿ ಕುಂಠಿತಗೊಳ್ಳುವುದು ಸಂಧಿವಾ ತಕ್ಕೆ ಕಾರಣವಾಗುತ್ತದೆ. ಜೊತೆಗೆ ಸಂದುಗ ಳಲ್ಲಿ ಕೀಲೆಣ್ಣೆಯ ಹಾಗೆ ಕಾರ್ಯನಿರ್ವಹಿಸು ತ್ತಿದ್ದ ಕೆಲವು ತೈಲಗಳ ಉತ್ಪಾದನೆ ಕುಂಠಿತ ಗೊಂಡು ಪರಿಸ್ಥಿತಿಯನ್ನು ಇನ್ನೂ ಉಲ್ಬಣ ಗೊಳಿಸುತ್ತವೆ.

ಸಾಲದ್ದಕ್ಕೆ ಆಗ ಎಲವುಗಳೂ ಶಕ್ತಿಗುಂದಿ ಭಂಗುರವಾಗುತ್ತವೆ. ಮೃದ್ವಸ್ಥಿ ಸವೆದು ಹೋಗುತ್ತದೆ. ಇದು ಸಂದುಗಳಲ್ಲಿ ಎಲವು ಗಳ ಘರ್ಷಣೆಗೆ ಕಾರಣವಾಗಿ ಉರಿಯೂತ ದಲ್ಲಿ ಪರ್ಯವಸಾನಗೊಳ್ಳುತ್ತದೆ. ಇದು ಕೆಲ ವೊಮ್ಮೆ ರಕ್ತನಾಳಗಳಿಗೂ, ಸ್ನಾಯುಗಳಿಗೂ ಅಲ್ಲದೆ ಚರ್ಮಕ್ಕೂ ಪಸರಿಸಬಹುದು.

ಅಂಥ ಪ್ರಸಂಗದಲ್ಲಿ ರೋಗದ ಮೂಲ ವನ್ನು ಪತ್ತೆ ಹಚ್ಚಿ ರೋಗವನ್ನು ಪರಿಹರಿಸಿಕೊ ಳ್ಳುವ ಬದಲು ತಕ್ಷಣ ಉಪಶಮನ ನೀಡುವ ಮದ್ದುಗಳಿಗೆ ಮೊರೆ ಹೋಗುವವರೇ ಹೆಚ್ಚು. ಇದರಿಂದ ತಾತ್ಪೂರ್ತಿಕವಾಗಿ ಸಮಾಧಾನ ದೊರೆಯಬಹುದಾದರೂ, ದೀರ್ಘಾವಧಿ ಯಲ್ಲಿ ವಿಪರೀತ ಪರಿಣಾಮಗಳುಂಟಾಗಬ ಹುದು.

ವೃದ್ಧಾಪ್ಯದಲ್ಲಿ ಬಾಧಿಸುವ ರೋಗಗಳಲ್ಲಿ ಸಂಧಿವಾತ ಸಾಮಾನ್ಯ. ಅದನ್ನು ಎಂದಿಗೂ ಗುಣಪಡಿಸಲಾಗದು ಎಂಬ ಭಾವನೆ ಸಾರ್ವ ತ್ರಿಕವಾಗಿದೆಯಾದರೂ, ಉಳಿದ ವ್ಯಾಧಿಗಳಿ ಗಿಂತ ಇದನ್ನು ಪರಿಣಾಮಕರವಾಗಿ ನಿವಾರಿಸ ಬಹುದೆಂಬುದು ವಾಸ್ತವವಾಗಿದೆ. ಸಕ್ಕರೆ ರೋಗವನ್ನು ಔಷಧಿಗಳಿಗಿಂತ ಪಥ್ಯದ ಮೂಲ ಕವೇ ಶೀಘ್ರವಾಗಿ ತಹಬಂದಿಗೆ ತರಬಹುದು. ಹಾಗೆಯೇ ನಿಯಮಿತವಾದ ಪಥ್ಯದ ಮೂಲಕ ಸಂಧಿವಾತವನ್ನೂ ಸಾವಕಾಶವಾಗಿ, ಸುಲಭ ವಾಗಿ ಹಾಗೂ ನಿರಪಾಯಕರವಾಗಿ ನಿಯಂತ್ರಿ ಸಬಹುದು.

ಸಂಧಿವಾತದ ಹಾಗೆಯೇ ಬೆನ್ನುನೋವು ವೃದ್ಧಾಪ್ಯದಲ್ಲಿ ಮೇಲಿಂದ ಮೇಲೆ ತೊಂದರೆ ಕೊಡುವ ರೋಗ. ಬೆನ್ನುಮಣಿ ಸರಿಯು ವುದೇ ಇದಕ್ಕೆ ಕಾರಣವೆಂದು ಅನೇಕರು ಭಾವಿ ಸಿದ್ದಾರೆ. ಕೆಲವು ಸಲ ಇದು ನಿಜವಾದರೂ ಬೆನ್ನುಹುರಿ ಸರಿಯುವುದರಿಂದ ಬೆನ್ನುನೋವು ಉಂಟಾಗುವ ಸಂಭವವೇ ಹೆಚ್ಚು. ಆಗ ನೋವುನಿವಾರಕಗಳನ್ನು ವಿಧಿಸಲಾಗುವುದ ಲ್ಲದೆ ಸಂಪೂರ್ಣ ವಿಶ್ರಾಂತಿ ಪಡೆಯಲೂ ಸಲಹೆ ನೀಡಲಾಗುವುದು. ಕೆಲವೊಮ್ಮೆ ಆ ಭಾಗದಲ್ಲಿ ಪ್ಲಾಸ್ಟರಿನ ಕವಚವನ್ನು ಹಾಕಲಾ

ಗುವುದು. ದೀರ್ಘಕಾಲಿಕವಾಗಿ ಇವುಗಳಿಂದ ಹೆಚ್ಚು ತೊಂದರೆಯಾಗುವ ಪ್ರಮೇಯವೇ ಹೆಚ್ಚು. ವಾಸ್ತವವಾಗಿ, ಸ್ಥಾನಪಲ್ಲಟಗೊಂಡ ಬೆನ್ನುಮಣಿಯನ್ನಾಗಲಿ ಬೆನ್ನುಹುರಿಯನ್ನಾಗಲಿ ಮೊದಲಿನ ಸ್ಥಾನಕ್ಕೆ ತರುವುದರಲ್ಲಿಯೇ ರೋಗಿಯ ಹಿತ ಅಡಗಿದೆ.

ಸಂಧಿವಾತ ಬಂದವರಲ್ಲಿ ಮೃದ್ವಸ್ಥಿಗಳು ಕ್ಷಯಿಸುವುದನ್ನು ತಡೆಯುವುದು ಮಹತ್ವದ್ದು. ಎ ಹಾಗೂ ಡಿ ಜೀವಸತ್ವಗಳಿಂದ ಇದು ಸಾಧ್ಯ. ಕಾಡ್‌ಲಿವರ್ ಎಣ್ಣೆಯಲ್ಲಿ ಇದು ಸಾಕಷ್ಟು ಪ್ರಮಾಣದಲ್ಲಿದೆ. ಇದು ಸಂದುಗಳಲ್ಲಿ ಕೀಲೆಣ್ಣೆಯ ಕೆಲಸವನ್ನು ಮಾಡುವುದಲ್ಲದೆ, ಆಡ್ರಿನಲ್ ಗ್ರಂಥಿಗಳ ಮೇಲೂ ಪ್ರಭಾವ ಬೀರುವುದು.

ಸಂಧಿವಾತದಿಂದ ಬಳಲುವವರಿಗೆ ಹಾಲು ಬಹಳ ಒಳ್ಳೆಯದು. ಆದರೆ ಮಂದೋಷ್ಣವಾದದ್ದನ್ನೇ ಕುಡಿಯಬೇಕು. ಇದನ್ನು ಬಿಟ್ಟರೆ ಎ ಹಾಗೂ ಡಿ ಜೀವಸತ್ವಗಳು ಸಮೃದ್ಧವಾಗಿರುವ ಬೆಣ್ಣೆ, ಸಿಪ್ಪೆಯೊಡನೆ ಬೇಯಿಸಿದ ಬಟಾಟೆ, ಸೇಬುಹಣ್ಣು, ಉತ್ತತ್ತಿ, ಅಂಜೂರಿ, ಬಾಳೆ, ಹಸಿ ತರಕಾರಿ ಹಾಗೂ ಮಾಂಸಾಹಾರಿಗಳಾಗಿದ್ದರೆ ಬೇಯಿಸಿದ ತತ್ತಿ, ಚರ್ಮಸಹಿತವಾಗಿ ಬೇಯಿಸಿದ ಮೀನು ಹಾಗೂ ಚಿಕನ್ ಸೂಪುಗಳಿದ್ದ ಆಹಾರವನ್ನು ಸೇವಿಸಬೇಕು. ಕಟ್ಟುನಿಟ್ಟಾದ ಪಥ್ಯ ಅತ್ಯವಶ್ಯ. ದೇಹ ದಪ್ಪವಾದಷ್ಟೂ ಸಂದುಗಳ ಮೇಲೆ ಹೆಚ್ಚು ಭಾರ ಬೀಳುವುದರಿಂದ, ಬೊಜ್ಜು ಬೆಳೆಯದ ಹಾಗೆ ನೋಡಿಕೊಳ್ಳಬೇಕು.

ಹಾಗೆಯೇ ಸಂಧಿವಾತ ರೋಗಿಗಳಿಗೆ ಬಿಸ್ಕೀಟುಗಳು, ಕೇಕು, ಮದ್ಯಸಾರವಿರುವ ಪಾನೀಯಗಳು, ಹೆಚ್ಚು ಕ್ಯಾಲ್ಸಿಯಂ ಇರುವ ಆಹಾರಗಳು, ಬಾದಾಮಿ, ಗೋಡಂಬಿ, ಐಸ್‌ಕ್ರೀಮ್, ತೈಲಗಳು ಹಾಗೂ ತೆಂಗುಗಳು ವರ್ಜ್ಯ. ಊಟದ ಮಧ್ಯದಲ್ಲಿ ಅವರು ನೀರು ಕುಡಿಯುವುದು ಅಷ್ಟು ಒಳ್ಳೆಯದಲ್ಲ. ಅವರಿಗೆ ದಿನಕ್ಕೆ ಮೂರು ಗ್ಲಾಸುಗಳಷ್ಟು ನೀರು ಸಾಕು. ಕಾರ್ಟಿಕೋಸ್ಟಿರಾಯ್ಡುಗಳನ್ನು ಬಿಡುಗಡೆಗೊಳಿಸಿ ನೋವನ್ನು ಶಮನಗೊಳಿಸುವುದರಿಂದ, ಸಂಧಿವಾತದಿಂದ ಬಳಲುವವರು ಅಡ್ರಿನಾಲಿನ್‌ಅನ್ನು ಒಳಗೊಂಡ ಮಲಾಮಿನಿಂದ ನಿತ್ಯವೂ ಸಂದುಗಳಿಗೆ ಮಾಲೀಸು ಮಾಡಿಕೊಳ್ಳುವುದು ಒಳ್ಳೆಯದು.

ಸಂಧಿವಾತದಲ್ಲೂ ಮತ್ತು ಅದಕ್ಕೆ ಸಂಬಂಧಿಸಿದ ಇತರ ವ್ಯಾಧಿಗಳಲ್ಲೂ ಬೆನ್ನುಹುರಿ ಸರಿಯಾದ ಸ್ಥಳದಲ್ಲಿರುವಂತೆ ನೋಡಿಕೊಳ್ಳುವುದು ಮುಖ್ಯ. ಇಲ್ಲವಾದರೆ ಬೆನ್ನುಹುರಿಯ ನರಗಳು ದುರ್ಬಲಗೊಂಡು ಬೆನ್ನು ಬಾಗುವುದು. ಇದರಿಂದಾಗಿ ಬೆನ್ನುಹುರಿಯ ಮಣಿಗಳು ಸ್ಥಾನಪಲ್ಲಟಗೊಂಡು ಸುತ್ತಲಿನ ಅಂಗಾಂಶದಲ್ಲೂ ರಕ್ತನಾಳಗಳಲ್ಲೂ ಒತ್ತಡವೇರ್ಪಡುವುದು. ಹೀಗಾಗುವುದನ್ನು ತಪ್ಪಿಸಬೇಕೆಂದರೆ ಇಂದು ಸುಲಭ ಮಾರ್ಗವಿದೆ. ಅದೆಂದರೆ ತಲೆಯಿಂದ ಕಾಲಿನವರೆಗೆ ಇಡೀ ಶರೀರವನ್ನು ಗೋಡೆಗೆ ಆನಿಸಿಕೊಂಡು ನಿಲ್ಲುವುದು. ಮೊದಲು ಕೆಲ ಸೆಕಂಡುಗಳಿಂದಾರಂಭಿಸಿ ಕೆಲವು ನಿಮಿಷಗಳವರೆಗೆ ಈ ವ್ಯಾಯಾಮವನ್ನು ವಿಸ್ತರಿಸಬೇಕು. ಈ ವ್ಯಾಯಾಮವನ್ನು ದಿನದಲ್ಲಿ ಒಂದೇ ಸಲ ಮಾಡಿದರೆ ಸಾಲದು. ಎಷ್ಟು ಸಲ ಮಾಡಿದರೂ ಅಷ್ಟು ಒಳ್ಳೆಯದು.

ಆಗ ಪ್ರಾಣಾಯಾಮ ಮಾಡುವುದು ಬಹು ಉಪಯೋಗಕರ. ಅಲ್ಲದೆ, ಎಷ್ಟು ಸಾಧ್ಯವೋ ಅಷ್ಟು ಎತ್ತರಕ್ಕೆ ಕೈಯನ್ನೆತ್ತಿರಿ. ಇದರಿಂದಾಗಿ ಹೊಟ್ಟೆ ಹಾಗೂ ಬೆನ್ನುಹುರಿಯ ಸ್ನಾಯುಗಳು ಬಲಗೊಳ್ಳುವುದಲ್ಲದೆ, ಪೋಷಕಾಂಶಗಳನ್ನು ಪೂರೈಸುವ ರಕ್ತನಾಳಗಳ ಮೇಲಿನ ಒತ್ತಡ ಕಡಿಮೆಯಾಗಲು ಅನುವಾಗುತ್ತದೆ. ಒತ್ತಡ ಕಡಿಮೆಯಾಗುವುದಲ್ಲದೆ, ರಕ್ತಾಭಿಸರಣ ಹೆಚ್ಚುವುದರಿಂದ ನೆಲಕ್ಕೆ ಹೊಟ್ಟೆ ಹಚ್ಚಿ ಮಲಗುವುದು ಒಳ್ಳೆಯದು. ಬೆನ್ನುಹುರಿ ಸ್ವಸ್ಥಾನದಲ್ಲಿರಲೂ ಇದು ಸಹಾಯಕ. ಇದಲ್ಲದೆ ಸಂಧಿವಾತ ರೋಗಿಗಳು ಮಲಬದ್ಧತೆಯಾಗದಂತೆ ನೋಡಿಕೊಳ್ಳುವುದೂ, ತೃಪ್ತ ಜೀವನ ದೃಷ್ಟಿಯನ್ನು ತಾಳುವಂತೆ ಜೀವನ ವಿಧಾನವನ್ನು ರೂಪಿಸಿಕೊಳ್ಳುವುದೂ ಅಷ್ಟೇ ಮುಖ್ಯ. ★

ಮರಾಠಿ ಕಥಾಲೋಕದ ಧ್ರುವತಾರೆ

ನಿಗೂಢ ಕತೆಗಾರ 'ಜಿಎ'

ಚಂದ್ರಕಾಂತ ಪೋಕಳೆ

ಇಪ್ಪತ್ತೆರಡು ವರ್ಷಗಳ ಹಿಂದಿನ ಮಾತು. ನಾನು ಆಗ ಧಾರವಾಡದ ಜೆ.ಎಸ್.ಎಸ್. ಕಾಲೇಜಿನ ವಿದ್ಯಾರ್ಥಿ. ಆಗಷ್ಟೇ ಪಾಠ-ಪ್ರವಚನಗಳು ಪ್ರಾರಂಭಗೊಂಡಿದ್ದವು. ಪಿರಿಯಡ್ ಬೆಲ್ ಹೊಡೆಯಿತು. ಇಂಗ್ಲಿಷ್ ಪ್ರಾಧ್ಯಾಪಕರ ನಿರೀಕ್ಷೆಯಲ್ಲಿ ನಾವೆಲ್ಲ ಕುಳಿತಿದ್ದೆವು. ಬಾಗಿಲ ಬಳಿ ಧೀರ ಗಂಭೀರ ವ್ಯಕ್ತಿಯೊಂದು ನಡೆದು ಬಂತು. ಕೈಯಲ್ಲೊಂದು ಪುಸ್ತಕ, ಗಂಭೀರ ಮುಖಭಾವ. ಪ್ರಾಧ್ಯಾಪಕರು ವೇದಿಕೆ ಏರಿದ ಮರುಕ್ಷಣ ಕ್ಲಾಸಿನಲ್ಲಿ 'ಪಿನ್‌ಡ್ರಾಪ್ ಸೈಲೆನ್ಸ್'. ಆ ಪ್ರಾಧ್ಯಾಪಕರದು ಆಕರ್ಷಕವಾದ ವ್ಯಕ್ತಿತ್ವ. ಒಪ್ಪ ಓರಣವಾಗಿ ಹಿಂದಕ್ಕೆ ಬಾಚಿದ ತಲೆಗೂದಲು, ದುಂಡುಮುಖ, ಕಣ್ಣಮೇಲೆ ಕಪ್ಪು ಕನ್ನಡಕ, ಅಚ್ಚುಕಟ್ಟಾದ ಭಟ್ಟಿಮಾಡಿದ ಸೂಟು, ನೀಳವಾದ ನಿಲುವು, ಅರಳು ಹುರಿದಂತೆ ಪಟಪಟನೆ ಮಾತಾಡುವ ವಾಕ್‌ಚಾತುರ್ಯ. ನಾವೆಲ್ಲ ಮೋಡಿಗೊಳಗಾದವರಂತೆ ಮಂತ್ರಮುಗ್ಧರಾಗಿ ಲೆಕ್ಚರ್ ಕೇಳುತ್ತಿದ್ದೆವು. ಕ್ಲಾಸ್ ಮುಗಿದ ಬಳಿಕ ಪಕ್ಕದ ವಿದ್ಯಾರ್ಥಿಗೆ 'ಇವರ ಹೆಸರೇನು ?' ಎಂದು ಕೇಳಿದೆ. ಆತ ಉತ್ತರಿಸಿದ: 'ಜಿ.ಎ. ಕುಲಕರ್ಣಿ ಎಂದು'.

ಅಂದಿನಿಂದ ಜಿ.ಎ. ಕುಲಕರ್ಣಿಯವರ ಇಂಗ್ಲೀಷ್ ಕ್ಲಾಸಿನ ಬಗ್ಗೆ ಆಸಕ್ತಿ ಬೆಳೆಯುತ್ತ ಹೋಯಿತು. ಅವರ ಪಾಂಡಿತ್ಯ, ಆಳ ವ್ಯಾಸಂಗ, ವಿಮರ್ಶಾತ್ಮಕ ವಿವೇಚನೆ, ಶಬ್ದ ಭಾಂಡಾರ, ಬಳಸುವ ನೂರಾರು ಹೋಲಿಕೆಗಳ ಮೋಡಿಗೆ ವಿದ್ಯಾರ್ಥಿ ಸಮೂಹ ಆಕರ್ಷಿತವಾಗಿತ್ತು. ಧಾರವಾಡದಲ್ಲಿ ಜಿ.ಎ. ಕುಲಕರ್ಣಿಯವರ ಹೆಸರು ತುಂಬಾ ಚಿರಪರಿಚಿತವಾಗಿತ್ತು.

ಗುರುನಾಥ ಆಬಾಜಿ ಕುಲಕರ್ಣಿಯವರು ಹುಟ್ಟಿದ್ದು 1923ರಲ್ಲಿ. ಬೆಳಗಾಂವಿಯಲ್ಲೇ ಬಾಲ್ಯ ಕಳೆಯಿತು. ವಿದ್ಯಾಭ್ಯಾಸವೂ ಮುಗಿ

ಯಿತು. ಕೆಲವರ್ಷ ಟ್ಯೂಟರ್ ಆಗಿ ಕೆಲಸ ಮಾಡಿದರು. ಅನಂತರ ಪ್ರಾಧ್ಯಾಪಕ ವೃತ್ತಿ. 1950ರಿಂದ ಜೆ.ಎಸ್.ಎಸ್‌ನಲ್ಲಿ ಆಂಗ್ಲ ಪ್ರಾಧ್ಯಾಪಕರಾಗಿ ನೇಮಕ. ಕೊನೆಯವರೆಗೂ ಅಲ್ಲಿಯೆ ಸೇವೆ ಸಲ್ಲಿಸಿ ನಿವೃತ್ತಿಗೊಂಡು ಅನಂತರ ಪುಣೆಯಲ್ಲಿ ವಾಸಮಾಡುತ್ತಿದ್ದ ಇವರು 1987ರ ಡಿಸೆಂಬರ್ 11ರಂದು ರಕ್ತ ಕ್ಯಾನ್ಸರಿನಿಂದ ತೀರಿಕೊಂಡಿದ್ದು ಮರಾಠಿ ಸಾರಸ್ವತ ಲೋಕಕ್ಕೆ ತುಂಬಲಾರದ ಹಾನಿ ತಂದಿತು.

ಮರಾಠಿ ಸಾಹಿತ್ಯ ಕ್ಷೇತ್ರದಲ್ಲಿ 'ಜಿ.ಎ.' ಹೆಸರು ತುಂಬಾ ಸುಪರಿಚಿತ, ಈತ ಕಥಾಲೋಕದ 'ಧ್ರುವತಾರೆ'. ಮೊದಲಿನಿಂದಲೇ ಶಿಸ್ತಿನ ಮನುಷ್ಯ.ನಾನು ಧಾರವಾಡದಲ್ಲಿದ್ದಾಗ ಕಾಲೇಜಿನ ಅಥವಾ ಯಾವ ಸಾರ್ವಜನಿಕ ಸಭೆ ಸಮಾರಂಭದಲ್ಲಿ ಭಾಗವಹಿಸಿದ್ದನ್ನು ಕಂಡಿರಲಿಲ್ಲ. ಅಧಿಕಾರದಾಹ, ಗೌರವ, ಅಂತಸ್ತಿನ ವ್ಯಾಮೋಹ, ಒಣ ಆಡಂಬರ, ಜಂಭ ಇದೆಲ್ಲದರಿಂದ ಗಾವುದ-ಗಾವುದ ದೂರವಿದ್ದ ವ್ಯಕ್ತಿ. ಪಾಠಪ್ರವಚನ, ಓದು-ಬರಹ, ಲೇಖನ ಇದರಲ್ಲೇ ಸದಾಕಾಲ ಮುಳುಗಿರುತ್ತಿದ್ದ. ಸದಾಕಾಲ ಓದು-ಓದು-ಓದು ! ಪರಿಣಾಮವಾಗಿ ಆಂಗ್ಲ ಭಾಷೆಯ ಮೇಲೆ ಪ್ರಭುತ್ವ ಬೆಳೆಯಿತು. ಪ್ರಗಾಢ ಪಾಂಡಿತ್ಯವೂ ಬಂತು. ಅಷ್ಟೇ ಅಲ್ಲ, ಮಾತೃಭಾಷೆಯಾದ ಮರಾಠಿಯಲ್ಲಿ ಕಥೆ ಬರೆಯುವ ಹವ್ಯಾಸವೂ ಬೆಳೆಯಿತು.

1959ರಲ್ಲಿ 'ಜಿ.ಎ.'ಯವರ ಪ್ರಥಮ ಸಂಕಲನ 'ನೀಳಾಸಾವಳಾ' ಪ್ರಕಟಗೊಂಡಿತು. ಮಧ್ಯಮ ವರ್ಗದ ಜೀವನಚಿತ್ರಣದಲ್ಲೇ ತನ್ಮಯವಾಗಿದ್ದ ಮರಾಠಿ ಕಥಾ ಲೋಕಕ್ಕೆ 'ಜಿ.ಎ' ಕಥೆ ಹೊಸ ತಿರುವು ನೀಡಿತು. 1959ರಿಂದ 77ರ ಅವಧಿಯಲ್ಲಿ ಇವರು ನೂರಕ್ಕೂ ಮಿಕ್ಕಿ ಕಥೆಗಳನ್ನು ರಚಿಸಿದರು. 'ನೀಳಾಸಾವಳಾ', 'ಪಾರವಾ', 'ಹಿರವೇರಾವೇ', 'ರಕ್ತಚಂದನ', 'ಕಾಜಳಮಾಯ' ದಿಂದಾರಂಭಿಸಿ 'ಪಿಂಗಳಾವೇಳ'ದ ವರೆಗೆ ಸುಮಾರು ಎಂಟು ಕಥಾ ಸಂಗ್ರಹಗಳು ಪ್ರಕಟಗೊಂಡಿವೆ. ಅಲ್ಲದೆ ಆಂಗ್ಲ ಭಾಷೆಯಿಂದ ಕಥೆಗಳ ಅನುವಾದ, ರೂಪಕ ಕಥೆಗಳ ಸಂಚಯವನ್ನೂ ಕೈಗೊಂಡಿದ್ದಾರೆ. ಹಾಗೆಯೆ ನೊಬೆಲ್ ಕಾದಂಬರಿಕಾರನಾದ ವಿಲಿಯಂ ಗೋಲ್ಡಿಂಗನ *Lords of the Files*ದರ ಮರಾಠಿ ಅನುವಾದವೂ ಬೆಳಕು ಕಂಡಿದೆ.

'ಜಿ.ಎ' ನಿಗೂಢ ಮನೋವಿಶ್ಲೇಷಣಾತ್ಮಕ ಕಥೆಗಾರ. ಓದುಗರನ್ನು ದಂಗು ಬಡಿಸುವ, ವಿಶಿಷ್ಟ ಲೋಕಕ್ಕೆ ಕರೆದೊಯ್ಯುವ, ಮೋಡಿ ಹಾಕುವ, ಮನಸ್ಸನ್ನು ಸಮ್ಮೋಹಿನಿಗೊಳಿಸುವ ತಾಕತ್ತು ಇವರ ಕಥೆಗಳಿಗಿವೆ. ಇಂಥ ವಿಕ್ಷಿಪ್ತವಾದ ವಿಶಿಷ್ಟ ರೀತಿಯ ಕತೆಗಳಿಂದ ಮರಾಠಿ ವಾಙ್ಮಯದಲ್ಲಿ ಭಿನ್ನ ಅಭಿರುಚಿಯ ಸುಸಂಸ್ಕೃತ ಓದುಗರ ವರ್ಗವೊಂದು ನಿರ್ಮಾಣಗೊಂಡಿದ್ದು ವಾಸ್ತವಿಕ ಸಂಗತಿ. ಓದುಗರನ್ನು ತಮ್ಮೊಂದಿಗೆ ಅದ್ಭುತರಮ್ಯ ಲೋಕಕ್ಕೆ ಕರೆದೊಯ್ಯಬಲ್ಲ ಮಾಂತ್ರಿಕ ಶಕ್ತಿ ಇವರ ಕತೆಗಳಿಗಿದೆ. ಅರ್ಥಹೀನ ಜಗತ್ತು, ಅಲ್ಲಿಯ ದುರ್ಬಲ ಮಾನವರು, ಅವರ ನಿರಂತರ ನೋವು,



ಅರ್ಥಹೀನ ಸಂಬಂಧಗಳು, ಅಸಂಗತ ಬದುಕಿನಾಳದಿಂದ ಹುಡುಕಿ ತೆಗೆದ ಮಾನವೀಯತೆ ಇವರ ಕತೆಗಳ ಪ್ರಮುಖ ಲಕ್ಷಣಗಳು. 'ಜಿ.ಎ' ಕಥೆಗಳ ಧಾಟಿ ತುಂಬಾ ಗಂಭೀರ, ತುಂಬಿ ಹರಿವ ಪ್ರಪಾತದಂತೆ. ಅಷ್ಟೇ ಧ್ವನಿಪೂರ್ಣ. ಅದರ ಆಳ ಮಾತ್ರ ಅಗಮ್ಯ.

ಐದಾರು ವರ್ಷಗಳ ಹಿಂದೆ ಡಾ. ಶಾಂತಿನಾಥ ದೇಸಾಯಿ ನನ್ನನ್ನು ಕರೆಸಿ, 'ಋಜುವಾತಿಗಾಗಿ' 'ಜಿ.ಎ'ಯವರ 'ಗುಂತವಳ' ಕಥೆಯ ಅನುವಾದವನ್ನು ಕೊಡುವಂತೆ ಸೂಚಿಸಿದರು. ಈ ಹಿಂದೆ ಕೆಲ ಮರಾಠಿ ಕಥೆಗಳನ್ನು ಅನುವಾದಿಸಿದ್ದುದರಿಂದ ತಕ್ಷಣ ಒಪ್ಪಿಕೊಂಡೆ. ಆದರೆ ಕಥೆ ಓದುತ್ತಾ ಹೋದಂತೆ ಅಲ್ಲಿಯ ನಿಗೂಢ ಪ್ರಪಂಚ, ಗಾಂಭೀರ್ಯ, ಸಿಕ್ಕ ಸಿಕ್ಕದ ಮಾನವೀಯ ಸಂಬಂಧ, ಕಥೆಯ ಅಂತರಂಗದಲ್ಲಿ ಹುದುಗಿರುವ ಕ್ಲಿಷ್ಟ ಧ್ವನಿಗೆ ಬೆಚ್ಚಿದೆ. ಈ ಕಥೆಯನ್ನು ನಾನು ಅನುವಾದಿಸಬಲ್ಲೆನೇ? ಆ ಸಾಮರ್ಥ್ಯ ನನ್ನಲ್ಲಿದೆಯೇ ? ಮೂಲ ಆಶಯಕ್ಕೆ, ಧ್ವನಿಗೆ ಅಪಚಾರವಾಗದಂತೆ ಬರೆಯುವುದು ಸಾಧ್ಯವಾಗಬಹುದೇ ? ಎಂಬ ಹತ್ತು ಹಲವು ಪ್ರಶ್ನೆಗಳು ಆ ಕಾಲಕ್ಕೆ ಸುಳಿದುಹೋದವು. ಅದು ಭಾರತ ಪಾಕಿಸ್ತಾನದ ವಿಭಜನೆಯ ಕಾಲಕ್ಕೆ ಉಧ್ವಸ್ತಗೊಂಡ ಸೀಖನೊಬ್ಬನ ದುರಂತ ಕೌಟುಂಬಿಕ ಬದುಕಿಗೆ ಸಂಬಂಧಿಸಿದ ಕಥೆ. ಖುಶವಂತಸಿಂಗರ *Train to Pakistan* ಮಾದರಿಯ ಕತೆ. ಅಂತೂ ಈ ಕತೆಯನ್ನು ಡಾ. ಶಾಂತಿನಾಥ ದೇಸಾಯಿಯವರ ಸಹಾಯದಿಂದ ಅನುವಾದಿಸಿದೆ. ಈ ಘಟನೆ ನನ್ನಲ್ಲಿ 'ಜಿ.ಎ' ಕತೆ ಬಗ್ಗೆ ಸಾಕಷ್ಟು ಕುತೂಹಲ ಕೆರಳಿಸಲು ಕಾರಣವಾಯಿತು. ಅಂದಿನಿಂದ ನಾನು 'ಜಿ.ಎ' ಕತೆಗಳ ಭಕ್ತನಾದೆ.

'ಜಿ.ಎ' ಕಥೆಗಳನ್ನು ವಾಸ್ತವಿಕ ಹಾಗೂ ರೂಪಕ ಕತೆಗಳು ಎಂದು ಎರಡು ರೀತಿಯಿಂದ ವಿಭಾಗಿಸಬಹುದು. ವಾಸ್ತವಿಕ ಕತೆಗಳನ್ನು ಬರೆದಷ್ಟೇ ಸಮರ್ಥವಾಗಿ ಅವರು ರೂಪಕ ಕಥೆಗಳನ್ನೂ ರಚಿಸಿದ್ದಾರೆ. ಗ್ರೀಕರ ಬದುಕು, ಹೋರಾಟದ ಪ್ರವೃತ್ತಿ, ಅಲ್ಲಿಯ ನೋವುನಲಿವುಗಳ ದುರಂತ ಚಿತ್ರಣವನ್ನು ಸಮಗ್ರವಾಗಿ ರೂಪಕ ಕಥೆಗಳಲ್ಲಿ ಕಾಣಬಹುದು. ಸಮರ್ಥ ಸೃಜನಶೀಲ ಲೇಖಕನೊಬ್ಬ, ರೂಪಕ ಕತೆಗಳ ರಚನೆಯತ್ತ ಹೊರಳಿದ್ದೇಕೆ ? ಎಂಬ ಪ್ರಶ್ನೆ ಮರಾಠಿ ವಿಮರ್ಶಕರಲ್ಲಿ ಅಚ್ಚರಿ ಹುಟ್ಟಿಸಿದೆ. ಹುಟ್ಟು, ಸಾವು, ವಿಧಿನಿಯಮ, ಮಾನವೀಯ ಬದುಕು, ಪರಿಶುದ್ಧವಾದ ಲೈಂಗಿಕ ಸಂಬಂಧ ಇವೇ ಈ ಕತೆಗಾರನ ಜೀವಾಳ. 'ಗುಂತವಳ',

80 ವರ್ಷದ ಸೀಸರ್ ಫ್ಲೋರೆಟ್ಟಿಯ ಬಟ್ಟೆ ಕಳಚಲು ಡಾಕ್ಟರು ಮತ್ತು ನರ್ಸಗಳ ತಂಡವೊಂದು ಆಸ್ಪತ್ರೆಯಲ್ಲಿ ಹೆಣಗಾಡಿತು!

"ಬಟ್ಟೆ ಕಳಚಬೇಡಿ" ಎಂದು ಆ ಮುದುಕ ಹುಯಿಲಿಡುತ್ತಿದ್ದ. ಕಾರಿನ ಸಣ್ಣ ಅಪಘಾತದಲ್ಲಿ ಸಿಕ್ಕಿಕೊಂಡ ಅವನನ್ನು ಫ್ರಾನ್ಸಿನ ನಾನ್ಸಿಯಲ್ಲಿನ ಆಸ್ಪತ್ರೆಗೆ ಕರೆತರಲಾಗಿತ್ತು.

ಅವನೆಷ್ಟೇ ಅವರನ್ನು ಒದ್ದರೂ, ಅವರಿಗೆ ಗುದ್ದಿದರೂ, ಅವರಿಂದ ನುಣುಚಿಕೊಳ್ಳಲು ಪ್ರಯತ್ನಿಸಿದರೂ ಐದು ಜನ ನರ್ಸಗಳು ಮತ್ತು ಇಬ್ಬರು ಡಾಕ್ಟರು ಕೂಡಿ ಅತಿ ಪ್ರಯಾಸದಿಂದ ಕೊನೆಗೂ ಅವನ ಬಟ್ಟೆಯನ್ನು ಕಳಚಿದರು. ಆ ಮುದುಕ ತನ್ನ ಉದ್ದನೆಯ ಉಲ್ಲನ್ ಕಾಲುಚೀಲಗಳಲ್ಲಿ ತನ್ನ ಇಡೀ ಜೀವಮಾನದ ಗಳಿಕೆಯನ್ನು ಅರ್ಥಾತ್ 5000 ಪೌಂಡುಗಳ ಮೌಲ್ಯದ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ಅಡಗಿಸಿಟ್ಟುಕೊಂಡಿದ್ದ.

ನಾವು ಅಚ್ಚರಿಪಡುವಷ್ಟು ಜನರಿಗೆ ಇದೇ ಅಭಿಪ್ರಾಯವಿದೆ. ಮೆಲ್‌ಬೋರ್ನಿನ ಮಾರ್ಕೆಟ್ ಒಂದರಲ್ಲಿ ಸ್ಟಾಲ್ ಇಟ್ಟುಕೊಂಡಿರುವ ಜಾಜ್ ಪೇಜ್ ಎಂಬಾತ 7000 ಪೌಂಡುಗಳಷ್ಟು ಹಣವನ್ನು ಬೆಳ್ಳಿ ನಾಣ್ಯಗಳ ರೂಪದಲ್ಲಿ ತನ್ನ ಮನೆಯಲ್ಲಿ ಬಚ್ಚಿಟ್ಟುಕೊಂಡಿದ್ದ.

ಆತ ಸತ್ತ ನಂತರ ಪೋಲೀಸರು ಆ ನಾಣ್ಯಗಳನ್ನು ಪತ್ತೆಹಚ್ಚಿದರು. ಹಳೆಯ ಕಾಲುಚೀಲಗಳು, ಬೀರ್ ಶೀಷೆಗಳು ಮತ್ತು ಜಾಮ್ ಬಾಟಲುಗಳಲ್ಲಿ ಆತ ಆ ನಾಣ್ಯಗಳನ್ನು ಬಚ್ಚಿ

‘ಮಾಣುಸುವಾಚಿ ಬೆಟ’,‘ಪರಾಭವ’ ಇವು ಮರಾಠಿಯ ಶ್ರೇಷ್ಠ ಕತೆಗಳಾಗಿವೆ. ಇವರ ವ್ಯಕ್ತಿತ್ವದಂತೆ ಕತೆಗಳೂ ವಿಕ್ಷಿಪ್ತ ಹಾಗೂ ನಿಗೂಢತೆಯಿಂದ ಕೂಡಿವೆ.

ಇವರ ಕಥಾ ಸಂಗ್ರಹಕ್ಕೆ ಮಹಾರಾಷ್ಟ್ರ ಸರಕಾರದ ಪಾರಿತೋಷಕ ಸಿಕ್ಕಿದೆ. ‘ಕಾಜಳ ಮಾಯಾ’ ಕಥಾ ಸಂಗ್ರಹಕ್ಕೆ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ದೊರಕಿದೆ. ಆದರೆ ಕಾರಣಾಂತರಗಳಿಂದ ಇದನ್ನು ‘ಜಿ.ಎ’ ಹಿಂದಿರುಗಿಸಿದರು. ‘ಜಿ.ಎ’ ಮೂಲತಃ ವಿಕ್ಷಿಪ್ತ ವ್ಯಕ್ತಿಯಾಗಿದ್ದರಿಂದ ಯಾವ ಸಮಾರಂಭದಲ್ಲೂ ಭಾಗವಹಿಸುತ್ತಿರಲಿಲ್ಲ. ಸತ್ಕಾರದ ವ್ಯಾಮೋಹವೂ ಇಲ್ಲ. ಸಾರ್ವಜನಿಕ ಬದುಕಿನಿಂದ ದೂರವಾದ ಒಂಟಿ ಬದುಕು. ನನಗೆ ಎಷ್ಟೋ ಸಲ ಅವರ ರಹಸ್ಯಮಯ ವ್ಯಕ್ತಿತ್ವ ನೋಡಿ ಅಚ್ಚರಿಯೆನಿಸಿದರೆ, ಒಂದು ದೃಷ್ಟಿಯಲ್ಲಿ ‘ಜಿ.ಎ’ ಪರಿಶುದ್ಧ ಬದುಕನ್ನು ಸಾಗಿಸಿದ ಮಹಾಯೋಗಿ, ತತ್ವಜ್ಞಾನಿ ದಾರ್ಶನಿಕ ! ಇವರ

ಬ್ಯಾಂಕುಗಳನ್ನು ನಂಬದವರು

ಜಿ.ಎ.ಶಶಿಧರ

ಟ್ಟುಕೊಂಡಿದ್ದ. ಬಹಳ ದಿವಸಗಳವರೆಗೆ ಆ ನಾಣ್ಯಗಳನ್ನು ಬಚ್ಚಿಟ್ಟಿದುದರಿಂದ ಅವುಗಳ ಪೈಕಿ ಕೆಲವು ಕಪ್ಪಗಾಗಿಹೋಗಿದ್ದವು. ಜರ್ಸಿಯಲ್ಲಿ ಕೊಳಾಯಿಗಾರನೊಬ್ಬ ಮನೆಯೊಂದರ ಮಳಿಗೆಯ ಹಲಗೆಗಳನ್ನು ಮೇಲಕ್ಕೆತ್ತಿದಾಗ ಬೆಳ್ಳಿ ನಾಣ್ಯಗಳನ್ನು ತುಂಬಿದ್ದ ದಿಂಬಿನ ಕವರ್‌ಗಳು ಇದ್ದುದನ್ನು ಕಂಡ. ಹೆಚ್ಚು ಕಡಿಮೆ ಒಂದು ಟನ್ನಿನಷ್ಟು ನಾಣ್ಯಗಳು ಅವುಗಳಲ್ಲಿದ್ದವು.

ಇಲಿನಾಯ್‌ನ ಚಾರ್ಲ್ಸ್ ಸಾಲ್ಟ್ಜಮನ್ ಎಂಬಾತ ತನ್ನ ಕಾರಿನ ಹಿಂಭಾಗದಲ್ಲಿ ಉಳಿತಾಯದ ಹಣವನ್ನು ಇರಿಸಿಕೊಂಡಿದ್ದ. ಅವನ ಕಾರು ಕಳುವಾಗಿ ಹೋಯಿತು. ಆಗ ‘‘ಹಣ ಹೋಯಿತು’’ ಎಂದಾತ ನಂಬಿಕೊಂಡಿದ್ದ. ಆದರೆ ಪೋಲೀಸಿನವರು ಅವನ ಕಾರು ಮತ್ತು ಹಣ ಎರಡನ್ನೂ ಪತ್ತೆ ಹಚ್ಚಿ ಆತನಿಗೆ ಹಿಂದಿರುಗಿಸಿದರು.

ಕೆಲ ಸಾರಿ ಜನ ಬಹಳ ಕಾಲದ ನಂತರ ಪಾಠ ಕಲಿಯುತ್ತಾರೆ. ನೆವೆಡಾದ ಪಾಲ್ ಹಿರ್ಷಮನ್ ಎಂಬಾತನಿಗೆ ಬ್ಯಾಂಕುಗಳಲ್ಲಿ ನಂಬಿಕೆ ಇಲ್ಲ. ಆದುದರಿಂದ ಆತ ಇಡೀ ಜೀವಮಾನದ ಉಳಿತಾಯದ ಹಣವಾದ 4000 ಪೌಂಡಗಳಲ್ಲಿ ಒಂದು ಪ್ಯಾಕೇಟನ್ನು ತನ್ನ ಹೆಸರಿಗೆ ಪ್ರತಿ ಪೋಸ್ಟ್ ಮಾಡಿಕೊಳ್ಳುತ್ತಿದ್ದ. ಹೀಗೆ ಮಾಡುತ್ತಿದ್ದುದರಿಂದ ಆತ ರಾತ್ರಿ ಆರಾಮವಾಗಿ ನಿದ್ದೆ ಮಾಡಬಹುದಾಗಿತ್ತು. ಏಕೆಂದರೆ ಕನ್ನಗಳ್ಳತನವಾದರೂ ಆತನ ಮನೆಯಲ್ಲಿ ಹಣವಿರುತ್ತಿರಲಿಲ್ಲವಷ್ಟೆ!

ಹಿರ್ಷಮನ್ನನಿಗಾಗೆ ಪ್ರತಿದಿನ ಬೆಳಿಗೆ ಪೋಸ್ಟಮನ್ ಆ ಪ್ಯಾಕೇಟನ್ನು ತಂದು ಕೊಡುತ್ತಿದ್ದ. ಆ ಹಣವನ್ನು ಎಣಿಸಿಕೊಂಡು ಹಿರ್ಷಮನ್ ಸಾಯಂಕಾಲದವರೆಗೂ ತನ್ನ ಬಳಿಯಿರಿಸಿಕೊಂಡು ನಂತರ ಸಂಜೆ ಹೊತ್ತು ಅದನ್ನು ತನ್ನ ವಿಳಾಸಕ್ಕೆ ಪೋಸ್ಟ್ ಮಾಡಿಕೊಳ್ಳುತ್ತಿದ್ದ.

ಆದರೆ ಒಂದು ದಿನ ಬೆಳಿಗ್ಗೆ ಪೋಸ್ಟಮನ್ ಆತನಿಗೆ ಆ ಪ್ಯಾಕೇಟನ್ನು ತಂದು ಕೊಡಲೇ ಇಲ್ಲ. ಆಗ ಹಿರ್ಷಮನ್ ಪೋಸ್ಟ ಆಫೀಸಿಗೆ ಫೋನ್ ಮಾಡಿದ. ಹಿರ್ಷಮನ್ ಬಳಸುತ್ತಿದ್ದ ಪೋಸ್ಟ್ ಬಾಕ್ಸಿಗೆ ತರುಣರ ಗುಂಪೊಂದು ಬೆಂಕಿ ಹಚ್ಚಿದೆ ಎಂದು ಪೋಸ್ಟ್ ಆಫೀಸಿನಿಂದ ಫೋನ್ ಮೂಲಕ ಸುದ್ದಿ ಬಂತು. ★

ಸಾಂಸ್ಕೃತಿಕ ಬದುಕು ಹಾಗೂ ಸಾಹಿತ್ಯಕ ಜೀವನ ತುಂಬಾ ಕುತೂಹಲಕಾರಿಯಾದದ್ದು. ಕಥಾ ಸೃಷ್ಟಿಯಂತೂ ಅನನ್ಯ.

ಬದುಕಿನಲ್ಲಿ ಕಂಡುಕೊಂಡ ಅನುಭವ ಉಂಡ ನೋವೂ ಇವರ ಕಥೆಗಳಿಗೆ ಮುಖ್ಯ ಸರಕುಗಳಾಗಿವೆ. ನೋವು, ವೇದನೆ ಇವರ ಕಥೆಗಳ ಅಂತರ್ಯದಲ್ಲಿ ತೀವ್ರಗಾಮಿಯಾಗಿ ಪ್ರವಹಿಸುತ್ತದೆ. ಓದುಗರನ್ನು ಅಂತರ್ಮುಖಿಯನ್ನಾಗಿಸುವುದು ಇವರ ಕಥೆಗಳ ಮುಖ್ಯ ಉದ್ದೇಶಗಳಲ್ಲೊಂದು.

'ಜಿ.ಎ' ಕಥೆಗಳ ಇನ್ನೊಂದು ಪ್ರಮುಖ ಅಂಶ ಯಾವುದೆಂದರೆ ಕನ್ನಡದ ಮಣ್ಣಿನ ವಾಸನೆಯಿಂದ ಕೂಡಿದ್ದು. ಬೆಳಗಾಂವಿಯ ಸುತ್ತಲಿನ ಪರಿಸರ, ಕನ್ನಡಿಗರ ಆಶೆ ಆಕಾಂಕ್ಷೆ, ಕರ್ನಾಟಕದ ಭೌಗೋಲಿಕ ಪರಿಸರ, ಕನ್ನಡ ನಾಡು-ನುಡಿ ಸಂಸ್ಕೃತಿಯ ದಟ್ಟ ಛಾಯೆಯನ್ನು ಅವರ ಕಥೆಗಳಲ್ಲಿ ಸಹಜವಾಗಿ ಗುರುತಿಸಬಹುದು. ಮರಾಠಿ ಕತೆಗಳಲ್ಲಿ ಕನ್ನಡ ಶಬ್ದಗಳನ್ನೂ, ಊರು-ಕೇರಿ-ವ್ಯಕ್ತಿಗಳ ಹೆಸರನ್ನೂ ಯಥೇಚ್ಛವಾಗಿ ಬಳಸಲಾಗಿದೆ. ಒಂದರ್ಥದಲ್ಲಿ 'ಜಿ.ಎ' ಕರ್ನಾಟಕದ ಮರಾಠಿ ಲೇಖಕ ಎಂದು ಹೆಮ್ಮೆಯಿಂದ ಹೇಳಬಹುದು.

ಮರಾಠಿ ಕಥಾಲೋಕದಲ್ಲಿ 'ಜಿ.ಎ'ಯವರಿಗೆ ವಿಶಿಷ್ಟ ಸ್ಥಾನವಿದೆ. ಅವರದೆ ಆದ ಒಂದು ಓದುವ ವರ್ಗವೂ ಇದೆ. ಅವರ ಕೆಲವು ಕತೆಗಳಂತೂ ಶ್ರೇಷ್ಠ ಭಾರತೀಯ ಕತೆಗಳ ಸಾಲಿಗೆ ಸೇರತಕ್ಕಂಥವು. ಹೀಗಾಗಿ 'ಜಿಎ'ಯವರ ಆಕಸ್ಮಿಕ ಸಾವು ಮರಾಠಿಯ ಸಾಹಿತ್ಯ ಕ್ಷೇತ್ರಕ್ಕೆ ತುಂಬಲಾರದ ಹಾನಿ.

ತಮ್ಮ ಕಥೆಯೊಂದರಲ್ಲಿ 'ಜಿ.ಎ' ಹೇಳುತ್ತಾರೆ: "But now leave ! Leave me to my dark green solitude." ಎಷ್ಟು, ಅದೆಷ್ಟು ಸತ್ಯ! 'ಜಿ.ಎ' ಇಂದು ಮೃತ್ಯುವಿನ ಹಸಿರು ಗರ್ಭದಲ್ಲಿ ಲೀನವಾಗಿ ಹೋಗಿದ್ದಾರೆ. ಅಗೋಚರ ಜಗತ್ತಿನತ್ತ ಅನಂತ ಪಯಣ ಬೆಳೆಸಿದ್ದಾರೆ. ಆ ದಿವ್ಯ ಚೇತನದ ನೆನಪು ನಮ್ಮಲ್ಲಿ ಸದಾ ಹಸಿರಾಗಿ ಉಳಿಯಲಿ. ★

ಮುಳ್ಳು ಗಿಡ

ಥಾರ್ನ್ ಆಫ್ ಕ್ರೈಸ್ಟ್ ಎಂಬುದೊಂದು ಮುಳ್ಳುಗಿಡವಿದೆ. ಈ ಗಿಡದ ಮುಳ್ಳಿನಿಂದ ರಚಿಸಿದ ಬಿರುಸಾದ ಕಿರೀಟವನ್ನು ಕ್ರಿಸ್ತ ಮಹಾಪ್ರಭುವಿನ ತಲೆಯ ಮೇಲೆ ಇರಿಸಲಾಯಿತು. ಆದರೆ ಇಂದುಗೂ ಈ ವಿಶೇಷವಾದ ಮುಳ್ಳಿನ ಗಿಡ ಕೇವಲ ಹಾಲಿವುಡ್‌ನಲ್ಲಿ ಮಾತ್ರ ಬೆಳೆಯುವುದನ್ನು ನೋಡಬಹುದು.

-ಕಾಣಕೋಣಕರ

ಗುದ್ದು ಸುತ್ತಿ....

ಫೆಬ್ರುವರಿ 1978. ಅಮೇರಿಕ ಹಾಗೂ ಕ್ಯೂಬಗಳ ನಡುವೆ ಹವಾನಾನಲ್ಲಿ ನಡೆಯುತ್ತಿದ್ದ ಅಮೆಚೂರ್‌ಕುಸ್ತಿ ಪಂದ್ಯದ ವೀಕ್ಷಕ ವಿವರಣೆಯನ್ನು ಅಮೇರಿಕದ ಹಾರ್ವರ್ಡ್ ರಸೆಲ್ ಟಿ.ವಿ.ಯಲ್ಲಿ ನೀಡಬೇಕಾಗಿತ್ತು. ಅಮೇರಿಕ, ಕ್ಯೂಬಾದಿಂದ ಬರೇ 145 ಕಿಲೋಮೀಟರುಗಳಷ್ಟು ದೂರವಿದ್ದರೂ ಟೆಲಿವಿಜನ್ನಿಗೆ ಚಿತ್ರ ಕಳುಹಿಸಲು ಬೇಕಾದ ದೂರ 1,50,000 ಕಿಲೋಮೀಟರುಗಳಷ್ಟು. ಕಾರಣವಿಷ್ಟೆ: ಅಮೇರಿಕ-ಕ್ಯೂಬಕ್ಕೂ ಉಪಗ್ರಹ ಸಂಪರ್ಕವಿಲ್ಲದ್ದರಿಂದ ವಿದ್ಯುತ್ ಪ್ರೇರಣೆಗಳು ಹವಾನಾನಿಂದ ರಶಿಯದ ಉಪಗ್ರಹಕ್ಕೆ ಮೊದಲು ಹೋಗಿ ಅಲ್ಲಿಂದ ಪೂರ್ವ ಜರ್ಮನಿಗೆ ಹೋದವು. ಮುಂದೆ ಜೆಕೋಸ್ಲೋವಿಕಿಯಾದ ಪ್ರಾಗ್ ಮೂಲಕ ಪಶ್ಚಿಮ ಜರ್ಮನಿಯನ್ನು ದಾಟಿ ಮುಂದೆ ಅಮೇರಿಕದ ಉಪಗ್ರಹವನ್ನು ತಲುಪಿದವು. ಉಪಗ್ರಹ ಇವುಗಳನ್ನು ಆಂಡುವರ್ ಮೇನ್‌ಗೆ ಕಳುಹಿಸಿ ನಂತರ ನ್ಯೂಯಾರ್ಕ್ ತಲುಪಿಸುತ್ತಿತ್ತು.

-ಎಸ್. ಜೆ.ಸುಜಾತ

ಕೆ.ಟಿ. ಪಾಂಡುರಂಗಿ

ಉಪಕಾರ - ಅಪಕಾರ

ಪರಸ್ಪರ ಉಪಕಾರ ಮಾಡುವದು ಮನುಷ್ಯರ ಸಹಜಸ್ವಭಾವ. ಚಿಕ್ಕಂದಿನಿಂದಲೇ ಮನುಷ್ಯನು ತನಗೆ ಅನೇಕರ ನೆರವು ಬೇಕು ಎಂಬುದನ್ನು ಅರಿತುಕೊಳ್ಳುತ್ತಾನೆ. ಅವನ ಮೊದಲಿನ ಐದು ವರ್ಷದ ಜೀವನ ಹೆಜ್ಜೆ ಹೆಜ್ಜೆಗೂ ತಾಯಿಯ ನೆರವನ್ನು ಅವಲಂಬಿಸಿರುತ್ತದೆ. ಇದರ ಸಂಸ್ಕಾರ ಅವನ ಮನಸ್ಸಿನ ಮೇಲೆ ಬಲವಾಗಿ ಉಳಿಯುತ್ತದೆ. ತಾಯಿಯು ಬಹಳ ವಾತ್ಸಲ್ಯದಿಂದ ಮಗುವನ್ನು ಬೆಳೆಸಿದ್ದರೆ ಇದು ಇನ್ನೂ ಗಾಢವಾಗಿ ಉಳಿದಿರುತ್ತದೆ. ತಾಯಿ ಕೋಪಿಷ್ಠಳೂ ಜಬರಿಸುವವಳೂ ಆಗಿದ್ದರೂ ಅವಳಿಂದ ಆದ ಉಪಕಾರದ ಅರಿವು ಇದ್ದೇ ಇರುತ್ತದೆ. ಮುಂದೆ ದೊಡ್ಡವನಾದಂತೆ ತಂದೆ, ಅಣ್ಣ, ಅಕ್ಕ, ಮಿತ್ರರು, ಅಕ್ಕಪಕ್ಕದವರು, ಅಧ್ಯಾಪಕರು ಹೀಗೆ ಅನೇಕರ ನೆರವನ್ನು ಪಡೆಯುತ್ತಲೇ ಹೋಗುವದರಿಂದ ತಾನು ಅನೇಕರ ಉಪಕಾರದಿಂದಲೇ ಮುಂದುವರೆಯುತ್ತಿದ್ದೇನೆ ಎಂಬ ಅರಿವು ಜಾಗೃತವಾಗಿರುತ್ತದೆ. ಇದು ತಾನು ಕೂಡ ತನ್ನ ಪರಿಸರದಲ್ಲಿದ್ದವರಿಗೆ ಉಪಕಾರ ಮಾಡಲು ಪ್ರೇರಣೆಯನ್ನು ಕೊಡುತ್ತದೆ.

ಇನ್ನು ಬೇರೆಯವರಿಗೆ ಅಪಕಾರ ಮಾಡುವದು ಮನುಷ್ಯನ ಸಹಜ ಸ್ವಭಾವವಲ್ಲದಿದ್ದರೂ ಕೆಲವು ಸಂದರ್ಭಗಳು ಬೇರೆಯವರಿಗೆ ಅಪಕಾರ ಮಾಡಲು ಕಾರಣವಾಗುತ್ತವೆ. ಮನುಷ್ಯನು ಎಷ್ಟೇ ಉತ್ತಮನಾಗಿದ್ದರೂ ಅವನ ಸ್ವಾರ್ಥ ಎಂಬುದೊಂದಿರುತ್ತದೆ. ಇದನ್ನು ಎಷ್ಟೇ ಸಯುಕ್ತಿಕವಾಗಿ, ಪರರ ಹಿತಕ್ಕೆ ಧಕ್ಕೆ ಬರದಂತೆ, ಕೇವಲ ತನ್ನ ನ್ಯಾಯವಾದ ಆಶೆ, ಆಕಾಂಕ್ಷೆಗಳಿಗೆ ಸೀಮಿತವಾಗುವಂತೆ ರೂಪಿಸಿಕೊಂಡರೂ ಬೇರೆಯವರ ಸ್ವಾರ್ಥದೊಡನೆ ಆಗಾಗ ಸಂಘರ್ಷ ಬರುತ್ತಲೇ ಇರುತ್ತದೆ. ಈ ಸಂಘರ್ಷವನ್ನು ಎದುರಿಸಲು ಯೋಜಿಸುವ ಉಪಾಯಗಳೇ ಪರರಿಗೆ ಅಪಾಯವಾಗುತ್ತವೆ. ಆ ಪರರ ಸ್ವಾರ್ಥ ಉಗ್ರವಾಗಿದ್ದರೆ ಈ ಉಪಾಯಗಳು ಇನ್ನೂ ಉಗ್ರವಾಗಬೇಕಾಗುತ್ತದೆ. ಕೊಡು-ತೆಗೆದುಕೊಳ್ಳುವ ಮನೋಭಾವದ ಇಬ್ಬರಿಗೂ ಇದ್ದಾಗ ಇಂಥ ಅಪಕಾರದ ಪ್ರಮಾಣ ಕಡಿಮೆಯಾಗುವುದು.

ಅಲ್ಲದೆ, ಅಸೂಯೆ ಮನುಷ್ಯನಲ್ಲಿ ಸುಪ್ತವಾಗಿ ಅಥವಾ ಪ್ರಕಟವಾಗಿ ಇರುವ ಒಂದು ದುರ್ಗುಣ. ಇದೂ ಪರರಿಗೆ ಅಪಕಾರ ಮಾಡಲು ಪ್ರೇರಿಸುತ್ತದೆ. ಬೇಡದೆ ಬಯಸದೆ ಉಪಕಾರ ಮಾಡುವ ಸ್ವಭಾವ ಮನುಷ್ಯನಲ್ಲಿ ಸಹಜವಾಗಿ ಇದ್ದಂತೆ ನಿಷ್ಕಾರಣವಾಗಿ ಅಪಕಾರ ಮಾಡುವ ಸ್ವಭಾವವೂ ಕೆಲವರಿಗೆ ಇರುತ್ತದೆ. ಸಾಮಾನ್ಯವಾಗಿ ಇಂಥವರು ಅಹಂಕಾರದ ದ್ವೇಷದ ಸ್ವಭಾವದವರಾಗಿರುತ್ತಾರೆ. ಇವರ ಅಹಂಕಾರಕ್ಕೆ ಸ್ವಲ್ಪ ಧಕ್ಕೆಯಾಗಿದೆ ಎಂಬ ಭಾವನೆಯು ಇವರಿಗೆ ಉಂಟಾದಾಗಲೂ ಇವರು ಅದಕ್ಕೆ ಪ್ರತಿಯಾಗಿ ಬಹಳ ಅಪಕಾರ ಮಾಡುತ್ತಾರೆ. ಇಂಥವರಲ್ಲಿ ಅಧಿಕಾರ ಹಣ ಇದ್ದರೆ ಇದು ಇನ್ನೂ ಹೆಚ್ಚಾಗುತ್ತದೆ.

ಜೀವನದಲ್ಲಿ ಪ್ರತಿಯೊಬ್ಬ ಮನುಷ್ಯನೂ ತನ್ನ ಅಸೂಯೆ, ಅಹಂಕಾರ, ಸ್ವಾರ್ಥ ಮತ್ತು ಮಹತ್ವಾಕಾಂಕ್ಷೆಗಳಿಗೆ ಪರಿಮಿತಿಯನ್ನು ಹಾಕಿಕೊಂಡರೆ ಸಮಾಜದಲ್ಲಿ ಅಪಕಾರದ ಪ್ರಮಾಣ ಕಡಿಮೆಯಾಗುತ್ತದೆ.

ಎರಡು ಖಂಡಗಳ ಮೇಲೆ

ಹತ್ತು ಗಂಟೆ

ಹ್ಯಾಮರ್‌ಸ್ಮಿತ್‌ನಲ್ಲಿ ಹತ್ತಿದ ರೈಲು ನನ್ನನ್ನು ಹೀಥ್ರೊ ವಿಮಾನ ನಿಲ್ದಾಣದ ಗರ್ಭದಲ್ಲಿಯೇ-ಅಂದರೆ ನಿಲ್ದಾಣದ ಟರ್ಮಿನಲ್ಲಿನ ಬುಡದಲ್ಲಿಯೇ-ಇಳಿಸಿತು. ನನ್ನ ಸೂಟ್‌ಕೇಸ್ ಮತ್ತು ಬ್ಯಾಗನ್ನು ತೆಗೆದುಕೊಂಡು ಮೆಟ್ಟಿಲುಗಳನ್ನೇರಿ ಟರ್ಮಿನಲ್ಲಿನ ಲಾಬಿಯನ್ನು ಪ್ರವೇಶಿಸಿದೆ. ಎದುರಿಗೆ ವಿಮಾನ ನಿಲ್ದಾಣದ ಸಿಬ್ಬಂದಿಯ ಸಮವಸ್ತ್ರವನ್ನು ಹಾಕಿಕೊಂಡ ಸರ್ದಾರ್‌ಜೀ ಒಬ್ಬ ಎದುರಾದ.

"ಡಿಪಾರ್ಚರ್ ಟರ್ಮಿನಲ್ ಯಾವ ಕಡೆಗೆ ಸಿಂಗ್‌ಸಾಹಬ್?" ಎಂದೆ. ನನ್ನನ್ನು ಒಂದು ತರಹದ ವಕ್ರದೃಷ್ಟಿಯಿಂದ ನೋಡಿದ ಸರ್ದಾರ್‌ಜಿ. (ಇಂದಿರಾ ಗಾಂಧಿಯವರ ಹತ್ಯೆ ಅದೇ ಆಗಿದ್ದ ದಿನಗಳವು.) "ಇದೇ ಟರ್ಮಿನಲ್ಲು. ಹೀಗೇ ನೆಟ್ಟಗೆ ಹೋಗಿ ಬಲಕ್ಕೆ ಹೊರಳಿ. ಚೆಕ್ ಇನ್ ಕೌಂಟರ್ಸ್ ಕಾಣುತ್ತವೆ. ಅಂದ ಹಾಗೆ ಯಾವ ಊರು?" ಎಂದ.

"ನೈರೋಬಿ," ಎಂದೆ.

"ನೈರೋಬಿಯವರೋ? ನೀವು ಭಾರತದವರು ಎಂದು ತಿಳಿದುಕೊಂಡಿದ್ದೆ. ನಾನೂ ನೈರೋಬಿಯವನೇ ಇಲ್ಲಿಗೆ ಬಂದು ಹತ್ತು ವರ್ಷವಾಯಿತು. ಅಲ್ಲೇನು ಮಾಡುತ್ತೀರಿ?" ಎಂದ.

"ನಾನೊಬ್ಬ ಡಾಕ್ಟರು."

"ಬಹುತ್ ಅಚ್ಛಾ ಸತ್‌ಶ್ರೀ ಅಕಾಲ್," ಎಂದು ದೂರದಿಂದಲೇ ನನ್ನ ಕೈಕೂಡಿಸಿ ಬೀಳ್ಕೊಟ್ಟ. 'ಲಂಡನ್ ನ್ಯೂಯಾರ್ಕ್ ಕಂಕಾರ್ಡ್ ಟರ್ಮಿನಲ್' ಎಂಬ ಬೋರ್ಡು ತಗುಲಿದ್ದ ಅಟ್ಟವನ್ನು ದಾಟಿ ನಂತರದಲ್ಲಿಯ ಅಸಂಖ್ಯ ಕೌಂಟರುಗಳೊಂದರಲ್ಲಿ 'ಚೆಕ್ ಇನ್' ಮಾಡಿದೆ. ನಾನು ಪ್ರಯಾಣಿಸಬೇಕಿದ್ದ ಲಂಡನ್-ನೈರೋಬಿ ವಿಮಾನ ಹೊರಡಲು ಇನ್ನೂ ನಾಲ್ಕು ಗಂಟೆಗಳ ಅವಕಾಶವಿತ್ತು. ಸೂಟ್‌ಕೇಸನ್ನು ವಿಮಾನದಲ್ಲಿ ಒಯ್ಯಲು ಬಿಟ್ಟು ಬೋರ್ಡಿಂಗ್ ಪಾಸ್ ತೆಗೆದುಕೊಂಡ ನಂತರ ನನಗೆ ಬೇಕಾದಂತೆ ವೇಳೆ ಕಳೆಯಲು ಸ್ವತಂತ್ರನಾದೆ. ಚೆಕ್ ಇನ್ ಕೌಂಟರುಗಳ ಮೇಲಿನ ಅಂತಸ್ತಿನಲ್ಲಿಯೇ 'ವೇಟಿಂಗ್ ಲಾಂಜ್' ಕಾಣಿಸಿತು. ಅಲ್ಲಿ ಹೋದೆ. ತಮ್ಮ ತಮ್ಮ ವಿಮಾನುಗಳಿಗಾಗಿ ಕಾಯುತ್ತಿದ್ದ ಸಾವಿರಾರು ಜನರಿಂದ ಲಾಂಜು ಭರ್ತಿಯಾಗಿತ್ತು. ಹೀಥ್ರೊದಲ್ಲಿ ಪ್ರತಿ ನಿಮಿಷಕ್ಕೊಮ್ಮೆ ಒಂದು ವಿಮಾನ ಹೊರಡುತ್ತದೆ ಅಥವಾ ಇಳಿಯು

ತ್ತಿದೆ ಎಂದು ವಿಮಾನ ನಿಲ್ದಾಣದ ಪರಿಚಯ ಮಾಡಿಸುವ ಒಂದು ಹಲಗೆ ಹೇಳುತ್ತದೆ. ಜಗತ್ತಿನ ಅತಿ ವ್ಯಸ್ತ ವಿಮಾನ ನಿಲ್ದಾಣ ಎಂದೂ ಅದು ಹೇಳಿಕೊಳ್ಳುತ್ತದೆ.

ನೂರಾರು ಜನ, ನೂರಾರು ನಾಡುಗಳ ಜನ, ತರತರಹದ ಮೈ ಬಣ್ಣಗಳು, ಮೈಕಟ್ಟುಗಳು, ಉಡುಪುತೊಡುಪುಗಳು. ಲಂಡನ್ನಿನಲ್ಲಿ ಜಗತ್ತಿನ ಬೇರೆಲ್ಲೂ ಕಾಣದಷ್ಟು ತರಹದ ಜನ ಕಾಣಸಿಗುತ್ತಾರೆ ಎಂಬ ಮಾತು ನಿಜ ಎಂದು ಅನ್ನಿಸುವಷ್ಟು ವೈವಿಧ್ಯಮಯ ಜನಜಂಗುಳಿ. ನಾನು ಮೂಲೆಯಲ್ಲಿಯ ಕೆಫೆಟೇರಿಯಾಗೆ ಹೋಗಿ ಒಂದು ದೊಡ್ಡ ಗ್ಲಾಸು 'ಕೋಕ್' ಕೊಂಡುಕೊಂಡು ಬದಿಗೆ ಸಾಲಾಗಿ ಜೋಡಿಸಲಾಗಿದ್ದ ಕುರ್ಚಿಗಳೊಂದರಲ್ಲಿ ಹೋಗಿ ಕೋಕ್ ಸೇವಿಸುತ್ತ ಕುಳಿತೆ. ಯುರೋಪಿನ ಬಿಯರ್-ವಿಸ್ಕಿಗಳಂತೆಯೇ ಅಲ್ಲಿಯ ಕೋಕ್‌ಗೂ ಅದರದೇ ಆದ ಸಾಂದ್ರತೆ ಮತ್ತು ಮಾಧುರ್ಯವಿದೆ. ನೊರೆನೊರೆಯಾದ, ತಂಪಾದ, ಗಟ್ಟಿಯಾದ ಕೋಕ್ ನನ್ನ ನಾಲಗೆಯ ತಂತುಗಳನ್ನು ತೃಪ್ತಿಪಡಿಸುತ್ತಿರುವಂತೆ ನನ್ನ ಬದಿಯ ಕುರ್ಚಿಗಳ ಮೇಲೆ ನಾಲ್ಕು ಜನ ಆಫ್ರಿಕನ್ನರು ಬಂದು ಕುಳಿತರು. ಅವರು ತಮ್ಮ ತಮ್ಮೊಳಗೆ ಆಡುತ್ತಿದ್ದ ಮಾತುಗಳನ್ನು ಕೇಳುವುದರಲ್ಲಿ ನನಗೆ ಆಸಕ್ತಿಯಿಲ್ಲದಿದ್ದರೂ ನನ್ನ ಕರ್ಣ ಪಟಲಗಳ ಮೇಲೆ ಅಪ್ಪಳಿಸತೊಡಗಿತು:

''ಇಂಗ್ಲಂಡಿನಲ್ಲಿ ನಮ್ಮ ನೈಜೀರಿಯನ್ನರು ಇಷ್ಟು ಜನ ಇದ್ದಾರೆ. ಇಷ್ಟೊಂದು ವಿದ್ಯಾವಂತರಿದ್ದಾರೆ. ಆದರೆ ಮರಳಿ ನಮ್ಮ ದೇಶಕ್ಕೆ ಬಂದಿರಲು ತಯಾರಾಗುವುದಿಲ್ಲವಲ್ಲ!''

''ನಮ್ಮಲ್ಲಿಯ ಅವ್ಯವಸ್ಥೆಯನ್ನು ಅನುಭವಿಸಿದವರಿಗೆ ನೈಜೀರಿಯಕ್ಕೆ ಹಿಂದಿರುಗಿ ಅಲ್ಲಿಯೇ ನೆಲೆಸಬೇಕು ಎನ್ನಿಸುವುದು ಹೇಗೆ ಸಾಧ್ಯ?''

''ನಮ್ಮ ನೈಜೀರಿಯಾ ಎಂದು ಬದಲಾಗುವುದೋ!''

''ಓ ಆಫ್ರಿಕನ್ನರು! ನಾವು ಬರೀ ಮಾತನಾಡುವುದರಲ್ಲಿಯೇ ಕಾಲ ಕಳೆಯುತ್ತೇವೆ.

ಡಾ.ಪ್ರಕಾಶ ಕೊಣ್ಣೂರ

ವಾದದಿಂದ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಾಗದಾಗ ಗುಂಡಿನಿಂದ ಅದನ್ನು ಪರಿಹರಿಸಲು ಪ್ರಯತ್ನಿಸುತ್ತೇವೆ. ನಮಗೆ ಭವಿಷ್ಯವೇನಾದರೂ ಇದೆಯೋ?'' ಎಂದ ಮತ್ತೊಬ್ಬನ ನಿಟ್ಟುಸಿರು ಬಿಡುತ್ತ.

''ನಮಗೂ ಸರಿಯಾದ ಕೆಲಸಗಳು ಸಿಗುವ ಹಾಗಿದ್ದರೆ ನಾವೂ ಇಲ್ಲಿಯೇ ಇದ್ದುಬಿಡಬಹುದಾಗಿತ್ತಲ್ಲ,'' ಎಂದು ಮತ್ತೊಬ್ಬ ದನಿ. ಯಾವುದೋ ಕಾಮನ್‌ವೆಲ್ತ್ ಶಿಷ್ಯ ವೃತ್ತಿಗಳನ್ನು ಪಡೆದು ಬ್ರಿಟನ್ನಿನಲ್ಲಿ ತರಬೇತನ್ನು ಮುಗಿಸಿ ತಮ್ಮ ದೇಶಕ್ಕೆ ಹೊರಟಿದ್ದಾರೆನ್ನುವುದು ಅವರ ಮಾತುಗಳಿಂದ ವ್ಯಕ್ತವಾಗುತ್ತಿತ್ತು. ಅವರು ನೈಜೀರಿಯಾದಲ್ಲಿಯ ಕೆಲವು ಜನರ ಭ್ರಷ್ಟಾಚಾರ, ಲಂಚಗುಳಿತನಗಳ ಬಗ್ಗೆ ಮಾತನಾಡಿಕೊಳ್ಳುತ್ತ ಕುಳಿತಂತೆ ಅವರ ಯಾನ ಹೊರಡುವ ಬಗ್ಗೆ 'ಕಾಲ್' ಮಾಡಲಾಯಿತು. ಅವರೆಲ್ಲ ಗಡಬಡಿಸಿಕೊಂಡು ಎದ್ದು ಹೋದರು. ಕೆಲವು ವರ್ಷಗಳ ಹಿಂದೆ ನೈಜೀರಿಯಕ್ಕೆ ಹೋಗಿ ಬಂದ ನನ್ನ ಅರ್ಥಶಾಸ್ತ್ರಜ್ಞ ಮಿತ್ರ ಡಾ. ವೈದ್ಯನಾಥನ್ ನೈಜೀರಿಯವೊಂದನ್ನು ಬಿಟ್ಟು ಯಾವ ದೇಶದಲ್ಲಾದರೂ ಇರಬಹುದು ಎಂದು ಹೇಳಿದ ಮಾತು ನೆನಪಾಯಿತು. (ಅವರು ಆವರೆಗೆ ಕನಿಷ್ಟ ಐದು ಬೇರೆ ಬೇರೆ ದೇಶಗಳಲ್ಲಿ ಕೆಲಸ ಮಾಡಿದ್ದರು.)

ನಾನು ಕೆಫೆಟೇರಿಯಾದ ಕೌಂಟರಿಗೆ ಹೋಗಿ ಮತ್ತೊಂದು ಕೋಕ್ ತೆಗೆದುಕೊಂಡೆ. ನನ್ನ ಬದಿಗೆ ಸುಮಾರು ಮೂವತ್ತಾರು ಮೂವತ್ತೇಳು ವಯಸ್ಸಿನ ಬಿಳಿಯನೊಬ್ಬ ಬಂದು ಕುಳಿತ. ಕೈಯಲ್ಲಿಯ 'ಡೇಲಿ ಟೆಲಿಗ್ರಾಫ್' ಪತ್ರಿಕೆಯನ್ನು ಬಿಚ್ಚಿ ಓದತೊಡಗಿದ. ಪತ್ರಿಕೆಯ ಶಿರೋನಾಮೆಗಳ ಕಡೆಗೆ ನನ್ನ ಲಕ್ಷ್ಯ ನೆಟ್ಟಂತೆ ಕಂಡಾಗ ನನ್ನನ್ನು ಮಾತನಾಡಿಸಿದ.

"ಹಲೋ, ಎಲ್ಲಿಗೆ?"

"ನೈರೋಬಿಗೆ."

"ಸಫಾರಿಗೆ ಹೊರಟಿದ್ದೀರಾ?"

"ಇಲ್ಲ, ಅಲ್ಲಿ ಕೆಲಸ ಮಾಡುತ್ತೇನೆ. ನಾನು ಭಾರತದವನು. ಐರ್ಲಂಡಿನಲ್ಲಿ ಕೆಲವು ಕಾಲ ತರಬೇತಿಗೆಂದು ಬಂದವನು ತಿರುಗಿ ಕೇನ್ಯಾಕ್ಕೆ ಹೊರಟಿದ್ದೇನೆ."

"ಹೌದೆ? ನಾನೂ ಕೇನ್ಯಾದಲ್ಲಿ ಸಫಾರಿ ಮಾಡಿದ್ದೇನೆ."

"ಸುಂದರ ದೇಶ. ನಾನು ಪಶ್ಚಿಮ ಜರ್ಮನಿಯವನು. ಅಲ್ಜೀರಿಯಾದಲ್ಲಿ ಕೆಲಸ ಮಾಡುತ್ತೇನೆ. ಲಂಡನ್ನಿಗೆ ಕೆಲಸದ ಮೇಲೆ ಬಂದಿದ್ದೆ."

ಮಾತು ಬೆಳೆಯಿತು. ಅವನ ಮಾತಿನಲ್ಲಿ ಇಂಗ್ಲಂಡ್, ಅಮೇರಿಕಗಳ ಬಗ್ಗೆ ಜರ್ಮನ್ನರಿಗಿರುವ ಪರಂಪರಾಗತ ದ್ವೇಷ ಎದ್ದುಕಾಣುತ್ತಿತ್ತು.

"1945ರಲ್ಲಿ ನಾವು ರಸಾತಳವನ್ನು ಮುಟ್ಟಿದ್ದೆವು. ಆದರೆ 1955ರಲ್ಲಿ- ಹತ್ತು ವರ್ಷಗಳಲ್ಲಿ- ಮತ್ತೆ 'ಝೂಂ' ಎಂದು ಇವರೆಲ್ಲರನ್ನೂ (ಬ್ರಿಟಿಶ್, ಅಮೇರಿಕನ್ನರನ್ನು) ದಾಟಿ ಮುಂದೆ ಹೋದೆವು. ಅವರು ನಮ್ಮ ದೇಶದಲ್ಲಿ ತಮ್ಮ ಸೈನ್ಯಗಳನ್ನಿಟ್ಟಿದ್ದಾರೆ. ಆದರೆ ಎಷ್ಟು ದಿನ? ನಾವೇನು ಸುಮ್ಮನೆ ಬಿಡುತ್ತೇವೆಯೇ?" ಎಂದು ಜರ್ಮನ್ನರ ಎಂದಿನ ನಿರ್ವಿಕಾರತೆಯನ್ನು ಬಿಟ್ಟು ಭಾವುಕನಾಗಿ ಮಾತನಾಡಿದ.


"ನೀವು ಭಾರತೀಯರು ಹೊಸದಾಗಿ ಪ್ರಜಾಸತ್ತೆಯನ್ನು ಅಳವಡಿಸಿದ್ದೀರಿ. ಸ್ವಲ್ಪ ತೊಂದರೆಯಾಗುತ್ತದೆ ನಿಜ. ತೃತೀಯ ಜಗತ್ತಿನ ದೇಶಗಳಲ್ಲಿ ಪ್ರಜಾಸತ್ತೆ ಸರಿಯಾಗಿ ಕೆಲಸ ಮಾಡುವುದು ಕಠಿಣ. ಆದರೆ ಕಷ್ಟಪಟ್ಟರೆ ಯಶಸ್ಸನ್ನು ಸಾಧಿಸುವುದು ಅಸಾಧ್ಯವೇನಲ್ಲ," ಎಂದು ಮುಂದುವರಿದ ರಾಷ್ಟ್ರಗಳವರು ನಮ್ಮಂಥವರಿಗೆ ಮಾಡುವ ಎಂದಿನ ಉಪದೇಶವನ್ನು ಬಿಗಿದ. ಅವನ ವಿಮಾನದಿಂದ ಕಾಲ್ ಬಂತು. ಅವನು 'ನೈಸ್ ಮೀಟಿಂಗ್ ಯೂ. ಗುಡ್ ಬೈ' ಎಂದು ಆತ್ಮೀಯತೆಯಿಂದ ಕೈಬೀಸಿ ಕಸ್ಟಮ್ಸ್ ಕಡೆಗೆ ಹೋದ.

ಕೆಲವು ನಿಮಿಷಗಳ ನಂತರ ನಾನು ಹೋಗಬೇಕಿದ್ದ ಲಂಡನ್-ನೈರೋಬಿ ಯಾನದ ಮೊದಲ 'ಕಾಲ್' ಬಂತು. ನನಗೂ ವೇಟಿಂಗ್ ಲಾಂಜಿನಲ್ಲಿ ಕುಳಿತು ಬೇಸರ ಬಂದಿದ್ದರಿಂದ ಡಿಪಾರ್ಚರ್ ಲಾಂಜ್‌ನಲ್ಲಿ ಕುಳಿತು ಕಾಲ ಕಳೆಯೋಣವೆಂದುಕೊಂಡು ಕಸ್ಟಮ್ಸ್, ಎಮಿಗ್ರೇಶನ್ ಮುಗಿಸಿ ಡಿಪಾರ್ಚರ್ ಲಾಂಜಿಗೆ ಬಂದು ಕುಳಿತೆ. ಭವ್ಯವಾದ ಈ ಅಂಗಣದಲ್ಲಿ ಸದ್ಯದಲ್ಲಿಯೇ ಹೊರಡಲಿರುವ ತಮ್ಮ ವಿಮಾನಗಳತ್ತ ಹೋಗಲು ಪ್ರಯಾಣಿಕರು ಕಾದು ಕುಳಿತಿದ್ದರು. ಮುಂಬಯಿಗೆ ಹೊರಟಿದ್ದ ವಿಮಾನಕ್ಕೆ ಅಮೇರಿಕದಿಂದ ಬಂದಿದ್ದ ಭಾರತೀಯರ ಒಂದು ದೊಡ್ಡ ಗುಂಪು ಕಾದು ಕುಳಿತಿತ್ತು. ನನಗೂ ಮನೆಯ ನೆನಪಾಗಿ ಒಂದು ರೀತಿಯ ಕಸಿವಿಸಿಯಾಯಿತು. (ನಾನು ಭಾರತದ ಮುಖ ನೋಡಿ ಐದು ವರ್ಷವಾಗಿತ್ತು.)

ಸ್ವಲ್ಪ ಹೊತ್ತಿನ ನಂತರ ನಮ್ಮ ಯಾನದ ಪ್ರಯಾಣಿಕರನ್ನು ವಿಮಾನವನ್ನೇರಲು ಕರೆಯಲಾಯಿತು. ಆಧುನಿಕ ವಿಮಾನ ನಿಲ್ದಾಣಗಳಲ್ಲಿ ಈಗ ವಿಮಾನದ ಬಾಗಿಲಿನವರೆಗೂ ಇಟ್ಟಿರುವ 'ಸುರಂಗ'ದಲ್ಲಿ ನಡೆದು ವಿಮಾನದಲ್ಲಿಯ ನನ್ನ ಸೀಟಿನ ಮೇಲೆ ಕುಳಿತೆ. 'ಬ್ರಿಟಿಶ್ ಏಯರ್‌ವೇಯ್ಸ್‌ನ' 'ಟ್ರೈಸ್ಟಾರ್', ಮಾದರಿಯ ದೊಡ್ಡ ವಿಮಾನದಲ್ಲಿ ಪ್ರತಿಯೊಂದು ಸೀಟಿಗೂ ಏಳು ಚಾನೆಲ್‌ನ ಸ್ಟೀರಿಯೋ ಸಂಗೀತ ವ್ಯವಸ್ಥೆ. ಸ್ಟೂವರ್ಡ್ ಕೊಡುವ ಇಯರ್ ಫೋನುಗಳನ್ನು ಕಿವಿಗೆ ಹಚ್ಚಿಕೊಂಡು ಸೀಟಿನ ಬದಿಗೇ ಇರುವ ಚಾನೆಲ್ ನಂಬರ್‌ಗಳಲ್ಲಿ ನಮಗೆ ಬೇಕಾದ ನಂಬರಿಗೆ ಒತ್ತಿ ಸಂಗೀತ ಕೇಳುತ್ತ ಕಾಲ ಕಳೆಯಬಹುದು. ಇಲ್ಲವಾದರೆ ಎದುರಿಗೆ ಪರದೆಯ ಮೇಲೆ ತೋರಿಸುವ ಹೊಸ ಹಾಲಿವುಡ್ ಚಿತ್ರವನ್ನೂ ನೋಡುತ್ತ ಕೂಡಬಹುದು. ವಿಮಾನದ ಮೂರು ಭಾಗಗಳಲ್ಲಿ ಮೂರು ಪರದೆಗಳ ಮೇಲೆ ಮೂರು ಬೇರೆ ಬೇರೆ

ಚಿತ್ರಗಳು. ಪ್ರಯಾಣಿಕರು ಸೀಟ್ ಬೆಲ್ಟುಗಳನ್ನು ಕಟ್ಟಿ ಕೊಳ್ಳುತ್ತಿದ್ದಂತೆಯೇ ವಿಮಾನ ದಕ್ಷಿಣಾಭಿಮುಖವಾಗಿ ತನ್ನ ಉಡ್ಡಾಣವನ್ನು ಆರಂಭಿಸಿತು. ನಾವು ಆಕಾಶಗಾಮಿಗಳಾಗುತ್ತಿದ್ದಂತೆಯೇ ವಿಮಾನದ ಪೈಲಟ್ ಧ್ವನಿವರ್ಧಕದ ಮೂಲಕ ಹೇಳಿದ: ''ನಾವು ಇಲ್ಲಿಂದ ಪ್ಯಾರಿಸ್ ಮತ್ತು ಜನೀವಾಗಳ ಮೇಲಿನಿಂದ ಹಾರಿ ಮುಂದೆ ಇಟಲಿ ಮತ್ತು ಭೂಮಧ್ಯ ಸಮುದ್ರಗಳನ್ನು ದಾಟಿ ಆಫ್ರಿಕಾ ಖಂಡವನ್ನು ಪ್ರವೇಶಿಸುತ್ತೇವೆ. ಈಜಿಪ್ತ್ ಮತ್ತು ಸೂಡಾನ್ ದೇಶಗಳ ಮೇಲಿನಿಂದ ಹಾರಿ ಕೇನ್ಯಾವನ್ನು ಪ್ರವೇಶಿಸಿ ನೈರೋಬಿಯನ್ನು ತಲುಪುತ್ತೇವೆ. ಪ್ರಯಾಣದ ಒಟ್ಟು ಅವಧಿ ಹತ್ತು ಗಂಟೆ.''

ಮುಂದೆ ಅರ್ಧಗಂಟೆಯಲ್ಲಿಯೇ ರಾತ್ರಿಯ ಊಟವನ್ನು ಕೊಡಲಾಯಿತು. ಊಟ ಮಾಡಿ ಕಣ್ಣಿಗೆ ಜೊಂಪು ಹತ್ತಿಕೊಳ್ಳ ತೊಡಗಿದಂತೆ ಪೈಲಟ್‌ನ ಧ್ವನಿ ಧ್ವನಿವರ್ಧಕದ ಮೂಲಕ ತೂರಿಬಂತು: ''ನಾವು ಈಗ ಪ್ಯಾರಿಸ್‌ನಗರದ ಮೇಲೆ ಹಾರುತ್ತಿದ್ದೇವೆ. ಕೆಳಗೆ ಕಾಣುವ ವರ್ಣರಂಜಿತ ದೀಪಗಳ ಸಮುದ್ರ ಪ್ಯಾರಿಸ್‌ನಗರ. ಪ್ಯಾರಿಸ್ ಚೆನ್ನಾಗಿ ಗೊತ್ತಿರುವವರು 'ಶಾಮ್ ಝುಲೀಜ'(ಪ್ಯಾರಿಸ್ಸಿನ ಮುಖ್ಯರಸ್ತೆ)ವನ್ನು ಗುರುತಿಸಲು ಪ್ರಯತ್ನಿಸಿರಿ.'' ಪ್ಯಾರಿಸ್‌ನ್ನು ನೋಡಿರದ ನನಗೆ ಈ ಝುಲೀಜನ್ನು ಗುರುತಿಸುವುದು ಸಾಧ್ಯವಿರಲಿಲ್ಲ. ಕಿಡಕಿಯ ಮೂಲಕ ಕೆಳಗೆ ನೋಡಿದಾಗ ಸಾಲುಗಳ ಮೇಲೆ ಸಾಲುಗಳ ದೀಪೋತ್ಸವ. ಸುಮಾರು ಎರಡು ನಿಮಿಷಗಳ ಕಾಲ ಈ ದೀಪಗಳು ತಮ್ಮ ಸಂಭ್ರಮ ತೋರಿ ಮರೆಯಾದವು. ಪ್ಯಾರಿಸ್ ನಗರವನ್ನು ನೋಡಿರದ ನನಗೆ ಅದರ ಮೇಲೆ ಹಾರಿದ ತೃಪ್ತಿಯಾದರೂ ಸಿಕ್ಕಿತು. ಮತ್ತೆ ಅರ್ಧಗಂಟೆಯ ನಂತರ ಪೈಲಟ್ ಮತ್ತೆ ಮಾತನಾಡಿದ: ''ನಾವು ಈಗ ಫ್ರಾನ್ಸ್ ದೇಶವನ್ನು ದಾಟಿ ಸ್ವಿತ್ಸರ್ಲಂಡಿನ ಮೇಲೆ ಹಾರುತ್ತಿದ್ದೇವೆ. ಕೆಳಗೆ ಕಾಣುತ್ತಿರುವ ನೀರು ಜನೀವಾ ಸರೋವರದ್ದು. ಅದರ



"ಮೊದ್ಲು ಕ್ಲರ್ಕ್ ಆಗಿದ್ದಾಗ ಕುರ್ಚಿ ಮೇಲೆಯೇ ನಿದ್ದೆ ಮಾಡ್ತಿದ್ದೋರು ಮೇನೇಜರಾಗಿ ಬಡ್ತಿ ಸಿಕ್ಮೇಲೆ ಹೀಗೆ..."

ಬದಿಗೆ ಕಾಣುವುದು ಜನೀವಾ ನಗರ.'' ಹಲವಾರು ಅಂತಾರಾಷ್ಟ್ರೀಯ ಸಂಸ್ಥೆಗಳ ಮುಖ್ಯ ಕಚೇರಿಗಳಿರುವ ಜನೀವಾ ನಗರ ವಿಮಾನದಿಂದ ತನ್ನ ದೀಪಗಳ ಹೊರತು ಸ್ಪಷ್ಟವಾಗಿ ಮತ್ತೇನನ್ನೂ ತೋರುತ್ತಿರಲಿಲ್ಲ. ಈ ನಗರದ ಸೌಂದರ್ಯದ ಬಗೆಗೆ ಓದಿದವರಿಗೆ ಅಲ್ಲಿ ಇಳಿದು ಸಂದರ್ಶಿಸಬೇಕೆಂಬ ಇಚ್ಛೆಯನ್ನು ತಾಳಿಕೊಳ್ಳುವುದು ಕಠಿಣ.

ಜನೀವಾ ಸರೋವರ ವಿಮಾನದ ಕಿಡಕಿಗಳಿಂದ ಮರೆಯಾಗುತ್ತಿರುವಂತೆಯೇ ವಿಮಾನದ ನನ್ನ ಭಾಗದಲ್ಲಿ ಹೊಸ ಹಾಲಿವುಡ್ ಚಿತ್ರ 'ವಿಜಟಿಂಗ್ ಅವರ್ಸ್' ಅನ್ನು ಹಚ್ಚಲಾಯಿತು. ಇತ್ತಲಾಗಿ ಬರುತ್ತಿರುವ ಭಯಾನಕ ಭಾನಾಮತಿ ತರಹದ ಚಿತ್ರವನ್ನು ನೋಡುತ್ತ ನಿದ್ದೆ ಯಾವಾಗ ಹೋದೆನೆಂಬುದು ನೆನಪಿಲ್ಲ.

ಮತ್ತೆ ಎಚ್ಚರವಾಗುತ್ತಲೇ ಗಡಿಯಾರ ನೋಡಿದೆ. ರಾತ್ರಿಯ ಮೂರಾಗಿತ್ತು. ಕಿಡಕಿಯಿಂದ ಕೆಳಗೆ ಇಣುಕಿದೆ. ಚಂದ್ರನ ಬೆಳಕಿನಲ್ಲಿ ಉದ್ದಕ್ಕೂ ಅಗಲಕ್ಕೂ ಹಬ್ಬಿಕೊಂಡಿದ್ದ ಬೆಳ್ಳಿಯ ಬಣ್ಣದ ಭವ್ಯ ರೇಖೆಯೊಂದು ನೆಲದ

ಮೇಲೆ ಕಾಣಿಸಿತು. ಅದು ಕೆಳಗೆ ಚಂದ್ರನ ಬೆಳಕಿನಲ್ಲಿ ಮಿಂಚುತ್ತಿರುವ ನೀರು ಎಂದು ಕಂಡುಕೊಳ್ಳಲು ನನಗೆ ಬಹಳ ಹೊತ್ತು ಬೇಕಾಗಲಿಲ್ಲ. ಈ 'ಬೆಳ್ಳಿಯಗೆರೆ'ಯೊಡನೆಯೇ ನಮ್ಮ ವಿಮಾನ ಕ್ರಮಿಸುತ್ತಿತ್ತು. ವಿಮಾನದ ಚಲನೆಯೊಂದಿಗೆ ಅದರ ಅಗಲ ಜಾಸ್ತಿಯಾಗುತ್ತಾ ಹೋಯಿತು. ಆಗ ನನಗೆ ಕೆಳಗೆ ಕಾಣುತ್ತಿರುವುದು ನೈಲ್ ನದಿಯೆಂದು ಮನದಟ್ಟಾಯಿತು. ವಿಮಾನವು ಆಫ್ರಿಕವನ್ನು ಪ್ರವೇಶಿಸಿ ಸೂಡಾನಿನ ಮೇಲೆ ನೈಲ್ ನದಿಯ ಪಾತ್ರದ ಗುಂಟ ಹಾರುತ್ತಿತ್ತು. ಅಗಲವಾಗುತ್ತಿದ್ದ ನದಿಯ ಪಾತ್ರ ಸ್ವಲ್ಪ ವೇಳೆಯ ನಂತರ ಬಹಳ ಹೆಚ್ಚಾಗಿ ನದಿಯಲ್ಲಿ ನಡುಗಡ್ಡೆಗಳು, ಅವುಗಳಲ್ಲಿ ವಿದ್ಯುದ್ದೀಪಗಳಿಂದ ಬೆಳಗುತ್ತಿದ್ದ ಕಟ್ಟಡಗಳು, ವಸತಿಗಳು ಕಾಣತೊಡಗಿದವು. ನಂತರ ದೊಡ್ಡ ಸರೋವರದಂತೆ ಕಾಣುತ್ತಿದ್ದ ಮೂರು ಕಡೆಗಳಿಂದ ದೈತ್ಯಾಕಾರದ ಸೆಳವುಗಳು ಬಂದುಕೂಡುತ್ತಿದ್ದ ಪ್ರದೇಶದ ಮೇಲೆ ನಾವು ಹಾರತೊಡಗಿದೆವು. ಈ ಪ್ರದೇಶದ ಸುತ್ತಲೂ ವಿದ್ಯುದ್ದೀಪಗಳಿಂದ ಬೆಳಗುತ್ತಿದ್ದ ವಿಶಾಲವಾದ ನಗರವೊಂದು ಕಾಣತೊಡಗಿತು. ಆಗ ಇದು ಬಿಳಿ ಮತ್ತು ನೀಲಿ ನೈಲ್ ನದಿಗಳ ಸಂಗಮವೆಂದೂ ಅದರ ಸುತ್ತಲೂ ಇರುವ ನಗರ ಸೂಡಾನಿನ ರಾಜಧಾನಿ ಖಾರ್ಟೂಮ್ ಎಂದೂ ತಕ್ಷಣ ಹೊಳೆಯಿತು. ಆಕಾಶದಿಂದ ಇದೊಂದು ಅವರ್ಣನೀಯ ಸುಂದರ ನೋಟ. ಚಂದ್ರನ ಬೆಳಕಿನಲ್ಲಿ ಬೆಳ್ಳಿಯ ಬಣ್ಣದ ಸರ್ಪದ ತರಹ ಹರಡಿಕೊಂಡಿದ್ದ ನೈಲ್ ನದಿಯ ಮಿಂಚುವ ನೀರಿನ ಬದಿಗೆ ವಿದ್ಯುದ್ದೀಪಗಳಿಂದ ಆವೃತವಾದ ಖಾರ್ಟೂಮ್ ಶಹರದ ದೃಶ್ಯ. ಬಿಳಿ ಮತ್ತು ನೀಲಿ ನೈಲ್‌ನದಿಗಳು ಕೂಡುವ ಪ್ರದೇಶವಂತೂ ಒಂದು ಸಮುದ್ರದಂತೆಯೇ ಕಾಣುತ್ತದೆ. ಅದನ್ನು ನೋಡುತ್ತಿದ್ದಂತೆ ನನಗೆ ಈ ಭವ್ಯ ನದಿಯ ದಂಡೆಯ ಮೇಲೆ ಯುಗಾಂಡಾದಲ್ಲಿ ಕಳೆದ ದಿನಗಳ ನೆನಪು ಮರುಕಳಿಸಿತು. ಇಂತಹ ಭವ್ಯನದಿಯ ಸರಿಯಾದ ಉಪಯೋಗವನ್ನು ಮಾಡಿಕೊಳ್ಳಲು ಈಗೀಗ ಮಾತ್ರ ಕಲಿಯುತ್ತಿರುವ ಸೂಡಾನಿನ ಜನರ ಬಗ್ಗೆ ಕನಿಕರವೂ ಅಸಹ್ನೆಯೂ ಏಕಕಾಲಕ್ಕೆ ಉಂಟಾದವು.

ಸುಮಾರು ಒಂದೂವರೆ ಗಂಟೆಯವರೆಗೂ ನನ್ನೊಡನಿದ್ದ ನೈಲ್ ನದಿ ಬೆಳಗಿನ 5 ಗಂಟೆಯ ಸುಮಾರಿಗೆ ಪಶ್ಚಿಮದ ಕಡೆಗೆ ಒಲಿಯುತ್ತ ಕ್ರಮೇಣ ಮರೆಯಾಗಿ ಹೋಯಿತು. ನಮ್ಮ ವಿಮಾನವೀಗ ದಕ್ಷಿಣ ಪೂರ್ವದ ಕಡೆಗೆ ಕೇನ್ಯಾದ ಪರ್ವತ ಪ್ರದೇಶಗಳತ್ತ ತಿರುಗಿತು. ಬೆಳಗಿನ ಆರು ಗಂಟೆಗೆ ನಸುಕು ಹರಿಯುತ್ತಿದ್ದಂತೆಯೇ ವಿಮಾನ ಚಾಲಕನ ದನಿ ಮತ್ತೆ ಕೇಳಿ ಬಂತು: "ನಾವೀಗ ಕೇನ್ಯಾದ ಪರ್ವತ ಪ್ರದೇಶದಲ್ಲಿ ಮೌಂಟ್ ಕೇನ್ಯಾದ ಮೇಲಿನಿಂದ ಹಾರುತ್ತಿದ್ದೇವೆ. ನಮ್ಮ ಎಡಕ್ಕೆ ದೂರದಲ್ಲಿ ಮೇರು ಜಿಲ್ಲೆಯ ಗುಡ್ಡಗಳು ಮತ್ತು ಸೋಮಾಲಿಯಾದ ಮರುಭೂಮಿ ಕಾಣುತ್ತದೆ. ಬಲಕ್ಕೆ ಇರುವುದೇ ಮೌಂಟ್ ಕೇನ್ಯಾ. ಆಫ್ರಿಕದ ಎರಡನೇ ಅತಿ ಎತ್ತರದ ಶಿಖರ," ಎಂದು ದಟ್ಟ ಮೋಡಗಳ ಅಡಿಯಲ್ಲಿ ಹಿಮದಿಂದ ಆಚ್ಛಾದಿತವಾಗಿ ಅಸ್ಪಷ್ಟವಾಗಿ ಕಾಣುತ್ತಿದ್ದ ಪರ್ವತ ಪ್ರದೇಶಗಳ ಕಡೆಗೆ ನಿರ್ದೇಶಿಸಿದ.

ಮುಂದೆ ಅರ್ಧಗಂಟೆಯ ನಂತರ ನಾವು 'ಸಿಟಿ ಇನ್ ದಿ ಸನ್' (ಸೂರ್ಯಪ್ರಕಾಶದ ನಗರ) ನೈರೋಬಿಯ ಜೋಮೋ ಕೇನ್ಯಾ ವಿಮಾನ ನಿಲ್ದಾಣದಲ್ಲಿ ಇಳಿದೆವು.

ಎರಡು ವಿಶ್ವವಿಖ್ಯಾತ ನಗರಗಳ ಮೇಲೆ ಹಾರಿ, ಸ್ವಿಟ್ಸರ್ಲಂಡ್, ಇಟಲಿಗಳನ್ನು ದಾಟಿ, ಭೂಮಧ್ಯ ಸಮುದ್ರವನ್ನು ಪಾರುಮಾಡಿ, ಈಜಿಪ್ತನ್ನು ಬದಿಗೆ ಸರಿಸಿ, ಸಹಾರಾ ಮರುಭೂಮಿಯ ಮಧ್ಯದಲ್ಲಿ ಹರಿಯುವ ನೈಲ್ ನದಿಯನ್ನು ಸವೆಸಿ, ಪರ್ವತ, ಸರೋವರ, ಝೀಬ್ರಾ-ಜಿರಾಫೆ, ಆನೆ-ಸಿಂಹಗಳ ನಾಡು ಕೇನ್ಯಾವನ್ನು ತಲುಪಿಸಿದ ಈ ಟ್ರೈಸ್ಟಾರ್ ದೈತ್ಯನಿಗೆ ಮನದಲ್ಲಿಯೇ ತಲೆಬಾಗಿಸಿ ನನ್ನ ಗೂಡಿಗೆ ಮರಳಿದೆ.

★

ಕಣ್ಣೀರು ಕೆಟ್ಟದ್ದೇ?

ಟಿ.ಎಂ.ಸುಬ್ಬರಾಯ

ಸಂಕೀರ್ಣ ರಾಸಾಯನಿಕ ವಸ್ತುಗಳ ಸಂಯೋಗದ ದ್ರವ-ಕಣ್ಣೀರು'

'ಮಾನವ ದೇಹದ ಅನಗತ್ಯ ವಸ್ತುಗಳನ್ನು ವಿಸರ್ಜಿಸುವ ಕ್ರಿಯೆಯಲ್ಲಿ ನೆರವಾಗುವ ಕೆಲವು ದ್ರವಗಳಲ್ಲಿ ಒಂದು ಕಣ್ಣೀರು'

'ಭಾವನಾತ್ಮಕ ಒತ್ತಡದಿಂದ ಸ್ರವಿಸಲ್ಪಡುವ ಕಣ್ಣೀರಿನಲ್ಲಿ ರಾಸಾಯನಿಕ ವಸ್ತುಗಳ ಸಂಯೋಗ ಅಧಿಕವಾಗಿರುತ್ತದೆ.'

'ಕಣ್ಣೀರು ಸುರಿಸಿದವರು, ಅನಂತರ ಹೆಚ್ಚು ಉಲ್ಲಸಿತರಾಗಿರುತ್ತಾರೆ.

'ಪದೇ ಪದೇ ಕಣ್ಣೀರು ಹರಿಸುವವರು ಅಲ್ಸರ್, ಕೊಲಿಟೀಸ್ ಮುಂತಾದ ಕಾಯಿಲೆಗಳಿಗೆ ತುತ್ತಾಗುವ ಸಂಭವ ಕಡಿಮೆ.'

'ಗಂಡಸರಿಗಿಂತ ಹೆಂಗಸರು ಹೆಚ್ಚು ಕಣ್ಣೀರು ಸುರಿಸುತ್ತಾರೆ. ಇದಕ್ಕೆ ಮುಖ್ಯ ಕಾರಣಗಳೆಂದರೆ ದೇಹದಲ್ಲಿಯ ರಾಸಾಯನಿಕ ಸಂಯೋಜನೆ ಹಾಗೂ ಸಮಾಜದ ಅನುಕಂಪ.'

'ತಾಪದಿಂದ ಹರಿಸಲ್ಪಡುವ ಕಣ್ಣೀರು ಆರೋಗ್ಯಕ್ಕೆ ಬಹಳ ಉತ್ತಮ.'

ಕಣ್ಣೀರಿನ ಬಗ್ಗೆ ಹದಿನೈದು ವರ್ಷಗಳಿಂದೀಚೆಗೆ ನಡೆದ ಸಂಶೋಧನೆಗಳ ಫಲವಾಗಿ ಮೂಡಿಬಂದ ಅಭಿಪ್ರಾಯಗಳಿವು.

ಕಣ್ಣೀರಿಗೆ ಸಂಬಂಧಿಸಿದ ಮೂರು ಪದರುಗಳು ಕಣ್ಣನಲ್ಲಿವೆ. ತಳದ ಪದರವು ಅಣುಕೋಶದಿಂದ ಕಣ್ಣಿನ ಕೆಳಭಾಗದವರೆಗೆ ವ್ಯಾಪಿಸಿದೆ. ಈ ಪದರವು ಅಣುಕೋಶಕ್ಕೂ ಕಣ್ಣಿಗೂ ಪರಸ್ಪರ ಸಂಬಂಧ ಸಂಪರ್ಕ ಕಲ್ಪಿಸುತ್ತದೆ. ಈ ತಳ ಪದರವು ಕಣ್ಣುಗೊಂಬೆಯ ಮೇಲೆ ಕಣ್ಣೀರು ಪಸರಿಸಲು ನೆರವಾಗುತ್ತದೆ. ಕಣ್ಣಿನ ಸುತ್ತಮುತ್ತಲಿನ ಭಾಗಗಳನ್ನು ಆರ್ದ್ರವಾಗಿಡಲು ಮಧ್ಯದ ಪದರವು ಸಹಕಾರಿಯಾಗಿದೆ. ಈ ಪದರವು ಕಣ್ಣೀರು ಸ್ರವಿಸುವ ಮೂಲಗುಳಿ ಗ್ರಂಥಿ. ಎಣ್ಣೆಯ ಅಂಶದಿಂದ ಕೂಡಿರುವ ಹೊರ ಪದರವು ಕಣ್ಣೀರು ನಿಧಾನವಾಗಿ ಆರಲು ಸಹಾಯ ಮಾಡುತ್ತದೆ.

ನಿಮಿಷವೊಂದಕ್ಕೆ ಸರಾಸರಿ ಹದಿನಾರು ಬಾರಿ ರೆಪ್ಪೆ ಮಿಟುಕಿಸುವ ಕ್ರಿಯೆಯಿಂದಾಗಿ, ಕಣ್ಣು ರೆಪ್ಪೆಗಳು ಕಣ್ಣಿನ ಒಳ ಭಾಗವನ್ನು ಸ್ವಚ್ಛಗೊಳಿಸುತ್ತವೆ. ಎವೆ ಮುಚ್ಚಿ ತೆರೆಯುವುದರಿಂದ ಒಳ ಪದರದ ಮೂಲ ಗ್ರಂಥಿ ದ್ರವವನ್ನು ಸ್ರವಿಸಿ ಕಣ್ಣಿನ ಸುತ್ತ ಅದು ವ್ಯಾಪಿಸುತ್ತದೆ. ಪದೇ ಪದೇ ರೆಪ್ಪೆಗಳನ್ನು ಮಿಟುಕಿಸುವುದರಿಂದ ಗ್ರಂಥಿಯ ಮೇಲೆ ಒತ್ತಡ ಅಧಿಕವಾಗಿ ಹೆಚ್ಚು ಪ್ರಮಾಣದಲ್ಲಿ ಕಣ್ಣೀರು ಒಸರುವುದುಂಟು. ರೆಪ್ಪೆ ಮಿಟುಕಿಸುವುನ್ನು ಬಲವಂತವಾಗಿ ತಡೆ ಹಿಡಿದಾಗಲೂ ಕಣ್ಣೀರು ಹನಿಯುತ್ತದೆ. ಕಣ್ಣಿನ ಆರೋಗ್ಯಕ್ಕೆ ಕಣ್ಣೀರು ಬಹಳ ಉಪಯುಕ್ತ. ಕಣ್ಣಿನ ರಕ್ಷಣೆ ಹಾಗೂ ಕಾರ್ಯಕ್ಕೆ ಕಣ್ಣೀರು ಅತ್ಯಗತ್ಯವೂ ಹೌದು.

ಪ್ರಶ್ನೆ

ಇರುಳೆಲ್ಲ
ಬೆಳಕ ಸ್ಫುರಿಸುವ
ಸ್ವಚ್ಛ
ಮಿಣುಕು ಹುಳದೊಳಗೊಂದು
ದೀವಿಗೆಯ
ಇಟ್ಟವರಾರು?

-ಎಸ್ಸಾರ್ ವಾಸುದೇವರಾವ್

ಆದರೆ ಜೀವಿಗಳಲ್ಲಿ ಭಾವನೆಗಳ ಒತ್ತಡಕ್ಕೆ ತುತ್ತಾದಾಗ ಮಾನವ ಏಕೆ ಕಣ್ಣೀರು ಹರಿಸುತ್ತಾನೆ? ಕಣ್ಣೀರು ಹರಿಸಲು ಬೇರೆ ಕಾರಣಗಳೇನು? ಅದರ ಪರಿಣಾಮವೇನು? ಈ ಕೆಲ ಪ್ರಶ್ನೆಗಳಿಗೆ ಉತ್ತರ ಕಂಡು ಹಿಡಿಯಲು 1979ರಲ್ಲಿ ವಿಲಿಯಂ ಫ್ರೇ ಎಂಬ ವಿಜ್ಞಾನಿ ಕೆಲ ಪ್ರಯೋಗಗಳನ್ನು ಕೈಕೊಂಡ. ಅದಕ್ಕಾಗಿ ಅವನು 18ರಿಂದ 75ರ ವಯೋ ಮಾನವ 331 ಜನರನ್ನು ಆಯ್ದುಕೊಂಡ. ಒಂದು ತಿಂಗಳ ನಂತರ ಫ್ರೇ ತನ್ನ ಪ್ರಯೋಗಗಳ ಫಲಿತಾಂಶವನ್ನು ಪ್ರಕಟಿಸಿದ. ಅದರಲ್ಲಿನ ಮುಖ್ಯ ಅಂಶಗಳೆಂದರೆ 1) ಭಾವನಾತ್ಮಕ ಕಾರಣಗಳಿಂದಾಗಿ ಹೆಂಗಸರು ಗಂಡಸರಿಗಿಂತ ಹೆಚ್ಚು ಕಣ್ಣೀರು ಹರಿಸುತ್ತಾರೆ. 2) ಕಣ್ಣೀರ್ಗರೆದ ನಂತರ ಶೇಕಡಾ 85ರಷ್ಟು ಜನ ಹೆಂಗಸರೂ ಶೇಕಡಾ 73ರಷ್ಟು ಜನ ಗಂಡಸರೂ ಉಲ್ಲಸಿತರಾಗಿರುತ್ತಾರೆ. 3) ಮೂತ್ರ ವಿಸರ್ಜನೆ, ಬೆವರಿನ ವಿಸರ್ಜನೆಗಳಂತೆಯೇ ಕಣ್ಣೀರಿನ ವಿಸರ್ಜನೆ ಕೂಡ ಅಗತ್ಯ, ಅನಿವಾರ್ಯ ಹಾಗೂ ಆರೋಗ್ಯಕ್ಕೆ ಉಪಯುಕ್ತ. 4) ಕೋಪ, ದು:ಖ, ನೋವು ಪ್ರಿಯ ವ್ಯಕ್ತಿಯ ಅಗಲುವಿಕೆ ಇತ್ಯಾದಿ ಭಾವನಾತ್ಮಕ ಕಾರಣಗಳಿಂದ ಒಸರುವ ಕಣ್ಣೀರಿಗೂ, ಒತ್ತಡದಿಂದ ಒಸರುವ ಕಣ್ಣೀರಿಗೂ ವ್ಯತ್ಯಾಸವಿರುತ್ತದೆ. ಭಾವನಾತ್ಮಕ ಕಾರಣಗಳಿಂದ ಸ್ರವಿಸಲ್ಪಡುವ ಕಣ್ಣೀರಿನಲ್ಲಿ ಸಸಾರಜನಕದ ಅಂಶ ಅಧಿಕವಾಗಿರುತ್ತದೆ. ಒತ್ತಡ ಹಾಗೂ ಸಹಜ ಕಾರಣಗಳಿಂದ ಸ್ರವಿಸಲ್ಪಡುವ ಕಣ್ಣೀರಿನಲ್ಲಿ ಮ್ಯಾಂಗನೀಜಿನ ಅಂಶವಿರುತ್ತದೆ. ಮ್ಯಾಂಗನೀಜ್ ಅಂಶಗಳು ದೇಹದಲ್ಲಿ ಉತ್ಪತ್ತಿಯಾಗುವುದಿಲ್ಲ. ಆಹಾರಜನ್ಯ ವಸ್ತುಗಳೊಂದಿಗೆ ದೇಹವನ್ನು ಪ್ರವೇಶಿಸುತ್ತವೆ. ಅವುಗಳನ್ನು ರಕ್ತನಾಳಗಳು ತಮ್ಮಲ್ಲಿ ಇರಿಸಿಕೊಳ್ಳುವುದಿಲ್ಲ. ಆದ್ದರಿಂದ ಕಣ್ಣೀರು ಗ್ರಂಥಿಗಳು ಪದರಗಳ ಮೂಲಕ ಇವುಗಳನ್ನು ಹೊರ ಹಾಕುತ್ತವೆ.

ಗುಂಪು ಪ್ರಯೋಗದ ತರುವಾಯ ಫ್ರೇ ವ್ಯಕ್ತಿಶ: ಪ್ರಯೋಗಗಳನ್ನು ಕೈಗೊಂಡ. ಈ ಪ್ರಯೋಗಗಳಿಂದ ಫ್ರೇ ಸಾದರಪಡಿಸಿದ ಅಂಶಗಳು ಇವು: ಕಣ್ಣೀರುಗರೆಯುವುದು ಮಾನವನ ಬದುಕಿನಲ್ಲಿ ಹಾಸು ಹೊಕ್ಕಾಗಿರುವ ಕ್ರಿಯೆ. ಒಂದು ತಿಂಗಳ ಅವಧಿಯಲ್ಲಿ ಓರ್ವ ಮಹಿಳೆ ಕನಿಷ್ಟ ಹದಿನೈದು ಬಾರಿ ಅಳುತ್ತಾಳೆ. ಆಕೆಯ ಕಣ್ಣು ತೇವವಾಗುವುದಕ್ಕೆ ವಿಶಿಷ್ಟ ಕಾರಣಗಳೇ ಬೇಕೆಂದಿಲ್ಲ. ಭವಿಷ್ಯದ ಚಿಂತನೆ, ಭೂತಕಾಲದ ನೆನವರಿಕೆ, ವರ್ತಮಾನದ ಸ್ಥಿತಿ ಗತಿ ಮೊದಲಾದ ಯಾವುದೇ ಅಂಶ ಕಣ್ಣೀರು ಒಸರಲು ಕಾರಣವಾಗಬಹುದು. ಆನಂದ, ಆತಂಕ, ಆದರ, ಅನಾದರ, ಆಸಕ್ತಿ, ನಿರಾಸಕ್ತಿ, ಆಸೆ, ನಿರಾಸೆ, ಅನುಕಂಪ, ಆಯಾಸ, ಅತ್ಯುತ್ಸಾಹ, ಜಿಗುಪ್ಸೆ, ದು:ಖ, ದುರ್ನಡತೆ, ಅಗಲುವಿಕೆ, ಅನುಕರಣೆ, ಮುಂತಾದ ಅಂಶಗಳೂ ಹೆಂಗುಸರು ಕಣ್ಣೀರ್ಗರೆಯಲು ಕಾರಣವಾಗುತ್ತವೆ. ಆದರೆ ದು:ಖದಿಂದ ಕಣ್ಣೀರು ಸುರಿಸುವ ಸ್ತ್ರೀಯರ ಸಂಖ್ಯೆ ಹೆಚ್ಚು ಶೇಕಡಾ 49ರಷ್ಟು. ಸಂತೋಷದಿಂದ, ಶೇಕಡಾ 21ರಷ್ಟು ಜನ ಸ್ತ್ರೀಯರು ಕಣ್ಣೀರು ಹಾಕುತ್ತಾರೆ. ಕೋಪದಿಂದ ಕಣ್ಣೀರು ಹರಿಸುವ ಸ್ತ್ರೀಯರ ಸಂಖ್ಯೆ ಶೇಕಡಾ 10ರಷ್ಟು ಮಾತ್ರ. ಕೋಪಗೊಂಡಾಗ ಯಾವ ಪುರುಷನೂ ಕಣ್ಣೀರು ಹರಿಸುವುದಿಲ್ಲ.

ಫ್ರೇಯ ಸಂಶೋಧನೆಯಿಂದ ಪ್ರೇರಿತಳಾದ ಪಿಟ್ಸಬರ್ಗ ವಿಶ್ವವಿದ್ಯಾಲಯದ ಮನೋರೋಗ ಚಿಕಿತ್ಸಕ ವಿಭಾಗದ ನರ್ಸ್, ಮಾರ್ಗರೆಟ್ ಕ್ರೇಪ್ಲ್ಯಾ ತನ್ನ ವೈದ್ಯಕೀಯ ಪದವಿಯ ನಿಬಂಧಕ್ಕಾಗಿ ಕಣ್ಣೀರಿನ ವಿಶ್ಲೇಷಣಾ ವಿಷಯವನ್ನೇ ಆರಿಸಿಕೊಂಡಳು. ಅದ

ಕ್ಕಾಗಿ ಮಾರ್ಗರೇಟ್ ಒಂದು ಪ್ರಶ್ನಾವಳಿಯನ್ನು ತಯಾರಿಸಿ 137 ಜನರಿಗೆ ಕಳುಹಿಸಿದಳು. ಅವರಲ್ಲಿ ಕೆಲವರು ಅಲ್ಸರ್ ಹಾಗೂ ಕೊಲಿಟೀಸ್ ರೋಗದಿಂದ ಬಳಲುತ್ತಿದ್ದವರು. ಕೆಲವರು ಆರೋಗ್ಯವಂತರು. ಮತ್ತೆ ಕೆಲವರು ಶೀಘ್ರ ಕೋಪಿಗಳು.

ಅಲ್ಸರ್ ರೋಗದಿಂದ ಬಳಲುತ್ತಿದ್ದ 40 ವರ್ಷ ವಯಸ್ಸಿನ ಮಹಿಳೆಯೊಬ್ಬಳು ಹೀಗೆ ಉತ್ತರಿಸಿದಳು: ''ಕಣ್ಣೀರು ಹರಿಸುವುದು ಆರೋಗ್ಯದ ಲಕ್ಷಣ ಎಂದು ನನ್ನ ಸಾಮಾನ್ಯ ಜ್ಞಾನ ಹೇಳುತ್ತದೆ. ಆದರೆ ಎಲ್ಲರೆದುರು ಅಳುವುದು, ಕಣ್ಣೀರನ್ನು ಕೆನ್ನೆಯ ಮೇಲೆ ಹರಿಯಬಿಡುವುದು ಅವಮಾನಕರ ಎನ್ನುವ ವಾತಾವರಣದಲ್ಲಿ ನಾನು ಬೆಳೆದು ಬಂದಿದ್ದೇನೆ. ಕಣ್ಣೀರು ಬಂದಾಗ ಅದನ್ನು ತಡೆಯಲು ಯತ್ನಿಸಿ ತುಂಬಾ ಸಂಕಟ ಪಟ್ಟಿದ್ದೇನೆ.''

29 ವರ್ಷ ವಯಸ್ಸಿನ ಆರೋಗ್ಯವಂತ ಮಹಿಳೆಯೊಬ್ಬಳ ಅನಿಸಿಕೆ ಇದು: ''ಕಣ್ಣೀರು ಹರಿಸುವುದು ಆತ್ಮಕ್ಕೆ ಒಳ್ಳೆಯದು ಎಂಬುದನ್ನು ನಾನು ಬಲ್ಲೆ. ಆದ್ದರಿಂದಲೇ ನನ್ನ ದುಃಖ, ಕೋಪ, ಸಂತೋಷ ಈ ಎಲ್ಲಾ ಭಾವನೆಗಳನ್ನು ಕಣ್ಣೀರು ಹರಿಸುವುದರ ಮೂಲಕವಾಗಿಯೇ ವ್ಯಕ್ತಪಡಿಸುತ್ತೇನೆ.

ಪ್ರೌಢಾವಸ್ಥೆಗೆ ತಲುಪುವ ವರೆಗೆ ಹುಡುಗ ಹುಡುಗಿಯರ ಕಣ್ಣೀರ್ಗರೆತದಲ್ಲಿ ಸಾಮಾನ್ಯವಾಗಿ ಯಾವುದೇ ಬಗೆಯ ವ್ಯತ್ಯಾಸವಿರುವುದಿಲ್ಲ. 12ರಿಂದ 18ನೇ ವಯಸ್ಸಿನ ನಡುವೆ ವ್ಯತ್ಯಾಸ ಗೋಚರಿಸಲಾರಂಭಿಸುತ್ತದೆ. ಈ ಅವಧಿಯಲ್ಲಿ ಹುಡುಗರಿಗಿಂತ ಹುಡುಗಿಯರು ಶೇಕಡಾ 60ರಷ್ಟು ಹೆಚ್ಚು ಕಣ್ಣೀರು ಸುರಿಸುತ್ತಾರೆ ಎನ್ನುತ್ತಾಳೆ ಮಾರ್ಗರೆಟ್.

ಫ್ರೇ ಹಾಗೂ ಮಾರ್ಗರೆಟ್‌ರ ಸಂಶೋಧನೆಗಳಿಂದ ಸ್ಪಷ್ಟವಾಗುವ ಅಂಶಗಳೆಂದರೆ: ಕಣ್ಣೀರು ಸುರಿಸುವುದು ಅವಮಾನಕರವಲ್ಲ, ಆರೋಗ್ಯಕರ. ಅದು ದೈಹಿಕ ಸಹಜ ಕ್ರಿಯೆ, ಅದನ್ನು ಹತ್ತಿಕ್ಕುವುದು ಅಪಾಯಕರ.

ಚಾರ್ಲ್ಸ್ ಡಿಕನ್ಸ್ ತನ್ನ 'ಆಲಿವರ್ ಟ್ವಿಸ್ಟ್' ದಲ್ಲಿ ಹೇಳಿರುವಂತೆ, ''ಕಣ್ಣೀರು ಹರಿಸುವುದರಿಂದ ಅಂದರೆ ಅಳುವುದರಿಂದ ಶ್ವಾಸಕೋಶ ಸಡಿಲಗೊಳ್ಳುತ್ತದೆ, ಮುಖದ ಚಹರೆ ತೊಳೆದಂತಾಗುತ್ತದೆ. ಕಣ್ಣುಗಳಿಗೆ ವ್ಯಾಯಾಮ ದೊರಕುತ್ತದೆ. ಜೊತೆಗೆ ಉದ್ವೇಗವನ್ನು ಹತೋಟಿಗೆ ತರಲೂ ಸಹಕಾರಿಯಾಗುತ್ತದೆ. ಆದುದರಿಂದ 'ಕಣ್ಣೀರು ಹರಿಸು, ಕಣ್ಣೀರು ಹರಿಸುತ್ತಿರು.''

ಸೋಜಿಗ

ಭಾರತದ ಸ್ವಾತಂತ್ರ್ಯ ಸಂಗ್ರಾಮಗಳ ಕಾಲದಲ್ಲಿ ಭಾರತೀಯರು ಸ್ವಾವಲಂಬಿಗಳಾಗಬೇಕೆಂದು ಸ್ವದೇಶೀ ಚಳುವಳಿಗೆ, ಗ್ರಾಮೋದ್ಯೋಗಕ್ಕೆ ಪ್ರಾಶಸ್ತ್ಯ ಕೊಡಲಾಯಿತು. ವಿದೇಶಿ ವಸ್ತು, ವಸ್ತ್ರಗಳ ಆಮದು ಸಾಕಷ್ಟು ಪ್ರಮಾಣದಲ್ಲಿ ಕಡಿಮೆಯಾಯಿತು. ಖಾದಿ ತಯಾರಿಕೆ ಆದ್ಯತೆ ಪಡೆಯಿತು. ಸ್ವಯಂಸೇವಕರು ಮಾತ್ರವಲ್ಲದೆ ಎಲ್ಲರೂ ಖಾದಿ ತೊಡಬೇಕೆಂದು ರಾಷ್ಟ್ರನಾಯಕರು ಕರೆಯಿತ್ತರು. ಅಲ್ಲಲ್ಲಿ ಸಭೆ-ಸಮಾರಂಭಗಳು ನಡೆದು ವಿದೇಶೀವಸ್ತ್ರಗಳ ದಹನವೂ ಆಯಿತು. ಈ ಸಂದರ್ಭದಲ್ಲಿ ಸೆಸಿಲ್ ಫೇಬಿಯನ್ ಬ್ರಾಕನ್‌ಬರಿ ಎಂಬ ಒಬ್ಬ ಆಂಗ್ಲ ಅಧಿಕಾರಿ ಸ್ವಪ್ರೇರಣೆಯಿಂದ ಖಾದಿ ಉಡುಗೆ ತೊಟ್ಟುದು ಆಶ್ಚರ್ಯ. ಅವನು ಬ್ರಿಟಿಶ್ ಸರಕಾರದ ಒಬ್ಬ ಮುಖ್ಯಕಾರ್ಯದರ್ಶಿಯೂ ಆಗಿದ್ದನೆಂಬುದು ಇನ್ನೂ ಆಶ್ಚರ್ಯಕರವಲ್ಲವೆ?

ಸಂಗ್ರಹ - ***ಕೋಳಿವಾಡ ಕೃಷ್ಣಮೂರ್ತಿ***



ಹಾರಾಡುವ ತಟ್ಟೆಗಳು

ಸತ್ಯವೆಷ್ಟು? ಮಿಥ್ಯವೆಷ್ಟು?

"ಸರ್, ನಾವು ಹಾರುವ ತಟ್ಟೆಗಳನ್ನು ನೋಡಿದ್ದೇವೆ," ಎಂದು ವಿದ್ಯಾರ್ಥಿಗಳು ಹೇಳಿದಾಗ ಶಿಕ್ಷಕ ಒಂದು ಕ್ಷಣ ಗರಬಡಿದವನಂತೆ ನಿಂತು ಬಿಟ್ಟ.

ನಂತರ ಸುಧಾರಿಸಿಕೊಂಡು, ಚಿಕ್ಕಮಕ್ಕಳು ಏನೇನೋ ಕಲ್ಪಿಸಿಕೊಳ್ಳುತ್ತಾರೆ ಎಂದು ಸುಮ್ಮನಾದ. ಆದರೆ ಸ್ವಲ್ಪ ಹೊತ್ತಿನ ನಂತರ ಆತನ ತಲೆಗೇನೋ ಹೊಳೆಯಿತು. ತಾವು ಕಂಡ ಹಾರುವ ತಟ್ಟೆಯನ್ನು ಚಿತ್ರಿಸುವಂತೆ ವಿದ್ಯಾರ್ಥಿಗಳಿಗೆ ಹೇಳಿದ.

ಸುಮಾರು ಹತ್ತು ವರ್ಷ ವಯಸ್ಸಿನ ಆ ಇಪ್ಪತ್ತೂ ವಿದ್ಯಾರ್ಥಿಗಳು ಬಿಡಿಸಿದ ಚಿತ್ರಗಳಲ್ಲಿ ಅಚ್ಚರಿಯೆನಿಸುವಷ್ಟು ಹೊಂದಾಣಿಕೆಯಿತ್ತು. ಹಾಗಾದರೆ ಇದು ಹುಡುಗರ ಭ್ರಮೆಯಲ್ಲ ಎಂಬುದು ಶಿಕ್ಷಕನಿಗೆ ಖಚಿತವಾಯಿತು.

ಇದು ಇತ್ತೀಚೆಗೆ ನಡೆದ ಘಟನೆ. ಈಗ ಸಂಶೋಧಕರು ಶಾಲೆಯ ಮೈದಾನಿನ ಮೇಲೆ ಹಾರಾಡಿದವೆಂದು ಹೇಳಲಾದ ಈ ಹಾರುವ ತಟ್ಟೆಗಳ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಮಧ್ಯಾಹ್ನದ ವೇಳೆಗೆ ಕಾಣಿಸಿಕೊಂಡ ಮೊದಲ ಹಾರುವ ತಟ್ಟೆ ವೃತ್ತಾಕಾರವಾಗಿದ್ದು ಸುಮಾರು 80 ಅಡಿ ಅಗಲವಾಗಿತ್ತೆಂದು ಹೇಳಲಾಗಿದೆ. ಇದರ ಬಣ್ಣ ಬೆಳ್ಳಿ ಮಿಶ್ರಿತ ಕೆಂಪು. ಇದು ಹೆಲಿಕಾಪ್ಟರಿನಂತೆ ಸದ್ದು ಮಾಡುತ್ತ ಹಾರಾಡುತ್ತಿತ್ತೆಂದು ವಿದ್ಯಾರ್ಥಿಗಳು ಹೇಳುತ್ತಾರೆ.

ಎರಡು ದಿನಗಳ ನಂತರ ರಾತ್ರಿ ಇಂಥ ಮತ್ತೊಂದು ತಟ್ಟೆ ಇಬ್ಬರು ಬಾಲಕರಿಗೆ ಕಾಣಿಸಿತು. ಶಾಲೆಯ ಮೇಲೆ ಹಾರಾಡುತ್ತಿದ್ದ ಅದು ಕೆಂಪು, ಬಿಳಿ ಮತ್ತು ನೀಲಿ ಬಣ್ಣಗಳಿಂದ ಕೂಡಿತ್ತು. ಆದರ ಹೊಳಪಿನ ಕಿರಣಗಳು ಶಾಲೆಯ ಮೈದಾನಿನ ಮೇಲೆ ಹರಡಿದ್ದವೆಂದು ಬಾಲಕರು ಹೇಳುತ್ತಾರೆ. ಅನಂತರ ಅದು ಗುಡುಗಿನಂತೆ ಸದ್ದು ಮಾಡುತ್ತ ಭಾರಿ ವೇಗದಲ್ಲಿ ಹಾರಿಹೋಯಿತಂತೆ.

ಪ್ರತಿ ವರ್ಷ ಜಗತ್ತಿನಾದ್ಯಂತ ಅಲ್ಲಲ್ಲಿ ಇಂಥ ವಿಚಿತ್ರ, ಘಟನೆಗಳು ಸಂಭವಿಸಿದ ವರದಿಗಳು ಬರುತ್ತಲಿರುತ್ತವೆ. ಅಮೇರಿಕದ 'ಓಮ್ನಿ' ಎಂಬ ಮಾಸ ಪತ್ರಿಕೆಯಂತೂ ತನ್ನ ಪ್ರತಿ ಸಂಚಿಕೆಯಲ್ಲೂ ಈ ಹಾರುವ ತಟ್ಟೆಗಳ ಬಗೆಗಿನ ಹೊಸ ಮಾಹಿತಿ ಪ್ರಕಟಿಸಲು ಸ್ಥಳ ಕಾಯ್ದಿರಿಸಿರುತ್ತದೆ.

ಹಾರುವ ತಟ್ಟೆಗಳು ಕಾಣಿಸಿಕೊಂಡ ಬಗ್ಗೆ ಒಂದು ಶತಮಾನಕ್ಕಿಂತ ಹಿಂದಿನ ವರದಿಗಳು ಸಿಗುತ್ತವೆ. ಉದಾಹರಣೆಗೆ 1884ರ ಜೂನ್ 6ರಂದು ನೆಬ್ರಾಸ್ಕಾದ ಡಂಡಿ ಕೌಂಟಿಯಲ್ಲಿ ಉಲ್ಕೆಯಂಥ ಭಾರಿ ವಸ್ತುವೊಂದು ಭೂಮಿಗೆ ಅಪ್ಪಳಿಸಿ ಸುಮಾರು ಅರ್ಧ ಮೈಲಿನಷ್ಟು ಮುಂದೆ ಹೋಗಿ ಮಾಯವಾಯಿತು. ಇದನ್ನು ಕಂಡ ಜಾನ್ ಎಲಿಸ್ ಎಂಬ ಯುವಕ ತನ್ನ ಸಂಗಡಿಗರೊಂದಿಗೆ ಅದು ಬಿದ್ದ ಸ್ಥಳದತ್ತ ಧಾವಿಸಿದ. ಅವರು ಆ ಸ್ಥಳ ಸಮೀಪಿಸುತ್ತಿದ್ದಂತೆಯೇ ಯಂತ್ರವೊಂದರ ತುಂಡುಗಳು ಸುತ್ತಲೂ ಹರಡಿದ್ದು ಕಂಡು ಬಂತು. ಆ ತುಂಡುಗಳು ಎಷ್ಟು ಬಿಸಿಯಾಗಿದ್ದವೆಂದರೆ, ಆ ಶಾಖಕ್ಕೆ ಸುತ್ತಮುತ್ತಲ ಪ್ರದೇಶದಲ್ಲಿನ ಹುಲ್ಲು ಸುಟ್ಟುಹೋಗಿತ್ತು. ಎಲಿಸನ ತಂಡಕ್ಕೆ ಮುಂದುವರಿಯಲು ಸಾಧ್ಯವಾಗಲಿಲ್ಲ.

ಆ ವಸ್ತು ಬಿದ್ದ ಸ್ಥಳದಿಂದ ಸುಮಾರು ಎಂಟು ಅಡಿ ಉದ್ದ ಮತ್ತು ಇಪ್ಪತ್ತು ಅಡಿ ಅಗಲ ಪ್ರದೇಶದಲ್ಲಿ ಮರಳು ಕುದಿಯಲಾರಂಭಿಸಿತ್ತು. ಈ ಕುದಿತದ ಕುರುಹಾಗಿ ಮರಳಿನಲ್ಲಿ ಗುಳ್ಳೆಗಳು ಏಳುತ್ತಿದ್ದವೆಂದೂ, ಕುದಿಯುತ್ತಿರುವ ಸದ್ದು ಸಹ ಕೇಳಿಸುತ್ತಿತ್ತೆಂದೂ ಒಂದು ವೃತ್ತಪತ್ರಿಕೆ ವರದಿ ಮಾಡಿತು. ಇದಕ್ಕೂ ಹೆಚ್ಚು ಭಯಾನಕ ಸಂಗತಿಯೆಂದರೆ ಆಲ್ಫ ವಿಲಿಯಮ್‌ಸನ್ ಎಂಬ ಯುವಕ ಬಿದ್ದ ವಸ್ತುವಿನ ತುಂಡುಗಳ ಹತ್ತಿರ ಹೋಗಿ ದಿಟ್ಟಿಸಿದಾಗ ಅವನ ಮುಖದ ತುಂಬ ಬೊಬ್ಬೆಗಳೆದ್ದು ತಲೆಗೂದಲು ಸುಟ್ಟು ಹೋಯಿತೆಂದು ವರದಿ ಹೇಳುತ್ತದೆ.

ಮರುದಿನ ಅದು ಬಿದ್ದ ಸ್ಥಳವನ್ನು ಶೋಧಿಸಿದಾಗ ಗಾಲಿ ಮತ್ತು ವಿಮಾನದ ಚಾಲಕ ದಂಡದ ಮೊಳೆಯನ್ನು ಹೋಲುವಂಥ ಎರಡು ವಸ್ತುಗಳು ದೊರೆತವು. ಬಿದ್ದ ವಸ್ತು ಸಿಲೆಂಡರಿನ ಆಕಾರದ್ದಾಗಿದ್ದು ಹತ್ತು ಅಡಿ ಅಗಲ ಮತ್ತು ಐವತ್ತು ಅಡಿ ಉದ್ದವಾಗಿತ್ತು. ಈ ಉಲ್ಕೆ ಅಚ್ಚರಿಯೆನಿಸುವಷ್ಟು ಹಗುರವಾದ ಆದರೆ ಅತ್ಯಂತ ಗಟ್ಟಿಯಾದ ಲೋಹದಿಂದ ತಯಾರಿಸಲ್ಪಟ್ಟಿತ್ತು.

ಈ ಬಗೆಗಿನ ವರದಿಯು ವಾರಪತ್ರಿಕೆಯೊಂದರಲ್ಲಿ ಪ್ರಕಟವಾಯಿತು. ಅದೇ ವರದಿಯನ್ನು ಮರುದಿನ ಇನ್ನೊಂದು ಪತ್ರಿಕೆಯಲ್ಲೂ ಪ್ರಕಟಿಸಲಾಯಿತು. ಆ ಪತ್ರಿಕೆಯ ಸಂಪಾದಕ ಈ ವಿಶಿಷ್ಟ ನೌಕೆ ಬೇರೆ ಗ್ರಹದಿಂದ ಬಂದಿಳಿದಿರಬಹುದೆಂದು ಅಭಿಪ್ರಾಯಪಟ್ಟ.

ಆದರೆ ಈ ಹಾರುವ ತಟ್ಟೆಗಳ ಬಗ್ಗೆ ಯಾವುದೇ ಖಚಿತ ಅಭಿಪ್ರಾಯಕ್ಕೆ ಬರುವುದು ವಿಜ್ಞಾನಿಗಳಿಗೆ ಸಾಧ್ಯವಾಗಿಲ್ಲ. ಹಾರುವ ತಟ್ಟೆಗಳು ಅಸ್ತಿತ್ವದಲ್ಲಿವೆಯಾದರೂ ಅವು ಹೊರನೋಟಕ್ಕೆ ಕಾಣುವುದಕ್ಕಿಂತ ಬಹಳ ಭಿನ್ನವಾಗಿವೆ ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಈ ರಹಸ್ಯಗಳನ್ನು ಭೇದಿಸಲು ಜಗತ್ತಿನಾದ್ಯಂತ ವಿಜ್ಞಾನಿಗಳು, ಹಾರುವ ತಟ್ಟೆಗಳ ಸಂಶೋಧನಾ ತಜ್ಞರು ಕಳೆದ ನಾಲ್ಕು ದಶಕಗಳಿಂದ ಪ್ರಯತ್ನಿಸುತ್ತಿದ್ದಾರೆ.

ಈಗ ಕಾಣಿಸಿಕೊಳ್ಳುತ್ತಿರುವಂಥ ಹಾರುವ ತಟ್ಟೆಗಳು 1940ರಲ್ಲಿ ಪ್ರಥಮ ಬಾರಿಗೆ 'ದರ್ಶನ' ನೀಡಿದಾಗ ಅವುಗಳನ್ನು ಯಾರೋ ಹಾರಿಬಿಟ್ಟಿರಬಹುದೆಂದು ಶಂಕಿಸಲಾಗಿತ್ತು. ಆದರೆ ದೃಢೀಕೃತ ವರದಿಗಳು ಇದರಲ್ಲಿ ಯಾವುದೇ ದೇಶದ ಕೈವಾಡವಿಲ್ಲವೆಂದು ಖಚಿತಪಡಿಸಿದವು.

ಆದರೆ ಎಲ್ಲಕ್ಕಿಂತ ಹೆಚ್ಚಿನ ವಿಚಿತ್ರವೆಂದರೆ ಹಾರುವ ತಟ್ಟೆಗಳನ್ನು ಕಂಡಿರುವ ಕೆಲವರು ತಾವು ಅದರೊಳಗಿದ್ದ ಜನರನ್ನೂ ಭೇಟಿಯಾಗಿರುವುದಾಗಿ ಹೇಳಿಕೊಂಡಿದ್ದಾರೆ. ಇವರು ಬೇರೆ ಗ್ರಹದಿಂದ ಅಥವಾ ಎರಡು ಆಕಾಶಗಂಗೆಗಳ ಮಧ್ಯದಿಂದ ಇಳಿದು ಬಂದಿರಬಹುದೆಂದು ಅವರು ಭಾವಿಸುತ್ತಾರೆ.

ಇಂಥ ನೂರಾರು ಘಟನೆಗಳು ಸಂಭವಿಸಿರುವುದರಿಂದ ಅವುಗಳನ್ನು ಕಾಲ್ಪನಿಕ ಅಥವಾ ಕಟ್ಟು ಕಥೆಗಳೆಂದು ತಳ್ಳಿಹಾಕುವಂತಿಲ್ಲ. ಆದರೆ ಒಂದು ಪ್ರಕರಣಕ್ಕೂ ಸಾಕಷ್ಟು ಸಾಕ್ಷ್ಯಾಧಾರಗಳಿಲ್ಲ. ಅಷ್ಟೇ ಅಲ್ಲ ವೈಜ್ಞಾನಿಕವಾಗಿ ಉತ್ತರ ದೊರೆಯುವ ಲಕ್ಷಣಗಳು ತೋರುತ್ತಿಲ್ಲ.

(ಆಧಾರ: ಹೆರಿಟೇಜ್)

ಕೆ. ಚಂದ್ರಮೌಳಿ

ನಾನೊಬ್ಬ ಸುಂದರ

ಹೌದು, ನಾನೊಬ್ಬ ಸುಂದರ, ಅದರಲ್ಲೇನು ಸಂಶಯ? ನನ್ನ ಬಕ್ಕತಲೆ, ಮೊಂಡ ಮೂಗು, ಬೊಚ್ಚುಬಾಯಿ, ಮುಳ್ಳುಮುಖ, ಕುಳ್ಳುಆಕಾರ ನೋಡಿ ನೀವು ನಗಬಹುದು. ನೀವು ನಕ್ಕರೆ ನನ್ನ ಸೌಂದರ್ಯಕ್ಕೆ ಕುಂದೇ? ಅಥವಾ ನನ್ನ ಹೊಟ್ಟೆಗೆ ಪೆಟ್ಟೇ? ಎರಡೂ ಇಲ್ಲ. ನಾನೂ ಒಬ್ಬ ಸುಂದರನೇ ಸರಿ!

ಹಹ್ಹ. ಹಾಗಂತ ಹೇಳಿದ್ದು ನಾನಲ್ಲ, ನಾನೊಬ್ಬನೇ ಅಲ್ಲ. ಹಾಗೆ ಹೇಳುವುದು ನಾನು, ನೀವು, ಅವನು, ಅವಳು, ಇವಳು, ಇವರು, ಎಲ್ಲರೂ. ಜೋರಾಗಿ ಎಲ್ಲರ ಮುಂದೆ ಹೇಳುವ ಧೈರ್ಯ ಬಾರದಿದ್ದರೂ ಕನ್ನಡಿಯ ಮುಂದೆ ನಿಂತು ಹಾಗೆ ಹೇಳೇ ಹೇಳ್ತಾರೆ. ಬಚ್ಚಲಮನೆಯಲ್ಲಿ ಸ್ನಾನಕ್ಕೆ ನಿಂತಾಗ ಯಾವ ಗಾರ್ಧಭಮೂರ್ತಿ ತಾನೇ ತನಗೆ ಹಾಡಲು ಬರುವುದಿಲ್ಲ ಎಂದು ತೆಪ್ಪಗಿರುತ್ತಾನೆ? ಎಲ್ಲರಿಗೂ ಅವನೇ ಆಗಿರಲಿ, ಅವಳೇ ಆಗಿರಲಿ ಎಲ್ಲರಿಗೂ ತಾನೊಬ್ಬ ಸುಂದರ ಅನ್ನುವುದರಲ್ಲಿ ಅನುಮಾನವೇ ಇರುವುದಿಲ್ಲ. ತನ್ನನ್ನು ತಾನೇ ಕನ್ನಡಿಯಲ್ಲಿ ನೋಡಿಕೊಂಡು ಮೆಚ್ಚಿಕೊಳ್ಳದೆ ಇರುವವರು ಇಲ್ಲವೇ ಇಲ್ಲ ಅನ್ನಬಹುದು. ಗಂಟೆಗಟ್ಟಲೆ ಕನ್ನಡಿಯ ಮುಂದೆ ನಿಂತು ಬಕ್ಕತಲೆಯ ಮೂರು ಕೂದಲಲ್ಲಿ ಒಂದನ್ನು ಎಡಕ್ಕೆ, ಒಂದನ್ನು ಬಲಕ್ಕೆ, ಮತ್ತೊಂದನ್ನು ಹಿಂದಕ್ಕೆ ಬಾಚಿ ಕೂರಿಸುವುದೇನು, ಆ ಮೊಂಡಮೂಗಿಗೆ ಬಿಳಿ ಪೌಡರ್ ಬಳಿಯುವುದೇನು, ಆ ಮೀಸೆಯ ಕೂದಲನ್ನು ಹದ ಮಾಡುವುದೇನು.....ಇನ್ನು ಹೆಂಗಸರಾದರಂತೂ ಕೇಳಲೇಬೇಡಿ. ಗಂಟೆಗಳಾದರೂ ಕನ್ನಡಿಯೊಳಗಿನ ಸುಂದರಿಯನ್ನೇ ನೋಡುತ್ತಾ, ಮೆಚ್ಚುತ್ತಾ, ಆ ಸುಂದರಿಗೊಂದು ದೃಷ್ಟಿಬೊಟ್ಟು ಇಡುತ್ತಾ, ಅಲ್ಲೊಂದು ಹುಬ್ಬಿನ ಕೂದಲನ್ನು ತೀಡುತ್ತಾ, ಇಲ್ಲೊಂದು ಮೊಡವೆಯ ಕಲೆಯನ್ನು ಮುಚ್ಚುತ್ತಾ, ತುಟಿಯ ಕೆನ್ನೆಯ ಬಣ್ಣ ಏರಿಸುತ್ತಾ ಅಲ್ಲೇ ಹಾಗೆ ನಿಂತೇಬಿಡುತ್ತಾರೆ. ಆಗ ಅವರಿಗೆ ಬಳಲಿಕೆಯೂ ಇಲ್ಲ, ಬೇಸರಿಕೆಯೂ ಇಲ್ಲ, ಯುಗಯುಗಗಳ ಪರಿವೆಯೂ ಇರುವುದಿಲ್ಲ. ಪಾಪ, ಹೆಂಗಸರನ್ನೇಕೆ ಅನ್ನಬೇಕು. ನಾವು ಗಂಡಸರೇನು ಕಡಿಮೆ! ಎಲ್ಲಿ ಪಾನ್, ಸಿಗರೇಟ್, ಭೇಲ್‌ಪುರಿ ಅಂಗಡಿಗಳಲ್ಲಿ ಎರಡು ನಿಮಿಷ ನಿಂತರೂ ಜೇಬಲ್ಲಿದ್ದ ಬಾಚಣಿಗೆ ತೆಗೆದು ಕತ್ತುಕೊಂಕಿಸಿ, ಮೈಬಳುಕಿಸಿ, ಮೂತಿ ಸೊಟ್ಟಮಾಡಿ, ತಲೆ ಬಾಚಿದ್ದೇ



ಬಾಚಿದ್ದು. ಹಾಗೆ ತಲೆ ಬಾಚಿ, ಮುಖ ಒರೆಸಿಕೊಂಡು, ಪಾನ್‌ಮದ್ದು, ಸಿಗರೇಟ್ ಹತ್ತಿಸಿ ರಾಜಠೀವಿಯಿಂದ ಹೊರಟಾಗ ಇನ್ನೊಮ್ಮೆ ಅದೇ ಅನಿಸಿಕೆ ಒತ್ತರಿಸಿಕೊಂಡು ಬರುತ್ತೆ; ನಾನೊಬ್ಬ ಸುಂದರ ಅನ್ನುವ ಭಾವನೆ ಕನ್ನಡಿಯಿಂದ ಕಣ್ಣೊಳಗೆ ನುಸಿದು, ಹೃದಯದಲ್ಲಿ ಬೇರೂರಿ, ಮನದಲ್ಲಿ ಬೀಗಿ, ಕಿವಿಯಲ್ಲಿ ಮೊರೆಯುತ್ತದೆ!

ಪಾರ್ಟಿಯಲ್ಲಿ ಹತ್ತು ಜನರ ಜೊತೆ ಹರಟೆ ಹೊಡೆಯುತ್ತಿರುವ ದಪ್ಪ ಹೊಟ್ಟೆಯ, ಕುಳ್ಳ ಲೇಡಿ ಅಲ್ಲೇ ಮೂಲೇಲಿ ನಿಂತು ತನ್ನ ವ್ಯಾನಿಟಿ ಬ್ಯಾಗಿನಿಂದ ಲಿಪ್‌ಸ್ಟಿಕ್ ತೆಗೆದು, ತುಟಿಯ ಬಣ್ಣ ಸರಿಮಾಡಿಕೊಂಡೋ ಹುಬ್ಬುತಿದ್ದಿಕೊಂಡೋ, ಹೊಸನಗೆ ಬೀರುತ್ತಾ ಬೀಗುತ್ತಾ ಬರುವುದನ್ನು ನೋಡಿಲ್ಲವೇನು? ಹೀಗೆಂದ ಮಾತ್ರಕ್ಕೆ ಕನ್ನಡಿ ನೋಡಿದಾಗ ಮಾತ್ರ, ಈ ಅನಿಸಿಕೆ ಹೆಚ್ಚಾಗುತ್ತೆ ಅಂದ್ಕೋಬೇಡಿ. ಬಸ್ಸು ಅಥವಾ ಲೋಕಲ್ ಟ್ರೇನಿನಲ್ಲಿ ನಿಂತು, ಆ ಗಜಬಿಜಿಯ ಮಧ್ಯವೇ ಹಾಗೇ ತಲೆ ಬಾಚಿಕೊಂಡು, ಚಪ್ಪಟೆ ಕೂದಲಲ್ಲಿ ಗುಂಗುರು ಎಬ್ಬಿಸಿದ್ದೇನು, ಮುಂಗುರುಳು ತೀಡಿದ್ದೇನು! ಕನ್ನಡಿ ಇದ್ದರೆ ಸಂತೋಷ. ಇಲ್ಲದಿದ್ದರೆ ಭಾವನೆಯೇ ಸಾಕು. ಹೀಗೆ ಹೊರಗಿನ ಕನ್ನಡಿ, ಒಳಗಿಂದ ಉಕ್ಕಿ ಬರುವ ಭಾವನೆಯಲ್ಲದೆ ಸುತ್ತಲಿನ ವಾತಾವರಣ, ಜೊತೆಯ ಜನ, ಅವರ ಮಾತುಕತೆ, ಮೆಚ್ಚುವ ಅಥವಾ ಮೆಚ್ಚಿಸಿಕೊಳ್ಳುವ ತವಕ, ಚಕ್ಕಂದ ಹೊಡೆಯುವ ಚಪಲ ಇವೆಲ್ಲವೂ 'ನಾನೊಬ್ಬ ಸುಂದರ' ಎನ್ನುವ ಅನಿಸಿಕೆಗೆ ಪ್ರಚೋದಕಗಳೇ ಸರಿ. ಇದರಿಂದ, ಎಂತಹ ಕುರೂಪಿಯಾಗಿದ್ದರೂ, ಎಷ್ಟೇ ಮುಖ ಸುಕ್ಕುಗಟ್ಟಿದ್ದರೂ, ಎಷ್ಟೇ ವಯಸ್ಸಾಗಿದ್ದರೂ, ನಾನೂ ಸುಂದರ ಅನ್ನುವ ಅನಿಸಿಕೆ ಮನಸ್ಸನ್ನು ಪೂರ್ತಿಯಾಗಿ ಬಿಡುವುದೇ ಇಲ್ಲ. ಇನ್ನೊಬ್ಬರು ನಿಮ್ಮೊಡನೆ ಮಾತಾಡದಿದ್ದಾಗ, ಮುಖ ತಿರುಗಿದಾಗ, ಮೆಚ್ಚದಿದ್ದಾಗ, ಮದುವೆಯಾಗದಿದ್ದಾಗ, ಹೀಗೆ ಜೀವನವಿಡೀ ಅನೇಕ ಕಹಿ ಅನುಭವಗಳಾಗಿದ್ದಾಗಲೂ ಕನ್ನಡಿಯ ಮುಂದೆ ಹೋಗಿ ನಿಂತರೆ ನೆನಪಿನ ಕಹಿಯೆಲ್ಲಾ ತೇಲಿ ಹೋಗಿಬಿಡುತ್ತದೆ. 'ಎಲ್ಲರಿಗೂ ಎಲ್ಲರೂ ಮೆಚ್ಚುಗೆಯಾಗಬೇಕಿಲ್ಲ, ಒಬ್ಬೊಬ್ಬರ ಕಣ್ಣಿಗೂ ಬೇರೆ ಬೇರೆ ರೂಪ ಹಿಡಿಸಬಹುದು. ಹಾಗೆಂದ ಮಾತ್ರಕ್ಕೆ ನನ್ನ ಸೌಂದರ್ಯಕ್ಕೇನು ಕಡಿಮೆ?' ಎಂದು ಕನ್ನಡಿಯೊಳಗಿನ ಸುಂದರಿ ನಿಮಗೆ ಧೈರ್ಯ ತುಂಬುತ್ತಾಳೆ. ಪುನ: ನೀವು ಅಲ್ಲೇ ಇಟ್ಟಿರುವ ಬಣ್ಣದ ಕಡ್ಡಿ ಹಿಡಿದು ಕೆನ್ನೆಗೆ ಬಳಿದು ಕೆಂಪಾಗಿಸುತ್ತೀರಿ. ನಾನೊಬ್ಬ ಸುಂದರಿ ಅನ್ನುವ ಅನಿಸಿಕೆ ಮತ್ತೆ ಮನದಲ್ಲಿ ಹೊಸದಾಗಿ, ನವಿರಾಗಿ ಚಿಗುರೊಡೆಯುತ್ತದೆ.

ನಾನು ಸುಂದರನಲ್ಲವೆಂದು ಎಷ್ಟು ಜನ ಹೇಳಿಕೊಂಡಿದ್ದಾರೆಂದು ಯೋಚಿಸುತ್ತಾ ಇದ್ದಾಗ ನಾರದನ ನೆನಪಾಯಿತು. ನಾರದನಿಗೆ ಮದುವೆಯಾಗಬೇಕೆಂಬ ಆಸೆಯಾಗಿದ್ದು,

ತಾನು ಸುಂದರನಲ್ಲವೆಂದು ತಿಳಿದದ್ದು, ಅದಕ್ಕಾಗಿ ವಿಷ್ಣುವಿನ ರೂಪವನ್ನು ಒಂದು ದಿನಕ್ಕಾಗಿ ಬೇಡಿದ್ದು, ಮಾಯಾನಗರದೊಳಗೆ ಹೊಕ್ಕಿದ್ದು, ಅಲ್ಲಿನ ಸ್ವಯಂವರದಲ್ಲಿ ''ನಾನೇ ಸುಂದರ'' ಎಂದು ಹೆಮ್ಮೆಯಿಂದ ಕೂತಿದ್ದು, ಆದರೆ ಸುರಸುಂದರಿಯ ಮಾಲೆ ಇವನ ಕೊರಳಿಗೆ ಬೀಳದೆ ಎಲ್ಲಾ ಸಖಿಯರೂ ಇವನ ಮುಖ ನೋಡಿ ಗೊಳ್ಳೆಂದು ನಕ್ಕಿದ್ದು, ಎಲ್ಲವೂ ಚಲನಚಿತ್ರದಂತೆ ಮನದ ಮುಂದೆ ಹಾದುಹೋದವು. ವಿಷ್ಣು ನಾರದನಿಗೆ ಬುದ್ಧಿ ಕಲಿಸಲು, ತನ್ನ ರೂಪವನ್ನು ಕೊಡುವ ಬದಲು ಇವನಿಗೆ ಕೋತಿಯ ರೂಪ ಕೊಟ್ಟುಬಿಟ್ಟಿದ್ದನಂತೆ. ಪಾಪ, ಕನ್ನಡಿ ನೋಡಿಕೊಳ್ಳದೆ 'ನಾನೇ ಸುಂದರ' ಎಂದು ಗರ್ವದಿಂದ ಕೂತಿದ್ದ ನಾರದನ ಪಾಡು ನಗೆಪಾಟಲು! ಅವನಿಗೂ ನಮಗೂ ಒಂದೇ ವ್ಯತ್ಯಾಸ: ನಾರದ ಕನ್ನಡಿ ನೋಡಿಕೊಳ್ಳದೆ ನಾನೊಬ್ಬ ಸುರಸುಂದರ ಅಂದುಕೊಂಡಿದ್ದನ್ನೇ, ನಾವು ಗಂಟೆಗಟ್ಟಲೆ ಕನ್ನಡಿ ನೋಡಿದ ಮೇಲೂ ಅಂದುಕೊಳ್ತೇವೆ. ಇನ್ನು ಆ ಶೂರ್ಪನಖಿಯನ್ನು ನೋಡಿ. ರಾಮಲಕ್ಷ್ಮಣರನ್ನು ನೋಡಿ ಮೋಹಗೊಂಡು, ತನ್ನ ಹಾವಭಾವಗಳಿಂದ ಅವರ ಮನಸೆಳೆಯುವ ಪ್ರಯತ್ನ ಮಾಡುತ್ತಾಳೆ. ಲಕ್ಷ್ಮಣನನ್ನು ನೋಡಿ ಮುಗುಳ್ನಗುತ್ತಾ, ''ತುಮ ಸಮ ಪುರುಷ ನ ಮೋಸಮ ನಾರಿ, ಯಹ ಸಂಜೋಗ ಭಿಧಿ ರಚಾ ಬಿಚಾರಿ'' ಅನ್ನುತ್ತಾಳೆ. ಅಂದರೆ, ''ನಿನ್ನ ಸಮ ಪುರುಷ ಮತ್ತು ನನ್ನ ಸಮ ನಾರಿಯಿಲ್ಲ. ವಿಧಿ ಯೋಚಿಸಿ ರಚಿಸಿದನೀ ಸಂಯೋಗ'' ಅನ್ನುತ್ತಾಳೆ. ಅವಳ ರಾಕ್ಷಸೀಯ ವಿಕೃತ ರೂಪದಲ್ಲೂ ಅವಳಿಗೆಷ್ಟು ಮೋಹ, ಎಷ್ಟು ಅಹಂಕಾರ! ಸುಂದರಿಯೆನಿಸಿಕೊಂಡವಳೊಬ್ಬಳು ಬರ್ನಾಡ್‌ಶಾನನ್ನು ಮದುವೆಯಾಗಲಿಚ್ಛಿಸಿದಾಗ, ''ಅರೆ, ಎಲ್ಲಾದರೂ ನನ್ನ ಮುಖದಂತಹ ಮತ್ತು ನಿನ್ನ ಬುದ್ಧಿಯಿರುವ ಮಗಳು ಹುಟ್ಟಿದರೆ ಆಗೇನು ಗತಿ!'' ಅಂದನಂತೆ ಶಾ. ಪ್ರಾಯಶ: ಶಾ ಒಬ್ಬನೇ ಹೀಗೆ ತನ್ನ ಸೌಂದರ್ಯದ ಬಗ್ಗೆ ಹೆಮ್ಮೆಪಟ್ಟುಕೊಳ್ಳದೇ ಇದ್ದುದು ಅನ್ನಿಸುತ್ತೆ.

ಕನ್ನಡಿ ಕವಿಯ ಭಾವನೆಗಳಂತೆ ತರಂಗವನ್ನೆಬ್ಬಿಸಿದರೆ, ವಿವಿಧ ಬಣ್ಣಗಳು ಪದಗುಚ್ಛಗಳಂತೆ ಕುಣಿ ಕುಣಿದು ಕವಿತೆಯನ್ನು ಬರೆಸುತ್ತವೆ. ಈಚೆಗಂತೂ ಬಣ್ಣವೇ ಜೀವನ, ಬಣ್ಣವೇ ಮೆರುಗು, ಬಣ್ಣವೇ ಸೌಂದರ್ಯ ಅನ್ನುವಂತಾಗಿದೆ. ಅದಕ್ಕೇ ಎಷ್ಟೋ ಸಲ ಬೆಳ್ಳಗಿದ್ದವರೆಲ್ಲರೂ ಚೆನ್ನ, ಬಣ್ಣ ಬಣ್ಣದ ಉಡುಗೆ-ತೊಡುಗೆ ತೊಟ್ಟವರೆಲ್ಲರೂ ಚೆನ್ನ; ಅನ್ನುವುದೂ ಅಭ್ಯಾಸವಾಗಿದೆ. ಇಂದಿನ ಮಂದಿ ಬಣ್ಣ-ಸುಣ್ಣಗಳಿಂದ ಅಲಂಕೃತರಾಗಿ, ಥಳುಕು-ಬಳುಕಾಗಿ ಬೀಗುವುದನ್ನು ನೋಡಿ ಯಾರಾದರೂ ಮನಮೋಹಿತರಾಗಬೇಕು. ಇದರ ಜೊತೆಗೆ ಸೌಂದರ್ಯ ಬರೀ ಮುಖದಲ್ಲಿ ಮಾತ್ರವಲ್ಲದೆ ಎಲ್ಲಾ ಅಂಗಾಂಗಗಳಲ್ಲೂ ಹುದುಗಿದೆ ಅನ್ನುವ ಹೊಸ ಪ್ರಜ್ಞೆ ಬಲವಾಗಿ ಬೆಳೆಯುತ್ತಿದೆ. ಇದೇ ಕಾರಣದಿಂದಲೋ ಏನೋ ಹುದುಗಿರುವ ಅಂಗಸೌಷ್ಠವದ ಸೌಂದರ್ಯವನ್ನು ಹೊರತರಲು ಬಟ್ಟೆಬರೆಗಳನ್ನು ಸರಿಸುತ್ತಿದ್ದಾರೆ, ಇಳಿಸುತ್ತಿದ್ದಾರೆ, ಕಳಚುತ್ತಿದ್ದಾರೆ. ಬಟ್ಟೆಗಳನ್ನೇ ಇಳಿಸಿದ ಮೇಲೆ ಈಗ ಇನ್ನೊಂದು ಹುಚ್ಚು ಶುರುವಾಗಿದೆ-ಮೈಯನ್ನೇ ಇಳಿಸುವುದು. ಈಗ ಎಲ್ಲೆಲ್ಲಿ ನೋಡಿದರೂ slimming centerಗಳು (ಮೈ ಇಳಿಸುವ ಕೇಂದ್ರಗಳು), ಯೋಗ ಬಲದಿಂದ ನಡು ಚೆನ್ನಾಗಿಸುವ ಕೇಂದ್ರಗಳು, ಯಾವ ಪತ್ರಿಕೆ ನೋಡಿದರೂ ಸೊಂಟ ಸಣಕಲಾಗಿಸುವ ಲೇಖನಗಳು ಇತ್ಯಾದಿಗಳನ್ನು ಕಾಣಬಹುದು. ಇಷ್ಟಾದರೂ ನಡುಬಡಕಲ, ಉಂಗುರದೊಳಗೆ ತೂರುವ ವನಿತೆಯರನ್ನು ಕಾಣುವುದು ಬಲು ಅಪರೂಪ. ಯಾಕೆ ಗೊತ್ತೆ? ಮೈ ಇಳಿಸುವ, ಯೋಗಕೇಂದ್ರಗಳ ಪಕ್ಕವೇ ಪಾವ್‌ಭಾಜಿ ಮತ್ತು ಐಸ್‌ಕ್ರೀಂ ಅಂಗಡಿಗಳು, ಸಣಕಲಾಗುವ ಲೇಖನಗಳ ಪಕ್ಕವೇ ಹೊಸರುಚಿಯ ಬಗ್ಗೆಯೂ ಲೇಖನಗಳೂ ಇರುತ್ತವೆ. ಹೀಗಾಗಿ ಉಂಗುರದೊಳಗೆ ತೂರಹೊರಟ

ಯುವತಿಯರು, ಲಾರಿ ಟೈರ್‌ಗಳೊಳಗೂ ತೂರಲಾಗದೇ ಒದ್ದಾಡುತ್ತಾರೆ. ಇನ್ನೊಂದು ವಿಚಾರ: ಮೈ ಇಳಿಸುವ, ಬಳಕಿಸುವ ಕೇಂದ್ರ ಗಳಂತೆ ಮೈ ಥಳುಕಿಸುವ ಬ್ಯೂಟಿಪಾರ್ಲರ್ ಗಳೂ ಮೂಲೆಗೊಂದರಂತೆ ಹರಡಿಕೊಂಡಿವೆ. ಕಸಪೊರಕೆಯ ತರಹ ತಲೆಕೂದಲು ಹರಡಿಸಿ, ಹುಬ್ಬು ಬೋಳಿಸಿ, ಅಂಗಾಂಗಗಳ ಕೂದಲು ಕಿತ್ತಿಸಿ, ಕೊಳೆ ತೆಗೆಸಿ, ಉಗುರು-ರೆಪ್ಪೆ ಆದಿ ಯಾಗಿ ಎಲ್ಲೆಡೆ ಬಣ್ಣ ಬಳಿಸಿ, ಒಟ್ಟಿನಲ್ಲಿ ಮೈಥಳುಕಿಸಿಕೊಂಡು ಪರ್ಸ್ ಬರಿದು ಮಾಡಿ ಕೊಳ್ಳುವ ತಾಣವೇ ಬ್ಯೂಟಿಪಾರ್ಲರ್‌ಗಳು. ಅಲ್ಲಿಂದ ಹೊರಬರುವ ಕುಬ್ಜ ಕುರೂಪಿ ಮಂಥರೆ ಸಹ 'ನಾನೊಬ್ಬ ಸುಂದರಿ' ಅಂದು ಕೊಂಡೇ ಜೋರಾಗಿ ಖಾಲೀಪರ್ಸ್ ಬೀಸು ತ್ತಾಳೆ. ತನ್ನ ಶೂನ್ಯದೃಷ್ಟಿಯಲ್ಲೇ ಕಣ್ಣು ಹೊಡೆಯುತ್ತಾಳೆ!

ಒಟ್ಟಿನಲ್ಲಿ ಅಚ್ಚುಕಟ್ಟು, ಮೈಕೈ, ಬಣ್ಣ-ಸುಣ್ಣ, ಉಡುಗೆ-ತೊಡುಗೆ, ನಯ-ನಾಜೂಕು, ಮಾತಿನ ಮೋಡಿ, ನಗು-ಚಕ್ಕಂದ, ಥಳುಕು-ಬಳುಕು, ಹಾವ-ಭಾವ ಇವೇ ಸೌಂದರ್ಯದ ಕುರುಹುಗಳು ಅಂದುಕೊಂಡ ವರೇ ಹೆಚ್ಚು. ಆದರೆ ಇವು ಕೇವಲ ಬಾಹ್ಯಾ ಡಂಬರಗಳು. ಇವು ಇರಲಿ, ಬಿಡಲಿ, ಸ್ವಚ್ಛ ಸೊಗಸಿನಿಂದ, ಸೌಂದರ್ಯದ ಸೊಗಡಿನಿಂದ ಕಾಂತಿಯ ಬೆಡಗಿನಿಂದ, ಕಳೆಯ ಹೊಳಪಿ ನಿಂದ ಮಿನುಗುತ್ತಿರುವ ಸುಂದರಿಯರನ್ನು ಕಾಣಸಿಗುವುದು ಬಲು ಕಷ್ಟ. ಹೀಗೆ ಸೌಂದ ರ್ಯದ ವಿಚಾರ ಬಂದಾಗಲೆಲ್ಲ ನನ್ನ ಕಣ್ಣಿಗೆ ಕಟ್ಟುವುದು ಒಂದೇ ಒಂದು ದೃಶ್ಯ.ಅದು ತುಳಸೀ ರಾಮಚರಿತಮಾನಸದ ಸರಳ ದ್ವಿಪದಿ ಗಳಲ್ಲಿ ಚಿತ್ರಿತವಾಗಿರುವ ಪುಷ್ಪವಾಟಿಕದಲ್ಲಿ ಸೀತಾ-ರಾಮರ ಪ್ರಥಮ ಭೇಟಿಯ ದೃಶ್ಯ. ಪುಷ್ಪವಾಟಿಕೆಯಲ್ಲಿ ರಾಮನೆದುರು ನಿಂತ ಸೀತೆಯ ರೂಪವನ್ನು ಕವಿಯ ವರ್ಣನೆ ಯಲ್ಲೇ ಕೇಳಿ ಆನಂದಪಡಬೇಕು.

ಸುಂದರತಾ ಕಹು ಸುಂದರ ಕರಯಿ। ಛಬಿ ಗೃಹ ದೀಪ ಸಿಖಾ ಜನು ಬರಯಿ'॥

(ಸೌಂದರ್ಯವನ್ನೂ ಸುಂದರಗೊಳಿಸಿಹ ಳು। ಸೌಭಾಗ್ಯಹದಿ ಜಗಮಗಿಸುವ ದೀಪದಿ ತೆರದಿ॥)

ಇಂತಹ ಸೌಂದರ್ಯವನ್ನು ವರ್ಣಿಸುವು ದಾದರೂ ಹೇಗೆ? ಕಣ್ಣಿಗೆ ನಾಲಿಗೆಯಿದ್ದರೆ ತಾನೆ ವರ್ಣನೆ ಸಾಧ್ಯ! ಕಣ್ಣಿಗೆ ನಾಲಿಗೆಯಿಲ್ಲ. ನಾಲಿಗೆಗೆ ಕಣ್ಣಿಲ್ಲ, ಇನ್ನು ಸೌಂದರ್ಯವರ್ಣ ನೆಯಾದರೂ ಹೇಗೆ?

ಅದೂ ನಿಜ. ಸೌಂದರ್ಯದ ವರ್ಣನೆ ಅಷ್ಟು ಸುಲಭವಲ್ಲ. ಆದರೂ....ಏನೇ ಅಂದರೂ....ಮಾತಿಲ್ಲದ, ಶಬ್ದಾಲಂಕಾರಗಳ ಆಡಂಬರವಿಲ್ಲದ ವರ್ಣನೆಗೆ ಕನ್ನಡಿ ಇದೆ ಯಲ್ಲ. ಆದ್ದರಿಂದ 'ನಾನೂ ಒಬ್ಬ ಸುಂದರ!'

'ಒಮ್ಮತ'

ಕೆಲ ನಿಮಿಷ ಜಗಳವಾಡಿದ ನಂತರ ಮತ್ತೆ ಒಂದಾದ ಹೆಂಡತಿ ಗಂಡನೊಂದಿಗೆ ವೈಯಾರದೊಂ ದಿಗೆ, "ಮದುವೆಯಾಗಿ ಒಂದು ವರ್ಷವಾದರೂ ನಮ್ಮಿಬ್ಬರಲ್ಲಿ ಒಮ್ಮತವಿಲ್ಲ ಅಂತಾ ನೆರೆಹೊರೆಯ ವರು ಮಾತಾಡ್ತಾರಲ್ಲ, ನನಗೂ ಹೌದು ಎನಿಸುತ್ತದೆ," ಅಂದಳು.

ಅದಕ್ಕೆ ಗಂಡನೆಂದ, "ಹಾಗಾದರ ನಾನೊಂದು ಪ್ರಶ್ನೆ ಕೇಳುತ್ತೇನೆ. ಒಂದು ಹಾಸಿಗೆಯ ಮೇಲೆ ಒಬ್ಬ ಪುರುಷ ಮಲಗಿದ್ದಾನೆ. ಇನ್ನೊಂದು ಹಾಸಿಗೆಯ ಮೇಲೆ ಒಬ್ಬ ಸ್ತ್ರೀ ಮಲಗಿದ್ದಾಳೆ. ಆಗ ನೀನು ಯಾವ ಹಾಸಿಗೆಯ ಮೇಲೆ ಮಲಗಿಕೊಳ್ಳುತ್ತಿ?" ಒಡನೆಯೇ ಹೆಂಡತಿ, "ಸ್ತ್ರೀ ಇದ್ದ ಹಾಸಿಗೆಯ ಮೇಲೆ," ಅಂದಳು. ಅದಕ್ಕೆ ಗಂಡ, "ಶಬ್ಬಾಸ್! ನನ್ನದೂ ಅದೇ ವಿಚಾರವಿತ್ತು. ಅಂದಮೇಲೆ ನಾವಿಬ್ಬರೂ ಒಮ್ಮತರಲ್ಲ ಅನ್ನುತ್ತಿರುವುದು ಹೇಗೆ?"

-ಕಾಣಕೋಣಕರ.

ಕಿತ್ತಳೆ ಮತ್ತು ಲಿಂಬೆ

''ಕಿತ್ತಳೆ'' ಎಂದು ನಾವು ಕರೆಯುವ ಹಣ್ಣು ''ನಾರಂಗ'', ''ನಾರಂಗಿ'' ಎಂಬ ಇನ್ನೊಂದು ಹೆಸರಿನಿಂದ ಪ್ರಸಿದ್ಧವಾಗಿರುವುದು ಎಲ್ಲರಿಗೂ ಗೊತ್ತು. ಸಾಮಾನ್ಯ ತಿಳಿವಳಿಕೆಯ ಪ್ರಕಾರ ಇದು ಉರ್ದುವಿನಿಂದ ಬಂದದ್ದು ಎಂದು. ನಾರಂಗ ಎಂದು ಕಿತ್ತಳೆಗೆ ಪಾರಸೀಕ ಭಾಷೆಯಲ್ಲಿ ಹೆಸರಿರುವುದು ನಿಜ. ಆದರೆ ಅದು ಆ ಭಾಷೆಯದೇ ಮೀಸಲು ಹೆಸರಲ್ಲ. ಯಾಕೆಂದರೆ ಸಂಸ್ಕೃತದಲ್ಲಿ, ಪ್ರಸಿದ್ಧ ಪ್ರಾಚೀನ ಶಸ್ತ್ರ ವೈದ್ಯನಾದ ಸುಶ್ರುತನ ಸಂಹಿತೆಯಲ್ಲಿ ವೈದ್ಯಕೀಯ ದೃಷ್ಟಿಯಿಂದ ಈ ಹಣ್ಣಿಗೆ ಅದೇ ಹೆಸರು ಬಂದಿದೆ. ನಾರಂಗದ ಬಣ್ಣ ಮತ್ತು ರುಚಿಯನ್ನು ಕುರಿತು ಸಾರ್ವತ್ರಿಕ ತಿಳಿವಳಿಕೆ ಭಾರತದಲ್ಲಿತ್ತೆಂಬುದಕ್ಕೆ ಪಂಪನಷ್ಟು ಹಳೇ ಕವಿ ಇವೆರಡನ್ನೂ (ಬಣ್ಣ ಮತ್ತು ಹಣ್ಣು) ಉಲ್ಲೇಖಿಸುವುದು ಪ್ರಮಾಣವಾಗಿದೆ. ಆದ್ದರಿಂದ ಈ ಹೆಸರಿನ ಮೂಲದ ಪ್ರಶ್ನೆ ಸರಾಗವಲ್ಲ. ಆದರೆ ಕಿತ್ತಳೆಯ (citrus) ಜಾತಿಗೆ ಸೇರಿದ ಒಂದು ಹಣ್ಣಿನ ಮೂಲ ಸ್ಥಾನವಂತೂ ಚೀನ ಮತ್ತು ಆಗ್ನೇಯೇಶಿಯ ಎಂದು ಸಸ್ಯಶಾಸ್ತ್ರಗಳ ಮತವಾಗಿರುವುದರಿಂದ ಈ ಹೆಸರು ಕೂಡ ಆಗ್ನೇಯೇಶಿಯದ ಯಾವೊಂದು ಪ್ರಾಚೀನ ಭಾಷೆಯದಿರಬಹುದೆಂದು ತರ್ಕಿಸಲು ಆಸ್ಪದವಿದೆ. ಒಂದು ಸಂಗತಿ ವಿಚಾರಣೀಯವಾಗಿದೆ. ಅದೆಂದರೆ ಸಂಸ್ಕೃತದಲ್ಲಿ ''ನಾರಂಗ'' ಪದ, ''ನಾಗ+ರಂಗ''ದ ಸಮಾಹಾ ರೂಪವೆಂದು ಶಬ್ದಶಾಸ್ತ್ರಗಳು ಹೇಳಿದ್ದಾರೆ. ''ನಾಗ'' ಶಬ್ದಕ್ಕೆ ಸಂಸ್ಕೃತದಲ್ಲಿ ಹಲವಾರು ಅರ್ಥಗಳಿದ್ದು ಅವುಗಳಲ್ಲಿ ಕೆಂಪು, ಕೇಸರಿ, ಸಿಂಧೂರ (ಉದಾ-ನಾಗಕೇಶರ) ಬಣ್ಣಗಳೆಂಬರ್ಥವೂ ಸೇರಿದೆ. ''ರಂಗ'' ಎಂದರೆ ಬಣ್ಣ ಎಂಬುದು ಸರ್ವವಿದಿತ. ಹೀಗೆ ನಸು ಹಳದಿ ಮಿಶ್ರಿತ ಕೆಂಪು ಬಣ್ಣದ ಹಣ್ಣು ಎಂಬ ವ್ಯುತ್ಪತ್ತಿ ಸುಸಂಗತವಾಗುತ್ತದೆ. ರಂಗ ಪದ ಸಂಸ್ಕೃತಕ್ಕೂ ಪಾರಸೀಕಕ್ಕೂ ಸಮಾನವೆಂಬುದನ್ನೂ ಸ್ಮರಿಸಬಹುದು.

ಈ ಹಣ್ಣಿನ ಹೆಸರಿನ ಮೂಲದ ಬಗ್ಗೆ ಇರುವ ಸಂದೇಹ ಹೇಗೇ ಇರಲಿ, ಈ ಹೆಸರಿನ ವಿಶ್ವವಾಪ್ತಿ ಗಮನಾರ್ಹವಾದದ್ದು. ಇಂಗ್ಲೀಷಿನಲ್ಲಿ ಅದಕ್ಕೆ Orange ಎಂಬ ಹೆಸರಿದೆ ತಾನೆ. ಈ ಹೆಸರು ಕೂಡ ''ನಾರಂಗ'' ಪದದ ಪ್ರಥಮ ನಕಾರ ಲೋಪವಾಗಿ ರೂಪುಗೊಂಡದ್ದೇ. ಯುರೋಪಿನ ಅನೇಕ ಭಾಷೆಗಳಲ್ಲಿ (ಅರ್ವಾಚೀನ ಲ್ಯಾಟಿನ್ arangia, aurantia, naraneum ಇಟಾಲಿಯನ್ araneia, ಸ್ಪಾನಿಶ್ naranja) ಪೋರ್ಚುಗೀಸ್ larmja, ಇದೇ ಪದ ನಸು ಬದಲಾವಣೆಯೊಡನೆ ಜನ ಜನಿತವಾಗಿದೆ. ಇವೆಲ್ಲಕ್ಕೂ ಆದಿಮೂಲಪಾರಸೀಕ ಭಾಷೆಯ ''ನಾರಂಗ'' ಪದವೇ ಎಂದು ಸಿದ್ಧವಾಗಿದೆ. ನೇರವಾಗಿ ಅದು ಪಾರಸೀಕದಿಂದ ಸ್ವೀಕೃತವಾಗಿರದೆ ಅರಬ್ಬಿ ಮೂಲಕ ದಾಟಿ ಹೋಗಿದ್ದು, ಅರಬ್ಬಿಯಲ್ಲಿ ಅದು ''ನಾರಂಜ'' ಆಗಿದೆ, ಮೂಲ ಪಾರಸಿಕವೇ;

ಕಿತ್ತಳೆಯಂತೆ ಹಿಂದೂ ಸಾಗರದಿಂದ ಅಟ್ಲಾಂಟಿಕ್‌ವರೆಗೆ ವ್ಯಾಪಿಸಿದ ಇನ್ನೊಂದು ಹೆಸರೆಂದರೆ ಅದೇ ಈಳೆ ಜಾತಿಗೆ ಸೇರಿದ ''ಲಿಂಬೆ'' (ಅಥವಾ ''ನಿಂಬೆ'')ಯದು. ಸಂಸ್ಕೃತದಲ್ಲಿ ಅದು ''ನಿಂಬೂ'' (ನಿಂಬ=ಬೇವು) ಎನಿಸುತ್ತದೆ. ಅದು ಅರಬ್ಬಿಯಲ್ಲಿ ''ಲೀಮಾ'' (ನ=ಲ) ಆಗಿ ಪಾಶ್ಚಾತ್ಯ

ಭಾಷೆಗಳಿಗೆ ದಾಟಿತು. ಇದೇ ಇಂಗ್ಲೀಷಿನಲ್ಲಿ ಸಣ್ಣ, ಕಡು ಹುಳಿ ರುಚಿಯ lime ಆಗಿಯೂ ದೊಡ್ಡ ಕಡಿಮೆ ಹುಳಿಯಾದ lemon ಆಗಿಯೂ ಹಳೇ ಫ್ರೆಂಚ್ ಮೂಲಕ ಪ್ರವೇಶ ಪಡೆಯಿತು. ಪೋರ್ಚುಗೀಸಿನಲ್ಲಿಯೂ ಸ್ಪಾನಿಶ್ ಭಾಷೆಯಲ್ಲಿಯೂ ಅವೇ ಕ್ರಮವಾಗಿ lima ಮತ್ತು limao ಆಗಿವೆ. ಹುಳಿಲಿಂಬೆ ಗಿಡ linden ಆಗಿದೆ. ಈ ಶಬ್ದವೇ ಹಳೇ ಜರ್ಮನ್ ಮತ್ತು ಹಳೇ ನಾರ್ಸ್‌ಭಾಷೆಗಳಲ್ಲಿ ಸ್ವಲ್ಪ ಉಚ್ಚಾರ ಭೇದದಿಂದ ಕಾಣಿಸಿಕೊಳ್ಳುತ್ತದೆ.

ಭಾಷಾಶಾಸ್ತ್ರಜ್ಞ ಪ್ರೊಫೆಸರ್ ಸುನೀತಿಕುಮಾರ ಚಟರ್ಜಿಯವರ ಪ್ರಕಾರ "ಲಿಂಬುಕ್" ಶಬ್ದವೇ ಇವೆಲ್ಲವುಗಳ ಮೂಲವಾಗಿದ್ದು ಅವು ಬಹು ಪ್ರಾಚೀನದಲ್ಲಿ ಆಗ್ನೇಯೇಶಿಯ (ಭಾರತ ವನ್ನೊಳಗೊಂಡು)ವನ್ನೆಲ್ಲ ವ್ಯಾಪಿಸಿದ್ದ ಆಸ್ಟ್ರಿಕ್ ಜನರ ಭಾಷೆಯದು.

ಈ ಶಬ್ದಗಳ ಪ್ರಸರಣದಿಂದ ಎದ್ದು ಕಾಣುವ ಮತ್ತೊಂದು ವಿಷಯವೆಂದರೆ ಪೂರ್ವ ಪಶ್ಚಿಮಗಳ ನಡುವೆ ಮಧ್ಯವರ್ತಿಗಳಾದ ಅರಬರ ಪಾತ್ರ.

★

"ಕಿತ್ತಳೆ"ಯೆಂದು ಈ ಲೇಖನವನ್ನು ಪ್ರಾರಂಭಿಸಿದೆ. ಈ ಶಬ್ದವನ್ನು "ಕಿರಿದು+ಈಳೆ" ಯೆಂದು ವೈಯಾಕರಣರು ಪದವಿಂಗಡಣೆ ಮಾಡುತ್ತಾರೆ. ಕಿತ್ತೀಳೆಯೆಂಬುದು ಕಾಲಾಂತರದಲ್ಲಿ ಸವೆದು ಕಿತ್ತಳೆಯಾಯಿತು. ಸಣ್ಣ ಈಳೆಯೆನ್ನುವಾಗ ಈಳೆಯೆಂಬುದು ತೊಳೆ ತೊಳೆಯಾಗಿ ಬಿಡಿಸಲು ಬರುವ ಕಾಯಿ ಅಥವಾ ಹಣ್ಣೆಂದು ಅರ್ಥವಾಗುತ್ತದೆ. ಹೀಗೆ "ಕೀರೀಳೆ"ಯಂತೆ (ಕಿರಿದು+ಈಳೆ) "ದೊಡ್ಡೀಳೆ", "ಕಂಚೀಳೆ" ಇತ್ಯಾದಿಗಳು ರೂಪುಗೊಂಡಿವೆ. ಆದರೆ "ಈಳೆ ಯ" ಮೂಲ ಎಲ್ಲಿ ಎಂಬುದು ದುರೂಹ್ಯವಾಗಿದೆ. ಇದಕ್ಕೆ ತೆಲಗು (ಈಡ) ಹೊರತು ಬೇರೆ ದ್ರಾವಿಡ ಭಾಷೆಗಳಲ್ಲಿ ಜ್ಞಾತಿಪದಗಳು ಸಿಕ್ಕಿಲ್ಲ. ತದ್ವಿಪರೀತವಾಗಿ ಮರಾಠಿಯಲ್ಲಿ "ಈಡ್" ಎಂಬ ಡ ಕಾರಾಂತ ರೂಪದಲ್ಲಿ ಅದು ಕಾಣಿಸುತ್ತದೆ. "ಪೇರೀಳೆ"ಯೆಂಬುದೇ ಸವೆದು "ಪೇರಳೆ" "ಪೇರಲ್", "ಪೇರಲು"(ಸೀಬೆ) ಆಗಿದ್ದರೆ "ಈಳೆ" ತೊಳೆತೊಳೆಯಾದ ಕಾಯಿ ಯೆಂದು ಭಾವಿಸುವುದೂ ಚಿಂತ್ಯವಾಗುತ್ತದೆ. ಕೇವಲ ಹುಳಿ ಸಿಹಿ ಬೆರೆತ ರುಚಿಯ ಫಲವೆಂದಷ್ಟೇ ಊಹಿಸಬೇಕಾಗುತ್ತದೆ.

ಹಾಗೆಯೇ ಈ ಜಾತಿಗೆ ಸೇರಿದ ದೊಡ್ಡ ಕಾಯಿಯಾದ "ಕಂಚಿ" ಅಥವಾ "ಕಂಚೀಳೆ"ಯ ಮೂಲವೂ ಸ್ವಾರಸ್ಯವಾದ ಊಹಾಪೋಹಕ್ಕೆ ಎಡೆ ಕೊಡುತ್ತದೆ. ಕಂಚಿ ಎಲ್ಲರಿಗೂ ಪರಿಚಿತ. ಇದರಲ್ಲಿ ಸಿಹಿ, ಕಡು ಹುಳಿ ಜಾತಿಗಳುಂಟು. ಸಿಹಿ ಜಾತಿಯನ್ನು ಕೆಲವು ಪ್ರದೇಶಗಳಲ್ಲಿ "ಸಕ್ಕರೆ ಕಂಚಿ" ಎನ್ನುತ್ತಾರೆ. ಹುಳಿ ಜಾತಿ ಉಪ್ಪಿನ ಕಾಯಿ, ಕಲಸನ್ನ ಮೊದಲಾದವುಗಳಲ್ಲಿ ಉಪಯೋಗ ಬೀಳುತ್ತದೆ. ಇವುಗಳಿಗೆ ಕೆಲವೆಡೆ "ದೊಡ್ಡಳೆ" (=ದೊಡ್ಡ ಈಳೆ) ಎಂದು ಹೆಸರುಂಟು. ಆದರೆ "ಕಂಚಿ" ಎಂಬ ಹೆಸರಿನ ಅರ್ಥವೇನು ? ಇದಕ್ಕೂ ಇತರ ಭಾಷೆಗಳಲ್ಲಿ ಜ್ಞಾತಿ ಪದಗಳು (ತುಳು ಹೊರತು) ಸಿಗುವುದಿಲ್ಲ. ಒಂದು ಧಾರ್ಷ್ಟ್ಯದ ಊಹೆಯಿದು: ಸಂಸ್ಕೃತದಲ್ಲಿ "ಕಂಚುಕ" ಪದವಿದೆ. ಮೈಗೆ ಒತ್ತಾಗಿ ತೊಟ್ಟುಕೊಳ್ಳುವ ಕುಪ್ಪುಸದಂಥ ಅಂಗಿ ಅಥವಾ ನಿಲುವಂಗಿಯೆಂ ಬುದು ಅದರ ಅರ್ಥ. ಈಳೆಯ ಜಾತಿಯ ಹಣುಣಾಗಳಿಗೆ ಕುಪ್ಪುಸದಂಥ ಗಟ್ಟಿಯಾದ ಸಿಪ್ಪೆಯಿರುವುದರಿಂದಲೇ ಅದು "ಕಂಚಿಯೇ"? ಅಥವಾ ಈ ತರಹದ ಸಿಪ್ಪೆಯನ್ನು ಹೋಲುವು ದರಿಂದಲೇ ಕುಪ್ಪಸಕ್ಕೆ "ಕಂಚುಕ" ಮತ್ತು ಅದನ್ನು ತೊಡುವ ಅರಮನೆಯ ಅಧಿಕಾರಿಗೆ "ಕುಂಚುಕಿ"ಯೆಂಬ ಹೆಸರೆ ? ಬಹುಶ: ಮೊದಲಿನದೇ ಸರಿ. ಯಾಕೆಂದರೆ "ಕಟ್ಟು" ಎಂಬರ್ಥದ "ಕಂಚ್" ಧಾತು ಸಂಸ್ಕೃತದಲ್ಲಿದೆ. ಅದಕ್ಕೆ ಲ್ಯಾಟಿನ್ನಿನಲ್ಲಿ ಜ್ಞಾತಿ ಪದ (Cingere) ಇದೆಯೆಂದು ಮೋನಿಯರ್ ವಿಲಯಮ್ಸ್ ದಾಖಲಿಸಿದ್ದಾನೆ. ಮೇಲಾಗಿ ಹಾವಿನಪರೆಗೂ ಕಂಚುಕ ಎನ್ನುವು ದುಂಟು.

ಪಾವೆಂ.

ತತ್ವಜ್ಞಾನ

ಸಾವಿನಲ್ಲಿ

ಬದುಕಿನ ಬೆಳಕು

ಕಂಡವರು

ಬೇರೆಯವರಿಗೆನೀತಿ ಹೇಳುವಾಗ ಸತ್ಯ, ಒಳ್ಳೆಯತನ, ಧರ್ಮ ಮುಂತಾದ ಪದಗಳನ್ನು ನಾವೆಲ್ಲ ಧಾರಾಳವಾಗಿ ಬಳಸುತ್ತೇವೆ. ನಮಗೇ ಸಣ್ಣ ಸಮಸ್ಯೆ ಎದುರಾದಾಗ ಹೊಂದಾಣಿಕೆಯ ದಾರಿಗೆ ಇಳಿದುಬಿಡುತ್ತೇವೆ. ಏಕೆ? ಸಾಧ್ಯವಾದಷ್ಟೂ ಸುಖವಾಗಿರುವುದು ನಮ್ಮ ಬಯಕೆ. 'ಸರ್ವೇ ಜನಾ: ಸುಖಿನೋ ಭವಂತು' ಎಂದು ಹರಸುವುದು ಪ್ರೇಮದ ದ್ಯೋತಕ. ಇದು ಉಳಿಮೆಯ ಹೋರಾಟವೂ ಕೂಡ.

ಆದರೆ ಧರ್ಮವೆನ್ನುವುದು ದೊಡ್ಡದು. ಅದಕ್ಕೆ ತನ್ನನ್ನು ಒಪ್ಪಿಸಿಕೊಳ್ಳುವುದೇ ತನ್ನನ್ನು ಉಳಿಸಿಕೊಳ್ಳುವುದಕ್ಕಿಂತ ಮೇಲಾದದ್ದು ಎಂದು ಭಾವಿಸುವವರೂ ಇದ್ದಾರೆ.ತನ್ನ ಸುಖಕ್ಕಿಂತಲೂ ಹೆಚ್ಚಾಗಿರುವ ಈ ಇದು ಏನು? ಜೀವನದ ಅನಿತ್ಯತೆಯ ಮಧ್ಯೆ ನಿತ್ಯವಾಗಿಸುವುದು, ಸತ್ಯವಾಗಿರುವುದು ಸಾಪೇಕ್ಷವಾದದ್ದೋ? ಮನುಷ್ಯ ಒಳ್ಳೆಯವ, ನೀತಿವಂತ ಎನ್ನುವುದನ್ನು ಅಲಂಕಾರಿಕವಾಗಿ ಬಳಸುವುದನ್ನು ಬಿಟ್ಟು ಸಾಪೇಕ್ಷವಾಗಿರುವ ಸತ್ಯ, ನೀತಿಗಳ ಮಧ್ಯೆ ಈ ಒಳ್ಳೆಯತನ ಆತ್ಯಂತಿಕವಾಗಿರುವುದೆಂದು ಸ್ಥಾಪಿಸುವುದು ಹೇಗೆ? ಸೋಫಿಸ್ಟರು ಮನುಷ್ಯನೇ ಎಲ್ಲದಕ್ಕೂ ಪ್ರಮಾಣ ಎನ್ನುತ್ತಾರೆ. (ತನ್ನ ಜೀವನದಲ್ಲೇ ಇದನ್ನು ಸ್ಥಾಪಿಸಿದ ಸಾಕ್ರಟೀಸನೇ ಈ ಜ್ಞಾನಿಗಳಲ್ಲಿ ಕೊನೆಯವ). ಉಳಿದವರು ಸತ್ಯ, ಜ್ಞಾನ, ನೀತಿಗಳು ಸ್ವತಂತ್ರವಾದ ಗುರಿ, ಜೀವನವು ಅವನ್ನು ತಲುಪುವ ಮಾರ್ಗ ಎಂದು ಹೊರಟು, ಹೊಂದಾಣಿಕೆಯ ಹಾದಿ ತೋರಿಸಿದರು; ದೇವರನ್ನು ಮಾನವನಿಂದ ಬೇರೆಯಾಗಿಟ್ಟರು. ತತ್ವಜ್ಞಾನವು ನಿಜ ಜೀವನದಿಂದ ಬೇರೆಯಾಯಿತು. ಬದುಕಿನ ಬೆಳಕನ್ನು ಸ್ವಂತ ಸಾವಿನಲ್ಲಿ ಕಂಡು, ತತ್ವವನ್ನು ಬಾಳಿದ ಎರಡು ಪ್ರಸಂಗಗಳನ್ನು ಗಮನಿಸೋಣ:

ಗ್ರೀಕರು ಜೀವನದ ಅತ್ಯುನ್ನತಿ (excellence)ಗಾಗಿ ಹೋರಾಡುತ್ತಿದ್ದರು. ಒಳ್ಳೆಯತನ, ನೀತಿ ಮುಂತಾದವಕ್ಕಲ್ಲ. ಈ ವಿಚಾರವನ್ನು ಕುರಿತು ರಾಬರ್ಟ್ ಪಿರ್ಸಿಗನು ಒಂದು ಉದಾಹರಣೆ ಕೊಡುತ್ತಾನೆ. ಟ್ರಾಯ್ ಸೋಲಿನ ಕತೆಯಾದ ಇಲಿಯಡ್‌ನಲ್ಲಿ ನಾಯಕ ಹೆಕ್ಟರಿನ

ಪತ್ನಿ ಎಂದ್ರೋಮಾಚೆ ಗೋಪುರದ ರಕ್ಷಣೆಯಲ್ಲಿ ಹೋರಲು ಗಂಡನನ್ನು ಬೇಡುತ್ತಾಳೆ. ತನ್ನ ತಂದೆಯ ಸಾವನ್ನೂ, ಏಳು ಮಂದಿ ವೀರರಾದ ತನ್ನ ಸಹೋದರರು ಒಂದೇ ದಿನ ಸತ್ತದ್ದನ್ನ, ತಾಯಿಯನ್ನು ಶತ್ರುಗಳು ಹಿಡಿದೊಯ್ದುದನ್ನ ನೆನಪಿಸಿ "ನಿನ್ನ ಶಕ್ತಿಯೇ ನಿನ್ನ ನಾಶಕ್ಕೆ ಕಾರಣವಾದೀತು. ನಿನಗೆ ನಿನ್ನ ಪುಟ್ಟಮಗು, ದುಃಖಿ ಹೆಂಡತಿಯ ಮೇಲೆ ಕನಿಕರವಿಲ್ಲ-ಅವಳು ವಿಧವೆಯಾಗುವುದರಲ್ಲಿದ್ದಾಳೆ. ಅಖಿಯನರು ಬೇಗದಲ್ಲೆ ನಿನ್ನನ್ನು ಕೊಲ್ಲುವರು. ನನಗೆ ಉಳಿದಿರುವ ನಿನ್ನನ್ನೂ ಕಳೆದುಕೊಂಡರೆ ನಾನೂ ಸಾಯುವುದೇ ಮೇಲು ಎಂದಾಗುತ್ತದೆ," ಎಂದು ಹಲುಬುತ್ತಾಳೆ.

ಹೆಕ್ಟರ್ ಉತ್ತರಿಸುತ್ತಾನೆ, "ಪ್ರಿಯತಮೆ, ಈ ರೀತಿ ನನ್ನ ಹೃದಯವನ್ನು ನುಡಿಸಬೇಡ. ನನ್ನ ಕೊನೆಗಳಿಗೆ ಬರುವ ತನಕ ಯಾರೇನೂ ಮಾಡಲಾರರು. ಅಂತ್ಯ ಬಂದಾಗ ವೀರನಾಗಲಿ ಹೇಡಿಯಾಗಲಿ ತಪ್ಪಿಸಲಾರ. ನೀನು ನಿನ್ನ ಮನೆಗೆ ಹೋಗು, ಮನೆಯ ಗೃಹಕೃತ್ಯಗಳ ಬಗೆಗೆ ಜಾಗ್ರತೆ ವಹಿಸು.

"ನೀನು ಹೇಳಿದಂತಹ ವಿಚಾರಗಳು ನನಗೆ ದೂರ, ಹೇಡಿಯಾಗಿ ಯುದ್ಧ ವಿಮುಖನಾಗಲಾರೆ. ಆದರೂ ಆ ದಿನ ಬರುವುದೆಂದು ನನ್ನ ಅಂತರಾಳ ನುಡಿಯುತ್ತಿದೆ. ಒಂದು ಸಾಮಾನ್ಯ ನಾಶದಲ್ಲಿ ಪ್ರಿಯಾಮ್, ಅವನ ಸುತರು, ಟ್ರಾಯ್ ನಗರ ಎಲ್ಲ ನಿರ್ನಾಮವಾಗುವುದು. ಆದರೆ ಅದಾವುದೂ ನನ್ನ ಮನಸ್ಸನ್ನು ತಟ್ಟುತ್ತಿಲ್ಲ. ಸದಾ ನಿನ್ನ ಕುರಿತಾದ ಆಲೋಚನೆಯೇ ಕಾಡುತ್ತಿದೆ. ನಿನ್ನ ಸ್ವಾತಂತ್ರ್ಯದ ದಿನಗಳು ಮುಗಿದು ಕಂಚು ಕವಚದ ಗ್ರೀಕನೊಬ್ಬ ಅಳುತ್ತಿರುವ ನಿನ್ನನ್ನು ಹೊತ್ತೊಯ್ಯುವನು. ಅನಂತರ ನಿನ್ನ ಇಚ್ಛೆಗೆ ವಿರುದ್ಧವಾಗಿ ವಿಧಿಯ ಒತ್ತಾಯದಿಂದ ಆರ್ಗಾಸ್ ರಾಜ್ಯದ ಒಡತಿಯೊಬ್ಬಳ ಮಗ್ಗದಲ್ಲಿ ನೇಯುತ್ತಲೋ, ಮಸೀಸಸ್ ಅಥವಾ ಹೈಪರ್ಷಿಯಾದಲ್ಲಿನ ಒಡತಿಗಾಗಿ ನೀರು ಹೊರುತ್ತಲೋ ಇರುವಿ.

ಎಚ್.ಪಾಂಡುರಂಗ ವಿಠಲ

ನಿನ್ನ ಅಳುವನ್ನು ನೋಡಿದ ಯಾರಾದರೊಬ್ಬರು ಇವಳು ಹೆಕ್ಟರಿನ ಮಡದಿ! ಇಲಿಯನ್ನದ ಸುತ್ತ ಟ್ರೋಜನ್ನರು ಹೋರಾಡಿದಾಗ ಆತ ಆ ಯುದ್ಧದಲ್ಲಿ ವೀರಶ್ರೇಷ್ಠನಾಗಿದ್ದ!" ಎಂದು ನುಡಿದಾಗ ನಿನ್ನ ದುಃಖ ಹೊಸದಾಗಿ ಮರುಕಳಿಸುವುದು. ಈಗ ಅಂಥ ಗಂಡನಿಲ್ಲದೆ, ಗುಲಾಮಗಿರಿಯ ವಿರುದ್ಧ ಹೋರಾಡಲು ಅಸಾಧ್ಯವಾಗಿಬಿಟ್ಟಿದೆ. ನಿನ್ನ ಕೂಗುಗಳನ್ನು ಕೇಳುವ ಮೊದಲೇ, ನೀನು ಹಿಂಸೆಗೊಳಗಾದದ್ದನ್ನು ನೋಡುವ ಮೊದಲೇ ನಾನು ಸತ್ತು, ನನ್ನ ಸಮಾಧಿಯ ಮೇಲೆ ಮಣ್ಣಿನ ಗುಡ್ಡೆ ಹಾಕಿರಲಿ!"

ಕಾಂತಿಯಿಂದ ಬೆಳಗುವ ಹೆಕ್ಟರ್ ಹೀಗೆ ನುಡಿದು ಮಗುವನ್ನೆತ್ತಿಕೊಳ್ಳಲು ಕೈಚಾಚಿದ. ತಂದೆಯ ಕಂಚಿನ ಕಿರೀಟದ ಹೊಳಪು, ಅದರ ಮಧ್ಯೆ ತೂಗಾಡುತ್ತಿದ್ದ ಕುದುರೆ ಕೂದಲು ಜೊಂಪೆಯನ್ನು ಕಂಡು ಮಗು ಬೆದರಿ, ಕಿರುಚುತ್ತ ಉನ್ನತ ಪಕ್ಷದ ದಾದಿಯ ಎದೆಯಲ್ಲಿ ಅಡಗಿತು. ಅದರ ತಂದೆ ಗಟ್ಟಿಯಾಗಿ ನಕ್ಕ, ಸಿರಿವಂತ ತಾಯಿಯೂ ಕಣ್ಣೀರಲ್ಲಿ ನಕ್ಕಳು. ಅವನು ತಕ್ಷಣ ತನ್ನ ಕಿರೀಟವನ್ನು ಎತ್ತಿ, ನೆಲದ ಮೇಲೆ ಇಟ್ಟು, ಮಗುವನ್ನು ಮುತ್ತಿಟ್ಟು, ಮುದ್ದಾಡಿ, ದೇವ ಜೂವಸ್ ಹಾಗೂ ಇತರ ದೇವತೆಗಳನ್ನು ಪ್ರಾರ್ಥಿಸಿದ: "ಜೂವಸ್ ಮತ್ತು ಇತರ ದೇವತೆಗಳಿರಾ, ನಿಮ್ಮ ವರದಿಂದ ಈ ಕಂದನೂ ನನ್ನ ಹಾಗೆಯೇ ಟ್ರೋಜನ್ನರಲ್ಲಿ ಕೀರ್ತಿವಂತನೂ, ಶಕ್ತಿಶಾಲಿಯೂ ಆಗಿ, ಇಲಿಯನ್ನಿನಲ್ಲಿ ರಾಜ್ಯವಾಳಲಿ. ಯುದ್ಧದಿಂದ ಇವನು ಹಿಂದಿರುಗುವಾಗ ಜನರೆಲ್ಲ 'ಈತನು ತನ್ನ ತಂದೆಗಿಂತಲೂ ಉತ್ತಮ' ಎನ್ನುವಂತಾಗಲಿ."

ದೇವರು ಕೊಟ್ಟದ್ದರಲ್ಲಿ, ದೂರದೆ, ಸಂತೃಪ್ತಿಪಡುತ್ತಾ ಜೀವನದ ಎಲ್ಲ ರಂಗಗಳಲ್ಲಿಯೂ ಉನ್ನತಿಯನ್ನು ಸಾಧಿಸುವವ, ಗ್ರೀಕ್ ನಾಯಕ. ಮರ್ಯಾದಾ ಪುರುಷೋತ್ತಮನಾಗಬಯಸುವವ. ತನ್ನ, ಹೆಂಡತಿ ಮಕ್ಕಳ ದಾರುಣ ಭವಿಷ್ಯ ಗೊತ್ತಿದ್ದರೂ ಹೆಕ್ಟರ್ ಯುದ್ಧಕ್ಕೆ ತೆರಳುವುದು ಹೇಗೆ? ಅವನ ಹೆಂಡತಿ ತನ್ನ ದು:ಖವನ್ನು ನುಂಗಿಕೊಂಡದ್ದು ಹೇಗೆ?

ವ್ಯಕ್ತಿಗತ ಸ್ವಾರ್ಥವೇ ಅತ್ಯುನ್ನತ ಸ್ಥಾನವನ್ನು ಹೊಂದಿದ ಆಧುನಿಕ ('ವ್ಯಾಪಾರಿ') ಸಮಾಜವನ್ನು ವಿಮರ್ಶಿಸುತ್ತ ಥೋರೋ "You never gain something but that you lose something" ಎಂಬುದನ್ನು ಗಮನಿಸಿ; ಪ್ರತಿಕ್ಷಣವೂ ನಾವು ಬಾಳುವುದು "ಮುಂದಿನ" ಯಾವುದೋ ಸಂದರ್ಭಕ್ಕಾಗಿ. ಮೂಲಂಗಿ ಆಸೆಗೆ ಒಂಟೆ ನಡೆದಂತೆ. ಬಾಳು ಈಕ್ಷಣದ ಅತ್ಯುನ್ನತಿಗಾಗಿ ಇಲ್ಲ! ಭವಿಷ್ಯದ ಆಸೆ ಕೊಕ್ಕೆಯಂತೆ ನಮ್ಮನ್ನು ನಿರಂತರ, ಪ್ರತಿಕ್ಷಣ ಎಳೆಯುವುದನ್ನು ನಾವೇ ಗಮನಿಸಿಕೊಳ್ಳಬಹುದು! ಇನ್ನೊಬ್ಬರ ಕಣ್ಣಲ್ಲಿ ನಾವು ಹೇಗೆ ಎಂದು ಅಳೆದುಕೊಳ್ಳಬೇಕು? ಅವರ ಮನಸ್ಸಿನಲ್ಲಿ ಏನಿದೆ ಎಂದು ಪರಿಭಾವಿಸುವಾಗ, ನಾವೇನೂ ವಾಸ್ತವವಾಗಿ ನೋಡುತ್ತಿರುತ್ತೇವೊ ಅದನ್ನು ನಮ್ಮ ಮನಸ್ಸು ತಿರುಚುತ್ತದೆ. ಮಾನವ ಸಂಬಂಧಗಳು ಬರೀ ಮಾತುಗಳಿಂದಾದ ಭ್ರಮೆ. ತಾನು ಏನಾಗಿದ್ದೇನೆ ಎಂದು ಆ ಕ್ಷಣದಲ್ಲಿ ಅಳೆದುಕೊಂಡು ಉನ್ನತಿಗಾಗಿ ಬಾಳುವ ಗ್ರೀಕ್ ವೀರ ನಮ್ಮ ಮೆಚ್ಚುಗೆಗೆ - ನಮಗೇ ಗೊತ್ತಿಲ್ಲದಂತೆ - ಪಾತ್ರನಾಗುತ್ತಾನೆ. ಅವನ ಕರ್ತವ್ಯ ಸಮಾಜಕ್ಕಾಗಿಯಲ್ಲ, ಇತರರಿಗಾಗಿಯಲ್ಲ, ತನಗೇ ಎಲ್ಲ ಕ್ಷೇತ್ರಗಳಲ್ಲೂ ಪರಿಣತಿ ಹೊಂದುವುದು ಅವನ ಜೀವನ, ಅವನ "ಸುಖ".

ನಮ್ಮ ಪುರಾತನ ಪ್ರಸಂಗವೊಂದನ್ನು ನೋಡೋಣ. ಭಾರತವನ್ನು "ಕರ್ಣರಸಾಯನವಾಗಿ ಕಂಡ ಪಂಪ, ಕುಮಾರವ್ಯಾಸರು ಕೃಷ್ಣನು ಕರ್ಣನನ್ನು ಒಡೆಯುವ ಪ್ರಸಂಗವನ್ನು ಹೃದಯಂಗಮವಾಗಿ ಚಿತ್ರಿಸುತ್ತಾರೆ:

"ಎನಲು ಕರ್ಣನ ದೃಢವ ಕಂಡನು
ಮನದೊಳುತ್ಸಾಹಿಸಿದನಾದೊಡೆ
ಮನುಜರ್ರೈವರ ಹದನು ನಿನ್ನದು ಬಲುಹ ಮಾಡಿದೊಡೆ
ಮನಕೆ ಖತಿಯಹುದರುಹದಿದ್ದೊಡೆ
ಯೆನಗೆ ಗುಣವಲ್ಲೆಂಬ ಕಾರಣ
ವಿಲಿತನಾನರುಹಿದೆನು ನೀಂ ಸುಖಿಯಾಗು ಹೋಗೆಂದ."

ಪಂಪನ ಕರ್ಣ ನೆತ್ತಮನಾಡಿ ಭಾನುಮತಿ ಸೋತಾಗ ಮೈಮರೆತು ಪಣವಾದ ಮುತ್ತಿನ ಹಾರಕ್ಕೆ ಕೈಹಾಕಿ ಎಳೆಯುತ್ತಿರುವಾಗ ಬಂದ ದುರ್ಯೋಧನ ಸಂಶಯಪಡದೆ, ಸಿಟ್ಟುಗೊಳ್ಳದೆ, "ಕರ್ಣನಿಗೆ ಉದುರಿದ್ದ ಮುತ್ತುಗಳನ್ನು ಆಯ್ದು ಕೊಡಲೆ?" ಎಂದ ಸ್ನೇಹವನ್ನು ನೆನಪಿಸಿಕೊಳ್ಳುತ್ತಾನೆ. ಕುಮಾರವ್ಯಾಸನ ವಿವರಣೆ ಇನ್ನೂಮೇಲು. ಕೌರವ ದಾತಾರ, ಅವನ ಒಲವು ತಪ್ಪಿದರೆ, ಆಪ್ತರೇ ಇಲ್ಲ. ತನ್ನ ವ್ಯಕ್ತಿತ್ವವನ್ನೇ ರೂಪಿಸಿದವನನ್ನು ಬಿಡಲಾರ. ಯುದ್ಧಮಾಡಲು ಹೊರಟರೆ ಇದುರಿನವರು ಸಹೋದರರು, ಕೊಲ್ಲದಿದ್ದರೆ ಕೌರವನಿಗೆ ಅವನಿಯೊಳು ಹೊಗಲಿಲ್ಲ. ಭೇದದಲ್ಲಿ ಹೊಕ್ಕಿರಿದನಲ್ಲ ಎಂದು ಚಿತ್ತಗ್ಲಾನಿಗೆ ಒಳಗಾಗುತ್ತಾನೆ. 'ನಿನ್ನ ಅಪದೆಸೆಯ ಬಯಸುವವನಲ್ಲ ನಾನು' ಎಂದ ಕೃಷ್ಣ.

ಮೇಲೆ ಉದಾಹರಿಸಿದ ಪದ್ಯದಲ್ಲಿ ಕೃಷ್ಣನ ಮೆಚ್ಚುಗೆ ಸಂಪೂರ್ಣವಾಗಿದೆ. ಕರ್ಣನ ಸುಖ ಇರುವುದು ಅವನ ದೃಢತೆಯಲ್ಲಿ. ಹೀಗಾಗಿ ಕೃಷ್ಣ ಸುಖಿಯಾಗು, ಹೋಗೆನ್ನುವುದು ಕುಹಕವೆನಿಸಿದರೂ, ಮೆಚ್ಚಿ ಮನದಾಳದಿಂದ ಬಂದ ಮಾತೆನಿಸುತ್ತದೆ. ಹಾಗಾದರೆ ಸುಖದ ಕಲ್ಪನೆ ಏನು? ಅರ್ಜುನನಿಗೂ ಇಂಥದೆ ಬಂದು ಹತ್ಯೆಯ ಸಂಗಡ ಅರ್ಥಶೂನ್ಯತೆಯ ಭಯ ಒದಗಿದಾಗ ಆತ ದೊಡ್ಡ ದೈವಕ್ಕೆ ತನ್ನನ್ನೊಪ್ಪಿಸಿಕೊಳ್ಳುವುದರಲ್ಲಿ ("ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂವ್ರಜ") ಸುಖ

ಕಂಡದ್ದನ್ನೂ ಗೀತೆಯಲ್ಲಿ ಕಾಣುತ್ತೇವೆ. ಇನ್ನೊಬ್ಬ ಮನುಷ್ಯನಿಗೆ ತನ್ನನ್ನೊಪ್ಪಿಸಿಕೊಳ್ಳುವ, ತನ್ಮೂಲಕ ಸುಖ ಪಡೆಯುವ ಪ್ರೇಮ ಸಂಬಂಧ (ರಾಜ್ಯವನ್ನು ಕಟ್ಟಿ ಹುಚ್ಚಾಗದಿರು, ಹೃದಯವೊಂದನ್ನೊಲಿಸಿ ಸುಖ ಸಾಧಿಸು) ಎಲ್ಲ ಕಾವ್ಯಗಳ ವಸ್ತು. ಧಾನ್ಯ ತನ್ನ ಸುಖ ಮರೆತು ಮಣ್ಣಿನಲ್ಲಿ ತನ್ನನ್ನು ಒಪ್ಪಿಸಿಕೊಂಡಾಗ ತೆನೆಯಾಗುತ್ತದೆ-ತ್ಯಾಗೇನೈಕೇನ ಅಮೃತತ್ವಮಾನುಷು.

ಆದರೆ ಸುಖದ ಇವೆರಡೂ ಮಾರ್ಗಗಳನ್ನೂ - ಮಾನವನಿಗಾಗಲಿ, ದೇವನಿಗಾಗಲಿ ತನ್ನನ್ನು ಒಪ್ಪಿಸುವುದು - ಬಿಟ್ಟು ತನ್ನ ಸ್ವಂತ ವ್ಯಕ್ತಿತ್ವವನ್ನು ಮರೆಯುವ ಮೂಲಕವಾಗಿ ಕರ್ಣ ಎಲ್ಲರ ಮನಸ್ಸನ್ನ ಗೆಲ್ಲುತ್ತಾನೆ. ಇದನ್ನೇ ದೃಢ ಎಂದದ್ದು ಕುಮಾರವ್ಯಾಸ. ಇದು ಮತಾಂಧತೆಯಲ್ಲ, ಹಟಮಾರಿತನವಲ್ಲ. ಭವಿಷ್ಯ ಗೊತ್ತಿದ್ದೂ, ವೀರತನ, ಛಲದಿಂದ ಪಾಲಿಗೆ ಬಂದದ್ದನ್ನು ಒಪ್ಪಿ ಅತಿಶಯತೆಯನ್ನು, ಅತ್ಯುನ್ನತಿಯನ್ನು ಮರೆಯುವ ರೀತಿ. ಸಾವಿನಲ್ಲಿ ಬದುಕಿನ ಬೆಳಕನ್ನುಸಾಧಿಸುವ ಈ 'ದೃಢ' ನೈಜ ಜೀವನ ತತ್ವಜ್ಞಾನವೇ.

ಕುವೆಂಪು ಮಂಥರೆಯನ್ನು ಮಮತೆಯ ಸುಳಿಯನ್ನಾಗಿ ಬದಲಿಸಿದಾಗ, ನಾಗಚಂದ್ರ ರಾವಣನನ್ನು ವಿಧಿಯಿಂದ ಮೋಸಹೋಗುವ ನಾಯಕನನ್ನಾಗಿಸಿದಾಗ, ಕೈಲಾಸಂ ಕೀಚಕನನ್ನು ಮಹೋನ್ನತನನ್ನಾಗಿಸಿದಾಗ-ರೂಢಿಗೆ ಹೊರತಾಗಿಯೂ ಮೆಚ್ಚುವುದು ಏತಕ್ಕೆ? ಈ "ದೃಢ" ಕಂಡದ್ದಕ್ಕೆ; ಸಾವಿನ ಶೂನ್ಯತೆಯಲ್ಲೂ ಬೆಳಕಿನ ಕಿರಣ ಬೀರಿ ಶಾಶ್ವತವಾಗಿ ನಿಂತದ್ದಕ್ಕೆ.

ಅಂದು 1.1.1989. ನೂತನ ವರ್ಷದ ಪ್ರಥಮ ದಿವಸ. ರವಿವಾರ, ಗಡ್ಡ ಮಾಡಿಕೊಳ್ಳ ಬಯಸಿದೆ. ಆದರೆ ಎರಡು ಸಲಕರಣೆ ನಿರುಪಯೋಗಿ ಆಗಿದ್ದು ಕಂಡುಬಂತು.

ಶೇವಿಂಗ್ ಬ್ರಶ್ ಹಾಗೂ ಶೇವಿಂಗ್ ಸಾಬೂನು, ಖರೀದಿಸಲು ಅಂಗಡಿಗೆ ಹೋದೆ. "ಜಕೇರಿ"ಯ ವ್ಯಾಪಾರ ಮಾಡಿ ಒಂದು ರೂಪಾಯಿ "ರಿಬೇಟ್" ಪಡೆದು ಅವೆರಡೂ ಸಲಕರಣೆಗಳನ್ನು ಖರೀದಿಸಿದೆ.


ಹೋಗಹೋಗುತ್ತ ಅಂಗಡಿಯವನಿಗೆ ನೂತನ ವರ್ಷದ ಶುಭಾಶಯ ಸಲ್ಲಿಸಲು ಮರೆಯಲಿಲ್ಲ. ನನ್ನ ಶುಭಾಶಯ ಕೇಳಿ ಪ್ರಸನ್ನವದನನಾಗುವುದರ ಬದಲು ಅಂಗಡಿಯವ ಪಾಪ ಹರಳೆಣ್ಣೆ ಕುಡಿದವನಂತೆ ಮುಖ ಸಿಂಡರಿಸಿದ!

"ಹಾಗೇಕೆ ಮುಖ ಕಿವುಚಿತೀರಿ?" ನಾನು ಕೇಳಿದೆ.

"ಏನು ಹೇಳಬೇಕು ರಾಯರೇ..... ಹೊಸ ವರ್ಷದ ಮೊದಲನೇ ದಿನಾ ಹಜಾಮತಿ ಸಾಮಾನು ಖರೀದಿಸಿ 'ಬೋಣಗಿ' ಮಾಡಿದಿರಿ, ಅದೂ ಜಕೇರಿ ಮಾಡಿ. ನನ್ನದೆ ಒಂದು ರೂಪಾಯಿ 'ಹಜಾಮತಿ' ಆಯ್ತು! ಇಡೀ ವರ್ಷ ಹಿಂಗ ವ್ಯಾಪಾರ ಆದ್ರ ಹ್ಯಾಂಗ ಅಂತ, ನನ್ನ ಚಿಂತೀ" ಎಂದನಾತ

"ಹಜಾಮತಿ ಸಾಮಾನು ನನಗ ಮಾಡಿಕೊಳ್ಳಲಿಕ್ಕೆ ಅಂತ ಕೊಂಡದ್ದು; ನಿನಗ ಮಾಡಲಿಕ್ಕೆ ಅಲ್ಲ ಮಹಾರಾಯ," ಅಂದಾಗ ಇಬ್ಬರೂ ಮನಸಾರೆ ನಕ್ಕು ಹೊಸ ವರ್ಷವನ್ನು ನಗುವಿನೊಂದಿಗೆ ಸ್ವಾಗತಿಸಿದೆವು. ಈ ದುಬಾರಿ ದಿನಗಳಲ್ಲಿ ನಮ್ಮಂತಹ ಬಡ, ಮಧ್ಯಮವರ್ಗದವರಿಗೆ ನಗುವೂ ದುಬಾರಿ ಅಂದಮೇಲೆ ನಗುತ್ತ ಹೊಸವರ್ಷವನ್ನು ಬರ ಮಾಡಿಕೊಳ್ಳುವದೇನು ಸಾಮಾನ್ಯವೇ?

-ವಾಸುದೇವ್.ರಾ.ಕಲಘಟಗಿ



ಸುಜಾತ ಗಣೇಶ್

ಅಮೇರಿಕದ ಕಸದ ಸಮಸ್ಯೆ

ಅಮೇರಿಕದ ಮನೆಗಳಿಂದ ಪ್ರತಿವರ್ಷ ಹೊರಬೀಳುತ್ತಿರುವ 20 ಕೋಟಿ ಟನ್ ಕಸ ಅಮೇರಿಕದ ದೊಡ್ಡ ರಾಷ್ಟ್ರೀಯ ಸಮಸ್ಯೆಯಾಗಿದೆ. ಅಲ್ಲಿ ಕಸದ ಸಮಸ್ಯೆ ಪ್ರಗತಿಯ ಕರಾಳ ಮುಖದಂತೆ ಎದ್ದು ನಿಂತಿದೆ. ಪರಿಸರ ಮಾಲಿನ್ಯ, ಪರಮಾಣು ವ್ಯರ್ಥವಸ್ತುಗಳ ಸಮಸ್ಯೆ, ಕೈಗಾರಿಕಾ ವ್ಯರ್ಥವಸ್ತುಗಳ ಸಮಸ್ಯೆಯೊಂದಿಗೆ ಈಗ ಮನೆಗಳಿಂದ ಹೊರಬೀಳುತ್ತಿರುವ ಕಸದ ರಾಶಿಯೂ ಭೂತಾಕಾರದ ಪ್ರಶ್ನೆಯಾಗಿ ಕಾಡುತ್ತಿದೆ.

ಅಮೇರಿಕದಲ್ಲಿ ವ್ಯರ್ಥವಸ್ತುಗಳನ್ನು ಈಗ ಎರಡು ವಿಧಗಳಲ್ಲಿ ವಿಲೇವಾರಿ ಮಾಡುತ್ತಿದ್ದಾರೆ. ಅಲ್ಲಲ್ಲಿ ನೆಲದಲ್ಲಿ ಮಾಡಿದ ದೊಡ್ಡ ಕುಳಿಗಳಲ್ಲಿ ಕಸವನ್ನು ಹೂಳಲಾಗುತ್ತಿದೆ ಮತ್ತು ರಾಷ್ಟ್ರದಾದ್ಯಂತ ಆಧುನಿಕ ಇನ್ಸಿನರೇಟರುಗಳನ್ನು ಉಪಯೋಗಿಸಿ ಕಸವನ್ನು ಸುಡಲಾಗುತ್ತಿದೆ.

ಶಕ್ತಿಯ ಆಗರ ಸಮಸ್ಯೆಯ ಆಗರ

ಇನ್ಸಿನರೇಟರುಗಳನ್ನು ಬಳಸಿ ವ್ಯರ್ಥ ವಸ್ತುಗಳನ್ನು ಸುಡುವುದು ಒಂದು ವಿಧದಲ್ಲಿ ಸೂಕ್ತವೆಂದು ಕಾಣುತ್ತದೆ. ಏಕೆಂದರೆ, ಕಸವನ್ನು ನೆಲದಲ್ಲಿ ಹೂಳುವುದು ಅಮೇರಿಕದ ಮಟ್ಟಿಗೆ ಸುಲಭ ಮಾರ್ಗವಲ್ಲ. 1980ರಲ್ಲಿ ಅಮೇರಿಕದಲ್ಲಿ ಕಸವನ್ನು ಹೂಳಲೇಂದೇ 10,000 ಕುಳಿಗಳನ್ನು ತೋಡಲಾಗಿತ್ತು. ಈಗಾಗಲೇ 3,500 ಕುಳಿಗಳು ಕಸದಿಂದ ತುಂಬಿ ಹೋಗಿವೆ. ಬಹುಶ: ಇನ್ನುಕೆಲವು ವರ್ಷಗಳಲ್ಲಿಯೇ ಉಳಿದೆಲ್ಲಾ ಕುಳಿಗಳು ಕಸದಿಂದ ತುಂಬಿ ಹೋಗುತ್ತವೆ! ಇವು ಆಕ್ರಮಿಸಿಕೊಂಡಿರುವ ಭೂವಿಸ್ತೀರ್ಣ ಕಡಿಮೆಯೇನೂ ಅಲ್ಲ. ಕುಳಿಗಳಿಂದ ವಿಷಾನಿಲ ಸೋರಿಕೆಯಂತಹ ದುಷ್ಪರಿಣಾಮಗಳೂ ಕಂಡುಬರುತ್ತಿದ್ದು ಪರಿಸರತಜ್ಞರ ಟೀಕೆಗೆ, ಪರಿಸರಪ್ರೇಮಿಗಳ ಆಕ್ರೋಶಕ್ಕೆ ಗುರಿಯಾಗಿವೆ. ಆದ್ದರಿಂದ ಅಮೇರಿಕದಲ್ಲಿ ಹೊಸ ಕುಳಿಗಳನ್ನು ಮಾಡುವ ಪ್ರಶ್ನೆಯೇ ಬಾರದು.

ಇನ್ಸಿನರೇಟರುಗಳ ನಿರ್ವಹಣೆ ಸುಲಭವಲ್ಲ. ಇದರಲ್ಲಿ ಕಸವನ್ನು ಸುಡುವ ಕಾರ್ಯವನ್ನು ವೈಜ್ಞಾನಿಕವಾಗಿ ಮಾಡಬೇಕು. ಒಳಬರುವ ಕಸದ ರಾಶಿಯಲ್ಲಿರುವ ಕೆಲವು ವಸ್ತುಗಳನ್ನು ಮಾತ್ರ ತೆಗೆದು ಮಿಕ್ಕವನ್ನು ಸುಡಲಾಗುತ್ತದೆ. ಆಗ ಸಿಗುವ ಶಾಖದಿಂದ ಆವಿಯನ್ನು ಮಾಡಿ ವಿದ್ಯುತ್ ಶಕ್ತಿಯನ್ನು ಪಡೆಯಲಾಗುತ್ತಿದೆ. ಈಗ ನಲವತ್ತು ಇನ್ಸಿನರೇಟರುಗಳು ಕಾರ್ಯನಿರ್ವಹಿಸುತ್ತಿದ್ದು ಮತ್ತೆ ಇನ್ನೂರನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ನ್ಯೂಯಾರ್ಕ್ ನಗರವೊಂದೇ ತನ್ನ ಪ್ರಾಂತ್ಯದಲ್ಲಿ ಐದು ಇನ್ಸಿನರೇಟರುಗಳನ್ನು

ಮುನ್ನೂರು ಕೋಟಿ ಡಾಲರುಗಳ ವೆಚ್ಚದಲ್ಲಿ ಸ್ಥಾಪಿಸಲಿದೆ.

ಇನ್ಸಿನರೇಟರಿನಿಂದ ವಿದ್ಯುತ್‌ಶಕ್ತಿ ಉತ್ಪಾದನೆಯಾಗುತ್ತಿದೆ ಎಂದ ಮಾತ್ರಕ್ಕೆ ಇದೊಂದು ಸಂತೋಷದ ಸುದ್ದಿಯೆಂದು ಅಮೇರಿಕನ್ನರಿಗೆ ಅನಿಸುತ್ತಿಲ್ಲ. ಏಕೆಂದರೆ, ಇನ್ಸಿನರೇಟರ್ ಒಂದನ್ನು ಸ್ಥಾಪಿಸುವಾಗ ಅದರ ಸುತ್ತಲಿನ ನಿವಾಸಿಗಳು ನಿರ್ದಿಷ್ಟ ಪ್ರಮಾಣದಲ್ಲಿ ಕಸವನ್ನು ಕೊಡಲೇಬೇಕೆಂಬ ಶರತ್ತಿದೆ. ಇಲ್ಲವಾದರೆ, ಇನ್ಸಿನರೇಟರಿನ ನಿರಂತರ ಕಾರ್ಯಕ್ಕೆ ಅಡ್ಡಿಯಾಗುತ್ತದೆ. ಅಕಸ್ಮಾತ್ ಒಪ್ಪಿಕೊಂಡಷ್ಟು ಪ್ರಮಾಣದಲ್ಲಿ ಕಸವನ್ನು ಕೊಡಲಾಗದಿದ್ದರೆ ಸಾರ್ವಜನಿಕರು ಇನ್ಸಿನರೇಟರ್ ಸ್ಥಾಪಿಸಿರುವ ಸಂಸ್ಥೆಗೆ ನಷ್ಟವನ್ನು ತುಂಬಿ ಕೊಡಬೇಕಾಗುತ್ತದೆ. ಅಲ್ಲದೆ ಇನ್ಸಿನರೇಟರಿನಿಂದ ಉತ್ಪತ್ತಿಯಾಗುವ ವಿದ್ಯುತ್ ಶಕ್ತಿಯನ್ನು ಸುತ್ತಲಿನ ಸಾರ್ವಜನಿಕರು ಬಳಸಿಕೊಳ್ಳಬೇಕು. ಈ ವಿದ್ಯುತ್ ಶಕ್ತಿಯ ಬೆಲೆ ಬಲು ದುಬಾರಿಯಾದರೂ ಬೇರೆ ಉಪಾಯವಿಲ್ಲ.

ಇನ್ಸಿರೇಟರು ಕಸದ ಪ್ರಮಾಣವನ್ನು ಶೇಕಡಾ ತೊಂಭತ್ತರಷ್ಟು ಮತ್ತು ತೂಕದ ಶೇಕಡಾ 75ರಷ್ಟನ್ನು ಕಡಿಮೆಮಾಡುತ್ತದೆ. ಆದರೆ ಲಕ್ಷಾಂತರ ಟನ್ ಬೂದಿ ಮಾತ್ರ ಉಳಿಯುತ್ತದೆ. ಈ ಬೂದಿಯಲ್ಲಿ ಪಾದರಸ ಮತ್ತು ಸೀಸದಂತಹ ವಿಷವಸ್ತುಗಳು ಹೆಚ್ಚಿನ ಪ್ರಮಾಣದಲ್ಲಿ ಇರುತ್ತವೆ. ಸಾಮಾನ್ಯವಾಗಿ ಬೂದಿಯನ್ನು ಆಳವಾದ ಗುಂಡಿಯಲ್ಲಿ ಹೂಳುತ್ತಾರೆ. ಇನ್ಸಿರೇಟರುಗಳ ವಿರುದ್ಧ ಅಮೇರಿಕದಲ್ಲಿ ವ್ಯಾಪಕ ಪ್ರತಿಭಟನೆ ಕಂಡುಬರುತ್ತಿದೆ. ಇವು ಗಾಳಿ ಮತ್ತು ನೀರಿನ ಮಾಲಿನ್ಯಕ್ಕೆ ಕಾರಣವಾಗುವುದಲ್ಲದೇ ಹೆಚ್ಚಿನ ಪ್ರಮಾಣದಲ್ಲಿ ಟ್ರಕ್ಕುಗಳು ಓಡಾಡುವುದರಿಂದ ಸನಿಹದ ಜನರಿಗೆ ಹಲವು ವಿಧದಲ್ಲಿ ಅನಾನುಕೂಲಗಳಾಗಿವೆ. ವ್ಯರ್ಥ ವಸ್ತುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಇರುವ ಪ್ಲಾಸ್ಟಿಕ್ಕುಗಳಿಂದ ಇನ್ನೊಂದು ಬಗೆಯ ಅಪಾಯವಿದೆ. ಇನ್ಸಿನರೇಟರಿನಲ್ಲಿ ಉಷ್ಣತೆ ಏನಾದರೂ

ವ್ಯರ್ಥವಿಜ್ಞಾನ

ಪ್ರತಿ ವರ್ಷ ಪ್ರತಿ ಅಮೇರಿಕದ ನಾಗರಿಕ 1500 ಪೌಂಡ್, ಜಪಾನಿನ ನಾಗರಿಕ 750 ಪೌಂಡ್, ಪಶ್ಚಿಮ ಜರ್ಮನಿಯ ನಾಗರಿಕ 740 ಪೌಂಡ್, ಪೋರ್ಚುಗಲ್ ನಾಗರಿಕ 330 ಪೌಂಡ್ ವ್ಯರ್ಥವಸ್ತುವನ್ನು ಹೊರಹಾಕುತ್ತಾನೆ.

ಅಮೇರಿಕದಲ್ಲಿ ಕಸವನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸಲು ತಗಲುವ ವೆಚ್ಚ ಅತಿ ಹೆಚ್ಚು. ಕೆಲವು ಕಡೆ ಕಸವನ್ನು 500 ಮೈಲು ದೂರಕ್ಕೆ ಸಾಗಿಸಬೇಕಾಗುತ್ತದೆ. ಇನ್ಸಿನರೇಟರು ಬೂದಿಯನ್ನು 70 ಮೈಲು ದೂರ ಸಾಗಿಸಬೇಕಾಗುತ್ತದೆ. ಕೆಲವು ಕಡೆಗಳಲ್ಲಿ ಕಸವನ್ನು ಸಂಗ್ರಹಿಸಿ ವಿಲೇವಾರಿ ಮಾಡಲು ಪ್ರತಿ ಮನೆಗೆ ತಗಲುವ ವಾರ್ಷಿಕ ಖರ್ಚು 400 ಡಾಲರಿಗೂ ಹೆಚ್ಚಾಗಿದೆ.

ಹಾರ್ವರ್ಡ್ ಉನ್ನತ ವ್ಯಾಸಂಗ ಮಾಡಿದ ಡಾ. ವಿಲಿಯಂ ರಾತ್ಜೆ ಒಬ್ಬ ಉತ್ಖನನಶಾಸ್ತ್ರಜ್ಞ. ಪ್ರಾಚೀನ ನಾಗರಿಕತೆಗಳ ಬಗ್ಗೆ ಸಾಕಷ್ಟು ತಲೆ ಕೆಡಿಸಿಕೊಂಡ ನಂತರ ಈಗ ಈಗಿನ ನಾಗರಿಕತೆಗಳ ಬಗ್ಗೆ ಯೋಚಿಸುತ್ತಿದ್ದಾನೆ. ಅಮೇರಿಕನ್ನರು ಹೊರ ಹಾಕುವ ಕಸದ ಬಗೆಗೆ ಇವರು ಸಂಶೋಧನೆ ನಡೆಸುತ್ತಿದ್ದಾರೆ. ಇವರು 'ವ್ಯರ್ಥವಿಜ್ಞಾನ'ದ (ಗಾರ್ಬೋಲಜಿ) ನೇತಾರರಾಗಿದ್ದಾರೆ. ರಾತ್ಜೆ ಪ್ರೊಫೆಸರ್ ಆಗಿರುವ ಅರಿಜೋನಾ ವಿಶ್ವವಿದ್ಯಾಲಯ ಈಗ 'ವ್ಯರ್ಥವಿಜ್ಞಾನ'ದ ಬಗೆಗೆ ಕೋರ್ಸುಗಳನ್ನು ಆರಂಭಿಸಿದೆ.

ನಿರ್ದಿಷ್ಟ ಮಟ್ಟಕ್ಕಿಂತ ಕೆಳಗೆ ಇಳಿದರೆ ಅರೆ ಸುಟ್ಟ ಪ್ಲಾಸ್ಟಿಕ್ ವಸ್ತುಗಳಿಂದ ಡಯಾಕ್ಸಿನ್‌ಗಳೆನ್ನುವ ವಿಷಮಯ ರಾಸಾಯನಿಕಗಳು ಬಿಡುಗಡೆಯಾಗುತ್ತವೆ.

ಕಸವನ್ನು ಸುಟ್ಟನಂತರದ ಬೂದಿ ದೊಡ್ಡ ಸಮಸ್ಯೆಯಾಗಿದೆ. ವಿಷವಸ್ತುಗಳಿರುವ ಈ ಬೂದಿ ನೆಲದಾಳದಲ್ಲಿರುವ ಅಂತರ್ಜಲವನ್ನು ಸೇರುತ್ತದೆ. ಈವರೆಗೆ ಪರಿಶುದ್ಧವಾಗಿದ್ದ ಜಲ ಮೂಲವು ಮಲಿನವಾಗುತ್ತಿದೆ ಎಂದು ಪರಿಸರವಾದಿಗಳ ದೂರು. ಅಮೇರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಸೋತ ಮೈಕೇಲ್ ದುಕಾಕಿಸ್ ಮೆಸಾಚುಸೆಟ್ಸ್ ಪ್ರಾಂತ್ಯದ ರಾಜ್ಯಪಾಲರಾಗಿದ್ದಾಗ ಪರಿಸರವಾದಿಗಳು ಬಕೆಟ್ಟುಗಳಲ್ಲಿ ಇನ್ಸಿನರೇಟರ್ ಬೂದಿಯನ್ನು ತುಂಬಿಸಿ ರಾಜ್ಯಪಾಲರ ಮನೆಯ ಮುಂದೆ ಪೇರಿಸಿಬಿಟ್ಟಿದ್ದರು.

ಪರಿಸರವಾದಿಗಳು ಅಮೇರಿಕದ ಕಸವನ್ನು ಜಪಾನಿನಲ್ಲಿ ಮಾಡುವಂತೆ ಪುನರುಪಯೋಗಕ್ಕೆ ಆಗುವಂತೆ ಪರಿವರ್ತಿಸಲು ಒತ್ತಾಯಿಸುತ್ತಿದ್ದಾರೆ. ಜಪಾನಿನಲ್ಲಿ ಮನೆಗಳಿಂದ ಮತ್ತು ವಾಣಿಜ್ಯ ಮೂಲಗಳಿಂದ ಬರುವ ಕಸದ ಅರ್ಧ ಭಾಗವನ್ನು ಮತ್ತೆ ಯಾವುದಾದರೂ ಕೆಲಸಕ್ಕೆ ಬಳಸಿಕೊಳ್ಳುತ್ತಾರೆ. ಶೇಕಡಾ 16ರಷ್ಟು ಕಸವನ್ನು ಮಾತ್ರ ಹೂಳುತ್ತಿದ್ದಾರೆ. ಉಳಿದ ಕಸವನ್ನು ಸುಡುತ್ತಾರೆ. ಜಪಾನಿನ ಜನರು ಸರಕಾರದೊಂದಿಗೆ ಎಷ್ಟರಮಟ್ಟಿಗೆ ಸಹಕರಿಸುತ್ತಿದ್ದಾರೆಂದರೆ ಅನೇಕ ಮನೆಗಳಲ್ಲಿ ಕಸವನ್ನು ಏಳು ಗುಂಪುಗಳಲ್ಲಿ ವಿಂಗಡಿಸಿ ಪ್ಯಾಕ್ ಮಾಡಿ ಇಟ್ಟಿರುತ್ತಾರೆ. ಇದರಿಂದ ವ್ಯರ್ಥ ವಸ್ತುವಿನ ಪುನರುಪಯೋಗದ ಕಾರ್ಯ ಸುಲಭವಾಗುತ್ತದೆ.

ಈ ರೀತಿಯ ಒಂದು ಕಾರ್ಯ ಅಮೇರಿಕದಲ್ಲೂ ಪ್ರಾರಂಭವಾಗಿದೆ. 'ರಿಸೋರ್ಸ್ ರಿಕವರಿ ಸಿಸ್ಟಮ್ಸ್' ಎನ್ನುವ ಸಂಸ್ಥೆ ಕಸದಿಂದ ಗಾಜು ಮತ್ತು ಲೋಹವನ್ನು ಶುದ್ಧೀಕರಿಸಿ ಮಾರುತ್ತಿದೆ. ಈ ಸಂಸ್ಥೆ ಅಮೇರಿಕದ ಅನೇಕ ಪ್ರಾಂತ್ಯಗಳಲ್ಲಿ ಶಾಖೆಗಳನ್ನು ತೆರೆಯಲು ಉದ್ದೇಶಿಸಿದೆ. (ಆಧಾರಿತ)

ಜಿಗಣೆಗಳು

ಆಯುರ್ವೇದ ಸಾಹಿತ್ಯದಲ್ಲಿ ಜಿಗಣೆಗಳ ಬಗೆಗೆ ವಿಪುಲವಾದ ಮಾಹಿತಿ ಇದೆ. ಜಿಗಣೆಗಳಿಗೆ ಸಂಸ್ಕೃತದಲ್ಲಿ ಜತಾಕಗಳೆಂದು ಹೆಸರು. ವ್ರಣ, ರಕ್ತದೋಷಗಳಲ್ಲಿ ಕೆಟ್ಟರಕ್ತ ಮತ್ತು ಕೀವನ್ನು ತೆಗೆಯಲು ಅವುಗಳನ್ನು ಬಳಸಲಾಗುತ್ತಿತ್ತು. ಆಯುರ್ವೇದ ಸಾಹಿತ್ಯದ ಪ್ರಕಾರ ಜಿಗಣೆಗಳಲ್ಲಿ ಕೃಷ್ಣಾ, ಕರ್ಬುದಾ, ಅಲಗರ್ದಾ, ಇಂದ್ರಾಯುಧ ಮತ್ತು ಗೋಚಂದನಾ ಎಂಬ ಆರು ಬಗೆಯ ವಿಷಭರಿತ ಜಿಗಣೆಗಳೂ ಕಪಿಂಗಲಾ, ಶಂಖಮುತಿ, ಮೂಷಿಕಾ, ಪುಂಡರೀತಮುಖಿ ಮತ್ತು ಸಾವರಿಕಾ ಎಂಬ ಆರು ಬಗೆಯ ವಿಷರಹಿತ ಜಿಗಣೆಗಳೂ ಇವೆ. ಹಿಂದಿನ ಕಾಲದಲ್ಲಿ ಆಯುರ್ವೇದ ಪಂಡಿತರು ಒಳ್ಳೆಯ ಮಡಿಕೆಗಳಲ್ಲಿ ಮರಳು, ಜಲಸಸ್ಯಗಳು, ಪಾಚಿ ಮುಂತಾದವನ್ನು ಹಾಕಿ ಅವುಗಳಲ್ಲಿ ವಿಷರಹಿತ ಜಿಗಣೆಗಳನ್ನು ಬೆಳೆಸುತ್ತಿದ್ದರು.

ಜಿಗಣೆಗಳು ತಮ್ಮ ದೇಹದ ತೊಂಭತ್ತುಪಟ್ಟು ರಕ್ತ ಹೀರಿ ಕೊನೆಗೆ ಕೆಳಗೆ ಬೀಳುತ್ತವೆ. ರಕ್ತ ಹೀರುವಾಗ ನಮಗೆ ನೋವಾಗುವುದಿಲ್ಲ. ರಕ್ತಸ್ರಾವವಾದಾಗ ಅದರ ಜೊಲ್ಲಿನಲ್ಲಿರುವ ಹಿರುಡಿನ್ ಎಂಬ ರಾಸಾಯನಿಕದಿಂದಾಗಿ ರಕ್ತ ಹೆಪ್ಪುಗಟ್ಟುವುದಿಲ್ಲ. ವೈದ್ಯವಿಜ್ಞಾನದಲ್ಲಿ ಕೋಲಾಹಲವೆಬ್ಬಿಸಿರುವ ಪ್ರೋಸ್ಟಾಗ್ಲಾಂಡಿನ್ ಜಿಗಣೆಯ ರಕ್ತದಲ್ಲಿದೆ. ಜಿಗಣೆಯ ಜೊಲ್ಲನ್ನು ಚಿಕಿತ್ಸೆಯಲ್ಲಿ ಬಳಸಿಕೊಳ್ಳುವ ಬಗೆಗೆ ಪ್ರಯತ್ನಗಳು ನಡೆಯುತ್ತಲಿವೆ.

–ಮುನಿಯಾಲ್ ಗಣೇಶ ಶೆಣೈ

ಬೇಟೆ

ಮೂಲ:ಮುದ್ದಾ ಸುರೇಶ್

ಅನುವಾದ: ಅಜ್ಜಂಪುರ ಜಿ. ಸೂರಿ

ಸಂಜೆ ನಾಲ್ಕೂವರೆ ಗಂಟೆ ದಾಟಿತ್ತು. ಸುಂದರವಾದ ಬಂಗಲೆ. ಬೀಚ್‌ಗೆ ಹತ್ತಿರದಲ್ಲಿತ್ತು. ಸ್ವಲ್ಪ ದೂರದಲ್ಲಿ ಮೇಲೇರಿ ಕೆಳಗಿಳಿಯುತ್ತಿದ್ದ ಅಲೆಗಳು.....ಗಾಳಿ ಆಹ್ಲಾದಕರವಾದ ವಾತಾವರಣ.....

ಆ ಮನೆಯ ಯಜಮಾನ ಕಂಟ್ರಾಕ್ಟರ್ ವೆಂಕೂನಾಯುಡು. ಮೇಲಂತಸ್ತಿನ ಓಪನ್ ಟೆರ್ರೇಸ್‌ನಲ್ಲಿ ಆರಾಮಕುರ್ಚಿಯಲ್ಲಿ ಕುಳಿತು ಆಗಾಗ ವಿಸ್ಕಿ ಸೇವಿಸುತ್ತಾ, ಪೇಪರಿನ ಕಡೆ ದೃಷ್ಟಿ ಹರಿಸುತ್ತಾ ಸಂಧ್ಯಾಸಮಯವನ್ನು ಹಾಯಾಗಿ ಕಳೆಯುತ್ತಿದ್ದ. ಟೀಪಾಯ್ ಮೇಲಿರಿಸಿದ್ದ ಟೇಪ್‌ರಿಕಾರ್ಡರಿನಿಂದ ಮೆಲುದನಿಯಲ್ಲಿ ಮಧುರವಾದ ಸಂಗೀತ ಕೇಳಿಬರುತ್ತಿತ್ತು. ತಣ್ಣನೆಯ ಗಾಳಿ...... ಸಂಗೀತ ತರಂಗಗಳು......ಮೆಲ್ಲಮೆಲ್ಲಗೆ ತಲೆಗೇರುತ್ತಿದ್ದ ವಿಸ್ಕಿಯ ಮತ್ತು......ಪ್ರತಿ ಭಾನುವಾರ ಸಂಜೆ ಒಂದು ಗಂಟೆಯವರೆಗೆ ವೆಂಕೂನಾಯ್ಡು ಅವರ ಹೆಂಡತಿ, ಮಗ ಬಾಲ್ಕನಿಗೆ ಬರುವುದಿಲ್ಲ.

ಭಾನುವಾರ ಆದೊಂದು ಗಂಟೆ ಆತ ಅಲ್ಲಿ ಏಕಾಂತದಲ್ಲಿರುತ್ತಾನೆ. ಇನ್ನುಳಿದ ಆರು ದಿನ ಕಂಟ್ರಾಕ್ಟ್ ಉದ್ಯಮದಲ್ಲಿ ಮುಳುಗಿರುತ್ತಾನೆ. ವಿಕೃತವಾದ ಸ್ವರ ಕೇಳಿ ವೆಂಕುನಾಯ್ಡು ಬೆಚ್ಚಿಬಿದ್ದು ತಲೆಯೆತ್ತಿ ನೋಡಿದ. ಎದೆ ಝಲ್ಲೆಂದಿತು. ಬಾಲ್ಕನಿಯ ರೈಲಿಂಗ್ ಮೇಲೆ ನಿಂತಿತ್ತು ಆ ಭಯಂಕರ ಪಕ್ಷಿ. ಅದು ವಿಕೃತವಾಗಿ ಕೂಗುತ್ತಿತ್ತು.....

ಅಸಹಜವಾಗಿ.....ಯಾವುದೋ ರೋಗದಿಂದ ನರಳುತ್ತಿರುವಂತೆ. ತನ್ನ ನಲವತ್ತೈದು ವರ್ಷದ ಆಯುಷ್ಯದಲ್ಲೆಂದೂ ಅಂತಹ ಪಕ್ಷಿಯನ್ನು ಕಂಡಿರಲಿಲ್ಲ ವೆಂಕೂನಾಯ್ಡು.

ಯಾವ ದೇಶದಿಂದ ಬಂದಿತ್ತೊ?

ಕೊಕ್ಕರೆಯಂಥಾ ಉದ್ದನೆಯ ಕಾಲು.... ಹದ್ದಿಗಿರುವಂತೆ ರೆಕ್ಕೆಗಳು. ರಣಹದ್ದಿಗಿರುವಂತಹ ಮೂಗು... ನರಿ ಊಳಿಡುವಂಥಾ ಕಿರುಚಾಟ. ವೆಂಕೂನಾಯ್ಡುವಿನ ಏಕಾಂತ ಭಗ್ನವಾಯಿತು.

ಪಕ್ಷಿಯ ಆಕಾರ ಆತನಲ್ಲಿ ಭಯವನ್ನುಂಟು ಮಾಡದೆ ಹೋಗಿದ್ದರೆ ಆ ಕೂಡಲೆ ಅದರ ಕುತ್ತಿಗೆ ಹಿಸುಕಿಬಿಡುತ್ತಿದ್ದ.

ಟೇಪ್‌ರಿಕಾರ್ಡರ್ ಆಫ್ ಮಾಡಿದ. ನಾಲ್ಕೈದು ನಿಮಿಷ ಸಹಿಸಿಕೊಂಡೇ ಕುಳಿತಿದ್ದ.

ಬಾಲ್ಕನಿಯ ಮೇಲಿದ್ದ ಪಕ್ಷಿ ವಿಕೃತವಾಗಿ ಅರಚುತ್ತಲೇ ಇತ್ತು. ವೆಂಕೂನಾಯ್ಡು ಪಾಲಿಗೆ ಅದೊಂದು ಬಗೆಯ ಚಿತ್ರಹಿಂಸೆಯಂತಿತ್ತು. ಪಂಚೆಮೇಲೆತ್ತಿ ಕಟ್ಟಿ ಬಿರಬಿರನೆ ಬಾಲ್ಕನಿಯಿಂದಿಳಿದು ಖಾಲಿಯಾಗಿದ್ದ ಮಗನ ರೂಮಿಗೆ ಹೋಗಿ ನಿಮಿಷ ಮಾತ್ರದಲ್ಲಿ ತಿರುಗಿ ಟೆರ್ರೇಸ್‌ಗೆ ಹಿಂದಿರುಗಿದ.

ಈಗ ಆತನ ಕೈಯಲ್ಲಿ ಬಿ ಆಕಾರದ ಚಾಟಬಿಲ್ಲು ಇತ್ತು. ವೆಂಕೂನಾಯ್ಡುವಿನ ಮಗ ಅದನ್ನು ಆಟವಾಡಲು ಬಳಸುತ್ತಿದ್ದ.

ಆ ಭಯಂಕರ ಪಕ್ಷಿ ಬಾಲ್ಕನಿ ಬಿಟ್ಟು ಕದಲಿಲ್ಲ. ಅತ್ತಿತ್ತ ತಲೆಯಾಡಿಸುತ್ತ ವಿಕೃತವಾದ ಧ್ವನಿಯನ್ನು ಹೊರಡಿಸುತ್ತಿತ್ತು. ರಬ್ಬರಿನ ಮಧ್ಯಕ್ಕೆ ಕಲ್ಲಿನ ಗೋಲಿಯನ್ನು ಕಿವಿಗಳವರೆಗೆ ಸಂಧಿಸಿ ನಂತರ ಬಿಟ್ಟ.

ವೆಂಕೂನಾಯ್ಡು ಗುರಿ ತಪ್ಪಲಿಲ್ಲ.

ಪಕ್ಷಿಯ ತಲೆಗೆ ಠಪ್ಪೆಂದು ಬಡಿಯಿತು.

ಪಕ್ಷಿ ತಲೆಕೆಳಗಾಗಿ ರಪರಪನೆ ಬಡಿದುಕೊಳ್ಳುತ್ತ ಬಾಲ್ಕನಿಯಿಂದ ಉರುಳುತ್ತಾ ಹೋಗಿ ನೆಲದಮೇಲೆ ಬಿತ್ತು.

★

ವಿಷಯ ವೆಂಕೂನಾಯ್ಡುವಿನ ಹೆಂಡತಿಗೂ ಮಗನಿಗೂ ತಿಳಿಯಿತು. ಅಷ್ಟೇ ಅಲ್ಲ, ಆಕಾಶದಲ್ಲಿ ಗಾಬರಿಯಿಂದ ಹುಡುಕಿಕೊಂಡು ಬಂದ ಎರಡು ಏರಿಯಲ್ ಫೋಟೊಗ್ರಫಿಕ್ ಕಣ್ಣುಗಳಿಗೂ ಈ ವಿಷಯ ತಿಳಿದು ಹೋಯಿತು.

ಸತ್ತು ಹೋದ ಪಕ್ಷಿಯನ್ನು ವೆಂಕೂನಾಯ್ಡು ಸಮುದ್ರಕ್ಕೆಸೆದುಬಿಟ್ಟ. ಕತ್ತಲಾಯಿತು.

ಕತ್ತಲು ಪಕ್ಷಿಕುಲವನ್ನು ಹಿಂದಕ್ಕೆ ಕಳಿಸುವ ಶತ್ರು.

★

ಮರುದಿನ ಬೆಳಿಗ್ಗೆ 10 ಗಂಟೆಯ ಸಮಯದಲ್ಲಿ ಅಷ್ಟಾಗಿ ಜನನಿಬಿಡವಲ್ಲದ ಬೀಚ್ ರಸ್ತೆಯಲ್ಲಿ ವೆಂಕೂನಾಯ್ಡು ಕಾರು ನಡೆಸುತ್ತಿದ್ದವನು ಒಂದು ವಿಚಿತ್ರ ದೃಶ್ಯವನ್ನು ಕಂಡು ಅಪ್ರತಿಭನಾದ.

ಅಂಬಾಸೆಡರ್‌ನ ವಿಂಡ್‌ಶೀಲ್ಡ್‌ನಲ್ಲಿ ಆ ದೃಶ್ಯ ಸ್ಪಷ್ಟವಾಗಿ ಕಾಣಿಸುತ್ತಿತ್ತು.

ರಸ್ತೆಯ ಪಕ್ಕದಲ್ಲೊಂದು ವಿಚಿತ್ರ ಪಕ್ಷಿ....

ಅದೇ ಅರಚುವಿಕೆ..

ಅದೇ ವಿಕೃತ ಧ್ವನಿ. ಮೃತ್ಯುದೂತನ ಕರೆಯಂತಹ ಕೂಗು.

ಕಾರು ನಿಲ್ಲಿಸಿ ಎರಡೂ ಕಡೆಯ ಗಾಜನ್ನು ಚಕಚಕನೆ ಕೆಳಗಿಳಿಸಿ ನೋಡಿದ. ವೆಂಕೂನಾಯ್ಡು ಈಗ ಕೂಗು ಕೇಳುತ್ತಿಲ್ಲ.

ದೃಶ್ಯ ಮಾತ್ರ ಕಾಣಿಸುತ್ತಿತ್ತು.

ನಿನ್ನೆ ಸತ್ತಿದ್ದು ಹೆಣ್ಣು ಪಕ್ಷಿ ಇರಬಹುದು; ಈಗ ಗಂಡು ಪಕ್ಷಿ ಎದುರಾಗಿದೆ ಎಂದುಕೊಂಡ ವೆಂಕೂನಾಯ್ಡು.

ಹತ್ತು ನಿಮಿಷಗಳಲ್ಲಿ "ವೈಜಾಗ್ ಅಮ್ಯುನಿಷನ್ ಸ್ಟೋರ್" ಮುಂದೆ ಕಾರು ನಿಂತಿತು.

ಬಂದೂಕು, ಅಮ್ಯುನಿಷನ್ ಮಾರುವ ದೊಡ್ಡ ಸಂಸ್ಥೆ ಅದು. "ಏನ್ ಬೇಕಿತ್ತು ಸಾರ್?" ಪ್ರೊಪ್ರೈಟರ್ ಷೇರ್‌ಖಾನ್ ಕೇಳಿದ. ಮೊದಲು ಫೋನ್ ಬೇಕು. ಆಮೇಲೆ ದೊಡ್ಡ ದೊಡ್ಡ ಪಕ್ಷಿಗಳನ್ನು ಬೇಟೆಯಾಡೋಕೆ ಬಂದೂಕು, ಬುಲೆಟ್ಸ್ ಬೇಕು.

"ಅಂದರ್ ಆಯಿಯೆ ಜನಾಬ್."

ಪ್ರೊಪ್ರೈಟರ್ ಗ್ಲಾಸ್ ಛೇಂಬರ್ ಕಡೆ ಹೋಗಿ ಹೆಂಡತಿಗೆ ಫೋನ್ ಮಾಡಿದ ವೆಂಕೂನಾಯ್ಡು.

"ಏನೂಂದ್ರೆ! ಇಷ್ಟು ಹೊತ್ತಿನಲ್ಲಿ ನೀವು ಯಾವಾಗಲೂ ಫೋನ್ ಮಾಡೋದಿಲ್ಲವಲ್ಲಾ!" ಗಾಬರಿಯಿಂದ ಕೇಳಿದಳು ವೆಂಕೂನಾಯ್ಡುನ ಹೆಂಡತಿ.

"ಏನಿಲ್ಲ, ಫೋನ್ ಪಕ್ಕದಲ್ಲಿಟ್ಟು ಟೆರ್ರೇಸ್ ಮೇಲೆ ಹೋಗಿ ಆಚೀಚೆ ಸರಿಯಾಗಿ ನೋಡು, ಏನಾದರೂ ನಿನಗೆ ಕಂಡು ಬಂದರೆ ನನಗೆ ಹೇಳು."

"ಆಗಲಿ."

ಒಂದೂವರೆ ನಿಮಿಷದ ನಿಶ್ಶಬ್ದದ ನಂತರ ಗಾಬರಿಗೊಂಡ ಹೆಂಡತಿಯ ಧ್ವನಿ ಕೇಳಿಸಿತು.

''ಏನೂಂದ್ರೇ! ಆ ಭಯಂಕರ ಪಕ್ಷಿ ಕಣ್ಣು ದೊಡ್ಡದು ಮಾಡಿಕೊಂಡು ಕ್ರೂರವಾಗಿ ನೋಡ್ತಿದೇರೀ.......''

ಆಯಾಸಗೊಳ್ಳುತ್ತಲೇ ಹೇಳಿದಳು ಆಕೆ.

''ಎಲ್ಲಿದೆ ಅದು?''

''ಸೀ ಫ್ಲೋರ್ ಕಡೆ. ಮೊನ್ನೆ ಸಿನಿಮಾ ಷೂಟಿಂಗ್ ನಡೆಯಿತಲ್ಲಾ, ಆ ಮನೆಯ ಎದುರಿನ ಗೋಡೆಯ ಮೇಲೆ.''

''ಡೋಂಟ್‌ವರಿ ಭಾಗ್ಯ.''

ಹೆಂಡತಿಗೆ ಧೈರ್ಯ ಹೇಳಿದ ವೆಂಕೂ ನಾಯ್ಡು.

''ಬಾಬು ಎಲ್ಲಿದ್ದಾನೆ?''

''ಇವೊತ್ತು ಸ್ಕೂಲಿಗೆ ಕಳಿಸಲಿಲ್ಲ, ಅವನಿಗೆ ಜ್ವರ.''

''ಒಳ್ಳೆ ಕೆಲಸ ಮಾಡಿದೆ. ಈಗ ನಾನು ಹೇಳಿದಂತೆ ಮಾಡು. ನಾನು ಒಂದು ಗಂಟೆಗೆ ಊಟಕ್ಕೆ ಬರುವವರೆಗೆ ಬಾಗಿಲು, ಕಿಟಕಿ ಮುಚ್ಚಿ ಇಬ್ಬರೂ ಮನೆಯಲ್ಲೇ ಇದ್ದುಬಿಡಿ. ಬಾಗಿಲು ದಾಟಿ ಪಕ್ಕದ ಮನೆ ಚಿಕ್ಕಮ್ಮನ ಮನೆಗೆ ಸುತರಾಂ ಹೋಗಕೂಡದು. ಅಂಡರ್ ಸ್ಟ್ಯಾಂಡ್?''

''ಆಗ್ಲೀರೀ. ಈ ಎರಡನೆ ಪಕ್ಷಿ ಎಲ್ಲಿಂದ ಬಂದಿರಬಹುದು? ನಮ್ಮ ಮೇಲೆ ಅದಕ್ಕೆ ರೋಷ ಇದೆ ಅಂತೀರಾ?''

''ಇಲ್ಲಸಲ್ಲದ ಭಯ ಇಟ್ಕೋಬೇಡ. ಎಲ್ಲಾ ನಮ್ಮ ಭ್ರಮೆಯಾಗಿರಬಹುದು. ಅದರ



ವಿಷಯ ನಾನು ನೋಡಿಕೊಳ್ತೀನಿ ಬಿಡು.''

''ಆಗ್ಲಿ, ಬರುವಾಗ ಎಚ್ಚರ!'' ಎಂದಳು ಭಾಗ್ಯ.

ವೆಂಕೂನಾಯ್ಡು ಆಗಲೆಂದು ಹೇಳಿ ಫೋನ್ ಕೆಳಗಿಟ್ಟ.

ಷೇರ್‌ಖಾನ್ ಪಕ್ಷಿಗಳನ್ನು ಬೇಟೆಯಾಡುವ ಬಂದೂಕುಗಳನ್ನು ಕೌಂಟರಿನ ಮೇಲಿರಿಸಿದ.

★

ಊರ ಹೊರಗಿನ ಸೇತುವೆಯ ನಿರ್ಮಾಣದ ಕೆಲಸಕಾರ್ಯಗಳನ್ನು ನೋಡಿಕೊಂಡು ಮಧ್ಯಾಹ್ನ ಒಂದು ಗಂಟೆಯ ವೇಳೆಗೆ ಸೋತು ಸಾಕಾಗಿ ಮನೆಗೆ ಬಂದ ವೆಂಕೂನಾಯ್ಡು.

ಹಿಂದಿನ ಸೀಟಿನಲ್ಲಿ ಹೊಸ ಬಂದೂಕು! ಬುಲೆಟ್ಸ್‌ಪಾಕೆಟ್ ನೋಡುವವರೆಗೆ ಅವನಿಗೆ ಆ ವಿಚಿತ್ರ ಪಕ್ಷಿಯ ನೆನಪೇ ಆಗಿರಲಿಲ್ಲ.

ತಲೆಯಲ್ಲಿ ಆಲೋಚನೆಗಳ ದಾಳಿಯಾಗುತ್ತಲೆ ಮನೆಯಕಡೆ ಅಂಬಾಸಡರ್ ವೇಗವಾಗಿ ಓಡಿಸಿದ.

ಎರಡನೆಯ ಪಕ್ಷಿ ಏಕೆ ಎದುರಾಯಿತು.?

ತನ್ನನ್ನು ಎಚ್ಚರಿಸುವುದಕ್ಕಾಗಿರಬಹುದೆ?

ಭಯ ಹುಟ್ಟಿಸುವುದಕ್ಕಿರಬಹುದೆ?

ಇಷ್ಟಕ್ಕೂ ಪಕ್ಷಿಗಳು ಛಲಸಾಧಿಸಬಲ್ಲವೆ?

ತಾನು ವಿನಾಕಾರಣ ಹೆದರಿ ಮನೆಯವರನ್ನು ಹೆದರಿಸುತ್ತಿರುವೆನೆ?

ಏನಾದರಾಗಲಿ, ಅವರಿಗೆ ಯಾವ ಕೇಡೂ ಆಗದಿದ್ದರಷ್ಟೇ ಸಾಕು. ಮನೆ ಒಂದು ಫರ್ಲಾಂಗ್ ದೂರ ಎನ್ನುವಾಗ ತಾನು ಊಹಿಸಿದ್ದಂತೆ ಆ ಪಕ್ಷಿ ವಿಂಡ್‌ಷೀಲ್ಡಿಗೆ ಅಡ್ಡವಾಗಿ ಹಾರಿತು. ವೆಂಕೂನಾಯ್ಡು ದಿಗ್ಭ್ರಾಂತನಾದ. ಕಾರಿನವೇಗವನ್ನು ತಗ್ಗಿಸಿದ.

ಆ ವಿಚಿತ್ರಪಕ್ಷಿ ಕಾರಿನಸುತ್ತಲೂ ಎರಡು ಮೂರು ಸಲ ಸುತ್ತು ಹಾಕಿತು. ರಸ್ತೆ ನಿರ್ಜನವಾಗಿತ್ತು. ಪಕ್ಷಿಯ ಉದ್ದೇಶವೇನಿರಬಹುದೆಂದಾತ ಯೋಚಿಸತೊಡಗಿದ. ಎದುರಿಸಬೇಕು!

ಕಾರನ್ನು ರಸ್ತೆಯ ಪಕ್ಕಕ್ಕೆ ತಂದು ಇಂಜನ್ ಆಫ್ ಮಾಡಿದ. ಬಂದೂಕನ್ನೂ ಬುಲೆಟ್ಸ್ ಪಾಕೇಟನ್ನು ಕೈಗೆತ್ತಿಕೊಂಡು ಒಂದೊಂದು ಬುಲೆಟ್ ಇರಿಸಿ ಹಾರಿಸಲು ಅನುಕೂಲವಾದ ಬಂದೂಕು ಅದು. ಬುಲೆಟ್ ಲೋಡ್‌ಮಾಡಿ ಕನ್ನಡಿಯ ಮೂಲಕ ಮುಂದೆ ನೋಡಿದ. ಪಕ್ಷಿ ಕಾಣಿಸಲಿಲ್ಲ.

ಬಲಗಡೆಯ ಹೊಲದಲ್ಲಿ ಬೀಚ್‌ನ ಮರಗಳು.

ವೆಂಕೂನಾಯ್ಡು ಹಠಾತ್ತನೆ ಬಾಗಿಲು ತೆರೆದು ಹೊಲದ ಮರಗಳ ಕಡೆ ಓಡತೊಡಗಿದ. ಆದರೂ ವೆಂಕೂನಾಯ್ಡುವಿನ ಪ್ರಯತ್ನ ಸಾಗಲಿಲ್ಲ. ವಿಚಿತ್ರ ಪಕ್ಷಿಯ ರೆಕ್ಕೆಗಳ ಟಪ ಟಪ....

ವೆಂಕೂನಾಯ್ಡುವಿನ ತಲೆಯ ಮೇಲೆ ಒಂದು ಗಜದಷ್ಟು ಎತ್ತರದಲ್ಲಿ ಗಾಳಿಯ ಸದ್ದು.

ವೆಂಕೂನಾಯ್ಡು ಒಂದು ಕ್ಷಣಮಾತ್ರವೂ ತಡಮಾಡಲಿಲ್ಲ. ಎದುರಾಳಿಯ ದೂರವನ್ನು ಅಂದಾಜು ಮಾಡಿಕೊಳ್ಳುತ್ತಲೇ ನೆಲದ ಕಡೆ ಬಾಗಿ, ಬಂದೂಕನ್ನು ಹಿಂದಕ್ಕೆ ತಿರುಗಿಸಿಕೊಂಡು ಪಕ್ಷಿಯ ಕಡೆಗೆ ಜೋರಾಗಿ ಗುರಿಮಾಡಿ ಬೀಸಿದ.

ಪಕ್ಷಿ ವಿಕೃತವಾಗಿ ಚೀರುತ್ತಾ ಮತ್ತೆ ಆಕಾಶದಲ್ಲಿ ಹಾರಿತು. ಇನ್ನೊಮ್ಮೆ ದಾಳಿಮಾಡಲು ಅದು ಅಂದಾಜು ಮಾಡುತ್ತಿತ್ತು. ವೆಂಕೂನಾಯ್ಡುಗೆ ಅಷ್ಟು ಸಮಯ ಸಾಕು.

ಹೊಲದಲ್ಲಿ ಕುಳಿತು ಹಾರಿ ಬರುತ್ತಿದ್ದ ಅಪಾಯವನ್ನು ಬಂದೂಕಿನ ಗುರಿಯ ಮೂಲಕ ನೋಡಿದ.

ತನ್ನ ಗುರಿ ತಪ್ಪಿಬಿಟ್ಟರೆ ಏನಾಗಬಹುದೆಂದು ನೆನೆಯುತ್ತಲೆ ಮೈನಡುಗಿತು. ಇಪ್ಪತ್ತು ಸೆಕೆಂಡುಗಳ ಅವಧಿಯಲ್ಲಿ ವೆಂಕೂನಾಯ್ಡು ಕಡೆಗೆ ಆ ವಿಚಿತ್ರ ಪಕ್ಷಿ ಕೆಳಗಿಳಿಯತೊಡಗಿತು.

ಮೂಗನ್ನು ಭಯಂಕರವಾಗಿ ಚಾಚಿ, ರೆಕ್ಕೆಗಳನ್ನು ಅಗಲಿಸಿಕೊಂಡ ರಾಕ್ಷಸಿಯಂತಿತ್ತು ಪಕ್ಷಿ.

ಟ್ರೈಗರ್ ಅದುಮಿದ.!

ಬುಲೆಟ್ ಪಕ್ಷಿಯ ಹೊಟ್ಟೆ ಸೇರಿತು.!

ಬುಲೆಟ್‌ನಿಂದ ಗಾಯಗೊಂಡರೂ ಆ

ವಿಚಿತ್ರ ಪಕ್ಷಿಯ ದಾಳಿಯ ವೇಗದಲ್ಲಿ ಯಾವ ಬದಲಾವಣೆಯೂ ಕಾಣಲಿಲ್ಲ.

ರೊಚ್ಚಿಗೆದ್ದ ಪಕ್ಷಿ ವೆಂಕೂನಾಯ್ಡುವಿನ ಮುಖದತ್ತ ತೂರಿ ಬರುತ್ತಿತ್ತು. ಬುಲೆಟ್ ಲೋಡ್ ಮಾಡುವುದಕ್ಕೆ ಸ್ವಲ್ಪವೂ ಸಮಯವಿಲ್ಲದಂತಾಯಿತು. ಬಂದೂಕನ್ನು ಉಲ್ಟಾ ತಿರುಗಿಸಿಕೊಂಡು ಮತ್ತೆ ಬೀಸಿ ಹೊಡೆದ.

ಪಕ್ಷಿಗೆ ಬಲವಾದ ಏಟು ಬಿತ್ತು. ಸತ್ತು ಹೋಯಿತು. ನಿಂತು ಆ ವಿಚಿತ್ರ ಘಟನೆಯನ್ನು ವೀಕ್ಷಿಸುತ್ತಿದ್ದ ಜನರ ಪ್ರಶ್ನೆಗಳ ದಾಳಿಯಿಂದ ತಪ್ಪಿಸಿಕೊಳ್ಳುತ್ತಾ ಪಕ್ಷಿಯ ದೇಹವನ್ನು ಡಿಕ್ಕಿಯಲ್ಲೆಸೆದು ಕೆಲವೇ ಕ್ಷಣಗಳಲ್ಲಿ ಮನೆಸೇರಿಕೊಂಡ.

ಹೆಂಡತಿಗಾಗಲಿ ಮಗನಿಗಾಗಲಿ ಯಾವ ತೊಂದರೆಯೂ ಆಗಿಲ್ಲವೆಂದು ತಿಳಿದು ಸಂತೋಷಪಟ್ಟ.

ನಡೆದ ಕತೆಯನ್ನೆಲ್ಲಾ ಕೇಳಿ ಗಂಡನ ಧೈರ್ಯ-ಸಾಹಸಕ್ಕೆ ಭಾಗ್ಯಲಕ್ಷ್ಮಿ ಉಬ್ಬಿ ಹೋದಳು.

★

ಅಕ್ಕಪಕ್ಕದವರ ಕುತೂಹಲಮಯ ಪ್ರಶ್ನೆಗಳಿಗೆ ಉತ್ತರಿಸಿ, ಭಯಂಕರವಾಗಿ ಕಾಣುತ್ತಿದ್ದ ಮೂರಡಿಯ ಅದರ ದೇಹವನ್ನು ಎಲ್ಲರಿಗೂ ತೋರಿಸಿ, ಅದು ಬೇರಾರಿಗೂ ಕಾಣದಿರಲೆಂದು ದೂರದ ಮರಳಿನ ದಿಣ್ಣೆಯಲ್ಲಿ ಗುಂಡಿತೋಡಿ ಸಮಾಧಿಮಾಡಿ ಕೈ ತೊಳೆದುಕೊಂಡಾಗ ರಾತ್ರಿಯಾಗಿತ್ತು.

★

ಬೆಳಿಗ್ಗೆ.....

ಏಳು ಗಂಟೆಯ ಸಮಯ....

ವೆಂಕೂನಾಯ್ಡು ಇನ್ನೂ ನಿದ್ದೆಮಾಡುತ್ತಲೇ ಇದ್ದ.

ಆತನ ಪತ್ನಿ ಆಗಲೆ ಸ್ನಾನಮುಗಿಸಿ ಪೂಜಾ ಮಂದಿರ ಸೇರಿದ್ದಳು.

ಹೊರಗಡೆ ವಾತಾವರಣದಲ್ಲಿ ತೀವ್ರವಾದ ಬದಲಾವಣೆಯಾಯಿತು.

ಸೂರ್ಯನಿಗೆ ಮತ್ತೇನೋ ಅಡ್ಡಬಂದಂತೆ ಬೆಳಗಿನ ಬೆಳಕು ಮಾಯವಾಗಿ ಮಬ್ಬಾಯಿತು.



ರಸ್ತೆಯಲ್ಲಿ ಓಡಾಡುತ್ತಿದ್ದವರೆಲ್ಲ ಆಕಾಶದ ಕಡೆ ನೋಡಿ ಬೆರಗಾಗಿ ಹೋದರು. ಆಮೇಲೆ ಎದೆ ಬಡಿದುಕೊಳ್ಳತೊಡಗಿದರು.

ಸಮುದ್ರದಂಚಿನಲ್ಲಿ ಪಂಡಿತನೊಬ್ಬ ಸ್ನಾನ ಮಾಡಿ, ಸೂರ್ಯಧ್ಯಾನ ಮಾಡುತ್ತಾ ಕಣ್ತೆರೆದಾಗ ಬದಲಾದ ದೃಶ್ಯ ಕಂಡು ಶಿಲಾಪ್ರತಿಮೆಯಂತೆ ನಿಂತುಬಿಟ್ಟಿದ್ದ.

ವಿಚಿತ್ರ ಪಕ್ಷಿಗಳ ಹಿಂಡು.....


ಆಕಾಶಕ್ಕೆ ಮುತ್ತಿಗೆ ಹಾಕಿದಂತೆ......

ರಾಕ್ಷಸ ಸೈನ್ಯ ಚಿತ್ರವಿಚಿತ್ರ ಧ್ವನಿಗೈಯುತ್ತಾ ಮೇಲಿನಿಂದ ಕೆಳಕ್ಕಿಳಿದು ಬರುತ್ತಿತ್ತು.

ಕೆಲವೇ ಕ್ಷಣಗಳಲ್ಲಿ.....

ವೆಂಕೂನಾಯ್ಡುವಿನ ಬೆಡ್‌ರೂಮ್ ಗ್ಲಾಸುಗಳೆಲ್ಲ ಛಳ್‌ಛಳಾರೆಂದು ಒಡೆದುಹೋದವು.

ಬೆಚ್ಚಿ ಬಿದ್ದು ಎದ್ದು ನಿಂತ. ವೆಂಕೂನಾಯ್ಡುವನ್ನು ನಾಲ್ಕೈದು ವಿಕೃತ ಪಕ್ಷಿಗಳು ಸುತ್ತುವರಿದವು.



ಕೊಕ್ಕುಗಳಿಂದ ಆತನ ಶರೀರವನ್ನು ತೂತು ತೂತು ಮಾಡತೊಡಗಿದವು. ಕಣ್ಣುಗಳಲ್ಲಿ ದಬ್ಬಣ ಚುಚ್ಚಲ್ಪಟ್ಟವನಂತೆ ಭಯಂಕರವಾಗಿ ಕಿರುಚಿಕೊಂಡ ವೆಂಕೂನಾಯ್ಡು.

ವೆಂಕೂನಾಯ್ಡು ಭಯಂಕರವಾಗಿ ಕಿರುಚಿಕೊಳ್ಳುತ್ತಲೇ ಇದ್ದ. ಗಂಡನ ಚೀರಾಟ ಕೇಳಿ ಭಾಗ್ಯಲಕ್ಷ್ಮಿ ಓಡಿಬರುವಷ್ಟರಲ್ಲಿ ಆ ರಾಕ್ಷಸೀ ಪಕ್ಷಿಗಳು ಆತನ ಕಣ್ಣುಗಳನ್ನು ಇರಿದುಬಿಟ್ಟಿದ್ದವು. ವೆಂಕೂನಾಯ್ಡುವಿನ ದೇಹ ರಕ್ತದ ಮಡುವಿನಲ್ಲಿ ಬಿದ್ದಿತ್ತು.

ವೆಂಕೂನಾಯ್ಡು ಪ್ರಜ್ಞೆಕಳೆದುಕೊಂಡ ಅರ್ಧನಿಮಿಷಕ್ಕೆ ಭಾಗ್ಯಲಕ್ಷ್ಮಿ ಕೆಳಗೆ ಕುಸಿದು ಬಿದ್ದು ಪ್ರಜ್ಞಾಹೀನಳಾದಳು.

ನೆರೆಹೊರೆಯವರು ಬರುವುದಕ್ಕೆ ಕೆಲವು ನಿಮಿಷ ಬೇಕಾಯಿತು.

ಆ ವೇಳೆಗೆ ಆಕಾಶ ಪಕ್ಷಿಗಳು ಮಾಯವಾಗಿದ್ದವು.

★

ವೆಂಕೂನಾಯ್ಡು ಕಣ್ಣಿಗೆ ಬ್ಯಾಂಡೇಜ್ ಕಟ್ಟಲ್ಪಟ್ಟು ಆಸ್ಪತ್ರೆಯ ಬೆಡ್‌ಮೇಲೆ ಅನೆಸ್ತೀಷಿಯಾ ಮತ್ತಿನ ನಿದ್ರೆಯಲ್ಲಿದ್ದಾನೆ.

ಆತನ ಹೆಂಡತಿ ಮಂಚದ ಪಕ್ಕದಲ್ಲಿ ಕುಳಿತು ರೋದಿಸುತ್ತಿದ್ದಾಳೆ.

★

ಆದೇ ಸಮಯಕ್ಕೆ ಸರಿಯಾಗಿ-

ಹೊರಗಡೆಯ ಒಂದು ಟೀಸ್ಟಾಲ್‌ನಿಂದ ರೇಡಿಯೋ ಮೂಲಕ ಕೇಳಿಬರುತ್ತಿದ್ದ ಸಿನಿಮಾ ಹಾಡುಗಳು ಹಠಾತ್ತನೆ ನಿಂತುಹೋದವು.

ಜನ ಬೇಸರದಿಂದ ರೇಡಿಯೋ ಕಡೆ ನೋಡಿದರು.

''ಇದೊಂದು ಪ್ರಕಟಣೆ.

''ಮೂರು ಅಡಿ ಎತ್ತರದ ಭಯಂಕರ ವಿಚಿತ್ರ ಪಕ್ಷಿಗಳು ಕಳೆದ ಎರಡು ದಿನಗಳಿಂದ ದೂರ ಪ್ರದೇಶದಿಂದ ನಮ್ಮ ದೇಶಕ್ಕೆ ಬಂದು ಬೇರೆ ಬೇರೆ ಪ್ರದೇಶಗಳಲ್ಲಿ ನಮ್ಮ ರಾಷ್ಟ್ರೀಯ ಪಕ್ಷಿಗಳಾದ ನವಿಲುಗಳನ್ನು ಕೊಲ್ಲುತ್ತಿರುವುದಾಗಿ ತಿಳಿದುಬಂದಿದೆ. ರಾಜ್ಯ ಸರಕಾರಗಳು ಈ ಪ್ರಮಾದದ ಬಗ್ಗೆ ಎಚ್ಚರಾಗಿರುವಂತೆ ಕೇಂದ್ರಸರಕಾರ ಕೇಳಿಕೊಂಡಿದೆ. ನವಿಲು ನಮ್ಮ ರಾಷ್ಟ್ರ ಪಕ್ಷಿ. ಇವುಗಳ ಸಂತತಿಯನ್ನು ರಕ್ಷಿಸಿಕೊಳ್ಳುವ ಹಕ್ಕು ಭಾರತದ ಪೌರರಿಗೆ ಇದೆ.

ಈ ವಿಚಿತ್ರ ಪಕ್ಷಿಗಳನ್ನು ಎದುರಿಸುವುದಕ್ಕಾಗಿ ಸರಕಾರ ಅನೇಕ ಕ್ರಮಗಳನ್ನು ಜಾರಿಗೊಳಿಸುತ್ತಾ ಪ್ರಜೆಗಳಲ್ಲಿ ಒಂದು ಮನವಿ ಮಾಡಿಕೊಳ್ಳುತ್ತದೆ.

''ಉತ್ಸಾಹಿ ಭಾರತೀಯ ಯಾರೇ ಆಗಲಿ, ಈ ವಿಚಿತ್ರ ಪಕ್ಷಿಯನ್ನು ಕಂಡ ತಕ್ಷಣ ಕೊಲ್ಲಬಹುದು.''

''ಹೀಗೆ ಬೇಟೆಯಾಡಿದವರಿಗೆ ಪ್ರತಿ ಒಂದು ಪಕ್ಷಿಗೆ ಅರಣ್ಯಇಲಾಖೆ ಒಂದು ನೂರು ರೂಪಾಯಿ ಬಹುಮಾನ ಕೊಡುತ್ತದೆ.

''ಈಗ ಈ ವಿಚಿತ್ರ ಪಕ್ಷಿಯ ರೂಪರೇಖೆಗಳನ್ನು ಕೇಳಿರಿ......''

ಟೀಸ್ಟಾಲ್‌ನ ಜನ ಆಸಕ್ತಿಯಿಂದ ಕೇಳುತ್ತಿದ್ದಾರೆ....

ದೇಶದ ಪತ್ರಿಕೆಗಳೆಲ್ಲ ಆಗಿಂದಾಗ್ಗೆ ಫ್ಲಾಷ್ ಬುಲೆಟಿನ್ಸ್ ಬಿಡುಗಡೆ ಮಾಡಿದವು.

★

ಎರಡು ಹಕ್ಕಿ: ಒಂದು ಸಂವಾದ

- ಮಾವೋ ಜೆ ಡಾಂಗ್

ರಾಕ್ ಹಕ್ಕಿ ರೆಕ್ಕೆ ಪಂಖದಂತೆ
ಹಾರುತ್ತಿವೆ ಎತ್ತರದಲ್ಲಿ ತೊಂಭತ್ತು ಸಾವಿರ ಲಿ
ಎಚ್ಚರಿಸುತ್ತಾ ಉದ್ರೇಕಿತ ಚಂಡಮಾರುತ.
ಬೆನ್ನ ಹಿಂದೆ ಆಕಾಶ ನೀಲಿ, ಅದು ನೋಡುತ್ತಿದೆ ನೆಲದತ್ತ
ಮನುಷ್ಯ ಪ್ರಪಂಚವ, ನಗರ ಮತ್ತು ಪಟ್ಟಣ ಅಳೆಯಲು.
ಸ್ವರ್ಗದ ತಳ ನೆಕ್ಕುತ್ತಿದೆ ಬಂದೂಕು ಬೆಂಕಿ,
ಬಾಂಬು ಆಳ ಗುಳಿ ತೋಡಿದೆ ನೆಲದಲ್ಲಿ.
ಭಯದಿ ಮರಗಟ್ಟಿದೆ ಪೊದೆ ಗೂಡಲ್ಲಿ ಗುಬ್ಬಿ-
''ಇದೊಂದು ಅಸ್ತವ್ಯಸ್ತ ನರಕ!
ಪಾರಾಗಿ ಇಲ್ಲಿಂದ ಓ ಹಾರಬಯಸುವೆ ನಾನು ದೂರ.''
''ಎಲ್ಲಿಗೆ, ಕೇಳಬಹುದೆ ನಾನು?''
ಮಾರುಲಿಯಿತು ಗುಬ್ಬಿ:
''ರತ್ನಖಚಿತ ಅರಮನೆಗೆ ಎಲ್‌ಫ್ಲಾಂಡ್ ಪರ್ವತದಿ,
ತಿಳಿದೆ ನಿನಗೆ ತ್ರಿಪಕ್ಷೀಯ ಒಪ್ಪಂದ
ಎರಡು ವರ್ಷವಾಯಿತು
ಪ್ರಜ್ವಲ ವಸಂತ ಪೂರ್ಣಿಮೆಯಂದು ಸಮ್ಮತಿಸಲ್ಪಟ್ಟು?
ಉಣ್ಣಲಿದೆ ಬೇಕಷ್ಟು ಅಲ್ಲಿ
ಆಲೂ ಹಬೆಯಾಡುತ್ತದೆ ಬಿಸಿಯಲ್ಲಿ
ಮಾಂಸ ಹುರಿದ ಭಕ್ಷ್ಯ ತಟ್ಟೆಯಲ್ಲಿ.''
ಸಾಕು ಮಾಡು ನಿನ್ನ ಕಾವ್ಯಮಯ ದಡ್ಡತನ!
ನೋಡು ನಿಂತಿದೆ ಜಗತ್ತು ತಲೆಕೆಳಗಾಗಿ.

ಅನುವಾದ - *ಬಂಜಗೆರೆ ಜಯಪ್ರಕಾಶ*

★ ರಾಕ್ ಹಕ್ಕಿ= ಪೂರ್ವ ದೇಶಗಳ ಪುರಾಣ ಕಲ್ಪನೆಯ ರಾಕ್ಷಸಾಕಾರದ ಹಕ್ಕಿ
★ ಲಿ= ಚೀನೀಯರ ಒಂದು ಮೈಲು

ಕರ್ನಾಟಕ

ಸ್ವಾತಂತ್ರ್ಯದ ಮೂಲ ಉದ್ದೇಶ ಸಾಕಾರಗೊಳ್ಳುತ್ತಿರುವ ನಾಡು

ತಮ್ಮ ಸರ್ವಸ್ವವನ್ನೂ ರಾಷ್ಟ್ರಕ್ಕಾಗಿ ಸಮರ್ಪಿಸಿ, ಭಾರತ ಮಾತೆಯನ್ನು ಪರಕೀಯರ ದಬ್ಬಾಳಿಕೆಯ ತುಳಿತದಿಂದ ತಪ್ಪಿಸಲು, ಕಂಕಣಬದ್ಧರಾಗಿ ದುಡಿದ, ಬಲಿದಾನಗೈದ, ವೀರಯೋಧರಿಗೆ, 42ನೇ ಸ್ವಾತಂತ್ರ್ಯೋತ್ಸವದ ಈ ಶುಭ ದಿನದಂದು ರಾಷ್ಟ್ರವು ತನ್ನ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತದೆ. ಸತ್ಯ ಅಹಿಂಸೆಗಳನ್ನೇ ಆಯುಧವನ್ನಾಗಿ ಪರಿವರ್ತಿಸಿ ಸ್ವಾತಂತ್ರ್ಯದೆಡೆ ಮುನ್ನಡೆಸಿದ ನಾಯಕ, ಆತ್ಮ ಶಕ್ತಿಯ ಚೈತನ್ಯದ ಚಿಲುಮೆ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರಿಗೆ ಭಾರತ ತನ್ನ ಗೌರವಯುಕ್ತ ಅಕ್ಕರೆಯ ಪ್ರಣಾಮಗಳನ್ನು ಸಮರ್ಪಿಸುತ್ತದೆ.

ಯಾರ ಜೀವನ ಹಾಗೂ ಕಾರ್ಯಗಳೆರಡೂ ಪ್ರತಿಯೊಬ್ಬ ಭಾರತೀಯನಿಗೂ ಮಾದರಿಯಾಗಿದೆಯೋ, ಸ್ಫೂರ್ತಿಯ ಚಿಲುಮೆಯಾಗಿದೆಯೋ ಆ ಭಾರತ ಮಾತೆಯ ಅಮೋಘ ವೀರ ರತ್ನ, ಭಾರತೀಯರ ಪ್ರೀತಿಯ ''ಚಾಚಾ ನೆಹರೂರವರ'' ಜನ್ಮ ಶತಾಬ್ದಿಯನ್ನೂ ಭಾರತವು ಆಚರಿಸುತ್ತಿದೆ.

ಈ ಚರಿತಾರ್ಹ ದಿನದಂದು ಧೃಡ ಸಂಕಲ್ಪರಾಗಿ, ಒಗ್ಗೂಡಿ ಭವ್ಯ ಕರ್ನಾಟಕ ಹಾಗೂ ಭವ್ಯ ಭಾರತ ಕಟ್ಟೋಣ ಬನ್ನಿ.

ಕರ್ನಾಟಕ ಸರ್ಕಾರ - ಜನಹಿತಕ್ಕಾಗಿ ಶ್ರಮಿಸುವ ಸರ್ಕಾರ

''ಕರ್ನಾಟಕ ವಾರ್ತೆ''


ಪುಸ್ತಕ ವಿಭಾಗ
ಠಕ್ಕರು
ಮೂಲ: ಜಾನ್ ಮಾಸ್ಟರ್ಸ್
ಸಂಗ್ರಹ: ಗೀತಾ ಮುರಲಿ
Shashidhar 89

ಅನೇಕ ಶತಮಾನಗಳಿಂದ ಭಾರತದಾದ್ಯಂತ ಠಕ್ಕರ ಹಾವಳಿ ಪ್ರಬಲವಾಗಿತ್ತು. ಇವರು ಪ್ರಯಾಣಿಕರ ಕುತ್ತಿಗೆ ಹಿಸುಕಿ ಕೊಲ್ಲುವ ಘಾತುಕ ದಾರಿಗಳ್ಳರು. ಅವರಿಗೊಂದು ವಿಶಿಷ್ಟ ಧರ್ಮಪಂಥವೂ ಇತ್ತು. ತಾವು ಕಾಳಿಯ ಸೇವಕರು, ಮಾನವರ ಕೊಲೆಗೈದರೆ ಕಾಳಿ ಪ್ರಸನ್ನಳಾಗುವಳೆಂಬ ಭಾವನೆಯಿಂದ ಬೆಳೆದವರು. ಶಕುನ ಶಿಷ್ಟಾಚಾರಗಳಲ್ಲಿ ಅವರದು ದೃಢವಾದ ನಂಬಿಕೆ. ಅವರಿಗೆ ಪ್ರತ್ಯೇಕ ರಹಸ್ಯ ಭಾಷೆ, ಗುಪ್ತಸಂಕೇತಗಳು, ಕೊಲ್ಲುವ ನಿಶ್ಚಿತ ರೀತಿನೀತಿಗಳಿದ್ದವು. ಒಟ್ಟಿನಲ್ಲಿ ಠಕ್ಕರು ಹತ್ತು ಲಕ್ಷಕ್ಕಿಂತ ಹೆಚ್ಚು ಜನರ ಕೊಲೆಗೈದಿರಬೇಕೆಂದು ಭಾವಿಸಲಾಗಿದೆ. 1826ರಲ್ಲಿ ಬ್ರಿಟಿಶ್ ಅಧಿಕಾರಿಗಳು ಸರ್ ವಿಲಿಯಮ್ ಸ್ಲೀಮನ್ನನ ನೇತೃತ್ವದಲ್ಲಿ ಠಕ್ಕರನ್ನು ನಿರ್ಮೂಲನಗೊಳಿಸುವಲ್ಲಿ ಯಶಸ್ವಿಯಾದರು.

ಪ್ರಸ್ತುತ ಕಥೆಯಲ್ಲಿ ಚಿತ್ರಿಸಿದ ಆ ಕಾಲಮಾನ, ವಸ್ತುಸ್ಥಿತಿಗಳು ಐತಿಹಾಸಿಕವಾಗಿ ಸತ್ಯವಾಗಿವೆ. ಠಕ್ಕರ ಧರ್ಮ, ಸಂಪ್ರದಾಯ, ಶಿಷ್ಟಾಚಾರ, ರೀತಿ-ನೀತಿ ನಿಯಮಗಳು ಹೀಗೆ ಎಲ್ಲವನ್ನೂ ವಾಸ್ತವಿಕವಾಗಿ ವಿವರಿಸಲಾಗಿದೆ. ಕಥಾ ನಾಯಕ ವಿಲಿಯಮ್ ಸ್ಯಾವೇಜ್ ಎಂಬೊಬ್ಬ ಆಂಗ್ಲ ಅಧಿಕಾರಿ. ಒಮ್ಮೆ ಆತ ಅಕಸ್ಮಾತ್ತಾಗಿ ಠಕ್ಕರ ಕ್ರೂರ ಕಾರ್ಯಾಚರಣೆಯನ್ನು ಕಂಡು ಅದರ ಭೀಷಣತೆಯಿಂದ ಕೆರಳಿ, ಅವರ ನಿರ್ನಾಮ ಮಾಡಲು ಪಣತೊಡುತ್ತಾನೆ. ಅದಕ್ಕೋಸ್ಕರ ತಾನೂ ಠಕ್ಕನಾಗಿ, ದಾರಿ ಹಿಡಿದು ತಿರುಗುತ್ತಾನೆ...... ಇದು ಜಾನ್ ಮಾಸ್ಟರ್ಸ್ ಬರೆದ 'ದಿ ಡಿಸೀವರ್ಸ್' ಕಾದಂಬರಿಯ ಸಾರಾಂಶ.

ಸಾಗ್ಧಲಿ ಶಹರದ ಚರ್ಚಿನಲ್ಲಿ ವಿವಾಹ ಸಮಾರಂಭ ನಡೆದಿತ್ತು. ಮದುಮಗ ವಿಲಿಯಂ ಸ್ಯಾವೇಜ್ ತಾನು ಮದುವೆಯಾಗಲಿದ್ದ ಮೇರಿ ವಿಲ್ಸನ್‌ಳತ್ತ ದೃಷ್ಟಿಹಾಯಿಸಿದ. ಮಿನುಗುವ ನೀಲಿ ನೇತ್ರಗಳು, ಹೊಳೆಯುವ ಕಪ್ಪು ಕೇಶರಾಶಿ, ಉಲ್ಲಸಿತ ವದನ, ಒಟ್ಟಿನಲ್ಲಿ ಆಕೆ ಸ್ಫುರದ್ರೂಪಿಯಾದ ಯುವತಿ. ಆಕೆಯನ್ನು ಆತ ಅದೆಷ್ಟು ಪ್ರೀತಿಸುತ್ತಿದ್ದ! ಅವಳಾದರೂ ತನ್ನನ್ನು ಮನಸಾ ಪ್ರೇಮಿಸುತ್ತಿದ್ದಳೆಂದು ಆತ ಭಾವಿಸಿದ. ಇಲ್ಲವಾದರೆ ಆಕೆ ಮದುವೆಗೆ ಒಪ್ಪುತ್ತಿದ್ದಳೆ ? ಅವಳ ತಂದೆ ವಿಲ್ಸನ್ ಕೈಮೂರ ಬ್ರಿಟಿಶ್ ರಾಜಪ್ರತಿನಿಧಿಯಾಗಿದ್ದ. ವಿಲಿಯಮ್ ಕೇವಲ ಒಬ್ಬ ಜಿಲ್ಲಾಧಿಕಾರಿ. ಆತನೆಂದೂ ಕಮೀಶನರ್ ಆಗುವ ಸಂಭವವಿರಲಿಲ್ಲವೆಂದು ಮಗಳಿಗೆ ಎಷ್ಟೋ ಬಾರಿ ತಿಳಿಹೇಳಿ ಈ ಸಂಬಂಧಕ್ಕೆ ಅಸಮಾಧಾನಪಟ್ಟುಕೊಂಡಿದ್ದ. ಆದರೂ ಮೇರಿ ಅವನಿಗೆ ಒಲಿದದ್ದು ಬರೀ ಯೌವನದ ಹುಚ್ಚು ಭ್ರಮೆಯಿಂದಿರಲಿಕ್ಕಿಲ್ಲವಲ್ಲ!

ಮರುದಿನ ಮಧ್ಯಾಹ್ನ ನವದಂಪತಿಗಳು ಮಧುಚಂದ್ರಕ್ಕಾಗಿ ಪ್ರಯಾಣ ಆರಂಭಿಸಿದರು. ಅಶ್ವಾರೂಢರಾಗಿ ಇಬ್ಬರೂ ಅಕ್ಕಪಕ್ಕದಲ್ಲಿ ಸಾಗಿದ್ದರು. ಸಾಗ್ಧಲಿಯಿಂದ ನಲವತ್ತು ಮೈಲಿ ದೂರ ಭಂದೇರ ಬೆಟ್ಟಗಳನ್ನು ದಾಟಿ, ಮಧ್ಯಾ ಇಲಾಖೆಗೆ ಹೋಗುವ ದಾರಿಯಲ್ಲಿ ಸಾಗಿದ್ದರು. ಬಹುಬೇಗ ವಿಲಿಯಮ್ ತನ್ನ ಜಿಲ್ಲೆಯನ್ನು ಸೇರುವವನಿದ್ದ.

ಚಿಕ್ಕ ದಿಬ್ಬವೊಂದರ ಮೇಲೆ ವಿಲಿಯಮ್ ಕುದುರೆಯ ಲಗಾಮು ಎಳೆದು ನಿಲ್ಲಿಸಿ ತಡೆದು ನಿಂತ. ಸುತ್ತಲಿನ ಪ್ರಶಾಂತ ಪರಿಸರವನ್ನು

ನೋಡುತ್ತ ಮೇರಿ ಸಂತಸಪಟ್ಟಳು. ಅವರ ಉಳಿದ ಪರಿವಾರ ಸುಮಾರು ಒಂದು ಮೈಲು ಹಿಂದೆ ಬರುತ್ತಿತ್ತು: ಸಾಮಾನು ಹೊತ್ತ ಕೂಲಿಗಳು, ಸೇವಕರು, ಮೇರಿಯ ಪರಿಚಾರಿಕೆ, ಮತ್ತು ಜಾರ್ಜ ಎಂಜೆಲ್‌ಸ್ಮಿಥ್ - ಈತ ವಿಲ್ಸನ್ನನ ಸಹಾಯಕ ಅಧಿಕಾರಿ. ಒಂದು ವಿಶಿಷ್ಟ ಕಾರ್ಯ ನಿಮಿತ್ತ ಅವರ ಸಂಗಡ ಹೊರಟಿದ್ದ.

ಅವರು ಶಿವನಾಥ ನದಿಯ ಪೂರ್ವದಂಡೆಯ ಮೇಲಿರುವ ಭಡೋರಾ ಗ್ರಾಮ ತಲುಪಿದಾಗ ನದಿತೀರದಲ್ಲಿ ಪ್ರಯಾಣಿಕರು ನಿಂತಿದ್ದರು. ಆಚೆ ದಂಡೆಯ ಮೇಲೆ ಮರುಪ್ರಯಾಣಕ್ಕಾಗಿ ನಾವೆ ಸಿದ್ಧವಾಗಿತ್ತು. ಆ ಬದಿ ದೂರದಲ್ಲಿ ಜನರ ಸಣ್ಣ ಗುಂಪೊಂದು ನೆರೆದಿತ್ತು. ಆದರೆ ಅಷ್ಟು ದೂರದಿಂದ ಅವರೇನು ಮಾಡುತ್ತಿದ್ದರೆಂಬುದು ಅವನಿಗೆ ಕಾಣಿಸಲಿಲ್ಲ. ಕೆಲವರು ಅತ್ತಿಂದಿತ್ತ ಓಡಾಡುತ್ತಿದ್ದರು. ಕೆಲವರು ವಾದಿಸುತ್ತಿದ್ದರು. ಹೆಚ್ಚಾಗಿ ಜನರು ಸುಮ್ಮನೆ ಗುಂಪು ಗುಂಪಾಗಿ ನೆಲದ ಮೇಲೆ ಕುಳಿತು ಏನನ್ನೋ ನಿರೀಕ್ಷಿಸುತ್ತಿದ್ದರು.

ನಾವೆಯ ಹತ್ತಿರ ಚಂದ್ರಸೇನ , ಮತ್ತವನ ತಂಡ ನಿಂತಿರುವುದು ಕಂಡಿತು. ಚಂದ್ರಸೇನ ಊರಿನ ಮುಖ್ಯಸ್ಥ. ಪಡಾ ಹಾಗೂ ಕಹರಿ ಎರಡೂ ಗ್ರಾಮಗಳ ಪಟೇಲ. ಐವತ್ತುಸಾವಿರ ಎಕರೆಗಳಷ್ಟು ವನ್ಯ ಭೂಮಿಗಳ ಜಹಗೀರದಾರ. ಅಲ್ಲದೆ ಪೋಲೀಸ ಪ್ರಮುಖ, ನ್ಯಾಯಾಧೀಶ ನಗರಾಧ್ಯಕ್ಷ ತೆರಿಗೆ ಸಂಗ್ರಹಕಾರನೂ ಹೌದು. ಒಳ್ಳೆಯ ಕಾರ್ಯಗಳಿಗಾಗಿ ಆತ ವಿಲಿಯಮ್ಮನ ಶಿಫಾರಸಿನ ಮೇಲೆ ರಾಜಪ್ರತಿನಿಧಿಯಿಂದ ಇಂದು ಪ್ರಶಸ್ತಿಪತ್ರ ಪಡೆಯುವವನಿದ್ದ. ಪ್ರಶಸ್ತಿಪ್ರದಾನಕ್ಕಾಗಿಯೇ ಜಾರ್ಜ ಎಂಜೆಲ್‌ಸ್ಮಿತ್ ಭಡೋರಾವರೆಗೆ ಬಂದಿದ್ದ.

ಡೋಣಿ ದಂಡೆ ಸೇರಿತು. ಅವರು ಇಳಿದು ಬರುತ್ತಿದ್ದಂತೆ ಬ್ಯಾಂಡ್ ಮೇಳ ಬಾರಿಸ ಹತ್ತಿತು. ಚಂದ್ರಸೇನ ಬಾಗಿ ನಮಸ್ಕರಿಸಿ, ಎಲ್ಲರಿಗೂ ಮಾಲಾರ್ಪಣೆ ಮಾಡಿ ಸ್ವಾಗತಿಸಿದ. ಬಳಿಕ ಹಿಂದೆ ಸರಿದು, ತಲೆ ತಗ್ಗಿಸಿ ಕೈ ಮುಗಿದುಕೊಂಡು ನಿಂತ. ಆತ ಶುಭ್ರವಸ್ತ್ರ, ಬಿಳಿ ಮುಂಡಾಸ ಧರಿಸಿದ್ದ. ಹಣೆಯ ಮೇಲೆ ಬಿಳಿ ಗಂಧದ ಗೆರೆ, ಉದ್ದ ಮುಖದ ಮೇಲೆ ಸಲಕ್ಷಣವಾದ ಕಳೆ, ಸದಾ ವಿಸ್ಮಿತಗೊಂಡಂತೆ ಅಗಲವಾಗಿ ತೆರೆದ ದೊಡ್ಡ ಕಣ್ಣುಗಳು. ವಿಲಿಯಮ್ ಚಂದ್ರಸೇನನ ಕೈಕುಲುಕಿ ಆತನ ಭೇಟಿಯಾದದ್ದಕ್ಕೆ ಸಂತೋಷ ವ್ಯಕ್ತಪಡಿಸಿದ. ಆತನೂ ಮುಗುಳುನಗುತ್ತ ವಿಲಿಯಮ್ಮನಿಗೂ ಮತ್ತವನ ಹೆಂಡತಿಗೂ ಆದರದಿಂದ ಅಭಿವಂದಿಸಿದ.

ಡೋಣಿಯಲ್ಲಿ ಉಳಿದ ಪ್ರಯಾಣಿಕರು ಇಳಿದು ಮುಂದಿನ ದಾರಿ ಹಿಡಿಯಲು ಸಿದ್ಧರಾದರು. ಭಾರತ ಸತತ ಚಲಿಸುವಂತಿತ್ತು. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ದಿನಾಲು ಎಷ್ಟು ಲಕ್ಷ ಜನ ಪ್ರಯಾಣಿಕರು ದಾರಿಯ ಕಲ್ಪಾಕಲ್ಪಿತ ಗಂಡಾಂತರಗಳನ್ನು ಎದುರಿಸುತ್ತಿದ್ದರೋ! ಕ್ಷಯಿಸುತ್ತಿರುವ ಮರಾಠಾ ರಾಜ್ಯದ ಅರವತ್ತು ವರ್ಷಗಳ ಅರಾಜಕಸ್ಥಿತಿಯಲ್ಲಿ ಎಷ್ಟು ಜನ ತಾವು ಸೇರಬೇಕಾದ ಸ್ಥಳ ಮುಟ್ಟಿರಲಿಲ್ಲವೋ! ಎಷ್ಟು ಜನ ದಾರಿಯಲ್ಲಿ ಮೃತಪಟ್ಟು ನಾಪತ್ತೆಯಾಗಿದ್ದರೋ! ಎಂದು ಅವರನ್ನು ನೋಡಿ ವಿಲಿಯಂ ಯೋಚಿಸಿದ.

ಬ್ಯಾಂಡ್ ಬಾರಿಸುವವರ ಹಿಂದೆ ವಿಲಿಯಂ, ಮತ್ತವನ ಪರಿವಾರದ ಮೆರವಣಿಗೆ ಮುಂದೆ ಹೊರಟಿತು. ಮೇರಿಗೆ ಇದೆಲ್ಲ ಮೋಜೆನಿಸಿತು. ದಟ್ಟಡವಿಯಲ್ಲಿ ಹಾಯ್ದು ಪಡ್ಡಾಗ್ರಾಮ ಮುಟ್ಟಿದರು. ಚಂದ್ರಸೇನನ ಎರಡಂತಸ್ತಿನ ಮನೆಯ ಮುಂದಿನ ಮುಖ್ಯ ಬೀದಿಯಲ್ಲಿ ಗ್ರಾಮಸ್ಥರು ಕೂಡಿದ್ದರು. ಜಾರ್ಜ್ ಎಂಜೆಲ್‌ಸ್ಮಿಥ್ ಪ್ರಶಸ್ತಿಪತ್ರವನ್ನು ಹೊರದೆಗೆದು, ಓದಿ, ಪಟೇಲನಿಗೆ ನೀಡಿದ. ಜನರೆಲ್ಲ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಬಳಿಕ ''ಪಟೇಲಜಿ, ನದಿ ದಂಡೆಯ ಆಚೆಯ ಬದಿಯಲ್ಲಿ ಅಷ್ಟೇಕೆ ಜನ ಸಮೂಹ ಕೂಡಿತ್ತು?'' ಎಂದು ವಿಲಿಯಂ ಕೇಳಿದ.

ಚಂದ್ರಸೇನ ವಿಲಿಯಂನತ್ತ ತಿರುಗಿ ನೋಡಿದ. ಆತನ ಮುಖ ಖಿನ್ನವಾಗಿತ್ತು.

ಒಂದು ನಿಮಿಷ ತಡೆದು, ''ನೇಕಾರ ಗೋಪಾಲನ ಹೆಂಡತಿ ನಾಳೆ ಸಂಜೆ ಸತಿ ಹೋಗುವವಳಿದ್ದಾಳೆ,'' ಎಂದು ಉತ್ತರಿಸಿದ.

ವಿಲಿಯಂ ಆದರ ಬಗ್ಗೆ ಚಿಂತಾಮಗ್ನನಾದ. ಎಲ್ಲ ಆಂಗ್ಲರು ಹಾಗು ಕ್ರೈಸ್ತಮತೀಯರಂತೆ, ಅವನಿಗೂ ಈ ಪದ್ಧತಿ ಸಹಜವಾಗಿಯೇ ಅಮಾನುಷವೆನಿಸಿತ್ತು. ಆದರೆ ಇದೊಂದು ಜನರ ಸಂಪ್ರದಾಯ ಆಗಿ ಬಿಟ್ಟಿತ್ತು. ಇದನ್ನು ಹೇಗೆ ತೊಲಗಿಸಬೇಕೆಂಬುದು ಈಸ್ಟ್ ಇಂಡಿಯಾ ಕಂಪನಿಯವರಿಗೂ ಸಮಸ್ಯೆಯಾಗಿತ್ತು. ಅನೇಕ ವರ್ಷಗಳಿಂದ ಸತಿ ನಿರ್ಮೂಲನದ ಮಾತು ನಡೆದಿತ್ತು. ಆದರೆ ಒಮ್ಮತದ ನಿರ್ಣಯಕ್ಕೆ ಬರಲಾಗಿರಲಿಲ್ಲ. ಬ್ರಿಟಿಶ್ ಅಧಿಕಾರಿಗಳು ಮತ್ತು ಹಿಂದೂ ಜನರ ನಡುವಿನ ತಿಕ್ಕಾಟದಲ್ಲಿ ವಿಲಿಯಂನಂಥ ಅಧಿಕಾರಿಗಳು ಸಿಕ್ಕು ಒದ್ದಾಡುತ್ತಿದ್ದರು.

ಮರುದಿನ ಮುಂಜಾನೆ ಪಟೇಲನ ಒಳಾಂಗಣದಲ್ಲಿ ಮೇರಿ ಜಾರ್ಜ್ ಮತ್ತು ವಿಲಿಯಮ್ಮರು ತಗ್ಗಾದ ಪೀಠಗಳ ಮೇಲೆ ಕುಳಿತು ಅದೇ ವಿಷಯವನ್ನು ಕುರಿತು ಮಾತನಾಡುತ್ತಿದ್ದರು. ಜಾರ್ಜ್ ಅಂದ: ''ಅವಳ ಪತಿ ತೀರಿಕೊಂಡರೆ ಈಕೆ ಯಾಕೆ ಸತಿ ಹೋಗಬೇಕೋ ನಾನರಿಯೆ. ಎಂಥ ಭಾರಿ ಅನರ್ಥ ಅಲ್ಲವೆ?''

''ಆತ ಹೋಗಿ ಒಂದು ವರ್ಷದ ಮೇಲಾಯಿತು. ಪ್ರಯಾಣಕ್ಕೆಂದು ಹೋದವನು ತಿರುಗಿ ಬಂದಿಲ್ಲ. ಪ್ರವಾಸದಲ್ಲಿ ವಿಳಂಬವಾಗುವುದು ಸಹಜ. ಇಷ್ಟು ದಿನ ಅವಳೂ ಚಿಂತಿಸುತ್ತಿರಲಿಲ್ಲ. ಆದರೆ ಇತ್ತೀಚೆಗೆ ಅವಳಿಗೆ ಮೂರು ಬಾರಿ ಅದೇ ಸ್ವಪ್ನ ಬಿತ್ತಂತೆ. ಅದರಲ್ಲಿ ಕತ್ತಲು ಕವಿದ ಸ್ಥಳದಲ್ಲಿ ಪತಿಯ ಮೃತ ದೇಹವನ್ನು ಕಂಡಳಂತೆ. ಅವನ ಕುತ್ತಿಗೆಯ ಮೇಲೊಂದು ಕಲೆ. ಅವನು ಸತ್ತದ್ದೇ ಖಚಿತವೆಂದು ಅಂದುಕೊಂಡು ಅವನೊಡನೆ ಪರಲೋಕಕ್ಕೆ ಹೋಗಬಯಸುತ್ತಾಳೆ,'' ಚಂದ್ರಸೇನ ನಮ್ರವಾಗಿ ಹೇಳಿದ. ''ಆತ ಮುದುಕನೆ? ಅವಳು ವಯಸ್ಸಾದವಳೇ?'' ಕೇಳಿದಳು ಮೇರಿ.

''ಇಲ್ಲ ಮೇಮಸಾಹಿಬ್, ಅವಳು ನಿಮ್ಮಷ್ಟೇ ವಯಸ್ಸಿನವಳು; ಅಲ್ಲದೆ ರೂಪವತಿ, ಅವಳ ಪತಿ ಗೋಪಾಲನೂ ತರುಣ ಸ್ಕ್ಯಾವೇಜ ಸಾಹಿಬರ ವಯಸ್ಸಿರಬೇಕು.'' ಎಂದು ಚಂದ್ರಸೇನ ವಿಲಿಯಮ್ಮನತ್ತ ನೋಡುತ್ತ, 'ನಿಮ್ಮ ಹಾಗೆಯೇ ಇದ್ದ, ಸಾಹೇಬರೇ, ವಿಶಾಲ ಹಣೆ, ದುಂಡು ಮುಖ, ನಿಮ್ಮಷ್ಟೇ ಎತ್ತರ, ಒಳ್ಳೆ ಮೈಕಟ್ಟು, ಕಂದು ಬಣ್ಣದ ಕಣ್ಣುಗಳು, ಅವನ ಕೂದಲು ಮಾತ್ರ ಇನ್ನೂ ಕಪ್ಪಾಗಿತ್ತು. ''ನೀನೇನು ಮಾಡುತ್ತೀ ಮತ್ತೆ ? ಇನ್ನೂ ಆರು ಗಂಟೆ ಉಂಟು ನೋಡು, ಅಲ್ಲಿಗೆ ಹೋಗಿ ಈ ಸತಿ ನಿಲ್ಲಿಸಿ ಬಿಡು. ಏಕೆಂದರೆ ಹಾಗೆ ಮಾಡುವ ಅಧಿಕಾರ ನನಗಿಲ್ಲವೆಂಬುದು ನಿನಗೂ ಗೊತ್ತು,'' ಅಂದ ವಿಲಿಯಮ್.

''ಇದು ಸುಲಭವಲ್ಲ. ಸತಿ ನಿಲ್ಲಿಸಿದರೆ ಜನರು ದಂಗೆ ಏಳುವರು,'' ಚಂದ್ರಸೇನ ಹೇಳಿದ.

''ನೀವು ದಂಗೆಗೆ ಹೆದರುವಿರಾ, ಪಟೇಲಜಿ?'' ಜಾರ್ಜ್ ತುಸು ತಿರಸ್ಕಾರದಿಂದೆಂದ. ''ಪ್ರಶಸ್ತಿ ಪತ್ರದಲ್ಲಿ ನಮೂದಿಸಿದ ನಿಮ್ಮ ಅಧಿಕಾರ, ವಶೀಲಿ ಎಲ್ಲಾ ಏನಾಯಿತು? ''.......''ಸರಿ, ನಾನಿನ್ನು ಹೊರಡಬೇಕು,'' ಎಂದು ಚಂದ್ರಸೇನ ಎದ್ದು ನಿಂತು ಭುಜ ಹಾರಿಸಿ, ಕುದುರೆ ಹತ್ತಿ ಹೊರಟುಹೋದ. ಅನಂತರ ವಿಲಿಯಮ್ ಕೇಳಿದ: ''ಪಟೇಲಜಿ, ಈ ವಿಷಯದಲ್ಲಿ ಜನರ ಅಭಿಪ್ರಾಯವೇನು?''

''ಇದೊಂದು ಸತ್ವಪರೀಕ್ಷೆ, ಅವಳು ಮನಸಾ ಸತಿ ಹೋಗಬೇಕೆನ್ನುತ್ತಾಳೆ. ಅವಳ ಇಚ್ಛಾನುಸಾರ ನಡೆಯಲಿ ಎಂಬುದು ಜನರ ಮತ'' ಚಂದ್ರಸೇನ ಉತ್ತರಿಸಿದ.

ವಿಲಿಯಂ ಚಿಂತೆಗೀಡಾದ ಕಾರಣ ಮೇರಿಗೆ ತಿಳಿಯಿತು. ''ಅವಳು ಸಾಯುವುದು ಬೇಡ, ವಿಲಿಯಯಂ'' ಮೆಲ್ಲನೆ ಅಂದಳು.

''ಸಾಹಿಬ್, ನಾವು ಆಕೆಯನ್ನು ಉಳಿಸಬಹುದು'' ಅಂದ ಚಂದ್ರಸೇನ.

''ಓಹೋ ಖಂಡಿತ ಉಳಿಸಬಹುದು. ಆದರೆ ದಂಗೆ ಏಳುವದು,'' ಎಂದ ವಿಲಿಯಂ.

''ಹಾಗಲ್ಲ. ಅದನ್ನು ತಪ್ಪಿಸಲು ಇನ್ನೊಂದು ದಾರಿ ಉಂಟು,'' ಎಂದು ಚಂದ್ರಸೇನ ಎಷ್ಟೋ ಹೊತ್ತು ತಡೆದು ಹೇಳಿದ: ''ತನ್ನ ಪತಿ ಜೀವಂತವಾಗಿರುವುದನ್ನು ಆಕೆ ನೋಡಿದರೆ ಅಥವಾ ಹಾಗೆಂದು ಭಾವಿಸಿದರೆ ತನ್ನ ಸ್ವಪ್ನ ಸುಳ್ಳು ಎಂದು ಆಕೆ ಸತಿ ಹೋಗುವುದಿಲ್ಲ. ಅವಳ ಸಂಬಂಧಿಕರು ಗೋಪಾಲನ ಬಂಧುಬಳಗ, ಆಕೆ ಸತಿಯಾಗಲು ಬಿಡುವುದಿಲ್ಲ.''

''ಹೌದು, ಅದು ನಿಜ'' ವಿಲಿಯಮ್ ಗೋಣು ಹಾಕಿದ. ಚಂದ್ರಸೇನ ಮುಂದುವರೆದ:


''ಸಾಹಿಬ್, ನೀವು ನೇಕಾರ ಗೋಪಾಲನ ಹಾಗೆ ಕಾಣಿಸುವಿರಿ. ಸ್ವಲ್ಪ ಉಪಾಯದಿಂದ ಬೆಳಕಿನಲ್ಲಿ ಸಹ ಪತ್ತೆಯಾಗುವುದಿಲ್ಲ. ಮಬ್ಬು ಗತ್ತಲೆಯಲ್ಲಂತೂ ಸಾಧ್ಯವೇ ಇಲ್ಲ.''

ವಿಲಿಯಮ್ ದಂಗು ಬಡಿದಂತಾದ. ಸ್ಟೂಲು ಹುಡುಕಿಕೊಂಡು ಕೆಳಗೆ ಕುಳಿತ. ಇದೆಂಥ ವಿಚಿತ್ರ ಕಲ್ಪನೆ! ವಿಲ್ಸನ್ ಇದಕ್ಕೆ ಏನನ್ನುತ್ತಿದ್ದನೋ!

ಚಂದ್ರಸೇನ ಮುಂದುವರೆದ. ''ನನ್ನ ಮನೆಯಲ್ಲಿ ಉಚಿತವಾದ ವಸ್ತ್ರಗಳಿವೆ. ನೀವು ಮತ್ತು ಮೇಮಸಾಹಿಬ್ ಇಬ್ಬರ ಹೊರತಾಗಿ ಯಾರಿಗೂ ತಿಳಿಯುವ ಅವಶ್ಯಕತೆಯಿಲ್ಲ. ನನ್ನ ಹೆಂಡತಿಯೊಬ್ಬಳಿಗೆ ಗೊತ್ತಾಗಬಹುದು. ನಾವು ನಿಮಗೆ ಕಪ್ಪು ಬಣ್ಣ ಬಳಿಯುತ್ತೇವೆ.''

''ಆದರೆ ಚಂದ್ರಸೇನ, ನಾನಿಲ್ಲಿಂದ ಹೋಗುವುದನ್ನು ಯಾರಾದರೂ ನೋಡುವರು. ನನ್ನ ಹಿಂಬಾಲಿಸಿ ಬಂದು, ನಾನು ಗೋಪಾಲ ಅಲ್ಲ, ಎಂದು ಅವರಿಗೆ ಹೇಳುವರು'' ಅಂದ ವಿಲಿಯಮ್. ''ಅದೆಲ್ಲವನ್ನೂ ತಪ್ಪಿಸಬಹುದು ಸಾಹಿಬ್. ಅಡವಿಯ ಅಂಚಿನವರೆಗೆ ನಿಮ್ಮನ್ನು ಮುಚ್ಚಿದ ಬಂಡಿಯಲ್ಲಿ ಕಳಿಸುತ್ತೇನೆ. ಮುಚ್ಚಂಜೆಯಾಗಲು ಒಂದು ಗಂಟೆಯಿರುವಾಗಲೆ ಇಲ್ಲಿಂದ ಹೊರಡಿ. ಕಾಡು ಮುಟ್ಟಿದೊಡನೆ ನೀವು ಇಳಿದು ಕಾಲು ನಡಿಗೆಯಿಂದ ಕಹರಿಯ ಹತ್ತಿರ ನದಿತೀರದಲ್ಲಿ ದಹನಸ್ಥಳಕ್ಕೆ ಹೋಗಿ, ಸ್ವಲ್ಪ ದೂರ ನಿಂತು, ''ನಾನು ಕೊಲೆ ಅಥವಾ ಕಳವು ಏನಾದರೂ ಮಾಡಿದ್ದೇನೆ. ನಾನೀಗ ಅಪರಾಧಿ. ಅದಕ್ಕೆ ಸಮಯ ಸಾಧಿಸಿ ತಿರುಗಿ ಬರುತ್ತೇನೆ,'' ಎಂದು ಕೂಗಿ ಹೇಳಿ, ಗೋಪಾಲನ ಗಡುಸಾದ ಧ್ವನಿಯನ್ನು ಅನುಕರಿಸುವುದು ಸುಲಭ. ನೀವದನ್ನು ಸಾಧಿಸಬಹುದು.''

ವಿಲಿಯಂ ವ್ಯಾಕುಲಗೊಂಡು ಶತಪಥ ಹಾಕಿದ.'' ಅವಳನ್ನು ವಂಚಿಸುವುದು ಅನ್ಯಾ



ಯವಲ್ಲವೆ ? ಗೋಪಾಲ ಸತ್ತಿರಲೂ ಬಹುದು'' ಎಂದು ಮೇರಿಯತ್ತ ನೋಡಿದ.

ಅವನ ಪೇಚಾಟ ಅವಳಿಗೆ ಅರ್ಥವಾಯಿತು. ಅವಳೆಂದಳು: ''ಆತ ಸತ್ತಿರಲಿಕ್ಕಿಲ್ಲ. ಆಕೆಯನ್ನು ಸಾಯಲು ಬಿಡಬೇಡ, ವಿಲಿಯಮ್, ಅಲ್ಲದೆ ಇದಕ್ಕೆಲ್ಲ ಹೆದರಬೇಡ,'' ಎಂದು ನಸುನಕ್ಕಳು. ಆತನೂ ಕಿರುನಗೆ ಬೀರಿ, ''ಸರಿ ನಾನು ಹಾಗೆ ಮಾಡುವೆ,'' ಅಂದ.

ಮಬ್ಬುಗತ್ತಲೆಯಲ್ಲಿ ವಿಲಿಯಂ ಅಡವಿಯಲ್ಲಿ ನಡೆದ. ಮರಗಳ ಮರಗಳ ರೆಂಬೆಗಳಿಂದ ಮಂದವಾದ ಪಡುವಣಗಾಳಿ ಬೀಸುತ್ತಿತ್ತು. ಆಕಾಶದಲ್ಲಿ ಇನ್ನೂ ಬೆಳಕಿದ್ದರೂ ಭೂಮಿಯ ಮೇಲೆ ಕಪ್ಪು ಕವಿದಿತ್ತು. ಆತ ಯಾವ ದಾರಿಯನ್ನೂ ಆಶ್ರಯಿಸದೆ, ಮರಗಳ ಮಧ್ಯೆ ಸರಸರನೆ ಹೆಜ್ಜೆ ಹಾಕುತ್ತ, ಕಹರಿ ಗ್ರಾಮ ಸುತ್ತಿ ನೇರವಾಗಿ ನದಿಯತ್ತ ನಡೆದ. ಅವನು ಬಿಳಿ ಪಂಚೆ, ಬಿಳಿ ಮುಂಡಾಸ ಧರಿಸಿದ್ದ. ರಾತ್ರಿಯ ಚಳಿಯಿಂದ ರಕ್ಷಣೆ ಪಡೆಯಲು ಹೆಗಲ ಮೇಲೆ ಕೊಳಕಾದ ಕರಿ ಕಂಬಳಿಯನ್ನು ಹೊದ್ದುಕೊಂಡಿದ್ದ. ಅವನ ಬರಿ ಮೈಕೈ ಕಾಲುಗಳು ಕಪ್ಪಾಗಿ ಕಾಣುತ್ತಿದ್ದವು. ಮೇರಿ ಮತ್ತು ಪಟೇಲನ ಹೆಂಡತಿ ಕೂಡಿ ಅವಕ್ಕೆ ಕಪ್ಪು ಬಣ್ಣವನ್ನು ಚೆನ್ನಾಗಿ ಸವರಿದ್ದರು. ಬರಿಗಾಲಿನಿಂದ ನಡೆಯಲಿಕ್ಕೆ ಆಗಲಿಕ್ಕಿಲ್ಲವೆಂದು ಚಪ್ಪಲಿ ಹಾಕಿಕೊಳ್ಳಬಹುದೆಂದು ಚಂದ್ರಸೇನ ಹೇಳಿದ್ದ. ದಹನಸ್ಥಳ ಮುಟ್ಟಿದಾಗ ವಿಲಿಯಂ ತಾನೇನು ಹೇಳಬೇಕೆಂದುಕೊಂಡಿದ್ದನ್ನು ಮೆಲ್ಲನೆ ಕಂಠಪಾಠ ಮಾಡಹತ್ತಿದ. ತಾನು ಮಾಡುತ್ತಿರುವುದು ಸರಿಯೋ, ಅದರಲ್ಲಿ ತಾನು ಯಶಸ್ವಿಯಾಗಬಹುದೋ ಎಂದಾತ ಚಿಂತಿಸುತ್ತಿದ್ದ.

ಶಿಕಾರಿಯ ಅಡ್ಡದಾರಿಯಲ್ಲಿ ಚಿರತೆಯ ಹೆಜ್ಜೆ ಗುರುತನ್ನು ಕಂಡಾಗ ಮಂಡೆಯೂರಿ ಅದನ್ನು ಪರೀಕ್ಷಿಸಿದ. ಮತ್ತೆ ಬೇಗನೆ ಎದ್ದು ಮುಂದೆ ನಡೆದ. ಎಡಗಡೆ ಗಿಡಗಳಲ್ಲಿ ಏನೋ ಸರಸರ ಸಪ್ಪಳವಾದಂತಾಯಿತು. ತಕ್ಷಣ ತಡೆದ. ಅವನ ಬಾಯಿ ಒಣಗಿತ್ತು. ಆದರೆ ಕತ್ತಲಲ್ಲಿ ಏನೂ ಕಾಣಿಸುವಂತಿರಲಿಲ್ಲ. ಒಂದು ನಿಮಿಷ ತಡೆದು ಆತ ಮೆಲ್ಲನೆ ಮುಂದೆ ಸಾಗಿದ.

ನದಿ ಹತ್ತಿರವಾದರೂ ನದಿಯಿಂದ ಸ್ವಲ್ಪ ದೂರ ಒಂದು ಮರದ ಹಿಂದೆ ನಿಂತುಕೊಂಡ. ಹುಲ್ಲಿನ ಮೇಲೆ ನಾಲ್ಕಡಿ ಎತ್ತರದ ಚಿತೆ ಸಿದ್ಧವಾಗಿತ್ತು. ಅದರ ಮೇಲೆ ಕೆಂಪು ಹಳದಿ ಹೂವಿನ ಹಾರಗಳಿದ್ದವು. ಪಕ್ಕದಲ್ಲಿ ಹೆಂಗಸೊಬ್ಬಳು ಕುಳಿತಿದ್ದಳು. ಸುತ್ತಲೂ ಹತ್ತು ಹನ್ನೆರಡು ಗಂಡಸರು ನಿಂತಿದ್ದರು. ಅವರ ಕೈಗಳಲ್ಲಿ ಚೂಪಾದ ಬಡಿಗೆಗಳು. ಒಬ್ಬನು ತುಕ್ಕು ಹಿಡಿದ ಬಂದೂಕು ಹಿಡಿದಿದ್ದ. ಒಂದು ಗುಂಪು ಮಂತ್ರಪಠಣ ನಡೆಸಿತ್ತು. ಊರಿನ ಪೂಜಾರಿ ಸಣ್ಣ ಉರಿಯ ಮುಂದೆ ನಿಂತಿದ್ದ.

ಚಿತೆಯ ಹತ್ತಿರ ಕುಳಿತ ಹೆಂಗಸಿನ ಸುತ್ತಲೂ ತುಪ್ಪದ ಮಡಿಕೆಗಳಿದ್ದವು. ಆಕೆ ಶ್ವೇತವಸ್ತ್ರ ಧರಿಸಿದ್ದಳು. ಒಡವೆಗಳನ್ನು ಒಡೆದು ಬಿಸಾಡಿದ್ದಳು. ಕುಪ್ಪಸ ಹರಿದುಕೊಂಡಿದ್ದಳು. ಕೆದರಿದ ತಲೆಗೂದಲು ಭುಜಗಳ ಮೇಲೆಲ್ಲ ಹರಡಿತ್ತು.

ಮಂತ್ರಪಠಣ ನಿಂತಿತು, ಪೂಜಾರಿ ಅವಳಿಗೆ ಗಂಭೀರವಾಗಿ ಹೇಳಿದ:

''ಮಗು, ಆತ ಸತ್ತಿರಲಿಕ್ಕಿಲ್ಲ......''

ಅವನ ಮಾತು ಕೇಳಿಸದಂತೆ ಅವಳು ಸುಮ್ಮನೆ ಮೇಲೆ ನೋಡುತ್ತಿದ್ದಳು. ''ತಡೆ. ನಿನಗೆ ನಿಶ್ಚಿತ ಗೊತ್ತಿಲ್ಲವಾದರೆ ತಡೆಯುವುದು ಪಾಪವಲ್ಲ,'' ಮತ್ತೊಬ್ಬ ಮುದುಕನೆಂದ.

ಆಕೆ ಹೆಮ್ಮೆಯಿಂದ ತಲೆ ಅಲ್ಲಾಡಿಸಿದಳು. 'ನನಗೆ ಗೊತ್ತು, ಗೊತ್ತು. ಗೋಪಾಲ ಸತ್ತಿದ್ದೇ ನಿಜ. ನನ್ನ ಪತಿ ಗೋಪಾಲ ಸತ್ತಿರುವನು. ನನ್ನ ಗೋಪಾಲ!'' ಎಂದಾಕೆ ಕಿರುಚಿದಳು.

ಇಬ್ಬರು ಮುಂದೆ ಬಂದು ಕಟ್ಟಿಗೆಯ ಮೇಲೆ ತುಪ್ಪ ಸುರುವಿದರು.

ವಿಲಿಯಮ್ ಒಂದು ಹೆಜ್ಜೆ ಮುಂದಿಟ್ಟು ಕೂಗಿದ: ''ಓಯ್ ಓಯ್, ತಡೆಯಿರಿ.''

ಎಲ್ಲರೂ ಹಿಂದಕ್ಕೆ ಸರಿದರು. ಅವರು ಗಾಬರಿಗೊಂಡಿದ್ದರು. ಪೂಜಾರಿ ತತ್ತರಿಸುತ್ತ ಕೇಳಿದ, "ಯಾರು ನೀನು? ಮನುಷ್ಯನೋ ಪ್ರೇತನೋ? ನಮಗೆ ಕೆಡಕನ್ನುಂಟುಮಾಡಬೇಡ."

"ನಾನು ಪ್ರೇತವಲ್ಲ, ಮನುಷ್ಯ," ಅಂದ ವಿಲಿಯಂ.

ಚಿತೆಯ ಹತ್ತಿರ ಕುಳಿತವಳು ತಲೆಯೆತ್ತಿದಳು.

"ಹೌದು, ನಾನೇ! ಶತ್ರುಗಳು ಒಳಸಂಚು ಹೂಡಿದ್ದಾರೆ. ದಕ್ಷಿಣದಲ್ಲಿ ನಾನೊಬ್ಬ ವ್ಯಾಪಾರಿಯ ಕೊಲೆ ಮಾಡಿದ್ದೆನೆಂದು ಬ್ರಿಟಿಶರು ನನ್ನ ಬೆನ್ನಟ್ಟಿದ್ದಾರೆ. ನಾನು ಕೊಲೆ ಮಾಡಿಲ್ಲ. ಅದಕ್ಕೆ ಸಾಕ್ಷ್ಯಗಳಿವೆ. ನಾನು ಅವುಗಳನ್ನು ತರಬೇಕು," ಎಂದು ಕೂಗಿದನಾತ.

ಅವಳು ಕೈಗಳಿಂದ ಮುಖ ಮುಚ್ಚಿಕೊಂಡು ನರಳಿದಳು. ಏಳಲು ಪ್ರಯತ್ನಿಸಿದಳು. ಆದರೆ ಹಿಂದಕ್ಕೆ ಬಿದ್ದಳು. "ನಾನು ನಿನ್ನೆಡೆ ಬರುವೆ. ನನಗಿಲ್ಲಿ ಸ್ಥಾನವಿಲ್ಲ ನೋಡು" ಎಂದು ಬರಿದಾದ ತೋಳುಗಳನ್ನು ಚಾಚಿದಳು. ಒಡೆದ ಬಳೆಚೂರುಗಳನ್ನು ಹಿಡಿಯಲ್ಲಿ ಹಿಡಿದು ಕೆಳಗೆ ಚೆಲ್ಲಿ, "ನಿನ್ನೊಡನೆ ಕರೆದು ಕೊಂಡು ಹೋಗು........ನಾನಿಲ್ಲಿ ಸತ್ತಂತೆ," ಎಂದು ಗೋಳಾಡಿದಳು.

"ಇಲ್ಲ, ಸಾಧ್ಯವಿಲ್ಲ," ವಿಲಿಯಮ್ ಗಡುಸಾದ ಧ್ವನಿಯಲ್ಲಿ ಅಂದ. "ನಾನು ಹೋಗಬೇಕು. ಇದನ್ನು ಯಾರಿಗೂ ಹೇಳಬೇಡ. ನೀವಾರೂ ಹೇಳಬೇಡಿರಿ. ಮನೆಗೆ ಹೋಗಿ ನಾನು ಬರುವುದನ್ನು ನಿರೀಕ್ಷಿಸು. ಸುಖವಾಗಿರು. ಚಿಂತೆಬೇಡ," ಎಂದು ತಿರುಗಿ ಮರಗಳ ಹಿಂದೆ ಅಡಗಿಕೊಂಡು ಓಡಿಹೋದ. ಅವಳು ಕಿರುಚುವ ಶಬ್ದ ಕೇಳಿಸುತ್ತಿತ್ತು. "ಇಲ್ಲ, ನಾನಿಲ್ಲೇ ನಿನ್ನ ದಾರಿ ಕಾಯುವೆ, ಇಲ್ಲೇ......ಇಲ್ಲೇ......ಇಲ್ಲೇ......".

ಕರಿಯ ಕಾಡಿನಲ್ಲಿ ಆತ ಕುರುಡನಂತೆ ಓಡುತ್ತಿದ್ದ. ತಾನೇನು ಮಾಡಿದೆ? ಹೀಗೇಕೆ ಮಾಡಿದೆ? ಇನ್ನು ಆಕೆ ಮನೆಗೆ ಮರಳಿ ಹೋಗುವವಳಲ್ಲ. ಗೋಪಾಲ ಎಂದಿಗೂ ತಿರುಗಿ ಬರುತ್ತಿರಲಿಲ್ಲ. ಆಕೆ ಎಂದೆಂದಿಗೂ ಅಲ್ಲಿಯೆ ಕಾಲ ಕಳೆಯುವಳು.

ಕ್ರಮೇಣ ಅವಳ ಚೀರುವ ಧ್ವನಿ ಅಡಗಿತು. ವಿಲಿಯಮ್ ಉಸಿರು ಬಿಗಿಹಿಡಿದು ಸಾವಕಾಶವಾಗಿ ನಡೆಯಹತ್ತಿದ. ತಾನು ಮಾಡಿದ್ದು ಪಾಪವೋ ಪುಣ್ಯವೋ ಎನ್ನುವುದು ಅವನಿಗೆ ಗೊತ್ತಾಗಲಿಲ್ಲ.

★

ಚಂದ್ರೋದಯವಾಯಿತು. ವಿಲಿಯಂ ಬಲಕ್ಕೆ ತಿರುಗಿ ಉತ್ತರ ದಿಕ್ಕಿನತ್ತ ನಡೆದ. ಅರ್ಧ ಮೈಲಿಯ ಮುಂದೆ ಸಾಗಿದರೆ ಪಡಾಕ್ಕೆ ಹೋಗುವ ಅಡ್ಡದಾರಿ ಸಿಗುತ್ತಿತ್ತು. ಪಂಚೆ ಜಗ್ಗುತ್ತ ದಾಪುಗಾಲು ಹಾಕಿದ.

ಅನತಿದೂರದಲ್ಲಿ ಒಣಗಿದ ಕಟ್ಟಿಗೆ ಕಟಕ್ ಎಂದು ಮುರಿದ ಶಬ್ದವಾಯಿತು. ಅದರತ್ತ ದಿಟ್ಟಿಸಿ ನೋಡಿದ. "ಅಲಿ ಭಾಯಿ ಸಲಾಮ" ಎಂಬ ಧ್ವನಿ ಹತ್ತಿರಲ್ಲೇ ತೂರಿಕೊಂಡು ಬಂತು.

ಅಲಿ ಎಂಬುದು ಮುಸಲ್ಮಾನ ಹೆಸರು. ಈ ಕಗ್ಗತ್ತಲೆಯಲ್ಲಿ ಅಪರಿಚಿತನು ತನ್ನನ್ನು ಅಲಿ ಎಂದು ಏಕೆ ಗುರುತಿಸಿದ? ಯಾರು ಈ ಅಲಿ? ತಾನು ಗೋಪಾಲನಲ್ಲದೆ ಅಲಿಯನ್ನೂ ಹೋಲುತ್ತೇನೆಯೆ ಎಂದು ವಿಲಿಯಂ ಗಲಿಬಿಲಿಗೊಂಡ.

ಅಷ್ಟರಲ್ಲಿ ಹದಿನೈದು ಅಡಿಗಳ ಅಂತರದಲ್ಲಿ ಎರಡು ಮರಗಳ ನಡುವೆ ಮಾನವಾಕೃತಿಯೊಂದು ಕಾಣಿಸಿತು. ಅವನ ಕೈಯಲ್ಲಿ ಕಠಾರಿ ಇತ್ತು.

ವಿಲಿಯಂ ಒಮ್ಮೆಲೆ ರೊಚ್ಚಿಗೆದ್ದು ತಾನು ಯಾರು, ಎಂಥ ಬಟ್ಟೆ ತೊಟ್ಟಿದ್ದೇನೆ ಎನ್ನುವುದನ್ನೂ ಮರೆತು, ಆ ನೆರಳಿನತ್ತ ನಡೆದು, "ಯಾರು ನೀನು? ಇಲ್ಲೇನು ಮಾಡುತ್ತೀ? ನಿನ್ನ ಚಾಕು ಕೂಡಲೆ ಕೆಳಗಿಡು," ಎಂದು ಸಹಜ ಸ್ವರದಲ್ಲಿ ಹೇಳಿದ, ಅಪರಿಚಿತ ಹಿಂದಕ್ಕೆ ಸರಿದ. ಆತ ಬಿಳಿ ಪಂಚೆ ಬಿಳಿ ಮುಂಡಾಸ ಧರಿಸಿದ್ದ. ವಿಲಿಯಯಂ ಮತ್ತೆ ಕೇಳಿದ. "ಯಾರು ನೀನು? ಅಲಿ ಯಾರು?

ಇಲ್ಲಿ ಬಾ. ಮೊದಲು ನಿನ್ನನ್ನು ನೋಡುತ್ತೇನೆ. ಆಮೇಲೆ ಉಳಿದ ವಿಷಯ.''

ಆತ ಮೆಲ್ಲನೆ ಅಂದ: ''ನೀನು ಯಾರು ಎಂಬುದನ್ನು ಮೊದಲು ಹೇಳು. ನೀನು ನೇಕಾರ ಗೋಪಾಲನಂತೂ ಅಲ್ಲ.'' ವಿಲಿಯಂ ಕವಿನೆರಳಿನಲ್ಲಿ ಹಿಂದೆ ಸರಿದು ಗಡುಸಾದ ಧ್ವನಿಯಲ್ಲಿ, ''ಹೌದು. ನಾನು ನೇಕಾರ ಗೋಪಾಲ,'' ಅಂದ.

ಅಪರಿಚಿತ ಉತ್ತರಿಸದೆ ಕ್ಷಣಕಾಲ ಸುಮ್ಮನೆ ನಿಂತಿದ್ದ. ಬಳಿಕ ಅಂದ: ''ಗೋಪಾಲ, ನಿನ್ನನ್ನು ನಾನು ಹಿಂಬಾಲಿಸಿದ್ದೇನೆ. ನಿನ್ನ ಹೆಂಡತಿಯ ಪ್ರಾಣ ಉಳಿಸಲು ನೀನು ಮಾತಾಡಿದ್ದು ಕೇಳಿದೆ. ನನ್ನ ಪ್ರಾಣವೂ ಅಪಾಯದಲ್ಲಿದೆ.''

''ನೀನು ಕೊಲೆ ಮಾಡಿರುವಿಯಾ ?''

ಪ್ರಶ್ನೆಗೆ ನೇರ ಉತ್ತರ ಕೊಡದೆ ಆತ ಅಂದ: '' ನನ್ನ ಬೆನ್ನಟ್ಟಿರುವವರು ಬ್ರಿಟಿಶರಲ್ಲ. ಅವರಿಗೆ ಹಾನಿಯಾಗುವಂಥದೇನೂ ನಾನು ಮಾಡಿಲ್ಲ.''

ಈ ಅಪರಿಚಿತನಿಂದ ತಾನು ಹೇಗೆ ಪಾರಾಗಬೇಕು ಎಂದು ವಿಲಿಯಂ ಯೋಚಿಸತೊಡಗಿದ. ಈತ ಗೋಪಾಲನ ಪರಿಚಿತನಿರಬೇಕು. ಗೋಪಾಲ ಎಲ್ಲಿರುವನೆಂದು ಇವನಿಂದ ತಿಳಿಯಬಹುದಿತ್ತು. ಆದರೆ ಯಾವ ಪ್ರಶ್ನೆ ಕೇಳಿದರೂ ತನ್ನ ಮೋಸ ಹೊರಬೀಳುವುದು. ಅಲ್ಲದೆ ಈತ ಅಪರಾಧಿಯಾಗಿದ್ದರೆ, ತಾನು ಅವನನ್ನು ಬಂಧಿಸಬೇಕಲ್ಲವೆ ? ಆದರೀಗ ಇದಾವುದನ್ನೂ ಮಾಡುವ ಹಾಗಿರಲಿಲ್ಲ. ತಾನು ಹೆಣೆದ ವಂಚನೆಯ ಬಲೆಯಲ್ಲಿಯೆ ತಾನೆ ಸಿಕ್ಕಿಕೊಂಡಿದ್ದ. ತಾನೀಗ ಜಿಲ್ಲಾಧಿಕಾರಿ ವಿಲಿಯಂ ಸ್ಲ್ಯಾವೇಜ ಅಲ್ಲ, ಗೋಪಾಲ. ಆತ ಹಿಂದಕ್ಕೆ ಸರಿಯುತ್ತ ಓಡಿಹೋಗಲು ಪ್ರಯತ್ನಿಸಿದ.

''ಹೋಗಬೇಡ. ನಾನು ನಿನಗೇನೋ ತೋರಿಸುವದಿದೆ,'' ಅಪರಿಚಿತನೆಂದ.

ಆದರೆ ವಿಲಿಯಂ ಹಾಗೆ ಸರಿಯುತ್ತಲೆ ಇದ್ದ.

''ನೀನು ನಿಲ್ಲದಿದ್ದರೆ ನಾನು ತಿರುಗಿ ಹೋಗಿ ಚಿತೆಯ ಬಳಿ ಇದ್ದವಳಿಗೆ ಬಂದಾತ ಗೋಪಾಲನಲ್ಲ ಎಂದು ಹೇಳಿಬಿಡುತ್ತೇನೆ ನೋಡು''.

''ಹೌದು, ನಾನು ಗೋಪಾಲ ಹೌದು. ನನ್ನನ್ನು ಬಿಟ್ಟುಬಿಡು,'' ವಿಲಿಯಯಂ ಹತಾಶನಾಗಿ ಅರಚಿದ.

''ಇಲ್ಲ, ನನ್ನ ಸಂಗಡ ಬಾ. ನಾನು ನಿನಗೊಂದು ದೃಶ್ಯ ತೋರಿಸಬೇಕಾಗಿದೆ. ವಿಲಿಯಂ ದೀರ್ಘವಾಗಿ ಉಸಿರೆಳೆದು, ''ಆಗಲಿ ಬರುತ್ತೇನೆ'' ಅಂದ. ''ಸರಿ. ಹಾಗಾದರೆ ನೀನು ಸುಮ್ಮನಿರಬೇಕು ಗೋಪಾಲ, ನೀನೇನು ಕಂಡರೂ ಕೂಗಬೇಡ ಹಾಗೂ ನನ್ನ ಪಕ್ಕದಿಂದ ಸರಿಯಬೇಡ. ತಿಳಿಯಿತೆ? ಇಲ್ಲವಾದರೆ ನಿನ್ನ ಗೋಣು ನನ್ನ ಹಾಗೆಯೇ ಆಗುವುದು,'' ಎಂದು ಕಟುವಾಗಿ ನಕ್ಕು ಬೆಳದಿಂಗಳಲ್ಲಿ ಬಂದು ನಿಂತ. ಆತನ ತಲೆ ಬಲಬದಿಗೆ ಸ್ವಲ್ಪ ವಾಲಿತ್ತು.'' ಹೀಗೆಯೆ ನೋಡುತ್ತಾ ಇರು. ಇದು ಇನ್ನಷ್ಟು ಸೊಟ್ಟಾಗಬಹುದು,'' ಅಂದ.

ವಿಲಿಯಂ ಅನುಮಾನಿಸಿ, ಕೊನೆಗೆ ಆತನನ್ನು ಹಿಂಬಾಲಿಸಿದ. ಹತ್ತು ನಿಮಿಷಗಳಲ್ಲಿ ಒಂದು ಮರಗಳ ತೋಪು ತಲುಪಿದರು. ಅಲ್ಲಿ ನಡುವೆ ಒಂದು ಆಲದ ಮರವಿತ್ತು. ದೂರದಲ್ಲಿ ದೊಡ್ಡ ಬೆಂಕಿಯ ಬೆಳಕು ಕಾಣಿಸುತ್ತಿತ್ತು. ದಟ್ಟ ಕಂಟಿಗಳಲ್ಲಿ ತೆವಳುತ್ತ ಇನ್ನೂ ಮುಂದೆ ಸಾಗಿದರು. ಕಂಟಿಯೊಂದರ ಹಿಂದೆ ನಿಂತುಕೊಂಡು ವಿಲಿಯಮ್ ಉಸಿರು ಬಿಗಿಹಿಡಿದು ನೋಡಿದ.

ತೋಪಿನ ನಡುವೆ ದೊಡ್ಡ ಬೆಂಕಿ ಉರಿಯುತ್ತಿತ್ತು. ಅದರ ಸುತ್ತ ಎಂಟು ಹತ್ತು ಪ್ರಯಾಣಿಕರು ಗುಂಪಾಗಿ ಕುಳಿತಿದ್ದರು. ಬೆಂಕಿಯಿಂದ ಹೊರಟ ಬೆಳಕಿನಲ್ಲಿ ಅಡಿಗೆ ಪಾತ್ರೆಗಳು ಹಿತ್ತಾಳೆ ಲೋಟಗಳು ಹೊಳೆಯುತ್ತಿದ್ದವು. ಹುಲ್ಲಿನ ಮೇಲೆ ಕಂಬಳಿ ಸುರುಳಿಗಳು ದೊಡ್ಡ ಮೂಟೆಗಳ ಕಪ್ಪು ನೆರಳುಗಳು ಬಿದ್ದಿದ್ದವು. ಗಿಡಗಳಲ್ಲಿ ಅಲ್ಲಲ್ಲಿ ಇನ್ನಷ್ಟು ಚಿಕ್ಕ

ದಾದ ಜ್ವಾಲೆಗಳು ಕಾಣಿಸಿದವು. ಒಂದೆಡೆ ಮೂವರು ಬೇರೆಯಾಗಿ ಕುಳಿತಿದ್ದರು. ಅವರಲ್ಲೊಬ್ಬರು ಬಹುಶ: ಬ್ರಾಹ್ಮಣರು, ಮತ್ತೊಬ್ಬ ಉತ್ತರಪ್ರದೇಶದ ಸೀಖ್ ಸರದಾರ, ಮತ್ತವನ ಹತ್ತು ವರ್ಷದ ಮಗ. ಅಷ್ಟರಲ್ಲಿ ಕವಿನೆರಳಿನಿಂದ ದಪ್ಪನೆಯ ಹಿಂದೂ ವ್ಯಾಪಾರಿಯೊಬ್ಬ ಹೊರಬಿದ್ದ. ಇವರೆಲ್ಲ ಒಂದೇ ಗುಂಪಿನವಲ್ಲವೆಂದು ತೋರುತ್ತಿತ್ತು. ಎಲ್ಲರೂ ಹರಟೆ ಹೊಡೆಯುತ್ತ, ನಗೆಯಾಡುತ್ತ ಕೂಡಿ ಊಟ ಮಾಡಿದರು.

ಕೆಲ ಹೊತ್ತಾದ ಮೇಲೆ ದಪ್ಪ ವ್ಯಾಪಾರಿ ಎದ್ದು ಮೈಕೈ ಚಾಚಿ, ಆಕಳಿಸಿ, "ಮಿತ್ರರೇ, ನಾನು ಮಲಗುವೆ. ದಣಿವಾಗಿದೆ," ಅಂದ.

"ಹೌದು. ರಾತ್ರಿ ಚಳಿಯಾಗಿದೆ," ಕತ್ತಲಲ್ಲಿ ಒಂದು ಧ್ವನಿ ಅಂದಿತು.

ಕೂಡಲೇ ವಿಲಿಯಮ್ಮನ ಸಂಗಾತಿ ಅವನ ಮೊಳಕೈಗೆ ತಿವಿದ. ಆ ಕ್ಷಣ ಸೀಖ್ ಹುಡುಗನ ಪಕ್ಕದಲ್ಲಿ ಇಬ್ಬರು ಮುಂದೆ ಸರಿದರು. ಬೂದುಬಣ್ಣದ ಹೊಲಸು ವಸ್ತ್ರ ಕ್ಷಣಮಾತ್ರ ಬೀಸಿದಂತಾಗಿ, ಹುಡುಗನ ಕೊರಳಸುತ್ತ ಬಿಗಿಯಿತು. ಅವನ ತಂದೆಯ ಗತಿಯೂ ಅದೇ. ತಂದೆ ಮಗ ಇಬ್ಬರೂ ಕಣ್ಣು ಬಿಡುತ್ತ ನೆಲದ ಮೇಲೆ ಸತ್ತುಬಿದ್ದರು. ಮಾನವಾಕೃತಿಗಳು ಅತ್ತಿಂದಿತ್ತ ಓಡಾಡಿದವು. ದಪ್ಪ ವ್ಯಾಪಾರಿ ಕೈಯಲ್ಲಿ ವಸ್ತ್ರ ಹಿಡಿದುಕೊಂಡು ಕೈಸನ್ನೆಗಳನ್ನು ಮಾಡುತ್ತ ನಿಂತಿದ್ದ.

ವಿಲಿಯಂ ಉಸಿರೆಳೆದು ಮೇಲಕ್ಕೆದ್ದ. ತಾನು ಕೊಲೆಗಡುಕರ ಮಧ್ಯೆ ಇರುವೆನೆಂಬುದು ಕೂಡಲೆ ಅವನಿಗೆ ಗೊತ್ತಾಯಿತು. ತನ್ನ ಸಂಗಾತಿಯಿಂದ ಕೊಸರಿಕೊಂಡು ಮುಂದೆ ಓಡಿ, "ನಿಲ್ಲಿ. ಸುಮ್ಮನೆ ನಿಲ್ಲಿ! ನಾನು....." ಎಂದು ಹಿಂದಿಯಲ್ಲಿ ಅರಚಿದ.

ದಪ್ಪ ವ್ಯಾಪಾರಿ ಬಂದೂಕು ಎತ್ತಿಕೊಂಡು ಕತ್ತಲಲ್ಲಿಗುರಿಯಿಡುತ್ತಿದ್ದ. ಹಿಂದೆ ಮನುಷ್ಯರು ಓಡಾಡುತ್ತಿದ್ದುದನ್ನು ವಿಲಿಯಂ ಗಮನಿಸಿದ. ಕೂಡಲೆ ಆತ ಬೆಂಕಿಯ ಮೇಲೆ ಹಾರಿ ಹೋಗಿ ವ್ಯಾಪಾರಿಯ ಮುಖಕ್ಕೆ ಮುಷ್ಟಿಯೇಟು ಬಿಗಿದು ಕತ್ತಲೆಯಲ್ಲಿ ಪಾರಾದ. ಗಿಡಗಳನ್ನು ಎಡವುತ್ತ ಬೀಳುತ್ತ ಕಂಟಿಗಳಲ್ಲಿ ಹಾಯ್ದು ಓಡಿದ. ಚೂಪಾದ ಮುಳ್ಳೊಂದು ಗಲ್ಲಕ್ಕೆ ಪರಚಿತು. ಮತ್ತೊಂದು ಮುಂಡಾಸವನ್ನು ಹರಿಯಿತು. ಆತ ಅಡ್ಡಬಿದ್ದ ಗಿಡವೊಂದರ ಕೆಳಗೆ ಬೋರಲು ಬಿದ್ದು ಉಸಿರು ಹಿಡಿದುಕೊಂಡ.

ಸೊಟ್ಟ ಗೋಣಿನ ಮನುಷ್ಯ ಕಣ್ಮರೆಯಾಗಿದ್ದ. ಆ ಮನುಷ್ಯರು ಹತ್ತಿರವೇ ಹತ್ತಿಪ್ಪತ್ತು ಅಡಿಯಷ್ಟು ಅಂತರದಲ್ಲಿದ್ದರು. ಹಿಂದೆ ಮುಂದೆ, ಒಬ್ಬರಿಗೊಬ್ಬರು ಏನೇನೋ ವಟ



ಗುಟ್ಟುತ್ತ ಅಡ್ಡಾಡುತ್ತಿದ್ದರು. 'ಅಲಿ ಭಾಯಿ ರಾಮ ರಾಮ' ಎಂದು ಅಸ್ಪಷ್ಟ ಶಬ್ದಗಳು ಕೇಳಿಸುತ್ತಿದ್ದವು. ಏನೋ ಒಗೆದ ಅಗೆದ ಸಪ್ಪಳವಾಗುತ್ತಿತ್ತು.

ಮರದ ಮೋಟಿನ ಕೆಳಗೆ ವಿಲಿಯಮ್ ಸತ್ತಂತೆ ಬಿದ್ದಿದ್ದ. ಅವನ ಮೇಲೆ ಹುಳಗಳು ಹರಿದಾಡಹತ್ತಿದವು. ಎರಡು ಗಂಟೆಗಳ ಬಳಿಕ ಆತ ಥರಥರ ನಡುಗುತ್ತ ಕೈ ಕಾಲುಗಳ ಮೇಲೆ ಮುಂದಕ್ಕೆ ತೆವಳಹತ್ತಿದ. ಮುಳ್ಳುಗಳು ಮುಖಕ್ಕೆ ಚುಚ್ಚಿದ ಸ್ಥಳದಿಂದ ರಕ್ತದ ಹನಿಗಳು ಪಟಪಟ ಬೀಳುತ್ತಿದ್ದವು. ಗಂಟಲು ಉರಿಯುತ್ತಿತ್ತು. ಆತ ಹೇಗೋ ಕಾಡಿನಿಂದ ಹೊರಬಿದ್ದು ರಸ್ತೆ ಕಂಡ. ತಪ್ಪಾದ ದಾರಿ ಹಿಡಿದು ಹಾಗೆಯೆ ಓಡಿದ.

★

ಚಂದ್ರಸೇನನ ಒಳಾಂಗಣ ಸೇರಿದಾಗ ವಿಲಿಯಂ ತತ್ತರಿಸುತ್ತಿದ್ದ. ನಾಯಿಗಳು ಬೊಗಳುತ್ತ ಅವನ ಮೇಲೆ ಏರಿಬಂದವು. "ಓ ಚಂದ್ರಸೇನ, ಬೇಗ ಬಾ," ಎಂದು ವಿಲಿಯಂ ಕೂಗುತ್ತಲಿದ್ದ. ಚಂದ್ರಸೇನ ಕೈಯಲ್ಲಿ ದೀಪ ಬಡಿಗೆ ಹಿಡಿದುಕೊಂಡು ಓಡಿ ಬಂದು ದೀಪವನ್ನು ಮೇಲಕ್ಕೆತ್ತಿ, "ಯಾರಯ್ಯ ನೀನು?" ಎಂದು ಕೇಳಿದ. 'ನಾನು ಸ್ಲ್ಯಾವೇಜ್, ಗೋಪಾಲ. ' ದೀಪ ಕೆಳಗಿಳಿಸು," ಎಂದು ಕಾಲೆಳೆಯುತ್ತ ವಿಲಿಯಂ ಅಂಗಳ ದಾಟಿ ಮೆಟ್ಟಿಲು ಏರಿ ಮನೆ ಹೊಕ್ಕು ಕೆಳಕ್ಕೆ ಕುಸಿದು ಬಿದ್ದ. ಚಂದ್ರಸೇನ ಅವಾಕ್ಕಾಗಿ ಆತನನ್ನು ದಿಟ್ಟಿಸಿದ. ಅವನ ಕಂದು ಬಣ್ಣದ ಮೈಯೆಲ್ಲ ಗಾಯಗೊಂಡಿತ್ತು. ಹೊಟ್ಟೆಯ ಮೇಲಿನ ಚರ್ಮ ಸುಲಿದಿತ್ತು. ಬಾಯಿಯಿಂದ ಬುರುಗು ಬರುತ್ತಿತ್ತು. "ಏನಾಯಿತು ಸಾಹಿಬ್?" ಎಂದು ಚಂದ್ರಸೇನ ಗಾಬರಿಯಿಂದ ಕೇಳಿದ.

ವಿಲಿಯಂ ಗೋಡೆಗೆ ಒರಗಿಕೊಂಡು ಕುಳಿತು ನಡೆದದ್ದನ್ನೆಲ್ಲಾ ಹೇಳಿದ. ಬಳಿಕ, "ಪಟೇಲಜಿ, ನಿಮ್ಮ ಜನರಿಗೆಲ್ಲ ಬರಹೇಳಿ. ಈ ಕೊಲೆಗಡುಕರನ್ನು ನಾವೀಗಲೇ ಹೋಗಿ ಹಿಡಿಯಬಹುದು," ಎಂದ.

ಮೇರಿ ಅವಸರದಿಂದ ಅವನೆದುರು ಮಂಡೆಯೂರಿ, " ವಿಲಿಯಂ ಸರಿಯಾಗಿದ್ದೀಯಾ? " ಎನ್ನುತ್ತಾ ಮಲಾಮು ಹಾಗೂ ಬ್ಯಾಂಡೇಜುಗಳನ್ನು ತರಿಸಿ ಆತನ ಗಾಯಗಳನ್ನು ಉಪಚರಿಸಿದಳು. ಪಟೇಲನ ಹೆಂಡತಿಯೂ ಬಂಳು. ಇಬ್ಬರೂ ಕೂಡಿ ಅವನಿಗೆ ಬಳಿದ ಕಪ್ಪು ಬಣ್ಣವನ್ನು ತೊಳೆದರು. ಬಟ್ಟೆಗಳನ್ನು ಧರಿಸುವಷ್ಟರಲ್ಲಿ ಕುದುರೆಗಳು ಬಂದವು. ಚಂದ್ರಸೇನ, ಐವರು ಸಶಸ್ತ್ರ ಸವಾರರು ಹಾಗೂ ವಿಲಿಯಂ ಎಲ್ಲರೂ ಸಿದ್ಧರಾಗಿ ತೋಪಿನತ್ತ ವೇಗದಿಂದ ಸಾಗಿದರು.

ತೋಪು ಸ್ತಬ್ಧವಾಗಿತ್ತು. ಮಂದ ಬೆಳದಿಂಗಳದಲ್ಲಿ ನೆರಳುಗಳು ಬೇರೆಯಾಗಿ ಕಂಡವು. ವಿಲಿಯಂನಿಗೆ ಯಾವ ಸ್ಥಳದಲ್ಲಿ ಇವೆಲ್ಲ ಘಟಿಸಿತೆಂಬುದನ್ನು ನಿಶ್ಚಿತಾಗಿ ಹೇಳಲಾಗಲಿಲ್ಲ. ಕೊಲೆಗಡುಕರು ಎಲ್ಲಿ ಮಾಯವಾಗಿರಬಹುದು? ಹೆಣಗಳನ್ನು ಎಲ್ಲಿ ಸಾಗಿಸಿರಬಹುದು ಎಂದು ಯೋಚಿಸುತ್ತಿದ್ದಾಗ ಚಂದ್ರಸೇನ ಅವನತ್ತ ವಿಚಿತ್ರವಾಗಿ ನೋಡುತ್ತ, "ಆ ನೀಚರು ನದಿಯನ್ನು ದಾಟಿ ಹೋಗಿರಬಹುದು, ಸಾಹಿಬ್. ಅಲ್ಲಿಗೆ ಹೋಗಿ ನೋಡೋಣ," ಎಂದು ಸೂಚಿಸಿದ.

ಎಲ್ಲರೂ ನದಿ ದಂಡೆಗೆ ಹೋಗಿ ಅಲ್ಲಿದ್ದ ಅಂಬಿಗರನ್ನು ವಿಚಾರಿಸಿದರು. ಪ್ರಯೋಜನವಾಗಲಿಲ್ಲ. ವಿಲಿಯಂ ದಣಿದ ಧ್ವನಿಯಲ್ಲಿ," ಪಟೇಲಜಿ, ಬೆಳಗಾಗುವವರೆಗೆ ಇಲ್ಲಿಯೇ ವಿಶ್ರಮಿಸೋಣವೇ? ನಾಳೆ ಇನ್ನಷ್ಟು ಜನರಿಗೆ ಬರಹೇಳಿರಿ. ಬರುವಾಗ ಅವರು ಸಾಕಷ್ಟು ಗುದ್ದಲಿ ಸಲಿಕೆಗಳನ್ನು ತರಲಿ. ಅವರು ಅಲ್ಲಲ್ಲಾ ಅಗೆಯಬೇಕಾಗಬಹುದು,"ಅಂದ.

ವಿಲಿಯಮ್ಮನಿಗೆ ನಿದ್ರೆ ಬರಲಿಲ್ಲ. ಈ ಅಪಾಯಕರ ಕೊಲೆಗಡುಕರ ತಂಡ ತನ್ನ ಇಲಾಖೆಯಲ್ಲಿಯೇ ಹಾವಳಿ ಮಾಡುತ್ತಿರಬೇಕೇ! ವರ್ಷಂಪ್ರತಿ ನೂರಾರು ಪ್ರಯಾಣಿಕರು ಅವರಿಗೆ ಆಹುತಿಯಾಗುತ್ತಿರಬೇಕು. ಅವರನ್ನು ಹೇಗೆ ಹಿಡಿಯುವುದು ? ಈ ಜಿಲ್ಲೆಯಲ್ಲಿ ನಿಬಿಡವಾದ ಅರಣ್ಯಗಳು, ಬೆಟ್ಟಗಳಲ್ಲಿ ಅಡಗಿಕೊಳ್ಳಲು ಅನೇಕ ಗುಹೆಗಳು, ಹಾಳುಬಿದ್ದ

ಹಳ್ಳಿಗಳಿದ್ದವು. ಹೇಗೆ ಅವರನ್ನು ಪತ್ತೆ ಹಚ್ಚ ಬೇಕು ? ಎಂದಾತ ಯೋಚಿಸಿದ.

ಬೆಳಗಾಗುತ್ತಲೆ ಅವರೆಲ್ಲ ತಿರುಗಿ ತೋಪಿಗೆ ಹೋದರು. ಅಷ್ಟರಲ್ಲಿ ಊರಿನ ಜನರು ಕೂಡಿದ್ದರು. ಹಗಲಲ್ಲಿ ವಿಲಿಯಮ್ಮನಿಗೆ ತಾನು ಅಡಗಿಕೊಂಡ ಸ್ಥಳ ಹಾಗೂ ಬೆಂಕಿ ಉರಿಯುತ್ತಿದ್ದ ಜಾಗಗಳ ಗುರುತು ಸಿಕ್ಕಿತು. ಆತನ ಆದೇಶದ ಪ್ರಕಾರ ಆಳುಗಳು ಬೆಂಕಿಯ ಬೂದಿಯಿದ್ದ ಕೆಳಗೆ ತಗ್ಗು ತೋಡಹತ್ತಿದರು. ಮೂರು ಅಡಿಗಿಂತ ಹೆಚ್ಚು ಅಗೆದ ಮೇಲೆ ಎಲುಬುಗಳು ಹೊರಬಿದ್ದವು. ಅವುಗಳನ್ನೆಲ್ಲ ಸಾಲಾಗಿ ಹುಲ್ಲಿನ ಮೇಲೆ ಇಟ್ಟರು. ವಿಲಿಯಮ್ ಭಯಕ್ರಾಂತನಾಗಿ ಅವನ್ನೆಲ್ಲ ದಿಟ್ಟಿಸಿ ನೋಡಿದ. ಎಲ್ಲಾ ಶುಭ್ರ, ಸ್ವಚ್ಛವಾಗಿದ್ದವು. ಮಾಂಸಖಂಡದ ಲವಲೇಶವೂ ಇರಲಿಲ್ಲ.

ಚಂದ್ರಸೇನನ ಉದ್ದ ಮುಖ ಗಂಭೀರವಾಗಿತ್ತು. ''ಇವರು ಬಹುಕಾಲದ ಹಿಂದೆ ಸತ್ತವರು'' ಅಂದ. ''ಹಾಗಾದರೆ ತೋಪಿನ ತುಂಬೆಲ್ಲ ಅಗೆಯಿರಿ,'' ಎಂದು ವಿಲಿಯಂ ಆದೇಶಿಸಿದ.

ಇಡೀ ಮಧ್ಯಾಹ್ನ ಊರಿನ ಜನ ತೋಪನ್ನೆಲ್ಲಾ ಅಗೆದರು. ಸಂಜೆಯಾದರೂ ಅವರ ಕೆಲಸ ನಿಲ್ಲಲಿಲ್ಲ. ಕತ್ತಲಾದರೂ ದೀಪದ ಬೆಳಕಿನಲ್ಲಿ ಅಗೆಯುವ ಕೆಲಸ ನಡೆಯಿತು. ಸಿಕ್ಕ ಹಾಗೆಲ್ಲ ತಲೆಬುರುಡೆ, ಎಲುಬುಗಳನ್ನು ಒಂದೆಡೆ ಒಟ್ಟಲಾಗುತ್ತಿತ್ತು.ಅವುಗಳ ಪೈಕಿ ಕೆಲವು ಹೊಸದಾಗಿದ್ದರೆ, ಇನ್ನು ಕೆಲವು ಹಳೆಯವಾಗಿದ್ದವು. ವಿಲಿಯಮ್ ಅರವತ್ತೆಂಟು ತಲೆಬುರುಡೆಗಳನ್ನು ಎಣಿಸಿದ. ಆದರೆ ಹಿಂದಿನ ರಾತ್ರಿ ಕೊಲೆಯಾದ ಸೀಖ್ ತಂದೆ ಹಾಗೂ ಮಗನ ಹೆಣಗಳು ಮಾತ್ರ ಸಿಕ್ಕಿರಲಿಲ್ಲ.

ಪೂರ್ವ ದಿಗಂತದಲ್ಲಿ ಹೊಂಗಿರಣಗಳು ಮೂಡಿದ್ದವು. ವಿಲಿಯಮ್ ವಿಪರೀತವಾಗಿ ದಣಿದಿದ್ದ. ಅವರಿಬ್ಬರ ಹೆಣಗಳು ಸಿಗದೆ ಹತಾಶನಾಗಿ ತಿರುಗಿ ಹೋಗಲು ಯೋಚಿಸಿದ. ಕುದುರೆಯ ಮೇಲೆ ಅವನತಮುಖನಾಗಿ ಮೌನವಾಗಿ ದಾರಿ ಹಿಡಿದ. ಈ ಮೂರು ವರ್ಷಗಳ ಕಾಲಾವಧಿಯಲ್ಲಿ ತನ್ನ ಇಲಾಖೆಯಲ್ಲಿ ಒಬ್ಬ ಕಳ್ಳನೂ ಉಳಿಯಲಾರನೆಂದು ತಿಳಿದುಕೊಂಡಿದ್ದು ವ್ಯರ್ಥವಾಗಿತ್ತು. ಇದು ತನಗಾದ ಭಾರಿ ಅವಮಾನವೆಂದಾತ ಭಾವಿಸಿದ.

ಬಂಗ್ಲೆಯನ್ನು ತಲುಪಿದ ಕೂಡಲೆ ತನ್ನ ಮೇಲಧಿಕಾರಿ ವಿಲ್ಸನ್ನನಿಗೆ ಆ ಬಗೆಗೆ ವರದಿ ಬರೆದು ಕಳಿಸಿದ. ಎರಡು ವಾರಗಳ ನಂತರ ಜಾರ್ಜ್ ಎಂಜೆಲ್‌ಸ್ಮಿಥ್ ವಿಲಿಯಮ್ಮನ ಭೇಟಿಗೆ ಬಂದಾಗ ಮಧ್ಯಾ ಜಿಲ್ಲೆಯಲ್ಲಿ ಕೊಲೆಗಳಾದ ಬಗೆಗೆ ವಿಲ್ಸನ್ ಬಹಳೇ ಅಸಂತುಷ್ಟನಾಗಿದ್ದನೆಂದು ತಿಳಿಸಿದ.

''ಜಾರ್ಜ್, ನಾನು ಈ ಕೊಲೆಗಡುಕರನ್ನು ಪತ್ತೆಮಾಡಿಯೇ ತೀರುತ್ತೇನೆ. ಅದಕ್ಕಾಗಿ ಎರಡು ವರ್ಷಗಳಾದರೂ ಸರಿ. ಕೆಲಸವನ್ನು ಕೈ ಬಿಡುವುದಿಲ್ಲ,'' ವಿಲಿಯಂ ಹೇಳಿದ. ''ಬೇಡಪ್ಪಾ. ಅದು ಸರಿಯಾಗಲಿಕ್ಕಿಲ್ಲ. ನಿನ್ನ ವೇಳೆಯೆಲ್ಲಾ ಹಾಗೆ ಕಳೆಯಕೂಡದು. ಉಳಿದ ಕಚೇರಿ ಕೆಲಸಗಳನ್ನಾದರೂ ಸರಿಯಾಗಿ ಮಾಡಬೇಕೆಂದು ವಿಲ್ಸನ್ ಹೇಳಿಕಳಿಸಿದ್ದಾನೆ,'' ಅಂದ ಜಾರ್ಜ್.

ಅಂದು ರಾತ್ರಿ ವಿಲಿಯಂ ಆ ಬಗೆಗೆ ಸುದೀರ್ಘವಾಗಿ ಯೋಚಿಸಿದ. ತನ್ನ ಜಿಲ್ಲೆಯಲ್ಲಿ ಈ ಗಂಡಾಂತರ ನಿವಾರಿಸಲು ಅವನೊಂದು ನಿರ್ಧಾರ ಮಾಡಿದ್ದ. ಆದರೆ ಅದನ್ನು ಹೇಗೆ ಕಾರ್ಯ ರೂಪಕ್ಕಿಳಿಸಬೇಕೆಂಬುದು ಸಮಸ್ಯೆಯಾಗಿತ್ತು. ಈ ಕೊಲೆಗಡುಕರ ತಂಡವನ್ನು ಹಿಡಿಯಲು ತಾನು ದಾರಿ ಹಿಡಿದು ಸತತವಾಗಿ ತಿರುಗಾಡಬೇಕಾಗುವದು. ಅದರಿಂದ ತನ್ನ ಕಚೇರಿಯ ಕಾರ್ಯನಿರ್ವಹಣೆಗೆ ವ್ಯತ್ಯಾಸವುಂಟಾಗುವುದು. ಆಗ ತನ್ನನ್ನು ಕೆಲಸದಿಂದ ವಜಾ ಸಹ ಮಾಡಬಹುದು. ಏನಾದರೂ ಸರಿ. ದಾರಿಯ ಮೇಲೆ ಜನರು ಸುರಕ್ಷಿತರಾಗಿರುವುದೇ ಮುಖ್ಯ ಎಂದು ನಿಶ್ಚಯಿಸಿದ.

★

ಆರು ತಿಂಗಳ ನಂತರ ಸನ್ 1825, ಸಪ್ಟಂಬರ ಕೊನೆಯಲ್ಲಿ ಮಧ್ಯಾ ಕಲೆಕ್ಟರ ಪತ್ನಿ ಸಮೇತನಾಗಿ ತನ್ನ ಜಿಲ್ಲೆಯಲ್ಲಿ ಸಂಚರಿಸಿ

ಊರಿಗೆ ಹಿಂತಿರುಗುತ್ತಿದ್ದ. ಪ್ರತಿವರ್ಷ ಮಳೆಗಾಲ ಮುಗಿದ ಮೇಲೆ ಆತ ತನ್ನ ಇಲಾಖೆಯ ತುಂಬಾ ಸಂಚರಿಸುವುದು ರೂಢಿ. ಈ ಸಲ ಎರಡೂವರೆ ವಾರ ಇಬ್ಬರೂ ಅಶ್ವಾರೂಢರಾಗಿ ದಾರಿಗಳನ್ನು ಸುತ್ತಾಡಿದ್ದರು. ಐವತ್ತು ಹಳ್ಳಿಗಳಿಗೆ ಭೇಟಿಯಿತ್ತು ಅಲ್ಲಿಯ ಬೆಳೆಗಳು, ತೆರಿಗೆಗಳು, ಗ್ರಾಮಸ್ಥರ ಮತ್ತುರೈತರ ಸ್ಥಳೀಯ ಜಗಳಗಳನ್ನು ಕುರಿತು ಚರ್ಚಿಸಿದ್ದರು. ಆದರೆ ಕೊಲೆಗಡುಕರನ್ನು ಪತ್ತೆಹಚ್ಚುವ ಕೆಲಸ ಮಾತ್ರ ವಿಫಲವಾಗಿತ್ತು.

ವಿಲಿಯಂ ದಾರಿಯ ಹಿಂದೆ ಮುಂದೆ ನೋಡಿದ. ಅರ್ಧ ಮೈಲಿಯಷ್ಟು ಮುಂದೆ ಮಧ್ಯಾದಿಂದ ಒಬ್ಬ ಮನುಷ್ಯ ಬರುತ್ತಿದ್ದ. ಅರ್ಧ ಮೈಲು ಹಿಂದುಗಡೆ ಇಬ್ಬರು ಅಶ್ವಾರೂಢ ಪ್ರಯಾಣಿಕರು. ಅವರ ಸಂಗಡ ಐದು ಆಳುಗಳು ಕಾಲು ನಡಿಗೆಯಿಂದ ಮಧ್ಯಾದತ್ತ ಹೊರಟಿದ್ದರು. ವಿಲಿಯಂ ತಿರುಗಿ, ಪ್ರೇಮಪೂರ್ವಕವಾಗಿ ತನ್ನ ಪತ್ನಿಯತ್ತ ನೋಡಿದ. ಅವಳೀಗ ಗರ್ಭವತಿ. ಆತನ ಲಕ್ಷ್ಯ ಗಮನಿಸಿ, ಅವಳ ಮುಖ ಕೆಂಪೇರಿ ತಲೆ ತಗ್ಗಿಸಿದಳು.

ಮಧ್ಯಾದಿಂದ ಬರುವ ದಾರಿಹೋಕ ಅವರ ಹತ್ತಿರ ಹಾಯ್ದು ಹೋದ. ಮೇರಿ ಅವನನ್ನು ನೋಡಿ, ''ಆ ಮನುಷ್ಯನ ತಲೆ ಒಂದು ಬದಿ ವಾಲಿದೆ,'' ಎಂದಳು. ತಕ್ಷಣ ವಿಲಿಯಂ ಅವಳ ಮಾತಿನ ಅರ್ಥ ಗ್ರಹಿಸಿದ. ''ಓಯ್ ಓಯ್, ಇಲ್ಲಿ ಬಾ,'' ಎಂದು ಕೂಗಿದ.

ಯೋಚನಾಮಗ್ನನಾದ ಆ ಮನುಷ್ಯ ಒಮ್ಮೆಲೆ ತಿರುಗಿ ದಾರಿ ಗುಂಟ ಇದ್ದ ಗಿಡಗಳ ಸಾಲಿನತ್ತ ಓಡಹತ್ತಿದ. ಗಿಡಗಳಾಚೆ ಕೆಂಪುಮಣ್ಣಿನ ಬಯಲು ಹೊಲವಿತ್ತು. ಅಲ್ಲಿ ಪಾರಾಗುವುದು ಅಸಾಧ್ಯವೆಂದು ತಿಳಿದು ತಿರುಗಿ ಬಾಗಿಕೊಂಡು ಕೈ ಮುಗಿಯುತ್ತ ಮುಂದೆ ಬಂದು ''ಸಾಹಿಬ್, ಈ ಬಡವನಿಂದ ಏನಾಗಬೇಕು? '' ಎಂದುಕೇಳಿದ.

''ನಿನ್ನ ಹೆಸರೇನು ?'' ಕೇಳಿದ ವಿಲಿಯಂ

''ಹುಸೇನ್, ಸಾಹಿಬ್.''

''ಸರಿ. ನಮ್ಮೊಡನೆ ಬಾ. ನಿನ್ನ ಸಂಗಡ ಮಾತಾಡುವದಿದೆ,'' ಎಂದು ಆತನನ್ನು ಹಿಡಿದುಕೊಂಡು ಹೊರಟರು. ಮಧ್ಯಾ ಮುಟ್ಟಿದೊಡನೆ ವಿಲಿಯಂ ಆತನನ್ನು ಸೆರೆಮನೆಯ ಸಣ್ಣ ಕೋಣೆಯೊಳಗೆ ನೂಕಿ, ತಾನೂ ಒಳಸೇರಿ ಬಾಗಿಲು ಹಾಕಿಕೊಂಡ. ಹುಸೇನ ನೆಲದ ಮೇಲೆ ತಲೆ ತಗ್ಗಿಸಿ ಕುಳಿತ. ವಿಲಿಯಮ್ ಕೇಳಿದ, ''ಫೆಬ್ರವರಿ ಇಪ್ಪತ್ತೇಳನೆ ದಿನಾಂಕ ಕಹರಿಯ ಹತ್ತಿರ ತೋಪವೊಂದರಲ್ಲಿ ಒಬ್ಬ ಸೀಖ್ ಮತ್ತವನ ಮಗನ ಕೊಲೆಯಾದದ್ದು ನಿನಗೆ ಗೊತ್ತು. ಈಗ ನೀನು ಆ ಕೊಲೆಗಡುಕರನ್ನು ಹಿಡಿಯಲು ನನಗೆ ಸಹಾಯ ಮಾಡಬೇಕು,'' ಎಂದ. ಹುಸೇನ ತಲೆಯೆತ್ತಿ, ''ನಿಮಗೆ ನಮ್ಮ ದೇವತೆಗಳ ಭಯವಿದೆಯೇ?'' ಎಂದು ಕೇಳಿದ. ವಿಲಿಯಂ ಯೋಚಿಸಿ ''ಇಲ್ಲ'' ಎಂದು ತಲೆಯಲ್ಲಾಡಿಸಿದ. ''ಹಾಗಾದರೆ ನಿಮಗೆ ಹೇಗೆ ಅರ್ಥವಾಗುವುದು ? ನೀವು ನಮ್ಮ ದೇವತೆಗಳನ್ನು ನಂಬುವದಿಲ್ಲವಾದರೆ ನನ್ನ ಮಾತಿನಲ್ಲಿ ವಿಶ್ವಾಸವಾಗುವುದಿಲ್ಲ. ನೋಡಿ, ಹಿಂದೂ ಜನರ ವಿನಾಶದೇವತೆಯಾದ ಕಾಳಿಕಾಮಾತೆ ಲೋಕದ ಎಲ್ಲ ಮಾರ್ಗಗಳನ್ನೂ ಮಾರ್ಗಸ್ಥರನ್ನೂ ತನ್ನ ಸೇವಕರಿಗೆ ಒಪ್ಪಿಸಿದ್ದಾಳೆ. ಅವಳ ಹೊರತಾಗಿ ಅವಳ ಸೇವಕರು ಯಾರನ್ನೂ ಪೂಜಿಸಲಾರರು. ನಾನೂ ಅಂಥ ಒಬ್ಬ ಸೇವಕನಾಗಿದ್ದೆ......... ಹೀಗೊಮ್ಮೆ ನಾನು ಕಾಳಿಯ ಆಜ್ಞೆಯನ್ನೂ, ನನ್ನ ತಂಡವನ್ನೂ ವಿರೋಧಿಸಿದೆ. ಆ ತಂಡ ನನ್ನ ಕುತ್ತಿಗೆ ಮುರಿದರು. ನಾನು ಸತ್ತನೆಂದು ಬಿಟ್ಟು ಹೋದರು.''

''ನನಗೇನೂ ತಿಳಿಯುತ್ತಿಲ್ಲ ಯಾವ ತಂಡ ? ಏನು ಕಾಳಿಯ ಆಜ್ಞೆ ?'' ಅಂದ ವಿಲಿಯಂ.

''ಈಗ ನನಗೆ ಸ್ಪಷ್ಟಪಡಿಸಲಾಗುವದಿಲ್ಲ.... ಅಂದಿನಿಂದ ನಾನು ಸದಾ ಭಯದಲ್ಲಿ ಇರುತ್ತೇನೆ. ಕಾಳಿಯ ಸೇವಕರು ನಾನು ಸತ್ತಿರುವನೆಂದೇ ತಿಳಿದಿರುವರು. ಆ ದಿನ ನಾನು ಆ ತೋಪಿಗೆ ಬಂದೆ. ಅಲ್ಲಿಯೊಂದು ತಂಡವನ್ನು ಕಂಡು ಪರಾರಿಯಾದೆ. ಆಗ ಅಡ

ಎಯಲ್ಲಿ ಒಬ್ಬ ಮನುಷ್ಯ ಅವಸರದಿಂದ ಹೊರಟಿದ್ದ. ನಾನು ಅವನನ್ನು ಹಿಂಬಾಲಿಸಿದೆ. ನನ್ನ ಮೂಗು ಚುರುಕಾಗಿದೆ. ನೇಕಾರರು ಬೆಲೆಯುಳ್ಳ ಹೊಗೆಸೊಪ್ಪು ಸೇದುವದಿಲ್ಲವೆಂಬುದನ್ನು ನಾನು ಬಲ್ಲೆ ಮತ್ತು ಹಳ್ಳಿಯ ನೇಕಾರನಿಗೆ ಚಿರತೆಯ ಹೆಜ್ಜೆಗುರುತಿನಲ್ಲಿ ಏಕೆ ಆಸ್ಥೆ? ಅದಕ್ಕೆ ಆತ ನೇಕಾರ ಗೋಪಾಲನಲ್ಲ, ಆಂಗ್ಲ ಮನುಷ್ಯ ಎಂದು ತರ್ಕಿಸಿದೆ. ಆಗ ನನಗೊಂದು ವಿಚಾರ ಬಂದಿತು. ಆಂಗ್ಲರಿಗೆ ಕಾಳಿಯ ಭಯವಿಲ್ಲ. ಅದಕ್ಕೆ ಅವರಿಗೆ ಕಾಳಿಯ ಸೇವಕರೊಂದಿಗೆ ಹೋರಾಡಲು ಶಕ್ತಿ ಉಂಟು. ಆದ್ದರಿಂದ ಆ ಆಂಗ್ಲ ಮನುಷ್ಯನನ್ನು ಕರೆದೊಯ್ದು ಅವರನ್ನು ತೋರಿಸಿದೆ.''

''ಆದರೆ, ಹುಸೇನ್, ಅವರು ಆರೇಳು ಜನರಿದ್ದರಷ್ಟೇ. ಕೂಡಲೆ ನೀನು ಬಂದು ಕಲೆಕ್ಟರನಾದ ನನಗೆ ತಿಳಿಸಿದ್ದರೆ ನಾವು ಅವರನ್ನು ಬಂಧಿಸಿ ಗಲ್ಲಿಗೇರಿಸುತ್ತಿದ್ದೆವು. ''ಆರೇಳು?'' ಎಂದು ಹುಸೇನ ನಕ್ಕ. ''ಓಹ್, ನಿಮಗೆ ಹೇಗೆ ತಿಳಿಹೇಳಲಿ?'' ಎಂದು ಆತ ನಿಧಾನವಾಗಿ ಎದ್ದು ನಿಂತು ತಲೆಯಲ್ಲಾಡಿಸಿದ. ಅವನ ಕೈಗಳು ಅಲುಗಾಡಿದವು. ಹವೆಯಲ್ಲಿ ಏನೋ ಬೀಸಿ ಬಂದು ವಿಲಿಯಮ್ಮನ ಕುತ್ತಿಗೆ ಬಿಗಿಯಿತು. ಕಿವಿಯ ಹಿಂದೊಂದು ಗಂಟು ಒತ್ತಿತು. ಆತನಿಗೆ ಉಸಿರಾಡಲು, ಮಾತಾಡಲು, ಸಾಧ್ಯವಿರಲಿಲ್ಲ. ಸುಮ್ಮನೆ ಕೈ ಬೀಸಿದ, ಆಗ ಹುಸೇನ ಹಿಂದೆ ಸರಿದ. ಕೊರಳ ಮೇಲಿನ ಹಿಡಿತ ಸಡಿಲಾಯಿತು. ಉಸಿರೆಳೆದುಕೊಂಡ. ತಲೆ ಸುತ್ತಿದಂತೆನಿಸಿತು.

ಹುಸೇನ ಮತ್ತೆ ನೆಲದ ಮೇಲೆ ಕುಳಿತು ಶಾಂತವಾಗಿ ಅಂದ: ''ಕ್ಷಮಿಸಿ, ಆದರೆ ನಿಮಗೆ ತೋರಿಸಬೇಕಾಗಿತ್ತು,'' ಎಂದು ದೊಡ್ಡದೊಂದು ಕರವಸ್ತ್ರವನ್ನು ತನ್ನ ಸೊಂಟಪಟ್ಟಿಯಲ್ಲಿ ಸಿಕ್ಕಿಸಿದ.'' ಅವರು ಹೀಗೆ ಮಾಡುವುದು ನೋಡಿ,'' ಅಂದ.

ವಿಲಿಯಮ್ಮನ ಮೈ ನಡುಕ ಕಡಿಮೆಯಾಗಿ ಶಪಿಸಹತ್ತಿದ. ಹುಸೇನ ಮುಂದುವರೆದ:

"ದಾರಿಯಲ್ಲಿ ಇಂದು ನನ್ನನ್ನು ಬಂಧಿಸುವಾಗ ಒಂದು ಪ್ರಯಾಣಿಕರ ಗುಂಪು ಹೋದದ್ದು ನೆನಪಿದೆಯೇ? ಅವನೊಬ್ಬ ಮೊರದಾಬಾದದ ಶ್ರೀಮಂತ ಠಾಕುರ. ನಾಳೆ ಇಲ್ಲಿದ್ದು ಮರುದಿನ ಹೊರಡುವರು. ಒಂದು ದಿನದ ಬಳಿಕ ನೀವು ಪರಿವಾರ ಸಹಿತ ಅವರ ಬೆನ್ನಟ್ಟಿ ಹೋಗಿ. ಕಾಳಿಯ ಸೇವಕರಿಂದ ಅವರ ಕೊಲೆಯಾಗುವುದೆಂದು ನನಗೇನೋ ಸಂದೇಹ. ನೀವು ಕಣ್ಣಾರೆ ಕಂಡರೆ ಎಲ್ಲವೂ ತಿಳಿಯುವದು. ಈಗ ನನ್ನನ್ನು ಬಿಟ್ಟುಬಿಡಿ. ನಾನು ನೇಕಾರ ಗೋಪಾಲನ ಪತ್ತೆ ಹಚ್ಚಬೇಕು. ಮತ್ತೆ ತಿರುಗಿ ಬರುವೆ. ಅನಂತರ ನಾವು ಮುಂದೇನು ಮಾಡಬೇಕೆನ್ನುವುದನ್ನು ವಿಚಾರಿಸೋಣ."

ತಾನು ಆರು ತಿಂಗಳಕಾಲ ಈ ಕೊಲೆಗಡುಕರನ್ನು ಹಿಡಿಯಲು ಪ್ರಯತ್ನಿಸಿದ್ದ. ಈಗೊಬ್ಬ ಸಾಕ್ಷಿದಾರ ಸಿಕ್ಕಿದ್ದ. ಆತನನ್ನುಕೈಯಿಂದ ಜಾರಿ ಬಿಡಬಹುದೇ ಎಂದು ವಿಲಿಯಂ ಯೋಚಿಸುತ್ತಿದ್ದ.

"ಇಲ್ಲ. ಹುಸೇನ, ನಿನ್ನನ್ನು ಬಿಡುಗಡೆ ಮಾಡಲಾರೆ," ಎಂದು ಖೇದದಿಂದ ಹೇಳಿ ತನ್ನ ಬಂಗಲೆಗೆ ಹೋದ.

ಮರುದಿನ ಬೆಳಗಾಗುವದರೊಳಗೆ ಕೈದಿ ಪರಾರಿಯಾಗಿದ್ದನೆಂಬ ಸುದ್ದಿಯನ್ನು ಸೆರೆಮನೆಯ ಕಾವಲುಗಾರ ತಂದ. ಆತ ಥರಥರ ನಡುಗುತ್ತ ವಿಲಿಯಮ್ಮನ ಕಾಲಿಗೆ ಬಿದ್ದು, "ಸಾಹೆಬ್, ನಾನೇನು ಮಾಡಲಿ? ಕೋಳಿ ಕೂಗಿದಾಗಲೆ ಆ ನೀಚ ನನಗೊಂದು ಲೋಟ ತಂದುಕೊಡಲು ಕೇಳಿದ. ನಾನಲ್ಲಿ ಹೋದಾಗ, ಬಾಗಿಲ ಸಲಾಕಿಯಿಂದ ಒಂದು ಕೈವಸ್ತ್ರ ಬೀಸಿ ನನ್ನ ಕುತ್ತಿಗೆಗೆ ಬಿಗಿದ. ನನ್ನ ಉಸಿರು ಕಟ್ಟಿ ಕಣ್ಣು ಕತ್ತಲೆಗೂಡಿಸಿದಂತಾಯಿತು. ತಲೆಯಲ್ಲಿ ಸುತ್ತಿಗೆಯೇಟು ಹೊಡೆದಂತೆನಿಸಿತು. "ನನ್ನನ್ನು ಹೊರಗೆ ಬಿಡು, ಇಲ್ಲವಾದರೆ ನಿನ್ನ ಕಥೆ ಮುಗಿದಂತೆ," ಎಂದು ಸಲಾಕಿಗಳ ಹಿಂದಿನಿಂದಲೆ ಬುಸುಗುಟ್ಟಿದ. "ನಾಮ ಒದ್ದಾಡಿದೆ. ಕುತ್ತಿಗೆಯ ಉರುಳು ಬಿಗಿಯಾಯಿತು. ಬಳಿಕ ಬಾಗಿಲ ತೆರೆದೆ. ಆತ ಹೊರಬಿದ್ದು ಎಲ್ಲಿ ಹೋದನೋ ನಾನರಿಯೆ. ನಾನು ನೆಲಕ್ಕೆ ಕುಸಿದು ಬಿದ್ದೆ. ನೋಡಿ ಸಾಹೆಬ್." ಎಂದು ಕೊರಳ ಮೇಲಿನ ಹಿಸುಕಿದ ಕೆಂಪುಗೆರೆ ತೋರಿಸಿದ.

ವಿಲಿಯಂ ತನ್ನ ಕೊರಳ ಮೇಲೆ ಕೈಯಾಡಿಸಿಕೊಂಡು ಆ ಚೌಕವಸ್ತ್ರದ ಭೀಷಣತೆಯನ್ನು ನೆನಪಿಸಿಕೊಂಡ.

★

ಮಾರನೆ ದಿನ ವಿಲಿಯಂ ಪರಿವಾರ ಸಮೇತನಾಗಿ ಪ್ರವಾಸಿ ಠಾಕುರನನ್ನು ಹಿಂಬಾಲಿಸಿದ. ಕುದುರೆಯ ಮೇಲೆ ಮೇರಿ, ಮತ್ತಿಬ್ಬರು ನಾಗರಿಕ ವಸ್ತ್ರ ಧರಿಸಿದ ಪೋಲೀಸರು ಅವನ ಜೊತೆಯಲ್ಲಿದ್ದರು. ನಾಲ್ಕನೆಯ ದಿನ ಅವರು ಚಿಖ್ಲಿ ಹತ್ತಿರ ನರ್ಮದೆಯ ತೀರವನ್ನು ಸೇರಿದರು. ವಿಚಾರಿಸಲಾಗಿ ಹಿಂದಿನ ರಾತ್ರಿ ತಾರಾದೇಹಿ ಹತ್ತಿರ ರೈತನೊಬ್ಬ ಠಾಕುರನ ಪರಿವಾರ ಹೋದ ಸಮಾಚಾರ ಹೇಳಿದ. ಆದರೆ ಚಿಖ್ಲಿ ನದಿತೀರದಲ್ಲಿ ಅಂಬಿಗರು ಆ ತಂಡ ನದಿ ದಾಟಿಲ್ಲವೆಂದು ಹೇಳಿದರು. ಹಾಗಾದರೆ ತಾರಾದೇಹಿ ಮತ್ತು ಚಿಖ್ಲಿ ನಡುವೆ ಠಾಕುರ ಮತ್ತವನ ಸಂಗಡಿಗರು ಮಾಯವಾಗಿದ್ದಾರೆ ಎಂದಾತ ತರ್ಕಿಸಿದ.

ವಿಲಿಯಂ ಕೊಲೆಯ ಜಾಡನ್ನು ಹಿಡಿಯಲು ಹೊರಟ. ಒಂದು ಗಿಡದ ಬೊಡ್ಡೆಯ ಮೇಲೆ ಸ್ವಲ್ಪ ರಕ್ತ ಹೆಪ್ಪುಗಟ್ಟಿದ್ದು ಕಂಡಿತು. ಕುದುರೆ ನಿಲ್ಲಿಸಿ ಎಲ್ಲರೂ ಇಳಿದರು. ಕಂಟಿಗಳಲ್ಲಿ ಹೊಕ್ಕು ಸೂಕ್ಷ್ಮವಾಗಿ ಹುಡುಕಾಡಿದರು. ದೊಡ್ಡ ಮರದ ಅಡಿಯಲ್ಲಿ ಏನೋ ಹೊಳೆಯುತ್ತಿತ್ತು. ವಿಲಿಯಂ ಬಾಗಿ ಹಸಿ ಎಲೆಗಳನ್ನು ಸರಿಸಿ, ಸಣ್ಣದೊಂದು ಪಿಕಾಸಿಯನ್ನು ಹೊರದೆಗೆದ. ಅದರ ಹಿಡಿಯ ಮೇಲೆ ಚಿತ್ರವಿಚಿತ್ರವಾದ ನಕ್ಷೆಗಳಿದ್ದವು. ಮತ್ತೊಂದೆಡೆ ಮೇರಿ ಕೈಹಾಕಿ ಕೆದರಿದಾಗ ಮಣ್ಣಿನೊಳಗಿಂದ ಒಂದು ಬೆಳ್ಳಿ ರೂಪಾಯಿಯ ನಾಣ್ಯ ಹೊರಬಿದ್ದಿತು. ಅದಕ್ಕೆ ಕಂದು ಬಣ್ಣದ ಅಂಟು ಸಕ್ಕರೆ ಮೆತ್ತಿತ್ತು. ವಿಲಿಯಂ ಸಿಟ್ಟಿನಿಂದ ಪಿಕಾಸಿಯನ್ನು ಎಸೆದ. ಅದು ಬಿದ್ದ ಜಾಗದಲ್ಲಿ

ಮಣ್ಣಿನ ಪಂಟೆಯೊಂದು ಎದ್ದಿತು. ಅದರ ಕೆಳಗಿನ ತೂತಿನಲ್ಲಿ ಹಳದಿ ಬಣ್ಣದ ದಾರದೆಳೆ ಕಂಡಿತು. ಮೂವರು ಅದನ್ನು ದಿಟ್ಟಿಸಿ ನೋಡಿದರು. ಅದು ಠಾಕುರನ ಕೋಟಿನದಾಗಿತ್ತು.

ಎಲಿಯಮ್ ಚಿಟ್ಟಿಯಿಂದ ಆಳುಗಳಿಗೆ ಬರಹೇಳಿ ಅಲ್ಲಿ ಅಗೆಯಲು ಆದೇಶಿಸಿದ. ಕೆಲಹೊತ್ತಾದ ಮೇಲೆ ಅವರು ಗಾಬರಿಯಿಂದ ಕೂಗಾಡುತ್ತ ಕಂದು ಬಣ್ಣದ ತುಂಡಾದ ಹೆಣವೊಂದನ್ನು ಹೊರಗೆಳೆದರು. ಕ್ರಮೇಣ ಏಳೂ ಹೆಣಗಳನ್ನು ಹೊರತೆಗೆದು ಸಾಲಾಗಿ ಇಟ್ಟರು. ಪ್ರತಿಯೊಂದು ಕುತ್ತಿಗೆಯ ಸುತ್ತ ಕೆಂಪುಗೆರೆ; ಮುರಿದ ಕೈಕಾಲು ಸಂದುಗಳು, ಎದೆ, ಹೊಟ್ಟೆಗಳ ಮೇಲೆ ತೀವ್ರ ಗಾಯಗಳು, ಕರುಳುಗಳು ಹೊರಬಿದ್ದು ಮಣ್ಣು ಮೆತ್ತಿದ್ದವು. ತಗ್ಗಿನಲ್ಲಿ ಚೂಪಾದ ರಕ್ತಮಯ ಗೂಟಗಳು, ಒಂದು ದೊಣ್ಣೆ ಮತ್ತು ಮರದ ಕೊರಡುಗಳಿದ್ದವು. ಈ ಹೆಣಗಳಲ್ಲದೆ, ಹತ್ತಿರದಲ್ಲಿ ಇನ್ನೂ ಹನ್ನೆರಡು ಅಸ್ಥಿಪಂಜರಗಳನ್ನವರು ಅಗೆದು ತೆಗೆದರು.

ಈ ಕೊಲೆಗಳ ಭೀಕರತೆಯನ್ನು ನೆನೆಸಿ ಎಲಿಯಮ್ಮನ ಮನಸ್ಸು ರೋಸಿಹೋಯಿತು. ಅವರು ಸಾಮಾನ್ಯ ಕೊಲೆಗಾರರಲ್ಲ. ಜಗತ್ತಿನಲ್ಲಿಯೇ ಅತಿ ಕ್ರೂರ ಘಾತುಕ ಮನುಷ್ಯರಾಗಿದ್ದರು. ಅವರು ಅಲ್ಲಿಂದ ಐವತ್ತು ಮೈಲಿ ದೂರ ಹೋಗಿರಲಿಕ್ಕಿಲ್ಲವೆಂದು ಲೆಕ್ಕಹಾಕಿದ. ಕೂಡಲೆ ಕಾವಲು ಪಡೆಯನ್ನು ಕರೆಸಿ, ಎಲ್ಲ ಮಾರ್ಗಗಳಲ್ಲಿ ಸಶಸ್ತ್ರ ಸವಾರರನ್ನು ಇಲಾಖೆಯ ಗಡಿಗಳವರೆಗೂ ಕಳಿಸಬೇಕೆಂಬ ವ್ಯವಸ್ಥೆಯನ್ನು ಮಾಡಿದ. ಹಾಗೂ ಇಪ್ಪತ್ತು ಸವಾರರ ಒಂದು ಪಡೆಯೊಂದಿಗೆ ತಾನೂ ಅಶ್ವಾರೂಢನಾಗಿ ಹೊರಟ.

ಅವರೆಲ್ಲ ಮಧ್ಯಾಹ್ನ ಸುಡುಏನ ಬಿಸಿಲಲ್ಲಿ ದಕ್ಷಿಣ ದಿಶೆಯತ್ತ ಸಾಗಿದರು. ರಾತ್ರಿಯೆಲ್ಲ ಸತತ ತಿರುಗಿದರು. ಬೆಳಗಿನ ಜಾವ ಸುರಿಮಳೆಯಲ್ಲಿ ಅವರ ಸಮವಸ್ತ್ರಗಳೆಲ್ಲ ರಾಡಿಯಾದವು. ಮುಂಜಾನೆ ಹತ್ತು ಗಂಟೆಯಷ್ಟೊತ್ತಿಗೆ ಅವರು ಕಂಪನಿಯ ಸೈನಿಕರೆಂದು ಯಾರೂ ಗುರುತು ಹಿಡಿಯುವಂತಿರಲಿಲ್ಲ.

ದೂರದಲ್ಲಿ ತಂಡವೊಂದು ಹೋಗುತ್ತಿರುವುದು ಕಂಡಿತು. ಅಲ್ಲಿಗೆ ಅವರೆಲ್ಲ ನಾಗಾಲೋಟದಿಂದ ಮುನ್ನುಗ್ಗಿದರು. ಪ್ರಯಾಣಿಕರು ಬಂದೂಕಿನಿಂದ ಗುಂಡು ಹಾರಿಸುತ್ತ ಕುರುಚಲು ಕಂಟಿಯೊಳಗೆ ಹೊಕ್ಕು ಪಾರಾಗಿ ಕೊನೆಗೆ ಬಯಲು ಪ್ರದೇಶದಲ್ಲಿ ಸಿಕ್ಕುಬಿದ್ದರು. ಆಂಗ್ಲಸವಾರರು ಅವರ ಸುತ್ತುವರೆದರು. ಎಲಿಯಂ ಕೈಯಲ್ಲಿದ್ದ ಚಬಕವನ್ನು ಬೀಸುತ್ತಲಿದ್ದ.

ಒಮ್ಮೆಲೆ ಅವನೆದುರು ಒಂದು ಬಿಳಿಚಿದ ಉದ್ದ ಮುಖ ಗೋಚರಿಸಿತು. ಚಂದ್ರಸೇನನ ಮುಖ! ಎಲಿಯಂ ಜೋಲಿತಪ್ಪಿ ಕುದುರೆಯಿಂದ ಕೆಳಗುರುಳಿದ. ಸುಮಾರು ನಲವತ್ತು ಪ್ರಯಾಣಿಕರು ಅವನ ಸುತ್ತುವರಿದರು. ಚಂದ್ರಸೇನ ಕೈಯಲ್ಲಿ ಚಾಕೂ ಹಿಡಿದು ಅವನ ಮೇಲೆ ಏರಿಬಂದ. "ಚಂದ್ರಸೇನ! ಚಂದ್ರಸೇನ! ನಾನು, ಸ್ಕ್ಯಾವೇಜ ಸಾಹಿಬ್!" ಎಂದು ಕೂಗಿದ. ಪಟೇಲ ತಡೆದ. ಅವನ ಬೇಟೆನಾಯಿಯಂಥ ಮುಖ ಆಶ್ಚರ್ಯಚಕಿತವಾಗಿತ್ತು. ಬಳಿಕ ಹಿಂದೆ ಸರಿದು ಕೂಗಿದ: "ಮಿತ್ರರೆ, ತಡೆಯಿರಿ. ಇವರು ನಮ್ಮ ಮಾನ್ಯ ಕಲೆಕ್ಟರ ಸಾಹೇಬರು! ನನ್ನ ಸ್ನೇಹಿತ! ಹೋರಾಟ ನಿಲ್ಲಿಸಿ!."

ಎಲಿಯಂ ಪ್ರಯಾಸಪಟ್ಟು ಎದ್ದ. ಎಲ್ಲ ಪ್ರಯಾಣಿಕರ ಸರಕುಸರಂಜಾಮವನ್ನು ಶೋಧಿಸಿದ. ಆದರೆ ಠಾಕೂರನ ಕೊಲೆಗೆ ಕಾರಣವಾಗುವಂಥ ಯಾವ ಸಾಕ್ಷ್ಯಗಳೂ ಸಿಗಲಿಲ್ಲ. ಎಲಿಯಂ ಹತಾಶನಾಗಿ ಹಿಂದಿರುಗಿದ. ಆದರೆ ಕೊಲೆಗಡುಕರು ಸಿಗುವವರೆಗೆ ಹಿಡಿದ ಪ್ರಯತ್ನವನ್ನು ಕೈ ಬಿಡುವದಿಲ್ಲ ಎಂದು ಪಣತೊಟ್ಟ.

★

ಒಂದು ವಾರದನಂತರ ಎಲ್ಸನ್ ಎಲಿಯಮ್ಮನ ಮನೆಯ ಕೋಣೆಯಲ್ಲಿ ರೇಗುತ್ತ ನಿಂತಿದ್ದ. 'ಈ ಕೊಲೆಗಡುಕರನ್ನು ಪತ್ತೆ

ಹೆಚ್ಚುವ ಸಂಭ್ರಮದಲ್ಲಿ ನೀನು ನಿನ್ನ ಇಲಾಖೆಯ ಉಳಿದ ಕಾರ್ಯಕ್ರಮಗಳನ್ನು ಅಲಕ್ಷಿಸಿರುವಿ' ಎಂದು ನಿಷ್ಠುರ ಭಾಷಣ ಆರಂಭಿಸಿದ. 'ಅಷ್ಟಾದರೂ ಅಪರಾಧಿಗಳನ್ನು ಹಿಡಿಯಲು ನಿನ್ನಿಂದಾಗಲಿಲ್ಲ' ಎಂದು ಅವನನ್ನು ತರಾಟೆಗೆ ತೆಗೆದುಕೊಂಡ. ''ಹೌದು, ವಿಲ್ಸನ್. ನೀನು ಹೇಳುವುದು ಸರಿ. ಈ ಕೊಲೆಗಡುಕರನ್ನು ಹಿಡಿಯುವದೇ ಜಿಲ್ಲೆಯಲ್ಲಿಯ ಅತಿಮುಖ್ಯ ಕಾರ್ಯ. ನಿಮ್ಮ ಪ್ರಾಂತಗಳಲ್ಲೂ ಅದೇ ಮುಖ್ಯ ಎಂದು ನನಗನಿಸುತ್ತದೆ.''

''ಇದನ್ನು ನಾನು ಒಪ್ಪುವುದಿಲ್ಲ, ಸ್ಯಾವೇಜ್. ಭಾರತದ ನಾಗರಿಕ ಆಡಳಿತದಲ್ಲಿ ಅಧಿಕಾರ ವಹಿಸಿಕೊಂಡಿರಲು ನೀನು ಯೋಗ್ಯನಲ್ಲ. ನೀನು ಕೂಡಲೆ ರಾಜೀನಾಮೆ ಅರ್ಜಿ ಕೊಡುವುದು ಒಳ್ಳೆಯದು.'' ''ಸರಿ, ಸರ್'' ಎಂದು ವಿಲಿಯಂ ತನ್ನ ಕೋಣೆಗೆ ಹೋದ. ವಿಷಯ ತಿಳಿದು ಮೇರಿ ಅಳಹತ್ತಿದಳು: ''ವಿಲಿಯಂ, ನಮ್ಮ ಮಗು.....ಇಲ್ಲಿ...... ಮಧ್ಯಾದಲ್ಲಿಯೇ ಹುಟ್ಟಬೇಕೆಂದು ನನ್ನ ಆಸೆಯಾಗಿತ್ತು,'' ಎಂದಾಕೆ ಬಿಕ್ಕಳಿಸಿದಳು.

ಅಷ್ಟರಲ್ಲಿ ಹೊರಗಡೆ ಹುಸೇನನ ಧ್ವನಿ ಕೇಳಿಸಿದಂತಾಯಿತು. ವಿಲಿಯಂ ಪುಲಕಿತಗೊಂಡು ಬಾಗಿಲು ತೆರೆದ. ಆತ ಮೆಲ್ಲಗೆ ಒಳಗೆ ಬಂದು, '' ನಾನು ಹೇಳಿದ ಪ್ರಕಾರ ತಿರುಗಿ ಬಂದಿದ್ದೇನೆ,'' ಅಂದ. ''ಇನ್ನು ಏನೂ ಪ್ರಯೋಜನವಿಲ್ಲ. ವಿಲ್ಸನ್ ಸಾಹೇಬರು ನನ್ನನ್ನು ಹುದ್ದೆಯಿಂದ ಕಿತ್ತುಹಾಕಿದ್ದಾರೆ,'' ಎಂದು ವಿಲಿಯಂ ಸಿಡುಕಿನಿಂದ ಅಂದ.

''ಹೌದೆ ? ಹಾಗಾದರೆ ಒಳ್ಳೆಯದೇ ಆಯಿತು. ಇದು ನಿಮಗೆ ನಷ್ಟವೇನಲ್ಲ, ಲಾಭದಾಯಕವೇ. ನೀವು ಹತ್ತು ಲಕ್ಷ ಕೊಲೆಗಳನ್ನು ಬಹಿರಂಗಪಡಿಸಬಹುದು.''

''ಹತ್ತು ಲಕ್ಷ! ಅದೂ ನನ್ನ ಇಲಾಖೆಯಲ್ಲಿ?'' ಎಂದು ವಿಲಿಯಂ ಪುಟಿದೆದ್ದ.

''ಇಲ್ಲ, ಇಡೀ ಹಿಂದೂಸ್ತಾನದ ತುಂಬ. ಇದನ್ನು ಬಯಲಿಗೆಳೆದರೆ ನಿಮಗೆ ರಾಜಮರ್ಯಾದೆ ಸಿಗಲಾರದೆ?''

''ನೀನೇನು ಮಾಡಬೇಕೆನ್ನುತ್ತಿ?'' ಕೇಳಿದ ವಿಲಿಯಂ.

ಹುಸೇನ ಎರಡು ನಿಮಿಷ ಸುಮ್ಮನಿದ್ದ. ಬಳಿಕ ತಡೆತಡೆದು ಹೇಳಹತ್ತಿದ. ''ಆ ಠಾಕೂರ್ ಮತ್ತವನ ಪರಿವಾರದ ಕೊಲೆಯಾದದ್ದನ್ನು ನೀವು ಕಂಡಿರಲ್ಲವೇ? ನೀವು ಇನ್ನಿಷ್ಟು ಕೊಲೆಗಳನ್ನು ಕಾಣಬೇಕು. ಅದಕ್ಕೆ ನೀವೊಬ್ಬ ಭಾರತೀಯನಾಗಿ, ನನ್ನ ಸಂಗಡ ತಿರುಗಬೇಕು. ನಿಮ್ಮ ಕಣ್ಣು ಕಪ್ಪಾಗಿದೆ. ಅಲ್ಲದೆ ನಿಮಗೆ ಹಿಂದಿಭಾಷೆ ಚೆನ್ನಾಗಿ ಬರುತ್ತದೆ. ನೇಕಾರ ಗೋಪಾಲನಂತೆ ನೀವು ತಲೆಮರೆಸಿಕೊಳ್ಳಬಹುದು. ಅದರಿಂದ ಉಪಯೋಗವಾಗಬಹುದು. ಅಪಾಯವೂ ಆಗಬಹುದು.'' ''ಯಾಕೆ ? ಗೋಪಾಲ ಸತ್ತಿರುವನಲ್ಲ?'' ವಿಲಿಯಂ ಪ್ರಶ್ನಿಸಿದ. ''ಇಲ್ಲ. ಸತ್ತಿಲ್ಲ. ಆದರೆ ಇಲ್ಲಿಂದ ದೂರ ಇದ್ದಾನೆ. ಆತನೂ ಕಾಳಿಯ ಸೇವಕನಾಗಿದ್ದಾನೆ. ಅದನ್ನು ತಿಳಿದುಕೊಳ್ಳಲೆಂದೇ ಸೆರೆಮನೆಯಿಂದ ತಪ್ಪಿಸಿಕೊಂಡು ಹೋದೆ. ಈಗ ನೀವು ನನ್ನ ಸಂಗಡ ಬಂದು ಬಿಡಿ. ಐದು ತಿಂಗಳು ನೀವು ನನ್ನೊಂದಿಗೆ ಇರಬೇಕಾಗುವುದು.''

''ಐದು ತಿಂಗಳು! ಅಷ್ಟು ದೀರ್ಘಕಾಲ ಏಕೆ ?''

''ಅಂದರೆ ದಸರಾ ಹಬ್ಬದ ಅನಂತರ. ಅದೊಂದು ಸಂಪೂರ್ಣ ಸಂಚಾರದ ಅವಧಿ. ಠಕ್ಕರ ತಂಡಗಳು ಕೂಡುವದರಿಂದ ಹಿಡಿದು ಕೊನೆಗೆ ಚದರುವವರೆಗೂ ನೋಡಿದರೆ ಪೂರ್ತಿ ಅರ್ಥವಾಗುವುದು. ಆದರೆ ಒಂದು ಶರತ್ತು. ನಿಮ್ಮೆದುರೇ ಕೊಲೆಗಳು ನಡೆಯುತ್ತಿದ್ದರೂ ಸುಮ್ಮನೆ ನೋಡುತ್ತ ಇರಬೇಕು.''

''ಈ ಕಾಳಿಯ ಸೇವಕರಿಗೆ ಏನಾದರೂ ವಿಶಿಷ್ಟ ಹೆಸರು ಉಂಟೆ ?''

''ಹೌದು, ಠಕ್ಕರು. ಅವರಿಗೆ ತಮ್ಮ ಪ್ರತ್ಯೇಕ ನಡೆನುಡಿಯೂ ಉಂಟು. ಅದನ್ನೆಲ್ಲ ನೀವು ಕಲಿಯಲು ಮೊದಲಿಗೆ ನಾವು ಅನೇಕ ದಿನ ಕಾಡಿನಲ್ಲಿರಬೇಕಾಗುವುದು.... ನೀವು ಬರುವಿರಾ?'' ವಿಲಿಯಂ ಮೇರಿಯತ್ತ ನೋಡಿದ. ಅವಳು ಸುಮ್ಮನೆ ಇದ್ದಳು! ಮೌನಂ ಸಮ್ಮತಿ ಲಕ್ಷಣಂ ಎಂದು ಗ್ರಹಿಸಿ ''ಹಾಗೇ ಆಗಲಿ. ನಾನು ಬರುತ್ತೇನೆ,'' ಎಂದು ಹೇಳಿದ ವಿಲಿಯಂ.

"ಸರಿ. ಹಾಗಾದರೆ ನಾಳೆ ರಾತ್ರಿ, ನಾನು ಇದೇ ವೇಳೆಗೆ ಬರುತ್ತೇನೆ. ನೀವು ಯಾರಿಗೂ ಗೊತ್ತಾಗದಂತೆ ಮನೆಬಿಟ್ಟು ಹೊರಬನ್ನಿ" ಎಂದು ಹುಸೇನ ಹೇಳಿಹೋದ.

ಆಮೇಲೆ ಮೇರಿ ಎಲಿಯಮ್ಮನ ಕೈ ಗಟ್ಟಿಯಾಗಿ ಹಿಡಿದು, "ಎಲಿಯಂ, ನನಗೀಗ ಭಯವಾಗುತ್ತದೆ," ಅಂದಳು. ಅವನಿಗೂ ಮನದಲ್ಲಿ ಅನೇಕ ಭೀತಿಗಳು ಮುತ್ತಿದವು. ಆಕೆಯನ್ನು ಆತ ಬಿಗಿಯಾಗಿ ಅಪ್ಪಿಕೊಂಡ.

"ನನಗೆ ಸಂದೇಶ ಕಳಿಸುತ್ತಿರು, ಎಲಿಯಂ. ನಾನು ನಿನಗೆ ಸಹಾಯ ಮಾಡುವೆ," ಎಂದು ಮೇರಿ ಆತನ ಎದೆಯ ಮೇಲೆ ತಲೆಯಿಟ್ಟು ಕಣ್ಣೀರು ಸುರಿಸಿದಳು.

★

ಎಲಿಯಂ ಮತ್ತು ಹುಸೇನ ಹೊಲಗಳ ನಡುವೆ ನಡೆದರು. ಮುಂದುಗಡೆ ಸಣ್ಣ ಶಹರವೊಂದರ ದೀಪಗಳು ಹೊಳೆಯುತ್ತಿದ್ದವು. ರಾತ್ರಿ ಚಳಿಯಾಗಿತ್ತು. ಎಲಿಯಂ ದೀರ್ಘವಾಗಿ ಉಸಿರೆಳೆದುಕೊಂಡ. ಭಾರತ ಎಷ್ಟು ಸುಂದರ! ಆ ದೀಪಾವಳಿಯ ರಾತ್ರಿಯಂತೂ ಇನ್ನೂ ಮೋಹಕವೆನಿಸಿತು. ಪ್ರತಿಯೊಂದು ಮನೆ, ಗುಡಿಸಲುಗಳ ಮುಂದೆ ಚಿಕ್ಕ ಚಿಕ್ಕ ಹಣತೆಗಳಲ್ಲಿ ನೂರಾರು ದೀಪಗಳು ಮಿನುಗುತ್ತಿದ್ದವು.

ಈ ರಾತ್ರಿ ಹಾಗೂ ಕಳೆದ ಎರಡು ವಾರಗಳಿಂದ ಆತ ನಿಜಕ್ಕೂ ಭಾರತದ ಒಂದು ಅಂಶವಾಗಿದ್ದ. ಹತ್ತೊಂಭತ್ತು ವರ್ಷ ಆತ ಇಲ್ಲಿ ಕೆಲಸ ಮಾಡಿದ್ದ, ಈ ಮಧ್ಯಪ್ರದೇಶದ ಭೂಮಿಯ ಕೆಂಪು, ಕಾಡಿನ ಹಸಿರು, ಶುಭ್ರ ನದಿಗಳು, ಹೊಗೆಯಾಡುವ ಹಳ್ಳಿಗಳ ಬೂದು ಬಣ್ಣ ಎಲ್ಲದರಿಂದಾತ ಆಕರ್ಷಿತನಾಗಿದ್ದ.

ಹುಸೇನನೊಂದಿಗಿದ್ದ ಈ ಕೆಲವು ದಿನ, ಹಾಗೂ ಮುಂಬರುವ ಕೆಲ ತಿಂಗಳ ಕಾಲ ಆತ ಭಾರತೀಯನಾಗಬೇಕಾಗಿತ್ತು. ತನ್ನ ಪ್ರಾಣ ಉಳಿಸಿಕೊಳ್ಳಲು ಅಪ್ಪಟ ಭಾರತೀಯನೇ ಆಗಬೇಕು. ಒಂದು ತಪ್ಪು ಹೆಜ್ಜೆಯನ್ನೂ ಇಡಕೂಡದು. ಈಗ ತಾನು ಅಪರಾಧಿಗಳನ್ನು ಸುಧಾರಿಸುವವನಲ್ಲ, ಅವರ ಮಧ್ಯದಲ್ಲೆ ಜೀವಿಸುವವ. ಹಿಂಸೆಯೊಂದಿಗೆ ಹೋರಾಡುವವನಲ್ಲ, ಅವುಗಳೊಂದಿಗೆ ಬೆರೆತು ಒಂದಾಗುವವನು.

ಎಲಿಯಂ ಖಂಡಿತ ನೇಕಾರ ಗೋಪಾಲನ ಹಾಗೆ ಕಾಣಸುತ್ತಿದ್ದ. ಠಕ್ಕರು ಉಪಯೋಗಿಸುವ 'ರುಮಾಲ', ಕುತ್ತಿಗೆ ಹಿಸುಕಿ ಕೊಲ್ಲುವ ಆ ಚೌಕ ವಸ್ತ್ರಗಳನ್ನು ಸರಿಯಾಗಿ ಸಿಕ್ಕಿಸಿದ್ದ. ಹುಸೇನನ ತರಬೇತಿಯಿಂದಾಗಿ ಅವನ ನಡೆ ನುಡಿ ಆಚಾರ, ವಿಚಾರ ಎಲ್ಲಾ ನೇಕಾರ ಗೋಪಾಲನದೇ ಆಗಿಬಿಟ್ಟಿತ್ತು. ಠಕ್ಕರ ರಹಸ್ಯ ಭಾಷೆಯಲ್ಲೂ ಆತ ಪಳಗಿದ್ದ. ಆ ಶಬ್ದಾವಳಿ



ಯಲ್ಲಿ 'ಬೇತೂ' ಅಂದರೆ ಬಲಿಪಶು, 'ಮಾಲು' ಅಂದರೆ ಪ್ರಯಾಣಿಕರು, 'ಭಿಲ್' ಅಂದರೆ ಕೊಲೆ ಮಾಡುವ ಜಾಗ, ಮುಂತಾದ ಪದಾರ್ಥಗಳನ್ನು ಹುಸೇನನ ಮಾತಿನಿಂದ ಕಲಿತಿದ್ದ. ಅದನ್ನೆಲ್ಲಾ ನೆನಪಿಟ್ಟುಕೊಂಡು, ಅನಂತರ ತಾನು ತಂದಿದ್ದ ತೆಳುವಾದ ಹಾಳೆಗಳ ಮೇಲೆ ಬರೆದು, ವಾರಕ್ಕೊಮ್ಮೆ ಒಂದು ಮರದಡಿಯಲ್ಲಿ ಹುಗಿದಿಟ್ಟು ಆ ಗಿಡದ ಬಡ್ಡೆಗೆ ಗುರುತು ಮಾಡುತ್ತಿದ್ದ. ಹೀಗೆ ಠಕ್ಕರ ಹೆಸರುಗಳು, ಅವರ ಸೂಕ್ಷ್ಮ ವಿವರಗಳು, ಹಿಂದಿನ ಇತಿಹಾಸ, ಮುಂದಿನ ಯೋಜನೆಗಳು, ಅವರು ಕ್ರಮಿಸಿದ ಮಾರ್ಗಗಳು, ಕಾರ್ಯಕ್ರಮಗಳು, ಇತ್ಯಾದಿ ನಮೂದಿಸಿ, ತನ್ನ ಮೇಲಧಿಕಾರಿಗಳಿಗೆ ಸಂಪೂರ್ಣ ಮಾಹಿತಿ, ಸಾಕ್ಷ್ಯಪುರಾವೆಗಳನ್ನು ಪೂರೈಸಿ ಕೊಡುವ ಹಂಚಿಕೆ ಹಾಕಿದ್ದ.

ಅವರಿಬ್ಬರೂ ಜಾಲಪುರ ಎಂಬ ಮುಂದಿನ ಗ್ರಾಮವನ್ನು ತಲುಪಿ ಅಲ್ಲಿನ ಪೇಟೆಬೀದಿಯಲ್ಲಿ ಹಾಯ್ದು ವೇಶ್ಯೆಯರ ಓಣಿಗೆ ಹೋದರು. ಅಲ್ಲಿಯ ಮನೆಗಳ ಮುಂದೆ ಕುಳಿತ ಹುಡುಗಿಯರನ್ನು ನೆಟ್ಟದೃಷ್ಟಿಯಿಂದ ಅನೇಕರು ನೋಡುತ್ತಿದ್ದರು. ಒಂದು ಮನೆ ಯೆದುರು ಹೆಚ್ಚು ಪ್ರವಾಸಿಗರು ನಿಂತಿದ್ದರು. ಒಂದಿಬ್ಬರನ್ನು ದಿಟ್ಟಿಸಿ ನೋಡುತ್ತ ಕೊನೆಗೆ ಹುಸೇನ ಒಬ್ಬನಿಗೆ, "ಸಲಾಮ್, ಅಲಿ ಭಾಯಿ. ಇವಳ ಬೆಲೆ ಎಷ್ಟೋ? ಚೆನ್ನಾಗಿದ್ದಾಳೆ," ಅಂದ.

"ಸಲಾಮ್, ಅಲಿ ಭಾಯಿ. ನಮ್ಮಂಥವರಿಗೆ ತುಂಬಾ ಬೆಲೆ - ಎರಡು ರೂಪಾಯಿ," ಎಂದು ಇನ್ನೊಬ್ಬ ನಕ್ಕ.

ಹುಸೇನ ಮತ್ತು ವಿಲಿಯಂ ಮುಂದೆ ನಡೆದರು. ಅವರ ಹಿಂದೆ ಅವರಿಬ್ಬರೂ ಬಂದು ಕೂಡಿದರು. ಅವರ ಹೆಸರುಗಳು ಹೀರೂ ಮತ್ತು ಯಸೀನಖಾನ, ತಾವು ಖುದಾಬಕ್ಷನ ತಂಡದವರೆಂದು ಹೇಳಿ, "ನಿಮ್ಮ ಹೆಸರುಗಳೇನು ? ನೀವು ತಂಡದೊಂದಿಗೇಕಿಲ್ಲ," ಎಂದು ಕೇಳಿದರು.

"ನಾನು ಹುಸೇನ, ಈತ ಗೋಪಾಲ. ಇವನ ಮುಂಗೈ ಉಳುಕಿದೆ. ಕಾರಣ ಕೆಲಸಕ್ಕೆ ಬಾರದೆಂದು ನಮ್ಮ ತಂಡ ಬಿಟ್ಟು ಹೋಯಿತು."

"ನಮ್ಮ ಹತ್ತಿರ ಸ್ವಲ್ಪ 'ಮಾಲು' ಇದೆ. ನಮ್ಮ ಜಮಾದಾರನಿಗೆ ನೀವು ಬೇಕೋ ಬೇಡವೋ ಕೇಳೋಣ ನಡೆಯಿರಿ," ಅಂದ ಯಸೀನಖಾನ.

ಎಲ್ಲರೂ ಊರ ಹೊರಗೆ ಒಂದು ಮೈಲು ದೂರ ಮರಗಳ ತೋಪು ಇರುವಲ್ಲಿ ಹೋದರು. ಅಲ್ಲಿ ಬಿಳಿಯ ಡೇರೆಗಳಿದ್ದವು. ಅನೇಕ ಕಡೆ ಬೆಂಕಿ ಉರಿಯುತ್ತಿತ್ತು. ಹುಸೇನ ಮತ್ತು ವಿಲಿಯಂ ತುಸು ದೂರದಲ್ಲಿದ್ದ ಮರವೊಂದರ ಕೆಳಗೆ ಮಲಗಿಕೊಂಡರು.

ರಾತ್ರಿ ಒಮ್ಮೆಲೆ ವಿಲಿಯಮ್ಮನಿಗೆ ಎಚ್ಚರವಾಯಿತು. ಅವನ ಕಿವಿಯಲ್ಲಿ "ನಾನು ಖುದಾಬಕ್ಷ. ನಿಜಕ್ಕೂ ನೀನು ಗೋಪಾಲನೇ? "ಓಹ್, ಎಷ್ಟು ವರ್ಷಗಳಾಯಿತು!" ಎಂದು ಯಾರೋ ಕೇಳಿದಂತಾಯಿತು.

ವಿಲಿಯಂ ಕತ್ತಲಲ್ಲಿ ದಿಟ್ಟಿಸಿದ. ತೆಳ್ಳಗಿನ ಮುಖ, ಚಿಕ್ಕ ಕಪ್ಪು ಗಡ್ಡ ಕಾಣಿಸಿತು. ಕೈಗಳನ್ನೆತ್ತಿ, "ಓಹ್, ಮಿತ್ರಾ!" ಎಂದಿಷ್ಟೇ ಅಂದ. ಜಮಾದಾರ ಬಾಗಿ, ಆತನನ್ನು ಗಟ್ಟಿಯಾಗಿ ಅಪ್ಪಿಕೊಂಡು, ಅವನ ಬಳಿ ಅಡ್ಡಾಗಿ, "ನಾವಿಬ್ಬರೂ ಭೇಟಿಯಾಗಿ ಹನ್ನೆರಡು ವರ್ಷ ಆಯಿತಲ್ಲವೆ ? ಆಗ ನೀನು ತರುಣನಾಗಿದ್ದಿ. ಇಷ್ಟು ವರ್ಷ ಎಲ್ಲಿದ್ದಿ ನೀನು ? ಮದುವೆಯಾಗಿದೆಯೇ ?" ಎಂದು ಕೇಳಿದ.

ವಿಲಿಯಂ ತುಟಿಗಳ ಮೇಲೆ ನಾಲಿಗೆಯಾಡಿಸಿದ. ಅವನಿಗೆ ಚಿತೆಯ ಬಳಿ ಕುಳಿತ ಹೆಂಗಸಿನ ನೆನಪಾಯಿತು. "ನಾನು ಮದುವೆಯಾದೆ," ಎಂದು ವಿಲಿಯಂ ನಸುನಗುತ್ತ ಉತ್ತರಿಸಿದ. ಖುದಾಬಕ್ಷ ಆತನ ಭುಜ ತಟ್ಟುತ್ತ, "ಆಕೆಯನ್ನು ಹಗಲಿರುಳೂ ಬಿಟ್ಟಿರಲಿಕ್ಕಾಗಲಿಲ್ಲವೇ? ಸರಿ, ಸರಿ. ಈಗ ತಿರುಗಿ ಬಂದೆಯಲ್ಲ, ಎಲ್ಲಾ ಸರಿ ಹೋಗುವುದು. ನೀನು ಕೈ ಚಳಕವನ್ನಿನ್ನು ಕಳೆದುಕೊಂಡಿರಲಿಕ್ಕಿಲ್ಲ," ಎಂದು ಪ್ರಸ್ತುತ ಸಮಾಚಾರವೆಲ್ಲ ಹೇಳ-ಹತ್ತಿದ. ತಾನು ತಂಡವೊಂದರ ಮುಖಂಡ,

ಹೀರೂ ಸಕ್ಕರೆ ಕೊಳ್ಳುವವ, ಯಸೀನಖಾನ ಪೂಜಾರಿ, ಇಲ್ಲಿ ತಾವು ಒಟ್ಟಿಗೆ ಒಂಭತ್ತು ಮಂದಿ, ದಾರಿಯಲ್ಲಿ ಮುಂದೆ ನಾಲ್ಕು ಜನರು, ಹಿಂದೆ ಇನ್ನೂ ಆರು ಮಂದಿ ಬರುವವರು, ಈ ತೋಪಿನಲ್ಲಿಯ ಹನ್ನೊಂದು 'ಬೇತೂ'ಗಳನ್ನು ಮುಗಿಸಲು ಹುಸೇನ ಮತ್ತು ಗೋಪಾಲ ಕೂಡಿ ಒಟ್ಟು ಇಪ್ಪತ್ತೊಂದು ಮಂದಿ, ಅಲ್ಲಿಂದ ಒಂದೆರಡು ದಿನ ಮುಂದೆ ನಡೆದು ಮಾರ್ಗದಲ್ಲಿ ಒಂದು ಒಳ್ಳೆ 'ಭಿಲ್' ದಲ್ಲಿ ಕೆಲಸ ಸಾಧಿಸಬಹುದು....

ಎಲಿಯಮ್ಮನ ಮೈಯಲ್ಲಿ ನಡುಕವುಂಟಾಯಿತು. ಕೂಡಲೆ ತೋಪಿನಲ್ಲಿ ಓಡಿಹೋಗಿ 'ಜೋಕೆ ಈ ಜನರು ಕೊಲೆಗಡುಕರು' ಎಂದು ಕೂಗಬೇಕೆಂದು ಮನಸ್ಸಾಯಿತು.

ಆದರೆ ಅದರಿಂದೇನು ಪ್ರಯೋಜನ? ಹೇಗೂ ಈ ಬಲಿಪಶುಗಳಿಗೆ ಮರಣವನ್ನು ತಪ್ಪಿಸಿಕೊಳ್ಳುವುದು ಆಗದು. ಮುಂದೆ ನಾಲ್ಕು, ಹಿಂದೆ ಆರು, ಅದಕ್ಕೂ ಮುಂದೆ ಇನ್ನೆಷ್ಟೋ ಯಾರು ಬಲ್ಲರು ? ಈ ಆಪತ್ತು ಸದೆಬಡಿಯಲು ಸೈನ್ಯಪಡೆಗಳೇ ಬೇಕಾಗುವುದೆಂದು ಎಲಿಯಂ ಆಲೋಚಿಸಿದ. ಒಬ್ಬ ಗೂಢಚಾರ ಒಳಹೊಕ್ಕು ಮಾರ್ಗದರ್ಶನ ನೀಡದ ಹೊರತಾಗಿ ಸೈನ್ಯಪಡೆಗಳು ಸಹ ಏನನ್ನೂ ಮಾಡಲಾರವು ಎಂಬುದು ಖಚಿತವಾಗಿತ್ತು.

★

ಮರುದಿನ ಎಲ್ಲರೂ ಮತ್ತೆ ಪ್ರಯಾಣವನ್ನಾರಂಭಿಸಿ ಸಾಯಂಕಾಲ ಮುಂದಿನ ತೋಪಿನಲ್ಲಿ ಠಾಣೆ ಹೂಡಿದರು. ಯಸೀನಖಾನ್ ಎಲಿಯಮ್ಮನಿಗೆ ಕಿವಿಮಾತು ಹೇಳಿದ: "ಈ ರಾತ್ರಿ, ಊಟವಾದ ಬಳಿಕ, ಜಮಾದಾರ ಸೂಚನೆ ಕೊಡುವನು. 'ಕುರಿಗಳು ಹೊಳೆಯುತ್ತಿರುವವು' ಎಂದು ಈಗ ಪ್ರಾರ್ಥನೆ, ಮೂನ್ನೂರು ಹೆಜ್ಜೆ ಆಚೆಗೆ ಬಾ" ಎಂದು ಮೆಲ್ಲನೆ ಜಾರಿಕೊಂಡ.

ಎಲಿಯಂ ಕುರುಚಲು ಕಂಟಿಗಳಲ್ಲಿ ಹಾಯ್ದು ಆ ಜಾಗಕ್ಕೆ ಹೋದ. ಅಲ್ಲಿ ಸಣ್ಣ ಬಯಲಲ್ಲಿ ಬೇವಿನ ಮರವಿತ್ತು. ಯಸೀನ ಖಾನ್, ಹುಸೇನ ಜಮಾದಾರ, ಮತ್ತೈದು ಜನರಿದ್ದರು. ಯಸೀನ ಬೇವಿನ ಮರಕ್ಕೆ ನಮಸ್ಕರಿಸಿದ. ತನ್ನ ಕಂಬಳಿಯಲ್ಲಿ ಕೈಹಾಕಿ ಒಂದು ಮಡಿಸಿದ ಬಿಳಿ ವಸ್ತ್ರ ಮತ್ತು ಸಣ್ಣ ಪಿಕಾಸಿಯನ್ನು ಹೊರತೆಗೆದ. ಅದರ ಹಿಡಿಯ ಮೇಲೆ ಅದೇ ಚಿತ್ರ ವಿಚಿತ್ರ ನಕ್ಷೆಗಳಿದ್ದುದನ್ನು ಎಲಿಯಂ ಗಮನಿಸಿದ. ಹುಲ್ಲಿನಮೇಲೆ ವಸ್ತ್ರ ಹಾಸಿ, ಅದರ ಮೇಲೆ ಪಿಕಾಸಿಯ ತುದಿ ಉತ್ತರದಿಕ್ಕಿನತ್ತ ಚಾಚುವಂತೆ ಇಟ್ಟ. ತಾನು ವಸ್ತ್ರದ ಹಿಂದುಗಡೆ ಪಶ್ಚಿಮಾಭಿಮುಖವಾಗಿ ನಿಂತ. ಜಮಾದಾರ ಮತ್ತೆಲ್ಲರೂ ಅವನ ಹಿಂದೆ ಸಾಲಾಗಿ ನಿಂತರು. ಯಸೀನ ಕೈ ಮುಗಿದುಕೊಂಡು, ಆಕಾಶದತ್ತ ನೋಡುತ್ತ, "ಓ ಕಾಳಿ! ನಿನ್ನ ಸೇವಕರು ಕಾಯುತ್ತಿರುವರು, ನಿನ್ನ ಅನುಮತಿಗಾಗಿ ಪ್ರಾರ್ಥಿಸುವರು," ಎಂದ.

ಎಲ್ಲರೂ ತಲೆಬಾಗಿ ಶಾಂತವಾಗಿ ನಿಂತರು. ಎಲಿಯಮ್ಮನ ಎದೆ ಜೋರಾಗಿ ಬಡಿಯುತ್ತಿತ್ತು. ನರಗಳು ಬಿಗಿದಂತೆನಿಸಿತು. ಅವರು ಯಾವ ಮೂಢ ನಂಬಿಕೆಯಿಂದ ನಿಂತಿದ್ದರೋ! ತಾನೂ ಅವರೊಡನೆ ನಿಂತಿದ್ದ.

ಎಷ್ಟೋ ನಿಮಿಷ ನಿಶ್ಶಬ್ದವಾಗಿತ್ತು, ಮರಗಳ ಮೇಲಿಂದ ಕಾಡು ಪಕ್ಷಿಯೊಂದು ಯಾಕೋ ಬೆದರಿ ಹೊರಬಿದ್ದು ಎಡಗಡೆ ಹಾರಿಹೋಯಿತು. ಆ ಶಬ್ದವನ್ನು ಕೇಳಿ ಮತ್ತೊಂದು ಪಕ್ಷಿ ಬಲಕ್ಕೆ ಹಾರಿತು.

ಠಕ್ಕರು ನಿಟ್ಟುಸಿರು ಬಿಟ್ಟರು. ಯಸೀನ ಖಾನ್ ಭಯಭಕ್ತಿಯಿಂದ ನುಡಿದ: "ಓ ಕಾಳಿ, ನೀನು ಹೇಳಿದ್ದನ್ನು ಕೇಳಿದೆವು. ನಿನ್ನ ಆಜ್ಞೆಯನ್ನು ಪಾಲಿಸುವೆವು" ಎಂದು ಚಿಕ್ಕ ಪಿಕಾಸಿಯನ್ನು ತೆಗೆದುಕೊಂಡು ಸೊಂಟದಲ್ಲಿ ಸಿಕ್ಕಿಸಿ ವಸ್ತ್ರ ಮಡಿಸಿ ಕಂಬಳಿಯಲ್ಲಿ ಅಡಗಿಸಿಟ್ಟ. ಎಲ್ಲರೂ ತಮ್ಮ ಸೊಂಟಪಟ್ಟಿಗಳಿಂದ ರುಮಾಲು ಹೊರತೆಗೆದು ಕೈಯಲ್ಲಿ ಒಂದೆರಡು ಬಾರಿ ಎಳೆದಾಡಿದರು. ಯಸೀನ ಎಲ್ಲರಿಗೂ ಒಂದೊಂದು ಬೆಳ್ಳಿ ರೂಪಾಯಿಯನ್ನು ಕೊಟ್ಟು ಆಶೀರ್ವದಿಸಿದ. ಅದನ್ನು ವಸ್ತ್ರದ



ಒಂದು ಮೂಲೆಯಲ್ಲಿ ಕಟ್ಟಿ ಗಂಟು ಹಾಕಿ, ಮತ್ತೆ ಎರಡು ಮೂರು ಸಲ ಬೆರಳುಗಳಿಂದ ರುಮಾಲು ಎಳೆದು ಸೊಂಟಪಟ್ಟಿಯಲ್ಲಿ ಸಿಕ್ಕಿಸಿಕೊಂಡರು. ಬಳಿಕ ಒಬ್ಬೊಬ್ಬರಾಗಿ ತಿರುಗಿ ತೋಪಿಗೆ ಹೊರಟರು.

ಪ್ರಯಾಣಿಕರೆಲ್ಲರೂ ಕೂಡಿಕೊಂಡು ಊಟ ಮಾಡಿದರು. ಬೆಂಕಿಯ ಹತ್ತಿರ ರೇಶಿಮೆ ವಸ್ತ್ರ ತೊಟ್ಟ ನವಾಬ ಜಮಖಾನೆಯ ಮೇಲೆ ಕುಳಿತಿದ್ದ. ಅವನ ಬಲಕ್ಕೆ ಮರದ ಟೊಂಗೆಗೆ ಕಟ್ಟಿದ ಜರತಾರಿ ಪರದೆಯ ಹಿಂದೆ ಮೂವರು ಹೆಂಡಂದಿರಿದ್ದರು. ಊಟವಾದ ಮೇಲೆ ಜಮಾದಾರ ಹಾಡಹತ್ತಿದ. ಎಲ್ಲರೂ ಹತ್ತಿರ ಸರಿದು ಬಂದರು. ಹುಕ್ಕಾ ಸೇದುತ್ತ, ಅರ್ಧ ನಿಮೀಲಿತ ನೇತ್ರಗಳಿಂದ ನವಾಬ ಹಾಡಿಗೆ ತಲೆದೂಗುತ್ತಿದ್ದ. ಮೆಲುದನಿಯಲ್ಲಿ ಜಮಾದಾರ ಪ್ರೇಮಗೀತೆಯನ್ನು ಹಾಡುತ್ತಿದ್ದ. ಒಮ್ಮೆಲೆ ಹಾಡಿನ ಪದದಲ್ಲಿ ಸಹಜವಾಗಿಯೆಂಬಂತೆ 'ತಾರೆಗಳು ಹೊಳೆಯುತ್ತಿದ್ದವು......' ಎಂದು ಹಾಡಿದ.

ಮಿಂಚಿನ ಬೆಳಕಿನಂತೆ ಠಕ್ಕರು ಕೈಚಳಕ ತೋರಿಸಿದರು. ರುಮಾಲುಗಳು ಹೊರಗೆ ಬೀಸಿದವು. ಒಬ್ಬೊಬ್ಬರು ಕೂಡಿ ತಮ್ಮ ಬಲಿಪಶುಗಳ ಹಿಂದೆ ಹಾರಿದರು. ಕುತ್ತಿಗೆಗಳು ಕಟಕಟ ಮುರಿದವು. ಸತ್ತ ನವಾಬನ ಕಣ್ಣುಗುಡ್ಡೆಗಳು ಹೊರಬಿದ್ದವು. ಜರತಾರಿ ಪರದೆಯ ಹಿಂದಿದ್ದವರ ಕಥೆಯೂ ಮುಗಿದಿತ್ತು.

ಎಲಿಯಂ ಕುಳಿತಲ್ಲಿಯೇ ಕಲ್ಲಾಗಿಬಿಟ್ಟಿದ್ದ. ''ಯಾಕೆ ಗೋಪಾಲ, ದಂಗು ಬಡಿದಂತಾಗಿದ್ದೀ ?'' ಎಂದು ಜಮಾದಾರ ಕೇಳಿ, ಚಿಟಿಕೆ ಹೊಡೆದು, ''ಹೂಂ, ಬೇಗ, ಮಸಣಕ್ಕೆ,'' ಎಂದು -ಆದೇಶಿಸಿದ. ಇಬ್ಬರು, ಮೂವರು ಸೇರಿ ಹೆಣಗಳನ್ನು ಎತ್ತಿಕೊಂಡು, ಪೂಜೆ ನಡೆದಲ್ಲಿಗೆ ಹೋದರು. ಜಮಾದಾರ ಬಿದಿರಿನ ಒಂದು ದಟ್ಟ ಯೆಳೆಯ ಹತ್ತಿರ ತಡೆದ, ಅದರ ಸುತ್ತ ದುಂಡಗಿನ ತಗ್ಗನ್ನು ತೋಡಲಾಗಿತ್ತು. ನೆಲದ ಮೇಲೆ ಮೂರು ಚೂಪಾದ ಗೂಟಗಳು, ಒಂದು ಕಟ್ಟಿಗೆ ಬಡ್ಡೆ, ಹಾಗೂ ದಪ್ಪ ದೊಣ್ಣೆಗಳಿದ್ದವು.

ಪೀರೂ ಹಾಗೂ ಐದು ಜನರು ಹೆಣಗಳನ್ನು ಬಡ್ಡೆಯ ಮೇಲಿಟ್ಟು, ದೊಣ್ಣೆಯಿಂದ ಹೊಡೆದು, ಮೊಣಕೈ, ಮೊಣಕಾಲು ಸಂದುಗಳನ್ನು ಮುರಿದರು. ನಂತರ ಚೂಪಾದ ಗೂಟಗಳಿಂದ ಹೆಣಗಳ ಹೊಟ್ಟೆಯಲ್ಲಿ ತಿರುತಿರುಗಿ ಇರಿದರು. ತಗ್ಗಿನ ತುಂಬ ರಕ್ತಮಯ ಬಟ್ಟೆಗಳು, ಕರುಳುಗಳು, ಕಣ್ಣುಬಿಡುವ ಮುಖಗಳನ್ನು ನೋಡಿ ಎಲಿಯಮ್ಮನಿಗೆ ವಾಂತಿಯಾಗುವಂತಾಯಿತು. ಕೊಲೆಗಡುಕರ ಮತ್ತೊಂದು ತಂಡ ಸತ್ತವರ ಸರಕು ಸರಂಜಾಮನ್ನು ತೆಗೆದುಕೊಂಡು ಬಂದಿತು. ಪಾತ್ರೆ ಪರಡಿ ಕಂಬಳಿಗಳು ನವಾಬನ ರೇಶಿಮೆ ಡೇರೆ, ಜಮಖಾನೆ, ಮಹಿಳೆಯರ ಜರತಾರಿ ಪರದೆ ಎಲ್ಲಾ ತಗ್ಗನ್ನು ಸೇರಿದವು. ಅದರ ಮೇಲೆ ಗೂಟಗಳು, ಕಟ್ಟಿಗೆ ಬಡ್ಡೆ, ದೊಣ್ಣೆಗಳೂ ಒಳಬಿದ್ದವು. ಉಳಿದವರು ಕೈಗಳಿಂದ ಮಣ್ಣನ್ನೆಲ್ಲ ತಗ್ಗಿನಲ್ಲಿ ಸರಿಸಿ, ಹೆಣಗಳನ್ನು ಮುಚ್ಚಿ, ಮೇಲೆ ಹುಲ್ಲು ಎಲೆಗಳನ್ನು ಹರವಿದರು.

ಕಾಳಿಯ ಆಜ್ಞೆಯ ಪ್ರಕಾರ ಹೀಗೆಲ್ಲಾ ಆಗುವದೆಂದು ಹುಸೇನ ಮೊದಲೇ ಎಲಿಯಮ್ಮನಿಗೆ ಹೇಳಿದ್ದ. ಆದರೆ ಕಾಳಿ ಹೀಗೇಕೆ ಆಜ್ಞಾಪಿಸುವಳೆಂಬುದು ಮಾತ್ರ ಹುಸೇನನಿಗೆ ಗೊತ್ತಿರಲಿಲ್ಲ. ಅದನ್ನು ಎಲಿಯಂ ತರ್ಕಿಸಿದ: ತುಂಡಾದ ದೇಹವನ್ನು ಹುಗಿಯಲು ಕಡಿಮೆ ಜಾಗ ಬೇಕು. ಹರಿದ ಹೊಟ್ಟೆಯಿಂದ ಕೊಳೆತ ಹಬೆ ಭೂಮಿಯಲ್ಲಿ ಸೋಸಿಹೋಗುವುದು, ತುಂಬಿದ ಹೊಟ್ಟೆ ಉಬ್ಬಿ ನೆಲದಿಂದ ಹೊರಬಿದ್ದು ನಾಯಿಮರಿಗಳನ್ನು ಆಕರ್ಷಿಸಿ ಅವು ನೆಲವನ್ನು ಕೆದರಿ ಹೆಣದ ಕೈಕಾಲು ತೆಗೆದುಕೊಂಡು ಓಡಿ ಹೋದರೆ ಎಲ್ಲರಿಗೂ ಪತ್ತೆಯಾಗುವುದು. ಜಮಾದಾರ ತಿರುಗಿ ತೋಪಿಗೆ ನಡೆದ, ''ಭಲೆ','' ಎಂದು ಕೈ ಎತ್ತಿ, ''ಒಳ್ಳೆ ಕೆಲಸವಾಯಿತು. ಇನ್ನು ಲೂಟಿಯನ್ನು ಹಂಚಿಕೊಳ್ಳೋಣ,'' ಅಂದ.

ಯಸೀನಖಾನ ಎರಡು ಕಂಬಳಿಗಳನ್ನು ಹಾಸಿದ. ಬೆಂಕಿಯ ಬಳಿ ನಿಂತಿದ್ದ ಕಾವಲುಗಾರ ಹಿಡಿಗಟ್ಟಲೆ ಉಂಗುರಗಳು, ಬಳೆಗಳು, ಹಾರಗಳು, ರತ್ನಾಭರಣಗಳು ಹೀಗೆ ಕಂಬಳಿಯ ಮೇಲೆ ಕೊಳ್ಳೆ ಹೊಡೆದದ್ದನ್ನೆಲ್ಲ ಗುಂಪೆ ಹಾಕಿದ. ನವಾಬನ ಚೀಲದಿಂದ ಧುಮುಕಿದ ಚಿನ್ನದ ಮೊಹರುಗಳ ಪ್ರವಾಹ ಕಣ್ಣು ಕುಕ್ಕಿಸಿತು. ಎಲಿಯಮ್ಮನಿಗೂ ಪಾಲು ಸಿಕ್ಕಿತು. ಆತ ಒಂದು ಹಿಡಿ ಬಂಗಾರ ಹಾಗೂ ಕೆಲ ಮೊಹರುಗಳನ್ನು ತೆಗೆದುಕೊಂಡು, ಜಮಾದಾರನಿಗೆ ಧನ್ಯವಾದ ಹೇಳಿ, ಹುಸೇನನ ಸಂಗಡ ಮಲಗಲು ಹೊರಟ.

ಮರುದಿನ ಬೆಳಗ್ಗೆ ಕೃತಜ್ಞತಾರ್ಪಣೆಯ ಸಮಾರಂಭ - ಅಂದರೆ ಸಕ್ಕರೆ ಸೇವಿಸಿ ಕಾಳಿಯೊಂದಿಗೆ ಸಂಯೋಗದ ಶಿಷ್ಟಾಚಾರ. ಎಲಿಯಂ ನಸುಕಿನಲ್ಲಿ ಎದ್ದು ಹೊಳೆಯಲ್ಲಿ ಸ್ನಾನಮಾಡಿ, ಕಾಡಿನಲ್ಲಿಯ ಬಯಲಿಗೆ ಹೋದ. ಬೇವಿನಮರದ ಸುತ್ತ ತಂಡವೆಲ್ಲಾ ನಿಂತಿತ್ತು. ಅವರೆದುರು ಹುಲ್ಲಿನ ಮೇಲೆ ಯಸೀನಖಾನ್ ಎರಡು ಕಂಬಳಿಗಳನ್ನು ಹಾಸಿದ. ಅದರ ಮೇಲೆ ನೀರು ತುಂಬಿದ ಹಿತ್ತಾಳೆ ತಂಬಿಗೆಯನ್ನಿಟ್ಟ. ಪೀರೂ ತಂದು



ಕೊಟ್ಟ ಚೀಲದಿಂದ ಸಕ್ಕರೆ ಸುರುವಿದ. ಅದರ ಬದಿಯಲ್ಲಿ ಪಿಕಾಸಿಯಿಂದ ಸಣ್ಣ ತೂತು ಕೆದರಿ, ಅದರಲ್ಲಿ ಒಂದು ರೂಪಾಯಿಯ ಬೆಳ್ಳಿ ನಾಣ್ಯವನ್ನಿಟ್ಟು, ಮೇಲೆ ಮತ್ತೆ ಸಕ್ಕರೆ ಉದುರಿಸಿ, ಲೋಟದಿಂದ ನೀರು ಚಿಮುಕಿಸಿ, ತೂತು ಮುಚ್ಚಿದ. ಬಳಿಕ ಕಾಲು ಮಡಿಚಿ ಕುಳಿತು, ಬಲಗೈಯಲ್ಲಿ ಮಡಿಚಿದ ರುಮಾಲು ಹಿಡಿದು, ಅದರ ಮೇಲೆ ಪಿಕಾಸಿಯನ್ನು ಅಡ್ಡವಾಗಿಟ್ಟು, ಎಡಗೈಯ ಆಧಾರದಿಂದ ಬಲಗೈಯನ್ನು ಎದೆಯೆತ್ತರ ಹಿಡಿದು, ''ಓ ಕಾಳಿ, ಮಹಾಕಾಳಿ, ನಿನ್ನ ಭವ್ಯಕಾಣಿಕೆಗಾಗಿ ನಿನ್ನ ಸೇವಕರು ಕೃತಜ್ಞತೆಯನ್ನು ಅರ್ಪಿಸುವರು. ತಾಯಿ, ನಿನ್ನಾಜ್ಞೆಯನ್ನು ನಾವೆಲ್ಲ ಪಾಲಿಸಿದ್ದೇವೆ. ಸದಾ ನಮ್ಮನ್ನು ಸುರಕ್ಷಿತವಾಗಿಡು,'' ಎಂದು ಪ್ರಾರ್ಥಿಸಿದ.

ಪ್ರಾರ್ಥನೆ ಮುಗಿಯಿತು. ಅವನ ಹಿಂದೆ ಕುಳಿತವರೆಲ್ಲರೂ ಸ್ತಬ್ಧರಾಗಿದ್ದರು. ಕಾಗೆಯೊಂದು ಕಿರಿಚುತ್ತ ಹಾರಿ ಬಂದು ಬೇವಿನ ಮರದಲ್ಲಿ ಕಂಬಳಿಯ ಎಡಬದಿಯಲ್ಲಿ ಕುಳಿತಿತು. ಕಂಟಗಳಿಂದ ಮತ್ತೊಂದು ಪಕ್ಷಿ ಬಾಣ

ದಂತೆ ಬಲಕ್ಕೆ ಹಾರಿ ಹೋಯಿತು. ಯಸೀನ ನುಡಿದ: "ಓ ಮಹಾಕಾಳಿ, ನಿನ್ನಾಜ್ಞೆಯನ್ನು ನೆರವೇರಿಸುವೆವು. ಸದಾ ನಿನ್ನ ನಾಮಸ್ಮರಣೆಯನ್ನು ಮಾಡುವೆವು. ನಾವು ನಿನ್ನವರು" ಎಂದು ಎದ್ದ. ಎಲ್ಲರೂ ಎದ್ದು ನಿಂತರು. ಬಲಗೈಯಲ್ಲಿ ಸಕ್ಕರೆಯ ಪೆಂಟೆಗಳನ್ನು ಹಿಡಿದು ಹಂಚಿದ. "ತೆಗೆದುಕೋ, ತಿನ್ನು. ಇದು ಕಾಳಿಯ ಸಿಹಿ. ನೀನು ಆಕೆಯವನು. ಆಕೆ ನಿನ್ನವಳು" ಎಂದು ಯಸೀನ ವಟಗುಟ್ಟುತ್ತ ಬಲಬದಿಯಲ್ಲಿ ಇದ್ದವನ ಮುಂದೆ ಕೈ ಚಾಚಿದ. ಆತ ಒಂದು ಚೂರು ತೆಗೆದುಕೊಂಡು, ತಲೆಬಾಗಿ, ಬಾಯಿಗೆ ಸೇರಿಸಿ ಸುಮ್ಮನೆ ತಿಂದ.

ಹೀಗೆ ಎಲ್ಲರ ಮುಂದೆಯೂ ಹೋಗಿ ನಿಂತ. ಎಲಿಯಮ್ಮನ ಹಣೆಯ ಮೇಲೆ ಬೆವರಿನ ಹನಿಗಳು ಮೂಡಿದವು. ಅವನ ಗಂಟಲು ಒಣಗಿತು. ತನ್ನ ಸರತಿ ಬಂದಾಗ ಆ ಸಕ್ಕರೆಯನ್ನು ಮುಟ್ಟಲಿಕ್ಕಾಗಲಿಕ್ಕಿಲ್ಲ ಎಂದೆನಿಸಿತು. ಕಣ್ಣು ಮುಚ್ಚಿ ಮತ್ತೆ ತೆರೆದ.

"ತೆಗೆದುಕೊ, ತಿನ್ನು....."

ಎಲಿಯಂ ಬಲಗೈ ಚಾಚಿ ಒಂದಿಷ್ಟು ಸಕ್ಕರೆಯನ್ನು ತೆಗೆದುಕೊಂಡು ನಾಲಿಗೆಯ ಮೇಲಿಟ್ಟ. ಹಿಂದೆ ಘಟಿಸಿದ್ದು ನೆನಪಾಗಿ ಅವನ ಹೊಟ್ಟೆ ಉಬ್ಬಳಿಸಿತು.

ಆಮೇಲೆ ಯಸೀನ ಹಿತ್ತಾಳೆಯ ತಂಬಿಗೆಯನ್ನು ತೆಗೆದುಕೊಂಡು ಬಂದು ಎಲ್ಲರಿಗೂ ನೀರು ನೀಡಿದ. ಪ್ರತಿಯೊಬ್ಬನೂ ಬಾಯಿಗೆ ಬಲಗೈ ಹಿಡಿದು ಅಂಗೈಯಲ್ಲಿ ಯಸೀನ ಹಾಕಿದ ಸ್ವಲ್ಪ ನೀರು ಕುಡಿದ. ಎಲಿಯಂ ಧೈರ್ಯದಿಂದ ನೀರನ್ನು ನುಂಗಿದ. ಅನಂತರ ಏಕಾಂತದಲ್ಲಿ ಹುಸೇನ ಅವನಿಗೆ ಹೇಳಿದ: "ಈ ಬೆಳಗಿನಿಂದ ನೀನೂ ಠಕ್ಕನಾದೆ. ಎಂದಿಗೂ ನೀನು ಠಕ್ಕನಾಗಿರುವಿ, ಕುತ್ತಿಗೆ ಹಿಸುಕುವವನು." "ಛೇ, ಎಂಥಾ ಮಾತಾಡುತ್ತೀಯಾ," ಅಂದ ಎಲಿಯಂ ಸಿಟ್ಟಿನಿಂದ.

"ಇಲ್ಲಪ್ಪಾ ಕಂಬಳಿ ಮೇಲೆ ನಿಂತವನು, ಪವಿತ್ರ ಸಕ್ಕರೆ ತಿಂದವನು, ಕುತ್ತಿಗೆ ಹಿಸುಕುವವನಾಗುವನು. ಏಕೆಂದರೆ ಆ ವೇಳೆ ಕಾಳಿ ಅವನಲ್ಲಿ ಸೇರಿಕೊಳ್ಳುತ್ತಾಳೆ. ಅವನಿಗೆ ಅವಶ್ಯವಿದ್ದ ಶಕ್ತಿಬಲವನ್ನು ನೀಡುತ್ತಾಳೆ," ಆತನೆಂದ. "ಎಲ್ಲಾ ಮೂಢನಂಬಿಕೆ," ಅಂದ ಎಲಿಯಂ.

"ಇಲ್ಲ ಗೋಪಾಲ. ನೀನೇಕೆ ಠಕ್ಕನಾಗಿರಬಾರದು ? ಠಕ್ಕರಿಗೆ ಸಮಾಜದಲ್ಲಿ ಸ್ಥಾನಮಾನಗಳಿರುವುದು ಗೊತ್ತಿಲ್ಲವೆ ? ಅವರು ಪ್ರವಾಸದಿಂದ ಮನೆಗೆ ಮರಳಿ ಸಾಮಾನ್ಯ ವ್ಯವಹಾರಸ್ಥರಾಗಿಯೋ ರೈತರಾಗಿಯೋ, ದುಡಿಯುವರೆಂದು ಬಲ್ಲೆಯಾ ? ಅವರ ಮಡದಿಮಕ್ಕಳಿಗೂ ಅವರು ಎಸಗಿದ ಕೃತ್ಯಗಳ ಅರಿವಿರುವದಿಲ್ಲವೆಂಬುದು ನಿನಗೆ ಗೊತ್ತಿಲ್ಲವೆ ? ಹೌದು, ನೀನು ಠಕ್ಕನಾಗಿರುವುದೇ ಒಳ್ಳೆಯದು" ಎಲಿಯಂ ರೊಚ್ಚಿಗೆದ್ದು ಆತನನ್ನು ಹೊಡೆಯಲು ಕೈಯೆತ್ತಿ, "ಬಾಯಿ ಮುಚ್ಚು. ನಾನು ಠಕ್ಕನಲ್ಲ, ಎಂದಿಗೂ ಆಗಲಾರೆ, ಯಾರನ್ನೂ ಕೊಲೆ ಮಾಡಲಾರೆ. ತಿಳಿಯಿತೇ?" "ನೀನು ಕುತ್ತಿಗೆ ಹಿಸುಕುವವನೇ. ನಿನಗೆ ಬೇರೆ ದಾರಿಯೇ ಇಲ್ಲ." ಹುಸೇನ ಖೇದದಿಂದ ಅಂದ.

★

ಅಲ್ಲಿಂದ ಅವರು ಮಾಣಿಕವಾಲ್ ಎಂಬ ಊರು ಸೇರಿ ವೇಶ್ಯೆಯರ ಕೇರಿಯಲ್ಲಿ ಒಬ್ಬಳ ಮನೆಯ ಅಟ್ಟದ ಕೋಣೆಯಲ್ಲಿ ವಸತಿ ಮಾಡಿದರು. ಆರು ದಿನಗಳ ನಂತರ ಶುಕ್ರವಾರದಂದು ಅಲ್ಲಿ ಉತ್ಸವದ ಊಟವಿತ್ತು. ಅದಕ್ಕಾಗಿ ಅಲ್ಲಿ ಪೂರ್ವಸಿದ್ಧತೆ ನಡೆದಿತ್ತು. ಬೆಳಿಗ್ಗೆ ಎಲಿಯಂ ಮತ್ತು ಹುಸೇನ ಹೊಲಗಳಲ್ಲಿ ಅಡ್ಡಾಡಿ, ಮಣ್ಣು ಸೆಗಣಿಗಳನ್ನು ಬುಟ್ಟಿಗಳಲ್ಲಿ ತುಂಬಿ, ನೀರಿನ ಬಿಂದಿಗೆಗಳನ್ನೂ ತಂದರು. ಕೋಣೆಯ ನಡುವೆ ಇಪ್ಪತ್ತು ಅಡಿ ಚೌಕ ನೆಲವನ್ನು ಸಾರಿಸಿದರು. ಮಧ್ಯಾಹ್ನ ಯಸೀನಖಾನ ಕಸಗುಡಿಸಿ, ಸುಣ್ಣ, ಅರಿಷಿಣ ಕೂಡಿಸಿ ಚೌಕದಲ್ಲಿ ಗೆರೆಗಳನ್ನೆಳೆದ. ದೊಡ್ಡ ಪಾತ್ರಗಳಲ್ಲಿ ಅನ್ನ ಮಾಡಿದ. ಎಲಿಯಂ ಹಾಗೂ ಹುಸೇನ ಮತ್ತೆ ನೀರು ತರಲಿಕ್ಕೆ ಹೋದರು.

ತಿರುಗಿ ಬರುವಾಗ, ಕುದುರೆಲಾಯದಲ್ಲಿ ಎಲಿಯಂ ಒಂದು ಹೊಸ ಕುದುರೆಯನ್ನು ಕಂಡ. ಕತ್ತಲಲ್ಲಿ ದಿಟ್ಟಿಸಿ ನೋಡಿದಾಗ ಅಪರಿಚಿತನ ಮುಖವನ್ನು ಕಂಡಂತಾಯಿತು. ಮುಂದೆ ಹೋದ. ಹಾಡನ್ನು ಗುಣಗುಣಿಸುತ್ತಿದ್ದ ಅಪರಿಚಿತ "ಸಲಾಮ್ ಅಲಿ ಭಾಯಿ," ಅಂದ. ಎಲಿಯಂ ಇನ್ನೂ ಹತ್ತಿರ ಹೋಗಿ ನೋಡಿದ. ಅಪರಿಚಿತ ಎಲಿಯಮ್ಮನತ್ತ ನೋಡಿ ಸಾವಕಾಶವಾಗಿ, "ಯಾರು ? ಕಾಳಿಯ ಆಣೆ, ಯಾರಯ್ಯ ನೀನು ?" ಎಂದ.

ಎಲಿಯಮ್ಮನ ಎದೆ ಧಸ್ ಎಂದಿತು. ಹೊಟ್ಟೆಯಲ್ಲಿ ಕಸಿವಿಸಿಯಾಯಿತು. ಆತ ಮಂದಬೆಳಕಿನಲ್ಲಿ ತನ್ನನ್ನೇ ನೋಡುತ್ತಿದ್ದ. ಹೌದು. ಅದು ತನ್ನದೇ ತದ್ರೂಪ. ತನ್ನ ಮುಖದ ಪ್ರತಿಬಿಂಬವೇ ಅದು. ಆತನ ಕಂಗಳಲ್ಲಿಯೂ ಅದೇ ಭೀತಿ ವ್ಯಕ್ತವಾಗಿತ್ತು. ಆತ ಹಿಂದಕ್ಕೆ ಸರಿದ. ಚೀಲಗಳ ಮೇಲೆ ಎಡವಿ ಬೀಳುತ್ತಲಿದ್ದ. ಎಲಿಯಂ ಕೈಯಲ್ಲಿ ರುಮಾಲ ಹಿಡಿದು ಮುಂದೆ ಹೋದ. ನೇಕಾರ ಗೋಪಾಲ ಕೆಳಗೆ ಬೀಳುತ್ತಿದ್ದಂತೆ ಆತನಿಗೆ ಒದ್ದ. ರುಮಾಲ ಬೀಸಿ ಗೋಪಾಲನ ಕೊರಳ ಸುತ್ತ ಬಿಗಿದ. ಗೋಪಾಲನ ತಲೆ ಹೊರಳಿ, ಕುತ್ತಿಗೆ ಮುರಿಯಿತು.

ಎಲಿಯಮ್ಮನ ಮೈಯೆಲ್ಲ ಕಂಪಿಸುತ್ತಿತ್ತು. ಹುಸೇನ ಹತ್ತಿರ ಬಂದು ನೇಕಾರ ಗೋಪಾಲನ ಹೆಣವನ್ನು ನೋಡಿದ.

"ನಾನಿದನ್ನು ಮಾಡಲೇಬೇಕಿತ್ತು. ಇಲ್ಲವಾದರೆ ನಮ್ಮ ಪ್ರಾಣಕ್ಕೆ ಅಪಾಯ," ಎಲಿಯಂ ಮೆಲ್ಲನೆ ಅಂದ. "ಹೌದು ನಾನಾಗಲೆ ಹೇಳಲಿಲ್ಲವೆ ?" ಅಂದ ಹುಸೇನ.

"ದೇವರೆ, ನನ್ನನ್ನು ಕ್ಷಮಿಸು. ಕ್ಷಮಿಸು. ನನಗೆ ಗತ್ಯಂತರವಿರಲಿಲ್ಲ," ಅಂದ ಎಲಿಯಂ. ಇಬ್ಬರೂ ಕೂಡಿ ಗೋಪಾಲನ ಹೆಣವನ್ನು ಗೋಡೆಯ ಮೇಲೆ ಸೂರಿನ ಕೆಳಗೆ ಸರಿಸಿದರು. ಆತನ ಚೀಲ ಕುದುರೆ ತಡಿಗಳನ್ನು ಅಲ್ಲಿಯೇ ನೂಕಿದರು. ಎಲಿಯಂ ಮುಖ ಒರೆಸಿಕೊಂಡು ಗೋಡೆಗೆ ಆತು ನಿಂತ. ಅವನಿಗೆ ವಾಂತಿಯಾಗುವಂತಾಗಿತ್ತು.

ಸಾಯಂಕಾಲ ಇಡೀ ತಂಡ ನೆರೆದಿತ್ತು. ಎರಡು ಕಪ್ಪು ಎರಡು ಬಿಳಿ ಆಡುಗಳನ್ನು ವಧಿಸಲಾಯಿತು. ಅವುಗಳ ಮಾಂಸ ಸುಲಿದು ಮಸಾಲೆ ಬೆರೆಸಿ ಬೆಂದ ಬಳಿಕ ಎಲ್ಲರೂ ದುಂಡಗೆ ಕುಳಿತು ಹಬ್ಬದ ಊಟ ಮಾಡಿದರು. ಮೂರು ಬಿಂದಿಗೆಯಷ್ಟು ಅರಾಕ್ ಖಾಲಿಯಾಯಿತು. ಅನ್ನದ ಪಾತ್ರೆಗಳು ತೆರವಾದವು. ಎಲಿಯಮ್ಮನೂ ಎಲ್ಲರಂತೆ ಕುಳಿತು ಕೈಯಿಂದ ಬಾಯಿಯಲ್ಲಿ ತುತ್ತುಗಳನ್ನು ತುರುಕಿದ.

ಎಲ್ಲ ಮುಗಿದ ಬಳಿಕ ಯಸೀನಖಾನ ಸೆಟೆದು ಕುಳಿತು, ಗಂಭೀರವಾಗಿ ಕಾಳಿ ದೇವಿಯ ಕಥೆ ನಿವೇದಿಸಿದ:

"ಕೇಳಿ, ನಮ್ಮ ಹಕ್ಕು ಬಾಧ್ಯತೆಗಳ ಪವಿತ್ರ ಕಥೆ ಕೇಳಿ, ಠಕ್ಕರ ಪರಮ ಸತ್ಯ ಕೇಳಿ ತಿಳಿಯಿರಿ. ಆದಿಯಲ್ಲಿ ಆತ್ಮವಿದ್ದಿತು. ಆತ್ಮದಿಂದ ಪರಮಾತ್ಮನ ಸೃಷ್ಟಿ ಆಯಿತು. ಲೋಕದಲ್ಲಿ ಸ್ತ್ರೀಪುರುಷರು ಜನ್ಮತಾಳಿದರು. ಆಗ ರಕ್ತಬೀಜಾಸುರ ಹುಟ್ಟಿದ. ಸೃಷ್ಟಿಕರ್ತ ಮಾನವರನ್ನು ನಿರ್ಮಿಸಿದಂತೆ ಆತ ಅವರನ್ನು ವಿನಾಶಗೈದ. ಕಾಳಿಕಾಮಾತೆ ತನ್ನ ದಾನವನ್ನು ಧ್ವಂಸಮಾಡಲು ಹೋದಳು. ತನ್ನ ಕೆನ್ನಾಲಿ ನಾಲಿಗೆಯನ್ನು ಹೊರಚಾಚಿ, ರಕ್ತಕಾರುತ್ತ ಖಡ್ಗ ಬೀಸಿದಳು. ದಾನವನ ದೇಹ ಗಾಸಿಗೊಂಡಿತು. ಆತನ ಗಾಯದಿಂದ ರಕ್ತಬೀಜ ಭೂಮಿಯ ಮೇರ ಉದುರಿತು. ಪ್ರತಿಯೊಂದು ರಕ್ತದ ಹನಿಯಿಂದ ಮತ್ತೊಬ್ಬ ಸಶಸ್ತ್ರ ದಾನವ ಹುಟ್ಟಿ ಪರಮಾತ್ಮನ ಸೃಷ್ಟಿವಿನಾಶಕ್ಕೆ ಸಿದ್ಧನಾದ. ಕಾಳಿ ಹೊಸ ದಾನವರತ್ತ ಖಡ್ಗ ಬೀಸಿ ಅವರನ್ನು ಕೊಂದಳು. ಅವರ ರಕ್ತಬೀಜ ಪುಟಿದು ಭೂಮಿಯ ಮೇಲೆ ಬಿದ್ದು ಪ್ರತಿಯೊಂದು ರಕ್ತದ ಹನಿಯಿಂದ ಮತ್ತೊಬ್ಬ ರಾಕ್ಷಸ ಹುಟ್ಟಿ ಮನುಷ್ಯರನ್ನು ಕೊಲ್ಲುತ್ತ ಹಾವಳಿಮಾಡಿದ."

"ಕೊನೆಗೆ ಕಾಳಿಕಾಮಾತೆ ದಣಿದು, ರುಮಾ

ಲಿನಿಂದ ತನ್ನ ತೋಳುಗಳ ಮೇಲಿನ ಬೆವರನ್ನು ಒರಸಿಕೊಂಡಳು. ಎರಡು ಬೆವರು ಹನಿಗಳು ನೆಲಕ್ಕೆ ಬಿದ್ದವು. ಅವಳ ಪೇಚಾಟವನ್ನು ಕಂಡು ಪರಮಾತ್ಮ ಅವಳ ಬೆವರಹನಿಯಿಂದ ಇಬ್ಬರು ಮಾನವರನ್ನು ನಿರ್ಮಿಸಿದ. ಕಾಳಿ, ''ನನ್ನ ರುಮಾಲು ತೆಗೆದು ಕೊಂಡು ಹೋಗಿ ಈ ರಕ್ತಬೀಜ ದಾನವರನ್ನು ಕೊಂದುಹಾಕಿ. ಅವರದೊಂದು ಹನಿ ರಕ್ತಬೀಜ ನೆಲಕ್ಕೆ ಬೀಳಕೂಡದು,'' ಅಂದಳು. ಆ ಮಾನವರು ಕಾಳಿಯ ರುಮಾಲು ತೆಗೆದುಕೊಂಡು, ಜಗದಾದ್ಯಂತ ತಿರುಗಾಡಿ, ದಾನವರ ರಕ್ತಬೀಜದ ಹನಿ ನೆಲಕ್ಕೆ ಬೀಳಬಾರದೆಂದು ಅವರ ಕುತ್ತಿಗೆ ಹಿಸುಕಿಕೊಂದರು. ಬಳಿಕ ಕಾಳಿಯ ಹತ್ತಿರ ಹೋಗಿ, ''ಮಹಾದೇವಿ, ನಿನ್ನಾಜ್ಞೆ ಪಾಲಿಸಿದ್ದೇವೆ. ನಿನ್ನ ರುಮಾಲು ತೆಗೆದುಕೊ,'' ಎಂದಾಗ ಕಾಳಿ, ''ನನ್ನ ರುಮಾಲು ನೀವೇ ಇಟ್ಟುಕೊಳ್ಳಿ. ನಿಮ್ಮ ಜೀವನೋಪಾಯಕ್ಕಾಗಿ ಮಾತ್ರ ಅದನ್ನು ಉಪಯೋಗಿಸಿ. ನನ್ನಾಜ್ಞೆಯನ್ನು ಪಾಲಿಸಿ. ನನ್ನ ಎಡಬಲ ಶಕುನಗಳನ್ನು ನೋಡಿ, ಕೇಳಿ, ವಿಧೇಯಕರಾಗಿರಿ, ಅಂದರೆ ನಿಮಗೆ ಸದಾ ಜಯವಾಗುವದು,'' ಅಂದು ಅಂತರ್ಧಾನಳಾದಳು.''

ವಿಲಿಯಮ್ಮನ ತಲೆ ಬಿರಿಯುವುದೇನೋ ಎಂದೆನಿಸಿತು. ಎದ್ದು ಮೂಲೆಗೆ ಹೋಗಿ ಮುಖ ತೊಳೆದು ನೀರು ಕುಡಿದ. ಬಳಿಕ ಎಲ್ಲರೂ ಅಮಲಿನಲ್ಲಿ ಮಲಗಿದರು. ಆಗ ಆತ ಹುಸೇನನೊಂದಿಗೆ ಹೊರಗೆ ಹೋಗಿ ಕುದುರೆಲಾಯದಲ್ಲಿ ತಗ್ಗು ತೋಡಿ ಗೋಪಾಲನ ಹೆಣ ಹುಗಿದರು. ವಿಲಿಯಂ ಥರಥರ ನಡುಗುತ್ತಿದ್ದ, ತಾನು ಕಾಳಿಯ ಬಲೆಯಲ್ಲಿ ನಿರಂತರ ಸಿಕ್ಕಿಕೊಂಡಿದ್ದನೆಂದು ತಳಮಳಿಸಿದ.

ಐದು ತಿಂಗಳ ನಂತರ ವಿಲಿಯಂ, ಆ ತಂಡದ ಮುಖಂಡ, ಜಮಾದಾರನಾಗಿದ್ದ. ಉತ್ತರಕ್ಕೆ ಯಮುನಾ ನದಿಯ ಆಚೆಗೆ, ಪೂರ್ವಕ್ಕೆ ರೋಹಿಲಖಂಡ, ಊಧ ತೆರಾಯಿಯ ಬೆಟ್ಟದಡಿಗಳು, ದಕ್ಷಿಣಕ್ಕೆ ಅಲ್ಲಾಹಬಾದ ಸುತ್ತಲಿನ ಗ್ರಾಮಗಳು, ಅಲ್ಲಿಂದ ಪಶ್ಚಿಮಕ್ಕೆ ಸ್ವಲ್ಪವೇ ದೂರದಲ್ಲಿತ್ತು ಸಾಗ್ಗರಿ. ತದನಂತರ ಮಧ್ಯಾ ಇಲಾಖೆ. ಹೀಗೆ ನವೆಂಬರದಿಂದ ಮಾರ್ಚ್‌ವರೆಗೆ ತನ್ನ ತಂಡವನ್ನು ತಿರುಗಿಸಿದ್ದ. ಅಲ್ಲಿಂದ ಪರ್ಸೋರ್ಲಾ ಗ್ರಾಮದಲ್ಲಿ ಅವರ ಪ್ರವಾಸ ಕೊನೆಗೊಳ್ಳುವುದರಲ್ಲಿತ್ತು.

ಈಗ ಆತನಿಗೆ 'ಕಾಳೀಪ್ರಿಯ ಗೋಪಾಲ' ಎಂಬ ಅಡ್ಡಹೆಸರು ಬಿದ್ದಿತು. ಉಳಿದ ತಂಡಗಳೂ ಆತನನ್ನು ಕೂಡಿಕೊಂಡಿದ್ದವು. ಅವರ ಸಂಗಡ ನಾಲ್ಕು ಎತ್ತಿನ ಬಂಡಿಗಳು, ಬಂಡಿಗಳ ತಳದಲ್ಲಿದ್ದ ಡ್ರಾಯರುಗಳ ತುಂಬ ಚಿನ್ನ, ರತ್ನಾಭರಣಗಳು. ಈ ರತ್ನಗಳ ವ್ಯಾಪಾರ ಅದೇ ತಿಂಗಳು ಪರ್ಸೋರ್ಲಾ ಗ್ರಾಮದಲ್ಲಿ ನಡೆಯುವುದಿತ್ತು. ಅಲ್ಲಿ ಠಕ್ಕರೆಲ್ಲರೂ ಕೂಡುವರು. ದಲ್ಲಾಳಿಗಳು ಅಲ್ಲಿಗೆ ಬರುವ ವ್ಯವಸ್ಥೆಯೆಲ್ಲಾ ಪಟೇಲ ಚಂದ್ರಸೇನ ಮಾಡುವನು ಎಂದು ಖುದಾಬಕ್ಷ ಹೇಳಿದ್ದ.

ಚಂದ್ರಸೇನ ಸಹ 'ಠಕ್ಕ'ನೆಂದು ಕೇಳಿದಾಗ ವಿಲಿಯಂ ಆಘಾತಗೊಂಡಿದ್ದ. ಎಂಥ ಚಾಣಕ್ಷ ಮನುಷ್ಯನಾತ! ರತ್ನಗಳ ವ್ಯಾಪಾರಕ್ಕೆ ದಲ್ಲಾಳಿಗಳ ದೊಡ್ಡ ಹಿಂಡನ್ನು ಪ್ರತಿವರ್ಷ ಪರ್ಸೋರ್ಲಾಕ್ಕೆ ಕಳಿಸಿಕೊಡುತ್ತಿದ್ದನಂತೆ; ತಾನು ಮಾತ್ರ ಅಲ್ಲಿಗೆ ಹೋಗುತ್ತಿರಲಿಲ್ಲ. ಆ ವೇಳೆ ತನ್ನ ಗ್ರಾಮದಲ್ಲಿಯೋ ಮಧ್ಯಾದಲ್ಲಿಯೋ ಇರುತ್ತಿದ್ದ. ಅಲ್ಲಿಯ ಅಧಿಕಾರಿಗಳು ಅಕಸ್ಮಾತ್ತಾಗಿ ವ್ಯಾಪಾರವಾಗುವಲ್ಲಿ ಹೋಗುವ ಸಂಭವ ಕಂಡರೆ ಅವರನ್ನು ಏನಾದರೂ ನೆಪದಿಂದ ತಡೆಯಬಹುದೆಂಬುದು ಅವನ ಉದ್ದೇಶ. ನೇಕಾರ ಗೋಪಾಲನ ವೇಷದಲ್ಲಿ ವಿಲಿಯಮ್ಮನನ್ನು ಆತ ನೋಡಿದ್ದರಿಂದ ಚಂದ್ರಸೇನ ಪರ್ಸೋರ್ಲಾಕ್ಕೆ ಬರದೇ ಇರುವದು ವಿಲಿಯಮ್ಮನಿಗೆ ಅನುಕೂಲವೇ.

ಹಿಂದಿನ ದಿನವೇ ವಿಲ್ಸನ್ ಪರಿವಾರಸಹಿತ ಹತ್ತಿರದಲ್ಲಿ ಹಾಯ್ದು ಹೋಗುವುದನ್ನು ವಿಲಿಯಂ ಕಂಡಿದ್ದ. ಆತನಿಗೆ ಭೇಟಿಯಾಗಿ, ಠಕ್ಕರ ಸಂಗತಿಯನ್ನೆಲ್ಲಾ ಬಹಿರಂಗಪಡಿಸಬೇಕೇನೊ ಎಂದು ವಿಚಾರಿಸಿದ್ದ. ಆದರೆ ಆತನಿಗೆ ನಂಬಿಕೆ ಆಗಲಿಕ್ಕಿಲ್ಲವೆಂದು ಸುಮ್ಮನೆ ಬಿಟ್ಟಿದ್ದ.


ಈ ಠಕ್ಕರು ನಿಜಕ್ಕೂ ಒಂದು ರೀತಿಯಲ್ಲಿ ಭೂತದಂತಾಗಿದ್ದರು, ನಿರಾಕಾರವಾದರೂ ಸರ್ವವ್ಯಾಪಿ, ತಲೆಯಿಲ್ಲದಿದ್ದರೂ ಚುರುಕು ಬುದ್ಧಿಯ ಕ್ರೂರರಾಕ್ಷಸರು, ಐದು ತಿಂಗಳ ಕಾಲ ವಿಲಿಯಂ ಅವರೊಳಗೆ ಸೇರಿಕೊಂಡು ಅವರ ಜಗತ್ತಿನ ಸಕಲ ಸೂಕ್ಷ್ಮ ವಿವರಗಳನ್ನೆಲ್ಲ ಅರಿತುಕೊಂಡಿದ್ದ. ಮಾರ್ಗಮಧ್ಯ ನೂರಾರು ಠಕ್ಕರನ್ನು ಭೇಟಿಯಾಗಿದ್ದ. ಶಿಬಿರಗಳಲ್ಲಿ ಬೆಂಕಿಯ ಸುತ್ತ ಕೇಳಿದ ಹರಟೆಯಿಂದ ದೂರದ ಸಮಾಚಾರವನ್ನೆಲ್ಲ ತಿಳಿದುಕೊಂಡಿದ್ದ. ಪೂರ್ವದಲ್ಲಿ ಕಲ್ಕತ್ತಾದ ಆಚೆ ದೋಣಿಗಳಲ್ಲಿ ಕಾರ್ಯಪ್ರವೃತ್ತರಾದ ಠಕ್ಕರ ಅಸ್ತಿತ್ವ ಬಯಲಿಗೆ ಬಂದಿತ್ತು. ದೂರದ ದಕ್ಷಿಣದಲ್ಲಿ ಧನುಷ್ಕೋಟಿಯ ಹತ್ತಿರದ ವನ್ಯಪರ್ವತಗಳಲ್ಲಿ ಭಾರತ ಸಿಲೋನುಗಳ ನಡುವಿನ ಕಿರಿದಾದ ಕೊಲ್ಲಿಯಲ್ಲಿ ಠಕ್ಕರಿರುವದು ಗೊತ್ತಾಗಿತ್ತು. ಆಂಗ್ಲ ಅಧಿಕಾರಿಗಳ ಆಪ್ತ ಸೇವಕರಾದ ಠಕ್ಕರು, ಕಾಳಿಯ ಸಕ್ಕರೆ ತಿಂದು ತಮ್ಮ ಅರಮನೆಗಳಿಂದ ಠಕ್ಕರ ಕಾರ್ಯಕ್ರಮ ನಡೆಸುವ ರಾಜರು, ಮುಂಬಯಿಯಲ್ಲಿ ಠಕ್ಕರಾದ ಧನಿಕ ಸಭ್ಯಗ್ರಹಸ್ಥರು ಇವರೆಲ್ಲರನ್ನು ಕುರಿತೂ ಆತ ಕೇಳಿದ್ದ.

ತನ್ನ ತಲೆಯ ಮೇಲೂ ಪಾಪದ ಹೊರೆ ಇತ್ತು. ತಾನು ಮೂರು ಕೊಲೆಗಳನ್ನು ಮಾಡಿದ್ದ. ಅನೇಕ ಕೊಲೆಗಳನ್ನು ಮಾಡಿಸಿದ್ದ. ಅವನ ಮನಸ್ಸಿನ ಮೇಲೆ ಮೃತ್ಯುಭಾರ ಒತ್ತುತ್ತಿತ್ತು. ಹೃದಯ ರೋಸಿಹೋಗಿತ್ತು. ಆದರೆ ಆತ ಮಾಡಿದ್ದೆಲ್ಲ ಸದುದ್ದೇಶದಿಂದಲೆ. ತಾನು ಠಕ್ಕನಾಗದಿದ್ದರೆ, ಅವರ ಪಾಪ ಬಹಿರಂಗವಾಗುತ್ತಿರಲಿಲ್ಲ. ಠಕ್ಕರ ಸಂಪೂರ್ಣ ನಿರ್ಮೂಲನ ಅವನ ಧ್ಯೇಯವಾಗಿತ್ತು.

ವಿಲಿಯಂ ಹುಸೇನನನ್ನು ಮಧ್ಯಾಕ್ಕೆ ಕಳಿಸಿದ. ತನ್ನ ಪತ್ನಿಗೆ, ಹಾಗೂ ಕಲೆಕ್ಟರನಿಗೆ ತನ್ನ ಸಮಾಚಾರವನ್ನೆಲ್ಲ ತಿಳಿಸಿ, ಕೂಡಲೆ ಅಶ್ವಪಡೆಯನ್ನು ಪರ್ಸೋಲಾಕ್ಕೆ ಕಳಿಸಬೇಕೆಂದು ಸಂದೇಶ ಕಳಿಸಿದ.

★

ಇತ್ತ ಮಧ್ಯಾದಲ್ಲಿ ವಿಲಿಯಂ ನಾಪತ್ತೆಯಾದುದನ್ನು ಕಂಡು ಎಲ್ಲರೂ ಚಿಂತಾಕ್ರಾಂತರಾಗಿದ್ದರು. ಅವನಿಗೆ ಹುಚ್ಚು ಹಿಡಿದಿದೆಯೋ, ಅಲೆದಾಡುವ ಫಕೀರನಾಗಿರುವನೋ, ಆತ್ಮಹತ್ಯೆ ಮಾಡಿಕೊಂಡಿದ್ದಾನೋ, ಎಂದು ವಿಲ್ಸನ್ ಹಾಗೂ ಜಾರ್ಜ್ ಎಂಜೆಲ್‌ಸ್ಮಿಥ್ ಸಂದೇಹಿಸಿದ್ದರು. ಮೇರಿ ಮಾತ್ರ ತನ್ನ ಮಗು



ಹುಟ್ಟುವವರೆಗೆ ತಾನು ಮಧ್ಯಾದಲ್ಲಿಯೇ ಇದ್ದು ಅವನ ದಾರಿ ನೋಡುತ್ತೇನೆಂದು ಹೇಳಿದ್ದಳು.

ಅಷ್ಟರಲ್ಲಿ ಚಂದ್ರಸೇನ ಬಂದು ಅವರಿಗೆ ಎಲಿಯಮ್ಮನ ಸುದ್ದಿ ಮುಟ್ಟಿಸಿದ. ''ಸ್ಯಾವೇಜ್ ಸಾಹಿಬ್ ಎಲ್ಲಿದ್ದಾರೆಂದು ನನಗೆ ಗೊತ್ತಾಗಿದೆ. ದೇಶೀಯ ಬಟ್ಟೆತೊಟ್ಟು ಭಿಕ್ಷುಕನಂತೆ ಒಬ್ಬರೆ ತಿರುಗಾಡುತ್ತಿದ್ದಾರೆ. ಇತ್ತೀಚೆಗೆ ಇದೇ ಇಲಾಖೆಗೆ ಬಂದಿರುವರು, ನನ್ನ ಮಿತ್ರ ಅವರನ್ನು ಗುರುತಿಸಿದ,'' ಎಂದು ಚಂದ್ರಸೇನ ಹೇಳಿದ.

ಐದು ತಿಂಗಳ ನಂತರ ಮೇರಿ ಎಲಿಯಮ್ಮನ ಸುದ್ದಿ ಕೇಳಿದಳು. ಅವಳ ಹೃದಯ ಹಿರಿಹಿರಿ ಹಿಗ್ಗಿತು. ''ಆತನ ತಲೆ ಕೆಟ್ಟಿರಬೇಕು. ನಾನು ಹೋಗಿ ಆತನನ್ನು ಕರೆತರಬೇಕು,'' ಜಾರ್ಜ್ ಅಂದ.

''ಬೇಡ ಸಾಹಿಬ್, ನಾನು ಹೋಗುತ್ತೇನೆ. ಅವರ ತಲೆ ಸರಿಯಿಲ್ಲ. ನಾವು ಜಾಗರೂಕವಾಗಿರದಿದ್ದರೆ ಮತ್ತೆ ಕಣ್ಮರೆಯಾಗುವರು. ಇಂಥ ವಿಷಯಗಳಲ್ಲಿ ನನಗೆಲ್ಲ ಅನುಭವವಿದೆ. ನಾನು ಸಾಧ್ಯವಿದ್ದಷ್ಟು ಪ್ರಯತ್ನ ಮಾಡಿ ಅವರನ್ನು ಸುರಕ್ಷಿತವಾಗಿ ಹಿಡಿದು ತರುವೆ. ಒಮ್ಮೆಲೆ ಹಿಡಿಯಲು ಹೋದರೆ ತನಗೇ ಜೀವ ಹಾನಿಯನ್ನು ಮಾಡಿಕೊಳ್ಳಬಹುದು,'' ಅಂದ ಚಂದ್ರಸೇನ.

''ಊಹುಂ. ಆತ ಹಾಗೇನೂ ಮಾಡಿಕೊಳ್ಳಲಿಕ್ಕಿಲ್ಲ,'' ಎಂದು ಮೇರಿ ಒಮ್ಮೆಲೆ ಸುಮ್ಮನಾದಳು. ಚಂದ್ರಸೇನ ಅವಳತ್ತ ನೋಡಿದ. ''ಆದರೂ.. ತಲೆ ಸರಿಯಿಲ್ಲದವರ ಸಂಗತಿ ಕಠಿಣ,'' ಅಂದ ಜಾರ್ಜ್. ''ಚಂದ್ರಸೇನ ಹೇಳುವುದು ಸರಿ. ಪಟೇಲಜಿ, ನೀವೇ ಹೋಗಿ.''

''ಸರಿ,'' ಎಂದು ಚಂದ್ರಸೇನ ಇಬ್ಬರಿಗೂ ವಂದಿಸಿ ಹೊರಟುಹೋದ.

ಜಾರ್ಜ್ ಮೇರಿಗೆ ಸಿಡುಕಿನಿಂದೆಂದ: ''ಇಷ್ಟು ದಿನವೆಲ್ಲ ನಿನಗೆ ಎಲಿಯಂ ಏನು ಮಾಡುತ್ತಿದ್ದನೆಂದು ಗೊತ್ತಿತ್ತೆಂಬುದನ್ನು ಮುಖಭಾವವೇ ಹೇಳುತ್ತದೆ. ಎಲ್ಲರಿಗೂ ನೀನು ಸುಳ್ಳನ್ನೇ ಹೇಳಿದೆ.''

''ಇಲ್ಲ. ನಾನು ಯಾರಿಗೂ ಸುಳ್ಳು ಹೇಳಿಲ್ಲ.''

''ಸರಿ. ಈಗ ಆದದ್ದಾಯಿತು. ಆತನನ್ನು ಹುಚ್ಚರ ಆಸ್ಪತ್ರೆಯಲ್ಲಿ ಸೇರಿಸಬೇಕಾಗುವದೇನೊ,'' ಜಾರ್ಜ್ ಭುಜ ಹಾರಿಸಿದ.

ಮೇರಿಯ ಕಣ್ಣಲ್ಲಿ ನೀರೂರಿತು. ಜೋರಾಗಿ ತಲೆಯಲ್ಲಾಡಿಸಿದಳು, ಅದೇ ವೇಳೆ ಹುಸೇನ ಮೆಲ್ಲನೆ ಒಳಗೆ ಜಾರಿಕೊಂಡು ಬಾಗಿಲ ಹಿಂದೆ ನಿಂತು, ''ಮೇಮ್ ಸಾಹಿಬ್, ನಿಮ್ಮ ಸಾಹಿಬರು ಮತ್ತೆ ಅನೇಕ ಠಕ್ಕರೊಂದಿಗೆ ಪರ್ಸೋರ್‌ಲಾದಲ್ಲಿ ಇರುವರು. ಇಷ್ಟು ದಿನ ಅವರೇನು ಮಾಡುತ್ತಿದ್ದರೆಂದು ಈಗ ಈ ಸಾಹೇಬರಿಗೆ ಹೇಳಿ. ಕೂಡಲೆ ಅಶ್ವಸೇನೆ ಕಳಿಸಬೇಕು. ಇಲ್ಲವಾದರೆ ಸಮಯ ಮೀರಿಹೋಗುವದು. ನಿಮ್ಮ ಸಾಹಿಬರು ಅಪಾಯದಲ್ಲಿದ್ದಾರೆ,'' ಎಂದು ಅವಳಿಗೆ ಹೇಳಿದ.

''ಯಾರಯ್ಯ ನೀನು ? ಏನಿದೆಲ್ಲಾ ಠಕ್ಕರ ಕಥೆ,'' ಎಂದು ಜಾರ್ಜ್ ಮುಂದೆ ಹೋಗಿ ''ಓಹ್, ನೀನು, ಸೊಟ್ಟು ಗೋಣಿನವ.... ನಿನ್ನ ಬಗ್ಗೆ ಎಲ್ಲಾ ಕೇಳಿದ್ದೇನೆ. ಚಿಪ್ಲಿ ಕೊಲೆ ಪ್ರಕರಣದಲ್ಲಿ ನೀನು ಆಪಾದಿತನಾಗಿದ್ದಿ. ನಿನ್ನ ಕೈದು ಮಾಡುವೆ,'' ಎಂದು ಸೇವಕನನ್ನು ಕರೆದ.

''ಸಾಹಿಬ್, ಮೊದಲು ಅಶ್ವಸೇನೆ ಕರೆಕಳಿಸಿ. ಇಲ್ಲವಾದರೆ ಸ್ಯಾವೇಜ ಸಾಹೇಬರು ಸಾಯುವರು,'' ಎಂದು ಹುಸೇನ ಅಂದ.

''ಸ್ಯಾವೇಜ ಸಾಹಿಬ್ ಎಲ್ಲಿದ್ದಾನೆಂದು ನಮಗೆ ಗೊತ್ತು. ಆತ ಯಾವ ಠಕ್ಕತಂಡದೊಂದಿಗೂ ಇರುವುದಿಲ್ಲ. ಚಂದ್ರಸೇನ ಆತನನ್ನು ಕರೆತರಲು ಹೋಗಿದ್ದಾನೆ.''

ಹುಸೇನ ತಲೆ ತಗ್ಗಿಸಿದ. ''ಜಾರ್ಜ್,'' ಎಂದು ಮೇರಿ ಕರೆದಳು. ಜಾರ್ಜ್ ಅವಳತ್ತ ತಿರುಗಿದಾಗ, ಹುಸೇನ ಪರಾರಿಯಾದ. ಮೇರಿ ಜಾರ್ಜ್‌ನೆಡೆಗೆ ಹೋಗಿ ಆತನ ತೋಳುಗಳನ್ನು ಹಿಡಿದು, ''ಆತ ಹೇಳುತ್ತಿರುವುದು

ನಿಜ. ಅವನ ಸಂಗಡ ವಿಲಿಯಂ ಠಕ್ಕರನ್ನು ಹಿಡಿಯಲು ಹೋಗಿದ್ದ, ಈ ಮೊದಲೇ ನಾನೇನೂ ಹೇಳುವುದಿಲ್ಲವೆಂದು ವಚನ ಕೊಟ್ಟಿದ್ದೆ. ಆದ್ದರಿಂದಲೆ ನಾನು ಈವರೆಗೆ ಬಾಯಿಬಿಟ್ಟಿರಲಿಲ್ಲ.'' ಜಾರ್ಜ್ ಕುರ್ಚಿಯಲ್ಲಿ ಕುಸಿದ, ''ನಾನು ನಂಬಲಾರೆ ಯಾವ ಠಕ್ಕರು? ಏನು ಕಥೆ?''

''ನಾನು ಸುಳ್ಳು ಹೇಳುತ್ತಿರುವೆನೇ?'' ಮೇರಿ ರೋಷದಿಂದೆಂದಳು,

ಜಾರ್ಜ್ ಅನುಮಾನಿಸಿದ. ''ಇಲ್ಲ. ಆದರೆ ಚಂದ್ರಸೇನ ಮಾತಿನಲ್ಲಿ ನನಗೆ ನಂಬಿಕೆ.''

''ನೀನು ಅಶ್ವಸೇನೆಯನ್ನು ಕಳಿಸುತ್ತೀಯೋ ಇಲ್ಲವೊ ?''

''ಇಲ್ಲ.''

ಆತನ ಮುಖವನ್ನು ಪರಚಬೇಕೆನಿಸಿತು ಅವಳಿಗೆ. ಕೋಪಾವೇಶದಿಂದ ಎದ್ದು ಕೋಣೆಯಿಂದ ಹೊರಬಿದ್ದಳು.

★

ವಿಲಿಯಂ ತನ್ನ ತಂಡದೊಂದಿಗೆ ಪರ್ಸೋಲಾದ ಪಶ್ಚಿಮಕ್ಕಿರುವ ಬತ್ತಿದ ಕಾಡಿನಲ್ಲಿ ಮಾರ್ಚ್ 20ರಂದು ಬಂದು ಸೇರಿದ. ಮರುದಿನ ಬೆಳಗ್ಗೆ ಬೇಗ ಹೊರಟು ಹಳ್ಳಿಯ ಪೇಟೆಯ ಮೊದಲನೆ ಕಿರಾಣಿ ಅಂಗಡಿಗೆ ಬಂದ. ವ್ಯಾಪಾರಸ್ಥ ಹೊರಗೆ ಬಂದೊಡನೆ ವಿಲಿಯಂ, ''ಸಲಾಮ್, ಅಲಿ ಭಾಯಿ. ದೂರ ಪ್ರಯಾಣಕ್ಕೆ ನನಗೆ ಹಿಟ್ಟು ಬೇಕು,'' ಅಂದ.

ವ್ಯಾಪಾರಸ್ಥ ಅವನತ್ತ ಆಶ್ಚರ್ಯದಿಂದ ನೋಡಿದ. ಸಂಕುಚಿತ ಕಣ್ಣುಗಳಿಂದ ದಿಟ್ಟಿಸಿ ''ನೀನು ನೇಕಾರ ಗೋಪಾಲ ಅಲ್ಲವೆ?'' ಎಂದು ಕೇಳಿದ. ''ನಾನು ಜಮಾದಾರ ಗೋಪಾಲ. ನೇಕಾರ ಗೋಪಾಲ ಅಲ್ಲ. ಏನು ಸಮಾಚಾರ ?'' ''ನಾಡಿದ್ದು ಇಲ್ಲಿಯ ಕಣಜದಲ್ಲಿ ಸೂರ್ಯಾಸ್ತದ ನಂತರ ಎರಡು ಗಂಟೆಗಳಾದಾಗ ವ್ಯಾಪಾರ ನಡೆಯುವುದು. ಪ್ರತಿಯೊಂದು ತಂಡದಿಂದ ಇಬ್ಬರೇ ಬರಬೇಕು, ಜಮಾದಾರ ಸಾಹಿಬ್.''

'ವ್ಯಾಪಾರ'ದ ಮುಂಜಾನೆ ವಿಲಿಯಂ ಒಬ್ಬನೆ ಅಡವಿಯಲ್ಲಿ ಅಡ್ಡಾಡಿದ. ಹುಸೇನ ಏನಾದರೂ ವಾರ್ತೆ ತರಬಹುದೆಂದು ದಾರಿ ಕಾಯ್ದ. ಸೂರ್ಯ ಆಗಸದಲ್ಲಿ ಏರಿದಂತೆ ಅವನಿಗೆ ಭಯವಾಗಹತ್ತಿತು. ಅಂದು ರಾತ್ರಿ ಅಸ್ತಂಗತವಾಗುವಷ್ಟರಲ್ಲಿ ವ್ಯಾಪಾರ ಮುಗಿದುಹೋಗುವುದು. ಇನ್ನೊಂದು ದಿನ ಕಳೆದರೆ ಎಂಟುನೂರು ಠಕ್ಕರು ತಮ್ಮ ಮನೆಗಳಿಗೆ ಹೋಗಿ ಮಡದಿಮಕ್ಕಳನ್ನು ಕೂಡುವರು. ತಲೆ ತಗ್ಗಿಸಿಕೊಂಡು ಕಾಡಿನಲ್ಲಿ ನಿಧಾನವಾಗಿ ತಿರುಗಾಡಿದ. ಆದರೆ ಹುಸೇನ ಬರಲಿಲ್ಲ.....

ಸೂರ್ಯಾಸ್ತವಾಗಿ ಚಂದ್ರೋದಯವಾಯಿತು. ಅವನ ತಂಡದವರು ಬಂಡಿಗಳಿಂದ ರತ್ನಾಭರಣಗಳನ್ನು ಹೊರತೆಗೆದು ಚೀಲದಲ್ಲಿ ಹಾಕಿ ಎರಡು ಕುದುರೆಗಳ ಮೇಲೆ ಹೇರಿದರು. ವಿಲಿಯಂ ಮತ್ತು ಹೀರೂ ಅವುಗಳೊಂದಿಗೆ ಕಾಡಿನಲ್ಲಿ ಹಾಯ್ದು ಪರ್ಸೋಲಾಕ್ಕೆ ಹೋದರು.

ಊರಿನಲ್ಲಿ ದೀಪಗಳು ಬೆಳಗುತ್ತಿದ್ದವು. ಹಳ್ಳಿಯಲ್ಲಿ ದೊಡ್ಡ ಪಟ್ಟಣದಲ್ಲಿಯಂತೆ ಸಂಭ್ರಮದ ವಾತಾವರಣವಿತ್ತು. ಬೀದಿಯಲ್ಲಿ ಮನುಷ್ಯರು, ಕುದುರೆಗಳು, ಕತ್ತೆಗಳು, ಎತ್ತುಗಳು ತುಂಬಿದ್ದವು.

ಅದೊಂದು ದೊಡ್ಡ, ತಗ್ಗಾದ ಕಟ್ಟಡ. ಮಣ್ಣು, ಸೆಗಣಿ ಸಾರಿಸಿದ ಗೋಡೆಗಳು. ಹುಲ್ಲಿನ ಚಪ್ಪರ ಗೀಳಾಗಿ ಬೀಳುವುದರಲ್ಲಿತ್ತು. ನೆಲದ ಮೇಲೆ ಜೊಂಡು ಹುಲ್ಲು ಬೆಳೆದಿತ್ತು. ಅದರ ಮೇಲೆ ಸುಮಾರು ಮೂವತ್ತು ಕಂಬಳಿಗಳು ಹರಡಿದ್ದವು. ಪ್ರತಿಯೊಂದರ ಮೇಲೆ ಉಂಗುರಗಳು, ಬಳೆಗಳು, ಹಾರಗಳು, ಥಳಥಳಿಸುತ್ತಿದ್ದವು. ಪ್ರತಿಯೊಂದು ಕಂಬಳಿ ಹತ್ತಿರ ಇಬ್ಬರು ಕುಳಿತಿದ್ದರು. ಮತ್ತೆ ವ್ಯಾಪಾರಸ್ಥರಂತೆ ಕಾಣುವ ಹತ್ತಿಪ್ಪತ್ತು ಜನರು ಅತ್ತಿಂದಿತ್ತ ಮಾತಾಡುತ್ತ ಅಡ್ಡಾಡುತ್ತಿದ್ದರು.

ಬಾಗಿಲ ಹತ್ತಿರ ಖಾಲಿ ಜಾಗದ ಮೇಲೆ ಹೀರೂ ಎರಡು ಕಂಬಳಿಗಳನ್ನು ಹಾಸಿ, ತಮ್ಮ

ಚೇಲಗಳಿಂದ ಮೂಲು ಸುರುವಿದ. ವಿಲಿಯಂ ಅಲ್ಲೆ ಕುಕ್ಕರುಗಾಲಿನಿಂದ ಕುಳಿತು, ಕಣ್ಣು ಮುಚ್ಚಿದ. ಅವನಿಗೆ ಎದ್ದು ಓಡಿಹೋಗಬೇಕೆನಿಸಿತು.

'ಕಣಜ'ದಲ್ಲಿ ಮಾತಿನ ಅಬ್ಬರ ಕಡಿಮೆಯಾಗಿ, ''ಮಿತ್ರರೆ, ಆಕ್ಕಬಾಂಧವರೆ, ಶಾಂತವಾಗಿರಿ,'' ಎಂದು ದೂರದ ಮೂಲೆಯಿಂದ ಯಾರೋ ಒಬ್ಬ ಜೋರಾಗಿ ಕೂಗಿದ. ವಿಲಿಯಂ ಚಂದ್ರಸೇನನ ಧ್ವನಿ ಗುರುತಿಸಿದ. ಅವನ ಕೈಗಳು ಕಂಪಿಸಹತ್ತಿದವು. ಆ ಸುಪರಿಚಿತ ಧ್ವನಿ ಮುಂದುವರೆಯಿತು: ''ಈ ರತ್ನಾಭರಣಗಳು ನಮಗೆ ಕಾಳಿಯ ಕೊಡುಗೆ, ಇವುಗಳ ವ್ಯಾಪಾರ ಆರಂಭಿಸುವ ಮುಂಚೆ ನಿಮಗೊಂದು ವಿಷಯವನ್ನು ಹೇಳುವುದಿದೆ. ಕಾಳಿಯ ಸಕ್ಕರೆ ತಿಂದು, ಅವಳಿಗೆ ದ್ರೋಹಿಯಾದ ಮನುಷ್ಯನೊಬ್ಬ ಸಿಕ್ಕಿದ್ದಾನೆ.

ಕಣಜದಲ್ಲಿಯ ಜನರು ರೋಷದಿಂದ ನರಳಾಡಿದರು.

''ಆ ಮನುಷ್ಯ ಇಲ್ಲಿದ್ದಾನೆ. ಅವನಿಗೇನು ಮಾಡಬೇಕೆಂದು ಕಾಳಿಯ ಆಜ್ಞೆ ?'' ಮತ್ತೆ ಆ ಧ್ವನಿ ಕೂಗಿತು.

ವಿಲಿಯಂ ನಿಧಾನವಾಗಿ ಎದ್ದು ನಿಂತ. ಮುಂದೆ ಹೋಗಿ ಚಂದ್ರಸೇನನೊಂದಿಗೆ ಮಾತಾಡಬೇಕೆಂದ. ಇನ್ನು ಅಶ್ವಸೇನೆ ಬರುವುದು. ಗಲಾಟೆ ಮಾಡದೆ ಸುಮ್ಮನೆ ಶರಣಾಗತರಾಗುವುದೇ ಅವರಿಗೆ ಪಾರಾಗುವ ದಾರಿ ಎಂದು ಅವನಿಗೆ ಎಚ್ಚರಿಸಬೇಕೆಂದು ಸಾವಕಾಶ ಮುಂದೆ ಹೆಜ್ಜೆಯಿಡುತ್ತ ಚಂದ್ರಸೇನನ ಕಣ್ಣಲ್ಲಿ ಕಣ್ಣಿಟ್ಟು ನೋಡಿದ.

ಮಬ್ಬುಗತ್ತಲೆಯಿಂದ ಚಂದ್ರಸೇನ ಮನುಷ್ಯನೊಬ್ಬನನ್ನು ಒಮ್ಮೆಲೆ ಹೊರಗೆಳೆದ. ಅವನ ಕೈಗಳನ್ನು ಬೆನ್ನ ಹಿಂದೆ ಕಟ್ಟಲಾಗಿತ್ತು, ಧೂಳು ತುಂಬಿದ ದೇಹ, ಒಂದು ಬದಿವಾಲಿದ ಗೋಣು ಕಣ್ಣು ತಗ್ಗಿಸಿದ್ದ ಹುಸೇನ.


ಚಂದ್ರಸೇನ ತೀಕ್ಷ್ಣ ಸ್ವರದಿಂದ ಅಂದ: ''ಜಮಾದಾರ, ಈತನೆ ಆ ಮನುಷ್ಯ, ಈ ದ್ರೋಹಿಯನ್ನು ದಂಡಿಸು. ಕಾಳಿಯ ಸಕ್ಕರೆ ತಿಂದು, ಬೆಳ್ಳಿ ಮುಟ್ಟಿ ರುಮಾಲ ಬೀಸಿ, ಈಗ ಹೇಗೆ ಪಾರಾಗುವನು ? ಕಾಳಿಯಿಂದಲೇ ಆತ ತನ್ನ ಮಡದಿ ಮತ್ತು ಗರ್ಭಸ್ಥಮಗುವನ್ನು ತಿರುಗಿ ಪಡೆಯಬಹುದು. ಜಮಾದಾರ್, ಈತನ ಕುತ್ತಿಗೆ ಹಿಸುಕು.''

ವಿಲಿಯಮ್ಮನಿಗೆ ಚಂದ್ರಸೇನನ ಮಾತಿನ ಅರ್ಥವಾಯಿತು. ಹುಸೇನನಿಗೆ ಮಡದಿ, ಮಕ್ಕಳಿರಲಿಲ್ಲ. ತನ್ನದೇ ಪ್ರಾಣ, ತನ್ನ ಪತ್ನಿಯನ್ನು ಕಾಳಿಯಿಂದ ಪಡೆಯಬಹುದೆಂದು ಚಂದ್ರಸೇನನ ಮಾತಿನ ವ್ಯಂಗ್ಯಾರ್ಥ. ಚಂದ್ರಸೇನ ತನ್ನನ್ನು ಗುರುತಿಸಿದ್ದ. ತಾನು ಹುಸೇನನ ಕುತ್ತಿಗೆ ಹಿಸುಕಿ ಕೊಂದರೆ ತನಗೆ ವಿಮೋಚನೆ. ವಿಲಿಯಂ ನಿಂತು ಯೋಚಿಸಿದ–ಇದು ತನ್ನ ಸತ್ವಪರೀಕ್ಷೆ. ಹೇಗೋ ಹುಸೇನ ಒಬ್ಬ ಕೊಲೆಗಡುಕ. ಸುಮ್ಮನೆ ತಿರುಗಿ, ಸೊಂಟಕ್ಕೆ ಕೈ ಹಾಕಿ, ರುಮಾಲ ಹೊರತೆಗೆದು ಬೀಸಿದ.

ಆ ಕ್ಷಣ ಹುಸೇನ ಚಂದ್ರಸೇನನ ಮೇಲೆ ಎರಗಿದ. ಅವನ ಕೈಗಳು ಹಿಂದಕ್ಕೆ ಕಟ್ಟಿದ್ದರಿಂದ ಹಾಗೆ ಬಡಿದಾಡುತ್ತ ವಿಲಿಯಂನಿಗೆ,'' ಹೋಗು. ಬೇಗ ಹೋಗು. ಅವಳಿನ್ನೂ ಸುರಕ್ಷಿತವಾಗಿದ್ದಾಳೆ. ಹೋಗು,'' ಎಂದು ಕೂಗಿ ಹೇಳಿ ಹತ್ತಿರದ ದೀಪದ ಮೇಲೆ ಬಿದ್ದು ಬಿಟ್ಟ. ದೀಪ ಒಡೆದು, ಎಣ್ಣೆ ಹೊರಚೆಲ್ಲಿ ಹುಲ್ಲಿಗೆ ಬೆಂಕಿ ಹತ್ತಿತು. ಹುಸೇನನ ಮೈಮೇಲೆಲ್ಲ ಜ್ವಾಲೆಗಳು ಉರಿಯುತ್ತಿದ್ದವು.

ವಿಲಿಯಂ ರುಮಾಲನ್ನು ಬೀಸಿ ಕಣಜದ ಆಚೆಗೆ ಒಗೆದು ಕಿಟಕಿಯಿಂದ ಹೊರಗೆ ಹಾರಿದ. ಓಡಿ ಹೋಗುವಾಗ ಹುಸೇನನ ಪ್ರಾಣಾಂತಿಕ ನರಳಾಟ ಕೇಳಿಸುತ್ತಿತ್ತು.

ಕಣಜದಲ್ಲಿ ಭಯಂಕರ ಕೋಲಾಹಲ ಪ್ರಾರಂಭವಾಯಿತು. ಎಲ್ಲರೂ ಕೂಗುತ್ತಾ ಹೊರಗೋಡಿದರು. ವಿಲಿಯಂ, ''ದ್ರೋಹಿಗಳು! ಕಳ್ಳರು,'' ಎಂದು ಕೂಗುತ್ತಾ ಹತ್ತಿರ ಇದ್ದ ಕುದುರೆಯೇರಿ ನಾಗಾಲೋಟದಿಂದ ದಾರಿ ಹಿಡಿದ. ಅವನ ಹಿಂದೆ ಎಲ್ಲರೂ ಕುದುರೆಗಳನ್ನೇರಿ ಬೆನ್ನುಹಿಡಿದದ್ದನ್ನು ನೋಡಿದ.



ಆತ ನೇರವಾಗಿ ವಾಯುವ್ಯ ದಿಕ್ಕಿನಲ್ಲಿ ಪೊದೆ ಕಂಟಿಗಳು ಹೊಲ ಕೊಂಪೆಗಳಲ್ಲಿ ವೇಗವಾಗಿ ಕುದುರೆಯೋಡಿಸಿದ.

ಬಂಗಲೆ ಮುಟ್ಟಿದಾಗ ಮಧ್ಯರಾತ್ರಿಯಾಗಿತ್ತು. ಮೆಟ್ಟಿಲುಗಳ ಮೇಲೆ ಜಾರುತ್ತ ಕಂಬವನ್ನು ಆಸರೆಗಾಗಿ ಹಿಡಿದು, ''ಓಯ್, ಯಾರಲ್ಲಿ? ನಾನು ವಿಲಿಯಂ ಸ್ಯಾವೇಜ್. ಬಾಗಿಲು ತೆಗೆಯಿರಿ,'' ಎಂದು ಕೂಗಿದ.

ಬಾಗಿಲು ತುಸುವೆ ತೆರೆದು ಜಾರ್ಜ್ ಎಂಜೆಲ್‌ಸ್ಮಿಥ್ ಹೊರಗೆ ನೋಡಿದ.

''ಯಾರು? ಯಾರಯ್ಯ ನೀನು?'' ಎಂದ.

''ನಾನು ವಿಲಿಯಂ ಸ್ಯಾವೇಜ್. ಬೇಗ ನನ್ನನ್ನು ಒಳಗೆ ಬಿಡಯ್ಯ.''

ಜಾರ್ಜ್ ಕೈಯಲ್ಲಿ ಪಿಸ್ತೂಲು ಅದರುತ್ತಿತ್ತು. ''ವಿಲಿಯಂ?'' ಅಂತೆಂದ.

''ಹೌದು. ಮೇರಿ ಎಲ್ಲಿ?''

''ಇಂದು ಮಧ್ಯಾಹ್ನ ಸಾಗ್ಧಲಿಗೆ ಹೋದಳು.''

''ಓ ಗಾಡ್. ಅವಳನ್ನು ಯಾಕೆ ಹೋಗಲು ಬಿಟ್ಟೆ?''

''ಅವಳು ಹೋಗಲೇಬೇಕೆಂದು ಹಟ ಹಿಡಿದಳು. ನಾನು ಎಷ್ಟು ಹೇಳಿದರೂ ಕೇಳಲಿಲ್ಲ.'' ಎಂದ ಜಾರ್ಜ್ ನಿಧಾನವಾಗಿ. ವಿಲಿಯಂ ಮತ್ತವನ ವೇಷ ಪರೀಕ್ಷಿಸಿ ನೋಡುತ್ತ, ''ನೀನೆಲ್ಲಿಗೆ ಹೋಗಿದ್ದೆ?'' ಎಂದು ಕೇಳಿದ.

''ಠಕ್ಕರ ಬೆನ್ನು ಹತ್ತಿದ್ದೆ. ಇಲ್ಲಿ ಆ ಸೊಟ್ಟ ಗೋಣಿನ ಹುಸೇನ ಬರಲಿಲ್ಲವೇ? ಬಂದು ಏನಾದರೂ ಹೇಳಲಿಲ್ಲವೇ?''

''ಹೌದು, ಬಂದಿದ್ದ, ಪರ್ಸೋರ್‌ಲಾದ ಹತ್ತಿರ ಠಕ್ಕರದೇನೋ ಕಥೆ ಹೇಳಿದ. ನಾನು ಅಶ್ವಸೇನಾಪಡೆ ಕಳಿಸಬೇಕೆಂದೆ. ಆದರೆ ನೀನು ಪರ್ಸೋರ್‌ಲಾದಲ್ಲಿ ಒಬ್ಬನೇ ಹುಚ್ಚನಂತೆ ಭಿಕ್ಷೆ ಬೇಡುತ್ತಿರುವಿ ಎಂದು ಚಂದ್ರಸೇನ ಹೇಳಿದ. ಅದಕ್ಕೆ ನಾನೇನೂ ಹಾಗೆ ಮಾಡಲಿಲ್ಲ.''

''ಏನು? ನಾನು ಹುಚ್ಚನೆಂದು ತಿಳಿದಿರುವಿಯಾ?'' ವಿಲಿಯಂ ಒದರಾಡಿದ.

''ನಿನಗೆ ಹುಚ್ಚು ಹಿಡಿದಿದೆಯೋ ಏನೋ ನನಗೆ ಗೊತ್ತಿಲ್ಲ. ಆದರೆ ನಿನ್ನನ್ನು ಬಂಧಿಸಬೇಕೆಂದು ಗೊತ್ತಿದೆ. ಅಲ್ಲದೆ, ಇಲ್ಲಿನ ಮಹತ್ವದ ಕಾರ್ಯಗಳನ್ನು ಬಿಟ್ಟುಕೊಟ್ಟು ಹೀಗೆ ಓಡಿ ಹೋಗುವುದರ ಅರ್ಥವೇನು? ಮೊದಲಿನ ನಾಲ್ಕು ತಿಂಗಳು ನಾನು ನಿನ್ನ ಪಾಲಿನ ಕೆಲಸವನ್ನು ಮಾಡಬೇಕಾಯಿತು. ಆಡಳಿತವೆಲ್ಲಾ ಅಸ್ತವ್ಯಸ್ತವಾಗಿದೆ.'' '' ಜಾರ್ಜ್, ದಯವಿಟ್ಟು ಕೇಳು. ಇಲ್ಲಿಯವರೆಗೆ ನಡೆದ ಅಪರಾಧಗಳಲ್ಲಿಯೆ ಅತಿದೊಡ್ಡ ಒಳಸಂಚು ಇಲ್ಲಿಯೇ ಪರ್ಸೋರ್‌ಲಾದಲ್ಲಿ ನಡೆದಿದೆ. ಅದನ್ನು ನೀನು ಬಹಿರಂಗಪಡಿಸಿ ಕೀರ್ತಿ ಪಡೆ

ಯಬಹುದು. ಬೇಗನೆ ಕಾರ್ಯಪ್ರವೃತ್ತನಾಗು. ನೀನು ಹೆಸರುವಾಸಿಯಾಗುವಿ. ಜಗತ್ಪ್ರಸಿದ್ಧನಾಗುವಿ. ನೋಡು, ನನಗೆ ಇದರಲ್ಲಿ ಎಳ್ಳಷ್ಟೂ ಶಾಭಾಷಗಿರಿ ಬೇಡ.''

''ನಾನು ನಿನ್ನನ್ನು ನಂಬಲಾರೆ, ವಿಲಿಯಂ. ನಿನ್ನ ತಲೆಸರಿಯಿಲ್ಲ. ನಿನ್ನನ್ನು ಇಲ್ಲಿ ಬಚ್ಚಲು ಮನೆಯಲ್ಲಿ ಬಂಧಿಸಿಡುವೆ. ಬಳಿಕ ಪೋಲೀಸರು ಬಂದು ರಾತ್ರಿಯೆಲ್ಲ ನಿನ್ನ ಕಾಯುವರು.''

ವಿಲಿಯಂ ಅವನ ಕೈಯೊಳಗಿನ ಪಿಸ್ತೂಲನ್ನು ನೂಕಿದ. ಬಳಿಕ ಓಡಿ ಹೋಗುವಾಗ, ''ದೇವರಾಣೆ! ನನ್ನನ್ನು ನಂಬು. ಅಶ್ವಸೇನೆಗೆ ಹೇಳಿಕಳಿಸು, ನಾನು ಸಾಗ್ಗಲಿಗೆ ಹೋಗುವೆ,'' ಎಂದು ಕೂಗಿ ಕುದುರೆಯೇರಿ ತನ್ನ ಆಪ್ತಸೇವಕನ ಜೊತೆಯಾಗಿ ದಕ್ಷಿಣಾಭಿಮುಖವಾಗಿ ವೇಗದಿಂದ ಸಾಗಿದ. ಮೇರಿಯೂ ಅದೇ ದಾರಿ ಹಿಡಿದು ಹೋಗಿದ್ದಳು, ಆಕೆಯನ್ನು ರಕ್ಷಿಸುವದೊಂದೇ ಈಗವನ ಗುರಿಯಾಗಿತ್ತು.

ರಾತ್ರಿ ಕಳೆದು ಬೆಳಗಾಯಿತು. ಬಿಸಿಲೇರಿ ಮುಖಸುಡುತ್ತಿತ್ತು. ಹಸಿವು ಬಾಯಾರಿಕೆಯಿಂದ ಅವರಿಬ್ಬರೂ ಬಳಲಿದ್ದರು. ಆದರೂ ವಿಲಿಯಂ ಮುನ್ನುಗ್ಗಿದ. ಮಧ್ಯಾಹ್ನದ ಹೊತ್ತು ಮುಂದೆ ದೂರದಲ್ಲಿ ಅವಳ ಮೇಣೆ ಕಾಣಿಸಿತು. ರಭಸದಿಂದ ಬರುವ ಇಬ್ಬರು ಕುದುರೆಸವಾರರನ್ನು ಕಂಡೊಡನೆ ಅವಳ ಸೇವಕರು ಮೇಣೆ ಇಳಿಸಿ ಕಂಟಿಗಳಲ್ಲಿ ಅಡಗಿಕೊಂಡರು.

ವಿಲಿಯಂ ಕುದುರೆಯಿಂದ ಹಾರಿಹೋಗಿ ಮೇಣೆಯಲ್ಲಿ ತಲೆ ಹಾಕಿ ನೋಡಿದ. ಮೇರಿಯ ನೀಲಿ ಕಣ್ಣುಗಳು ನಿರ್ಭೀತಿಯಿಂದ ಆತನ ಮುಖವನ್ನುದಿಟ್ಟಿಸಿದವು. ಕೂಡಲೆ ಆಕೆ ಆತನನ್ನು ಗುರುತಿಸಿದಳು.

ಅವರಿಬ್ಬರೂ ಹತ್ತಿರವಾದಾಗ ವಿಲಿಯಂ ಬಾಗಿ ಅವಳನ್ನು ಮೃದುವಾಗಿ ಆಲಿಂಗಿಸಿದ. ''ಎಲ್ಲಾ ಮುಗಿಯಿತೇ? ಮರಣವೇ ನಮಗುಳಿದಿರುವ ಗತಿಯೇ?'' ''ಇಲ್ಲ, ಬಾ,'' ಎಂದು ವಿಲಿಯಂ ಅವಳ ಮುಂಗೈ ಹಿಡಿದು ಎಬ್ಬಿಸಿದ. ಆತನ ಪ್ರೇಮ ಉಕ್ಕೇರಿ, ಬಂದ ಆಪತ್ತನ್ನು ಮರೆತು, ಒಂದು ನಿಮಿಷ ಅವಳೆದುರು ಸಂತಸದಿಂದ ನಿಂತ. ವಾಯುವ್ಯ ದಿಕ್ಕಿನಿಂದ ಯಾರೋ ಬಂದಂತೆ ಕಾಣಿಸಿತು. ಬೇಗ ಅವಳ ಕೈ ಹಿಡಿದು ದಾರಿಯ ಪಕ್ಕದಲ್ಲಿದ್ದ ಗಿಡಗಂಟಿಗಳಲ್ಲಿ ಕರೆದೊಯ್ದ. ಅನಂತರ ಸಮಯ ಸಾಧಿಸಿ ಸೇವಕರಿಂದ ವಿಲ್ಸನ್ನನಿಗೆ ಸಂದೇಶ ಕಳಿಸಿದ.

ಠಕ್ಕರು ಬರುತ್ತಿದ್ದರು; ಧರ್ಮದ್ರೋಹಿಯನ್ನು ಹುಡುಕುತ್ತಿದ್ದರು. ಕಾಳಿಯ ರೀತಿನೀತಿಗಳನ್ನರಿತು, ಅವಳ ಸೇವಕರನ್ನು ಸಂಪೂರ್ಣ ನಾಶಮಾಡಿಬಿಡಬೇಕೆಂದು ದೃಢ ಸಂಕಲ್ಪ ಮಾಡಿದ ಸ್ವಧರ್ಮತ್ಯಾಗಿಯನ್ನು ಶೋಧಿಸುತ್ತಿದ್ದರು.

★

ವಿಲಿಯಂ ಮತ್ತುಮೇರಿ ದಟ್ಟಡವಿಯಲ್ಲಿ ಸೇರಿಕೊಂಡರು. ಎಡಗಡೆ ಜಾರೋಡದ ಬೆಟ್ಟಗಳು ಬಿಸಿಲಲ್ಲಿ ಹೊಳೆಯುತ್ತಿದ್ದವು. ಬೆಟ್ಟಗಳ ಬಂಡೆಗಲ್ಲುಗಳ ಅಡಿಯಲ್ಲಾಗಲಿ ಗುಹೆಗಳಲ್ಲಾಗಲಿ ಆಶ್ರಯಪಡೆಯಬಹುದೆಂದು ಅತ್ತ ಹೊರಟರು.

ಮೇರಿ ತುಂಬು ಗರ್ಭಿಣಿಯಾದ್ದರಿಂದ ಅವರು ಅತ್ಯಂತ ಸಾವಕಾಶವಾಗಿ ಸಾಗಬೇಕಾಯಿತು. ಅಲ್ಲಲ್ಲಿ ವಿಶ್ರಮಿಸುತ್ತ ಬೆಟ್ಟಗಳ ಕಲ್ಲುಬಂಡೆಗಳ ಮಧ್ಯೆ ಎಡವುತ್ತ ನಡೆದರು. ಸೂರ್ಯಾಸ್ತವಾಗಿ, ಪೂರ್ಣಕತ್ತಲಾದಾಗ ನೆಲದ ಮೇಲೆ ಅಡ್ಡಾದರು. ಚಂದ್ರೋದಯವಾದೊಡನೆ ಮತ್ತೆ ನಡೆಯಲಾರಂಭಿಸಿದರು. ಎರಡು ಗಂಟೆಗಳಿಗೊಮ್ಮೆ ವಿಶ್ರಮಿಸುತ್ತ ಹೊಳೆಗಳಲ್ಲಿ ನೀರು ಕುಡಿಯುತ್ತ ನಿಧಾನವಾಗಿ ಸಾಗಿದರು.

ಮತ್ತೊಂದು ಬೆಳಗಾಗಿ ಬಿಸಿಲಿನ ಬೇಗೆ ಹೆಚ್ಚಾಗಹತ್ತಿತು. ಮೇರಿ ಪ್ರತಿಯೊಂದು ಹೆಜ್ಜೆಗೆ ನರಳುತ್ತಿದ್ದಳು. ಅಂತೂ ಸಾಯಂಕಾಲದ ಮಬ್ಬುಗತ್ತಲೆಯಲ್ಲಿ ಜಾರೋಡದ ಕೋಟೆಯ ಹೊರಗಿನ ಇಳಿಜಾರದ ದಂಡೆ ಕಂಡರು. ಒಳಗಡೆ ಹನ್ನೆರಡು ಅಡಿಗಳಷ್ಟು ಕೆಳಗೆ ಅಗಲವಾದ ತಗ್ಗು ಪ್ರದೇಶವಿತ್ತು.

ಅಲ್ಲಿದ್ದ ದೊಡ್ಡ ಬಂಡೆಗಳು ದಟ್ಟ ಮರಪೊದೆಗಳ ನಡುವೆ ತಿರುವು ಮುರುವಾದ ದಾರಿಯಿತ್ತು. ಆಶ್ರಯ ಪಡೆಯಲು ಇದು ಒಳ್ಳೆಯ ಸ್ಥಳವೆಂದು ಅದರೊಳಗೆ ಇಳಿದರು. ಬಲಬದಿಯಲ್ಲಿ ತುರುಚಿ ಗಿಡಗಳು ಹುಲುಸಾಗಿ ಬೆಳೆದಿದ್ದವು. ಅದರಲ್ಲಿ ಹೊಕ್ಕು ಅಡ್ಡಾದರು. ಮುಳ್ಳುಗಳು ಕೈ ಕಾಲುಗಳಿಗೆ ಚುಚ್ಚಿದಾಗ ವೇದನೆಪಟ್ಟರು. ಹಸಿವಿನ ಬಾಧೆ ಹೆಚ್ಚಾಗಿತ್ತು. ವಿಲಿಯಂ ಹೊಟ್ಟೆ ಒತ್ತಿ ಹಿಡಿದು ನರಳಿದ. ಮೇರಿ ಅಳಲಾರಂಭಿಸಿದಳು.

ಬೆಳಕು ಹರಿಯಿತು. ಹೊರಗಡೆ ಜನರ ಹೆಜ್ಜೆ ಸಪ್ಪಳವಾಗುತ್ತಿತ್ತು. ವಿಲಿಯಂ ಎದ್ದು ಆಲಿಸಿದ. ಚಂದ್ರಸೇನನ ಧ್ವನಿ ಕೇಳಿಸಿತು: "ಕಲೆಕ್ಟರ ಸಾಹಿಬ್, ಹೊರಗೆ ಬನ್ನಿ."

ವಿಲಿಯಂ ಕಂಟಿಗಳನ್ನು ಸ್ವಲ್ಪ ಸರಿಸಿ, ಮುಂದೆ ಪಿಸ್ತೂಲ ಚಾಚಿ, "ಅದೇನೂ ಪ್ರಯೋಜನವಿಲ್ಲ, ಚಂದ್ರಸೇನ. ನೀನು ಕೊಲೆಗಡುಕನೆಂದು ನನಗೆ ಗೊತ್ತು. ವಿಲ್ಸನ್ನನಿಗೂ ಅದು ಈಗ ಗೊತ್ತಾಗಿರಬೇಕು. ಆ ಬಗ್ಗೆ ನಾನು ಈಗಾಗಲೆ ಅವರಿಗೆ ಸಂದೇಶ ಕಳಿಸಿದ್ದೇನೆ," ಎಂದ ಅಸ್ಥಿರವಾದ ಸ್ವರದಲ್ಲಿ

"ನನಗೂ ಗೊತ್ತು, ಸಾಹಿಬ್. ಇಲ್ಲಿ ನನ್ನ ಅವತಾರ ಮುಗಿದಿದೆ. ಆದರೆ ನೀವು ಸತ್ತರೆ ಠಕ್ಕರು ಕಾಳಿಗೆ ಇನ್ನೂ ಹೆಚ್ಚು ಸೇವೆಯನ್ನು ಸಲ್ಲಿಸಬಹುದು. ನನ್ನ ಸ್ವಾರ್ಥಕ್ಕೋಸ್ಕರ ನಿಮ್ಮನ್ನು ಕೊಲ್ಲಲು ನಾನಿಲ್ಲಿಗೆ ಬಂದಿಲ್ಲ. ಎಲ್ಲ ಠಕ್ಕರ ಸಲುವಾಗಿ, ಕಾಳಿಯ ಸಲುವಾಗಿ ಬಂದಿರುವೆ. ಹೊರಗೆ ಬನ್ನಿ."

"ಮುಂದೆ?"

"ತಕ್ಷಣ ರುಮಾಲ ಬೀಸುವುದು, ನಿಮ್ಮ ಪತ್ನಿಗೆ ಹೆರಿಗೆಯಾದ ಮೇಲೆ ಗಂಡುಮಗು ಬದುಕಿ ಉಳಿದು, ಬೆಳೆದು, ಕಾಳಿಯ ಸೇವಕರಲ್ಲಿಯೇ ಶ್ರೇಷ್ಠವಾಗುವುದು."

ನಿರ್ವಾಹವಿಲ್ಲದೆ ವಿಲಿಯಂ ಶತ್ರುಗಳಿಗೆ ಶರಣಾಗತನಾಗಬೇಕೆಂದ." ಠಕ್ಕರೆ, ನಾವು ಹೊರಬೀಳುತ್ತೇವೆ," ಎಂದು ದೃಢಸ್ವರದಲ್ಲಿ ಹೇಳಿ, ಕೈಚಾಚಿ ಕಂಟಿಗಳನ್ನು ಸರಿಸಿದ.

ಆಚೆಬದಿ ಗಿರಿಕಂದರದಲ್ಲಿ ಜೇನ್ನೊಣಗಳ ದೊಡ್ಡ ಗೂಡು ಕಂಡವು. ಜೇನ್ನೊಣಗಳ ಭಾರಿ ಮರಮರ ಶಬ್ದ ಕೇಳಿಸಿತು. ಈ ಜೇನ್ನೊಣಗಳು ಬಂಧೇರ, ಕೈಮೂರ ಮತ್ತು ಮಹಾದೇವ ಸಾಲುಬೆಟ್ಟಗಳಲ್ಲಿ ಸಮೃದ್ಧವಾಗಿದ್ದವು. ಬೃಹದಾಕಾರದ ಜೇನುಗೂಡುಗಳ ಮೇಲೆ ಬೆಳೆದ ಮರಳಿಗೆ ತೂಗುಬಿದ್ದು ಗಿರಿಕಂದರಗಳ ಪಾರ್ಶ್ವಗಳು ಕಪ್ಪಾಗಿ ಕಾಣಿಸುತ್ತಿದ್ದವು. ಇವು ಬಲು ಸೂಕ್ಷ್ಮ ಜೇನ್ನೊಣಗಳು, ಮನುಷ್ಯರ ಮಾತಿನ ಶಬ್ದ, ಹೊಗೆಸೊಪ್ಪಿನ ಅಲ್ಪವಾಸನೆಯಿಂದಲೂ ಕೆರಳುತ್ತಿದ್ದುದರಿಂದ ಜನರು ಹುಲಿ ಹಾವುಗಳಿಗಿಂತ ಹೆಚ್ಚು ಅವುಗಳಿಗೆ ಹೆದರುತ್ತಿದ್ದರು.

ವಿಲಿಯಂ ಜೇನುಗೂಡಿನ ಮಧ್ಯಕ್ಕೆ ಸರಿಯಾಗಿ ಗುರಿಯಿಟ್ಟು ಗುಂಡು ಹಾರಿಸಿದ. ಭಾರವಾದ ಸೀಸದ ಗುಂಡುಗಳು ಜೇನುಗೂಡುಗಳನ್ನು ಭೇದಿಸಿದವು. ಸಮುದ್ರ ಉಕ್ಕೇರಿದಂತೆ ನೊಣಗಳ ನಾದ ಉದ್ಭವಿಸಿತು. ಜೇನ್ನೊಣಗಳು ಹೊರಬಿದ್ದವು. ಅವುಗಳ ಝೇಂಕಾರ ಅಲೆಅಲೆಯಾಗಿ ಅಭಿವರ್ಧಿಸಿತು. ಲಕ್ಷಗಟ್ಟಲೆ ಜೇನ್ನೊಣಗಳು ಹಿಂಡು ಹಿಂಡಾಗಿ ಹಾರಾಡಿದವು. ಸುತ್ತಲೆಲ್ಲ ಕರಾಳ ರಾತ್ರಿ. ಆ ಗರ್ಜನೆಯಲ್ಲಿ ಮನುಷ್ಯರ ಕಿರುಚಾಟ ಅಡಗಿಬಿಟ್ಟಿತ್ತು. ಹೊರಗೆ ನಿಂತಿದ್ದ ಗಟ್ಟಿಮುಟ್ಟಾದ ಠಕ್ಕರ ಮೇಲೆ ಜೇನ್ನೊಣಗಳು ಮುಕುರಿದವು. ಅವರು ತತ್ತರಿಸುತ್ತ ಹಿಂದಕ್ಕೆ ಅಡಿಯಿಟ್ಟರು. ಅಲ್ಲಿಂದ ನೂರಿನ್ನೂರು ಗಜ ಹಿಮ್ಮೆಟ್ಟುವಷ್ಟರೊಳಗೆ ಜೇನ್ನೊಣಗಳು ಅವರನ್ನು ಕಚ್ಚಲಾರಂಭಿಸಿದವು. ಆ ಕಡಿತದಿಂದ ಅವರು ಮೈ ಉಬ್ಬಿ ಕುಸಿದು ಕೆಳಗೆ ಬೀಳಹತ್ತಿದರು. ಸದ್ದು ದೂರ ಕೇಳಿಸಿತು. ಅಷ್ಟರಲ್ಲಿ ಕಣಿವೆಯಲ್ಲಿ ಕಹಳೆಯೂದಿದ ಶಬ್ದವಾಯಿತು. ವಿಲ್ಸನ್ ಅಶ್ವಸೇನೆಯೊಂದಿಗೆ ಬರುತ್ತಿದ್ದ ಸವಾರರೊಡನೆ ಗಿರಿಕಂದರದಲ್ಲಿ ಹುಡುಕುತ್ತ ಇಳಿದು ಬಂದು ವಿಲಿಯಮ್ಮನನ್ನು ಎಬ್ಬಿಸಿದ. ಆತನ ಕಂದು ಮೈಬಣ್ಣ, ಹರಕು ಪಂಜೆ ಎಲ್ಲವನ್ನೂ ಆಶ್ಚರ್ಯದಿಂದ ದಿಟ್ಟಿಸಿದ. ತಾನು ಮಾಡಿದ

ತಪ್ಪಿಗಾಗಿ ಕ್ಷಮೆ ಕೋರಿದ. ಹಾಗೂ ಠಕ್ಕರನ್ನು ಹಿಡಿದು ಬಗ್ಗು ಬಡಿಯಲು ಸಹಾಯ ನೀಡುವದಾಗಿ ಮಾತನ್ನೂ ಕೊಟ್ಟ.

ವಿಲಿಯಂ ಮತ್ತು ಮೇರಿ ನದಿ ದಾಟಿ, ಭಡೋರಾ ಗ್ರಾಮ ಅರ್ಧ ಮೈಲು ಮುಂದಿರುವಾಗ, ಮೇರಿಗೆ ಪ್ರಸವವೇದನೆ ಆರಂಭವಾಯಿತು. ದಂಡೆಯ ಮೇಲೆ ಕಂಬಿ ಕಟ್ಟಿ ಅವಳಿಗೆ ಮರೆ ಮಾಡಿದರು. ಸಂಗಡವಿದ್ದ ವೈದ್ಯ ಅವಳನ್ನು ನೋಡಿಕೊಂಡ.

ವಿಲಿಯಂ ಅಲ್ಲಿಂದ ನಿಧಾನವಾಗಿ ನಡೆದು ಕಹರಿಯ ಹತ್ತಿರ ದಹನಸ್ಥಳಕ್ಕೆ ಹೋದ. ನೇಕಾರ ಗೋಪಾಲನ ಹೆಂಡತಿಯನ್ನು ಕಾಣದ ಹೊರತು ಅವನಿಗೆ ಸಮಾಧಾನವಿರಲಿಲ್ಲ.

ಚಿತೆಯ ಹತ್ತಿರ ಹುಲ್ಲಿನ ಮೇಲೆ ಅವಳು ಕುಳಿತಿದ್ದಳು. ಅವಳ ಬಿಳಿ ಬಟ್ಟೆ ಹರಿದು ಕೊಳೆಯಾಗಿತ್ತು. ಕೂದಲೆಲ್ಲ ಜಡೆಗಟ್ಟಿತ್ತು. ಆತನನ್ನು ಕಂಡು ಅವಳ ಕಣ್ಣುಗಳು ಅರಳಿದವು. ಕುಳಿತಲ್ಲಿಯೇ ಅವನತ್ತ ಕೈ ಚಾಚಿ "ಓ ನನ್ನ ಪ್ರಿಯತಮಾ, ಕೊನೆಗೂ ಬಂದೆಯಾ," ಅಂದಳು.

ಆತ ಅವಳಿಂದ ಮೂರು ಹೆಜ್ಜೆ ದೂರ ನಿಂತಿದ್ದ. "ನಾನು ಗೋಪಾಲ ಅಲ್ಲ ನಾನು ವಿಲಿಯಂ ಸ್ಯಾವೇಜ್. ಹೋದ ಸಲ ನಿನ್ನನ್ನು ವಂಚಿಸಿದವ ನಾನೇ."

ಆಕೆ ಅವನ ತಲೆ, ಕಣ್ಣು, ಕಪೋಲಗಳನ್ನು ನೋಡಿ ಹುಲ್ಲಿನ ಮೇಲೆ ಕೈ ಚೆಲ್ಲಿದಳು. ತಲೆ ತಗ್ಗಿಸಿ ಸುಮ್ಮನೆ ಕಣ್ಣೀರು ಸುರಿಸಹತ್ತಿದಳು.

"ಗೋಪಾಲ ಸತ್ತಿದ್ದಾನೆ. ನಾನೇ ಆತನನ್ನು ಕೊಂದೆ" ಆತ ಹೇಳಿದ. ವಿಚಿತ್ರವೆಂದರೆ ಇದನ್ನು ಕೇಳಿ ಆಕೆ ನಸುನಕ್ಕಳು. ಶಾಂತ ಮುಖಭಾವದಿಂದ "ನಾನು ನನ್ನ ಪತಿಯೆಡೆಗೆ ಹೋಗುವೆ" ಎಂದು ಚಿತೆಯತ್ತ ಹೋದಳು, ಮೆಲ್ಲನೆ ಹಾಡುತ್ತ ಮೂರು ಬಾರಿ ಅದನ್ನು ಪ್ರದಕ್ಷಿಸಿದಳು.

ಪೂರ್ವ ದಿಗಂತದಲ್ಲಿ ಸೂರ್ಯ ಉದಯಿಸುತ್ತಿದ್ದ, ಅವಳಿನ್ನೂ ಹಾಡು ಹೇಳುತ್ತ ಚಿತೆಯ ಮೇಲೆ ತುಪ್ಪ ಸುರುವಿ ಅದಕ್ಕೆ ಕಿಚ್ಚಿಟ್ಟಳು. ಬಳಿಕ ಪೂರ್ವಾಭಿಮುಖವಾಗಿ ಮಂಡೆಯೂರಿ, "ನನ್ನ ಸ್ವಾಮಿ, ನಿನ್ನ ದಾಸಿ ನಾನು, ನಿನ್ನೆಡೆಗೆ ಬರುವೆ," ಎಂದು ಉರಿಯುವ ಚಿತೆಯನ್ನು ಪ್ರವೇಶಿಸಿದಳು.

ವಿಲಿಯಂ ಕೆಲಹೊತ್ತು ಚಿತೆಯ ಬಳಿ ಸ್ತಬ್ಧವಾಗಿ ನಿಂತಿದ್ದ. ಬಳಿಕ ತಿರುಗಿ ಕಡವಿನ ಕಡೆ ನಡೆದ. ವಿಲ್ಸನ್ ಓಡಿ ಬಂದು "ವಿಲಿಯಂ! ವಿಲಿಯಂ! ನೀನೀಗ ಗಂಡುಮಗುವಿನ ತಂದೆ" ಎಂದು ಸಿಹಿ ಸುದ್ದಿಯನ್ನು ಹೇಳಿದ.

ಆದರೆ ಅವನಿಗೆ ಇದರತ್ತ ಪರಿವೆಯೇ ಇರಲಿಲ್ಲ. ಎಷ್ಟೋ ವೇಳೆ ಮೌನದಿಂದ, ನಿಶ್ಚಲನಾಗಿ ನಿಂತಿದ್ದ. ಅತ್ತ ಮರಗಳಲ್ಲಿ ಹೊಗೆ ಮೇಲೇರುತ್ತಿತ್ತು. ಅದರತ್ತ ನೋಡಿ "ಪರಮಾತ್ಮ ಆ ಪ್ರೇಮವನ್ನು ನಿನ್ನ ಪುತ್ರನಿಗೆ ದಯಪಾಲಿಸಲಿ" ವಿಲ್ಸನ್ ಅಂದ.

"ಪರಮಾತ್ಮನೇ ಪ್ರೇಮ" ಎಂದು ವಿಲಿಯಂ ತನ್ನ ಪತ್ನಿ ಪುತ್ರರಿದ್ದೆಡೆಗೆ ಹೋದ.

Printed and Published by **V. G. Vaidya** on behalf of Loka Shikshana Trust at "Samyukta Karnataka Press" Koppikar Road, Hubli – 580 020. Phone. 64303.—No. 2 Residency Road Bangalore–560025—Phone–213265 Managing Editor **K. Shama Rao.** Rep: Bombay: V. Satyamurthy Phone: 5510592, Madras: S. K. Murthi, Phone: 414870 New Delhi: V. K. Chopra, Phone: 7114785.

Registered with the Registrar of News Papers for India under No. 35/3957



M. K. Publicity

Kannada Digest
PRICE: Rs. 3-00

Reg. No. KRNG -43
Licence No. L 2120/WPP No.33



COVER PRINTED AT BHARAT PHOTO OFFSET WORKS, DHARWAR — I